# ವೇದಾಂತ ಸಂದೇಶಗಳು

## ಸಂಪುಟ 5

## ಭಾಗ - 3





ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573211, ದೂರವಾಣಿ : 08175-573820

www.adhyatmaprakasha.org

# ಶ್ರೀಶ್ರೀಗಳವರ ಕೃತಿಗಳು

## (ಅಧ್ಯಾತ್ಮಪ್ರಕಾಶ ಪತ್ರಿಕೆಯಿಂದ ಆಯ್ದ ಲೇಖನಗಳ ಸಂಗ್ರಹ)

1923ರಲ್ಲಿ ಪ್ರಾರಂಭವಾದ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ 1975ರವರೆಗೂ ಶ್ರೀ ಶ್ರೀಗಳವರೇ ಭಕ್ತಿ ಜ್ಞಾನ, ವೈರಾಗ್ಯ ಮತ್ತು ವೇದಾಂತದಲ್ಲಿ ಅಭಿರುಚಿಯನ್ನುಂಟು ಮಾಡುವಂತಹ ಲೇಖನಗಳನ್ನು ಬರೆದು ಪ್ರಕಟಿಸುತ್ತಿದ್ದರು ಈಗ ಹಳೆಯ ಸಂಪುಟಗಳು ದೊರಕುತ್ತಿಲ್ಲ. ಈ ಲೇಖನಗಳು ಈಗಿನ ಸನ್ನಿವೇಶಕ್ಕೂ ಸಹ ಉಪಯುಕ್ತವಾಗುತ್ತವೆ ಎಂದು ಅನೇಕ ಭಕ್ತರ ಅಪೇಕ್ಷೆಯಂತೆ ಗ್ರಂಥ ರೂಪದಲ್ಲಿ ಹೊರ ತಂದಿರುವ ಕೆಲವು ಪುಸ್ತಕಗಳ ಕಿರುಪರಿಚಯ.

### 1. ಋಗ್ವೇದೀಯ ಪುರುಷಸೂಕ್ತ (ಮಂತ್ರಾರ್ಥ ವಿವೇಚನೆ)

ಅ.ಪ್ರ. ಪತ್ರಿಕೆಯ 24ನೆ ಸಂಪುಟದ (ಸೆಪ್ಟೆಂಬರ್ 1954ರಿಂದ ಆಗಸ್ಟ್ 1955) 12 ಲೇಖನಗಳ ಸಂಕಲನ. ಪೂಜೆ ಮಾಡುವ ಪ್ರತಿಯೊಬ್ಬ ಆಸ್ತಿಕನಿಗೂ ತುಂಬ ಉಪಕಾರಿಯಾಗಿದೆ. ನಿಜವಾದ ಅರ್ಥವು ತಾತ್ವಿಕವಾಗಿ ಹೇಗೆ ವಿಸ್ತೃತವಾಗಿದೆ ಮತ್ತು ಕೇವಲ ಕರ್ಮಪರವಾಗಿರದೆ, ಭಕ್ತಿ ಉಪಾಸನೆ, ಜ್ಞಾನಪರವಾಗಿದೆಯೆಂಬುದನ್ನು ಮಾರ್ಮಿಕವಾಗಿ ಹೃದಯಕ್ಕೆ ತಾಕುವ ಹಾಗೆ ಶ್ರೀ ಶ್ರೀಗಳವರು ಪ್ರತಿಪಾದಿಸಿದ್ದಾರೆ. ಎಲ್ಲ ವೇದದವರಿಗೂ ಮತ್ತು ಆಸ್ತಿಕ ಮಹಾಶಯರಿಗೂ ಉಪಯುಕ್ತವಾದ ಗ್ರಂಥ. (ಎರಡನೆಯ ಮುದ್ರಣ, 2011, ಪು. 115, ಬೆಲೆ. 30 ರೂ.)

### 2. ವೇದಾಂತ ಸಂದೇಶಗಳು : ಸಂಪುಟ 1 (ಪರಮಾರ್ಥ ಚಿಂತನೆ)

1946 ಸೆಪ್ಟೆಂಬರ್‌ನಿಂದ 1949 ಆಗಸ್ಟ್‌ರವರೆಗೆ ''ಈ ತಿಂಗಳ ಸಂದೇಶ'' ಎಂಬ ಶೀರ್ಷಿಕೆಯಲ್ಲಿ ಶ್ರೀಶ್ರೀಗಳವರು ಬರೆದು ಅ.ಪ್ರ. ಮಾಸಪತ್ರಿಕೆಯಲ್ಲಿ ಪ್ರಕಟಿಸಿದ್ದ 36 ಲೇಖನಗಳ ಸಂಗ್ರಹ. ''ಭಗವಂತನಿಗೆ ಯಾವ ಹೆಸರು, ಪರಮಾತ್ಮನನ್ನು ಎಲ್ಲಿ ಕಾಣಬೇಕು, ಸ್ತೋತ್ರ, ಪ್ರಾರ್ಥನೆಗಳನ್ನು ಹೇಗೆ ಮಾಡಬೇಕು, ದುಃಖ ಕಷ್ಟ ಪರಿಹಾರಕ್ಕೆ ಭಗವಂತನನ್ನೇ ಶರಣು ಹೊಂದಬೇಕು'' ಎಂಬಿವೇ ಮುಂತಾದ ಮಹತ್ತ್ವಪೂರ್ಣವಾದ ವಿಚಾರಗಳಿಂದ ತುಂಬಿ, ತತ್ತ್ವಜಿಜ್ಞಾಸುಗಳಿಗೆ ದಾರಿದೀಪದಂತಿದೆ. ಸಂಸ್ಕೃತ ಬಾರದವರಿಗೂ, ಸರಿಯಾದ ಗುರುಗಳು ದೊರಕದವರಿಗೂ ಈ ಗ್ರಂಥವು ಮಾರ್ಗದರ್ಶನವಾಗಿದೆ.

(ಎರಡನೆಯ ಮುದ್ರಣ, 2011, ಪು. 218, ಬೆಲೆ. 50 ರೂ.)

### 3. ವೇದಾಂತ ಸಂದೇಶಗಳು : ಸಂಪುಟ 2 (ಉಪನಿಷತ್ ಸಿರಿ)

ಬೇರೆ ಬೇರೆ ಉಪನಿಷತ್ತುಗಳ ವಾಕ್ಯಗಳನ್ನು ಸಂಚಿಕೆಗೊಂದರಂತೆ ಅ.ಪ್ರ. ಪತ್ರಿಕೆಯಲ್ಲಿ ಸಂಪುಟ 8, 9, 21, 26, 27ರಲ್ಲಿ ಪ್ರಕಟಿಸಿದ್ದ 52 ಲೇಖನಗಳ ಸಂಗ್ರಹ. ಮೊದಲು ದಶಶಾಂತಿ ಮಂತ್ರದ ಅರ್ಥ ಮತ್ತು ವಿವರಣೆ, ಅನಂತರ (1) ಇರಿವಿನ ಅರಿವು (2) ಆನಂದ ಸ್ವರೂಪವಾದ ಆತ್ಮನ ವಿಚಾರ (3) ಅಧ್ಯಾತ್ಮ ಸಾಧನಗಳು (4) ಜ್ಞಾನಸಾಧನೆಗಳು ಮತ್ತು (5) ಸಾಧನ ಕ್ರಮ ಎಂಬ ಐದು ಅಧ್ಯಾಯಗಳಲ್ಲಿ ಲೇಖನಗಳನ್ನು ಅಳವಡಿಸಿದೆ. ಧ್ಯಾನಯೋಗವನ್ನು ಹೇಗೆ ಮಾಡಬೇಕು ಮತ್ತು ಉಪಾಸನಾ ಕ್ರಮವನ್ನೂ ಶಾಸ್ತ್ರೀಯ ರೀತಿಯಲ್ಲಿ ತಿಳಿಸಿದೆ.

(ಮೊದಲನೆಯ ಮುದ್ರಣ, 2010, ಪು. 247, ಬೆಲೆ. 50 ರೂ.)

(ರಕ್ಷಾಕವಚದ ಮರು ಹಾಳೆಯಲ್ಲಿ ಮುಂದುವರೆದಿದೆ.)

ಅಧ್ಯಾತ್ಮಗ್ರಂಥಾವಳಿ

# ವೇದಾಂತ ಸಂದೇಶಗಳು

## ಸಂಪುಟ -5

## ಭಾಗ 3

## ಶ್ರೀ ಶ್ರೀಗಳವರ ಹಿತವಚನಗಳು

ಲೇಖಕರು
ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ : 251

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ- 573211
ದೂರವಾಣಿ : 08175 273820
Visit us at www.adhyatmaprakasha.Org.
2011

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| | | | | | **ಭಾಗ–I** | |
| 1. | 14 | 5 | ಜನವರಿ | 1943 | ಸಂಕಟ ಬಂದಾಗ ವೆಂಕಟರಮಣ | 1 |
| 2. | 14 | 6 | ಫೆಬ್ರವರಿ | 1943 | ಉದ್ಯೋಗಸ್ಥಾನದಲ್ಲಿಯೂ ದೇವರು. | 2 |
| 3. | 14 | 7 | ಮಾರ್ಚ್ | 1943 | ಕುಟುಂಬಭಾವನೆ | 3 |
| 4. | 14 | 9 | ಮೇ | 1943 | ಲಾಭದ ವ್ಯಾಪಾರ | 5 |
| 5. | 14 | 10 | ಜೂನ್ | 1943 | ದಾನಕ್ಕೆ ಪಾತ್ರರು | 6 |
| 6. | 14 | 12 | ಆಗಸ್ಟ್ | 1943 | ಮಕ್ಕಳ ವಿದ್ಯಾಭ್ಯಾಸ | 7 |
| 7. | 15 | 2 | ಅಕ್ಟೋಬರ್ | 1943 | ತೀರ್ಥಯಾತ್ರೆ | 8 |
| 8. | 15 | 3 | ನವಂಬರ್ | 1943 | ಸವರನ್ನಿನ ಪೂಜೆ | 9 |
| 9. | 15 | 5 | ಜನವರಿ | 1944 | ದಾನ | 10 |
| 10. | 15 | 10 | ಜೂನ್ | 1944 | ಲೋಭ | 12 |
| 11. | 15 | 11 | ಜುಲೈ | 1944 | ಅಧ್ಯಾತ್ಮವಿದ್ಯೆ | 14 |
| 12. | 15 | 12 | ಆಗಸ್ಟ್ | 1944 | ಮನಸ್ಸನ್ನು ನೇರ್ಪಡಿಸಿಕೊಳ್ಳುವುದು | 16 |
| 13. | 16 | 1 | ಸಪ್ಟೆಂಬರ್ | 1946 | ದೇವರನ್ನು ಬಯ್ಯುವ ಹುಚ್ಚು ಬೇಡ | 17 |
| 14. | 16 | 2 | ಅಕ್ಟೋಬರ್ | 1946 | ಉದ್ಯೋಗವೇ ಕರ್ಮಯೋಗವಾಗಲಿ! | 19 |
| 15. | 16 | 5 | ಜನವರಿ | 1947 | ಗುರುವಿನಲ್ಲಿ ಯಾವ ಭಾವನೆ ಇರಬೇಕು? | 21 |
| 16. | 16 | 6 | ಫೆಬ್ರವರಿ | 1947 | ವಿದ್ಯಾರ್ಥಿಗಳಿಗೆ ಸಾಧನ | 24 |
| 17. | 16 | 7 | ಮಾರ್ಚ್ | 1947 | ಹೆಣ್ಣುಮಕ್ಕಳಿಗೆ ಅಧ್ಯಾತ್ಮ ಸಾಧನ | 28 |
| 18. | 16 | 8 | ಏಪ್ರಿಲ್ | 1947 | ವ್ಯಾಪಾರದಲ್ಲಿ ಪ್ರಾಮಾಣಿಕತೆ | 30 |
| 19. | 16 | 9 | ಮೇ | 1947 | ಶಾಸ್ತ್ರವ್ಯಾಖ್ಯಾನದ ಸದುಪಯೋಗ | 32 |
| 20. | 16 | 10 | ಜೂನ್ | 1947 | ಸತತವಾಗಿ ಸಾಧನಮಾಡುವದು ಸಾಧ್ಯವೆ? | 35 |
| 21. | 16 | 11 | ಜುಲೈ | 1947 | ಉಪನಯನ | 37 |

**ಲೇಖನಗಳ ಮೂಲ–ವಿಷಯಾನುಕ್ರಮಣಿಕೆ**


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪೃ.ಸಂ. |
|---|---|---|---|---|---|---|
| 22. | 16 | 12 | ಆಗಸ್ಟ್ | 1947 | ಭಗವನ್ನಾಮದ ಮಹಿಮೆ | 40 |
| 23. | 17 | 1 | ಸೆಪ್ಟೆಂಬರ್ | 1947 | ಸತ್ಯವನ್ನೇ ನುಡಿಯಬೇಕು | 43 |
| 24. | 17 | 3 | ನವೆಂಬರ್ | 1947 | ಸತ್ಸಂಗದ ರಹಸ್ಯ | 45 |
| 25. | 17 | 4 | ಡಿಸೆಂಬರ್ | 1947 | ಲೋಕದ ದುಃಖನಿವಾರಣೆಗೆ ಈಗೇನು ಮಾಡಬೇಕು? | 47 |
| 26. | 17 | 5 | ಜನವರಿ | 1948 | ಧನದ ಉಪಯೋಗ | 50 |
| 27. | 17 | 6 | ಫೆಬ್ರವರಿ | 1948 | ನಗರವಾಸ | 52 |
| 28. | 17 | 7 | ಮಾರ್ಚ್ | 1948 | ವೇದಾಂತ ವಿಚಾರ | 54 |
| 29. | 17 | 8 | ಏಪ್ರಿಲ್ | 1948 | ಉಪಾಧ್ಯಾಯರ ಕರ್ತವ್ಯ | 56 |
| 30. | 17 | 9 | ಮೇ | 1948 | ಸಂಸ್ಕೃತ ಕಲಿಯುವದರಿಂದ ಪರಮಲಾಭ | 58 |
| 31. | 17 | 10 | ಜೂನ್ | 1948 | ದಾಂಭಿಕತನದಿಂದ ಹಾನಿ | 60 |
| 32. | 17 | 11 | ಜುಲೈ | 1948 | ಬಡತನವೂ ಸಿರಿತನವೂ | 61 |
| 33. | 18 | 4 | ಡಿಸೆಂಬರ್ | 1948 | ಸಾಕ್ಷಾತ್ಕಾರ | 63 |
| 34. | 18 | 6 | ಫೆಬ್ರವರಿ | 1949 | ಸತ್ಸಂಗ | 64 |
| 35. | 18 | 7 | ಮಾರ್ಚ್ | 1949 | ವಿತಂತುಗಳ ಆಚಾರ | 66 |
| 36. | 18 | 8 | ಏಪ್ರಿಲ್ | 1949 | ಪರೀಕ್ಷೆ | 69 |
| 37. | 18 | 9 | ಮೇ | 1949 | ಜೀವನವೆಲ್ಲವೂ ಈಶ್ವರ ಪೂಜೆಯಾಗಲಿ | 71 |
| 38. | 18 | 10 | ಜೂನ್ | 1949 | ಮದುವೆಯ ಉದ್ದೇಶ | 73 |
| 39. | 18 | 11 | ಜುಲೈ | 1949 | ಮಕ್ಕಳ ವಿಷಯದಲ್ಲಿ ಕರ್ತವ್ಯ | 76 |
| 40. | 18 | 12 | ಆಗಸ್ಟ್ | 1949 | ಸಂಧ್ಯಾವಂದನ | 79 |
| 41. | 19 | 1 | ಸಪ್ಟೆಂಬರ್ | 1949 | ಹರಿಜನಪ್ರೇಮ | 81 |
| 42. | 19 | 2 | ಅಕ್ಟೋಬರ್ | 1949 | ಹರಿಜನಪ್ರೇಮ | 83 |
| 43. | 19 | 3 | ನವಂಬರ್ | 1949 | ಪರಮತಸಹನೆ | 85 |
| 44. | 19 | 4 | ಡಿಸೆಂಬರ್ | 1949 | ಪಾರಿವ್ರಾಜ್ಯ | 88 |
| 45. | 19 | 5 | ಜನವರಿ | 1950 | ಮುಪ್ಪಿನಲ್ಲಿ ಮಾಡಬೇಕಾದದ್ದು | 90 |

## ಲೇಖನಗಳ ಮೂಲ-ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 46. | 19 | 7 | ಮಾರ್ಚ್ | 1950 | ಮನಮೆಚ್ಚಿದಂತೆ ನಡೆಯುವದು | 92 |
| 47. | 19 | 8 | ಏಪ್ರಿಲ್ | 1950 | ಜನರನ್ನು ತಿದ್ದುವದು | 94 |
| 48. | 19 | 9 | ಮೇ | 1950 | ಉದ್ಯೋಗದ ಘನತೆ | 96 |
| 49. | 19 | 10 | ಜೂನ್ | 1950 | ಆಶ್ರಮಸಂನ್ಯಾಸ | 98 |
| 50. | 19 | 11 | ಜುಲೈ | 1950 | ಧರ್ಮಶಾಸ್ತ್ರವೂ ಸಮಾಜಸ್ಥಿತಿಯೂ | 101 |
| 51. | 19 | 12 | ಆಗಸ್ಟ್ | 1950 | ಬೆಳಗ್ಗೆ ಮುಂಚಿತವಾಗಿ ಏಳುವದು | 103 |
| 52. | 20 | 1 | ಸಪ್ಟೆಂಬರ್ | 1950 | ಹಳ್ಳಿಗಳ ಅಭಿವೃದ್ಧಿ | 104 |
| 53. | 20 | 2 | ಅಕ್ಟೋಬರ್ | 1950 | ಅಧ್ಯಾತ್ಮಸಾಧನದಿಂದಾಗುವ ಪ್ರಯೋಜನ | 106 |
| 54. | 20 | 3 | ನವಂಬರ್ | 1950 | ಉಪನ್ಯಾಸಗಳು, ಉಪದೇಶಗಳು | 108 |
| 55. | 20 | 4 | ಡಿಸೆಂಬರ್ | 1950 | ಹುಡುಗರು ಗೀತೆಯನ್ನು ಹೇಗೆ ಉಪಯೋಗಿಸಬೇಕು? | 110 |
| 56. | 20 | 5 | ಜನವರಿ | 1951 | ಸಾತ್ತ್ವಿಕವೇಷಭಾಷೆಗಳು | 113 |
| 57. | 20 | 6 | ಫೆಬ್ರವರಿ | 1951 | ವೈರಬುದ್ಧಿಯಿಂದಾಗುವ ಹಾನಿ | 116 |
| 58. | 20 | 7 | ಮಾರ್ಚ್ | 1951 | ವ್ಯವಹಾರಕ್ಕೆ ಅಂಟದೆ ಇರುವದು | 118 |
| 59. | 20 | 8 | ಏಪ್ರಿಲ್ | 1951 | ಗುರುಸೇವೆಯ ಗುಟ್ಟು | 119 |
| 60. | 20 | 9 | ಮೇ | 1951 | ಸಂನ್ಯಾಸದ್ವಯ | 122 |
| 61. | 20 | 10 | ಜೂನ್ | 1951 | ಪರಮಾರ್ಥದ ಹಸಿವು | 124 |
| 62. | 20 | 11 | ಜುಲೈ | 1951 | ಮೌನದ ಸ್ವರೂಪ | 125 |
| 63. | 20 | 12 | ಆಗಸ್ಟ್ | 1951 | ಸಾಧನಕ್ರಮ | 126 |
| 64. | 21 | 1 | ಸೆಪ್ಟೆಂಬರ್ | 1951 | ಭಗವಂತನಿಗಾಗಿ ಸರ್ವತ್ಯಾಗ | 128 |
| 65. | 21 | 2 | ಅಕ್ಟೋಬರ್ | 1951 | ಆಚಾರಗಳೂ ರಾಜಕೀಯ ನಿರ್ಬಂಧಗಳೂ | 129 |
| 66. | 21 | 3 | ನವೆಂಬರ್ | 1951 | ಬಡತಿಯ ಆಶೆ | 131 |
| 67. | 21 | 4 | ಡಿಸೆಂಬರ್ | 1951 | ಯುವಕರು ತೆಗೆದುಕೊಳ್ಳಬೇಕಾದ ಎಚ್ಚರಿಕೆ | 133 |

ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಕ್ರ. ಸಂ. | ಸಂ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 68. | 21 | 5 | ಜನವರಿ | 1952 | ಬೇನೆ ಬಿದ್ದಾಗ ಮನಸ್ಸನ್ನು ಹೇಗಿಟ್ಟುಕೊಂಡಿರಬೇಕು? | 135 |
| 69. | 21 | 6 | ಫೆಬ್ರವರಿ | 1952 | ನಮ್ಮ ಸುತ್ತುವಳಿಯವನ್ನು ಹಿತಕರವಾಗಿ ಮಾಡಿಕೊಳ್ಳುವ ಬಗೆ | 137 |
| 70. | 21 | 7 | ಮಾರ್ಚ್ | 1952 | ನಿತ್ಯರೋಗಕ್ಕೆ ಮದ್ದು | 138 |
| 71. | 21 | 8 | ಏಪ್ರಿಲ್ | 1952 | ಮತ್ತೊಬ್ಬರ ವಿಷಯದ ಮಾತು | 139 |
| 72. | 21 | 9 | ಮೇ | 1952 | ಗೃಹಸ್ಥಧರ್ಮ | 140 |
| 73. | 21 | 10 | ಜೂನ್ | 1952 | ಸಾಧಕನ ಗುರಿ | 142 |
| 74. | 21 | 11 | ಜುಲೈ | 1952 | ನಾಮಸ್ಮರಣೆಯೂ ವ್ಯವಹಾರವು | 143 |
| 75. | 21 | 12 | ಆಗಸ್ಟ್ | 1952 | ಹವ್ಯಾಸಗಳನ್ನು ತಪ್ಪಿಸುವದು | 144 |


## ಭಾಗ–II


| | | | | | | |
|---|---|---|---|---|---|---|
| 76. | 22 | 1 | ಸೆಪ್ಟೆಂಬರ್ | 1952 | ನಾಮಸ್ಮರಣೆಗೆ ಅಡ್ಡಿಗಳು ಹೋಗುವದು ಹೇಗೆ? | 147 |
| 77. | 22 | 2 | ಅಕ್ಟೋಬರ್ | 1952 | ಅಧ್ಯಾತ್ಮಪ್ರಕಾಶವನ್ನು ಅರಿಯುವದು ಹೇಗೆ? | 148 |
| 78. | 22 | 3 | ನವೆಂಬರ್ | 1952 | ಕುಟುಂಬ ಪೋಷಣೆ | 150 |
| 79. | 22 | 4 | ಡಿಸೆಂಬರ್ | 1952 | ವ್ಯವಹಾರವೂ ಪರಮಾರ್ಥವೂ | 151 |
| 80. | 22 | 5 | ಜನವರಿ | 1953 | ಮಹಿಳೆಯರೂ ವ್ಯವಹಾರವೂ | 152 |
| 81. | 22 | 6 | ಫೆಬ್ರವರಿ | 1953 | ಆಪತ್ಕಾಲದಲ್ಲಿ ಏನು ಮಾಡಬೇಕು? | 154 |
| 82. | 22 | 7 | ಮಾರ್ಚ್ | 1953 | ವೇದಾಂತವನ್ನು ಚರ್ಚಿಸುವ ಕ್ರಮ | 156 |
| 83. | 22 | 8 | ಏಪ್ರಿಲ್ | 1953 | ಶ್ರದ್ಧಾದಿಗಳ ಆವಶ್ಯಕತೆ | 157 |
| 84. | 22 | 9 | ಮೇ | 1953 | ಹರಿಕೀರ್ತನೆ | 158 |
| 85. | 22 | 10 | ಜೂನ್ | 1953 | ವೇದಾಂತವಿಚಾರದಲ್ಲಿ ಶ್ರದ್ಧೆ | 160 |
| 86. | 22 | 11 | ಜುಲೈ | 1953 | ವೈರಬುದ್ಧಿಯನ್ನು ನುಂಗಿಕೊಳ್ಳುವದು | 161 |
| 87. | 22 | 12 | ಆಗಸ್ಟ್ | 1953 | ಮನಸ್ಸನ್ನು ನಿಗ್ರಹಮಾಡಿಕೊಳ್ಳುವದು | 163 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 88. | 23 | 1 | ಸೆಪ್ಟೆಂಬರ್ | 1953 | ಶಾಂತಿ ಸುಖಗಳು ದೊರಕುವದಕ್ಕೆ ಮಾರ್ಗ | 165 |
| 89. | 23 | 2 | ಅಕ್ಟೋಬರ್ | 1953 | ಗ್ರಾಮನೈರ್ಮಲ್ಯ ಸಭೆಯ ಕರ್ತವ್ಯ | 167 |
| 90. | 23 | 3 | ನವಂಬರ್ | 1953 | ವೇದಾಂತದಿಂದ ಧನಸಂಪಾದನೆ | 169 |
| 91. | 23 | 4 | ಡಿಸೆಂಬರ್ | 1953 | ಗೀತಾಜಯಂತಿಯ ಉತ್ಸವ | 171 |
| 92. | 23 | 5 | ಜನವರಿ | 1954 | ಸ್ವಪ್ನ ಸಿದ್ಧಿಯ ಉಪಯೋಗ | 173 |
| 93. | 23 | 6 | ಫೆಬ್ರುವರಿ | 1954 | ವ್ಯವಹಾರವೂ ಅಧ್ಯಾತ್ಮಸಾಧನವೂ | 174 |
| 94. | 23 | 8 | ಏಪ್ರಿಲ್ | 1954 | ತಾನೇ ತನಗೆ ಶತ್ರು, ತಾನೇ ತನಗೆ ಮಿತ್ರ | 176 |
| 95. | 23 | 9 | ಮೇ | 1954 | ಪರಮಾತ್ಮನನ್ನೇ ಆಶ್ರಯಿಸಿದರೆ ಸುಖ | 177 |
| 96. | 23 | 10 | ಜೂನ್ | 1954 | ದೇವರ ಲೋಕ | 179 |
| 97. | 23 | 12 | ಆಗಸ್ಟ್ | 1954 | ಈಶ್ವರನನ್ನೇ ನಂಬುವದು | 180 |
| 98. | 24 | 1 | ಸೆಪ್ಟೆಂಬರ್ | 1954 | ಪರಮಾತ್ಮನು ಲಭಿಸುವದಕ್ಕೆ ಮಾರ್ಗ | 181 |
| 99. | 24 | 2 | ಅಕ್ಟೋಬರ್ | 1954 | ಅಧ್ಯಾತ್ಮದ ಚರ್ಚಾಸಂಘ | 182 |
| 100. | 24 | 3 | ನವಂಬರ್ | 1954 | ಸತ್ಸಂಗದಿಂದಾಗುವ ಲಾಭ | 184 |
| 101. | 24 | 4 | ಡಿಸೆಂಬರ್ | 1954 | ಪರಿವ್ರಾಜಕನ ಧರ್ಮ | 186 |
| 102. | 24 | 5 | ಜನವರಿ | 1955 | ಸಂಸಾರಿಗಳಿಗೆ ಅಧ್ಯಾತ್ಮಸಾಧನೆ | 188 |
| 103. | 24 | 6 | ಫೆಬ್ರುವರಿ | 1955 | ಅನಾಸಕ್ತಿ, ಸಂನ್ಯಾಸ | 190 |
| 104. | 24 | 7 | ಮಾರ್ಚ್ | 1955 | ಅಧ್ಯಾತ್ಮಸಾಧನದ ಮೊದಲನೆಯ ಹೆಜ್ಜೆಗಳು | 193 |
| 105. | 24 | 8 | ಏಪ್ರಿಲ್ | 1955 | ದುಃಖಕ್ಕೆ ಕಾರಣ | 195 |
| 106. | 24 | 9 | ಮೇ | 1955 | ಅಧ್ಯಾತ್ಮವಿಚಾರವು ಸಫಲವಾಗುವದು ಹೇಗೆ | 197 |
| 107. | 24 | 10 | ಜುಲೈ | 1955 | ಸೇಡುತೀರಿಸಿಕೊಳ್ಳುವ ಪ್ರವೃತ್ತಿ | 199 |
| 108. | 24 | 11 | ಆಗಸ್ಟ್ | 1955 | ಆಧ್ಯಾತ್ಮಿಕಸಾಧನಗಳು | 201 |
| 109. | 25 | 1 | ಸೆಪ್ಟೆಂಬರ್ | 1955 | ಅಧ್ಯಾತ್ಮಸಾಧನೆಗೆ ಅಡ್ಡಿಗಳು | 203 |

**ಲೇಖನಗಳ ಮೂಲ–ವಿಷಯಾನುಕ್ರಮಣಿಕೆ**


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 110. | 25 | 2 | ಅಕ್ಟೋಬರ್ | 1955 | ಅಧ್ಯಾತ್ಮಸಾಧನೆಗೆ ಅವಕಾಶವನ್ನು ಕಲ್ಪಿಸಿಕೊಳ್ಳುವದು ಹೇಗೆ? | 204 |
| 111. | 25 | 3 | ನವಂಬರ್ | 1955 | ಬಾಹ್ಯಕರ್ಮಗಳಿಂದ ಅಧ್ಯಾತ್ಮಸಾಧನಕ್ಕೆ ಬಲ | 206 |
| 112. | 25 | 4 | ಡಿಸೆಂಬರ್ | 1955 | ಅಧ್ಯಾತ್ಮವಿದ್ಯೆಯಿಂದ ಲಾಭ | 207 |
| 113. | 25 | 5 | ಜನವರಿ | 1956 | ಬ್ರಾಹ್ಮಣ್ಯರಕ್ಷಣೆ | 210 |
| 114. | 25 | 6 | ಫೆಬ್ರುವರಿ | 1956 | ಅಧ್ಯಾತ್ಮಸಾಧನಗಳು ಅಳವಡುವದು ಹೇಗೆ? | 212 |
| 115. | 25 | 7 | ಮಾರ್ಚ್ | 1956 | ಧನದ ಉಪಯೋಗ | 213 |
| 116. | 25 | 8 | ಏಪ್ರಿಲ್ | 1956 | ನಿಜವಾದ ವಿದ್ಯೆ | 215 |
| 117. | 25 | 9 | ಮೇ | 1956 | ದಾನದ ತತ್ತ್ವ | 217 |
| 118. | 25 | 10 | ಜೂನ್ | 1956 | ಜೀವನದ ಧ್ಯೇಯ | 219 |
| 119. | 25 | 11 | ಜುಲೈ | 1956 | ಕಷ್ಟಕಾಲದಲ್ಲಿಯೂ ಧರ್ಮವನ್ನು ಬಿಡದೆ ಇರುವದು | 221 |
| 120. | 25 | 12 | ಆಗಸ್ಟ್ | 1956 | ತತ್ತ್ವವಿಚಾರಕ್ಕೆ ತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಳ್ಳುವದು | 223 |
| 121. | 26 | 1 | ಸೆಪ್ಟೆಂಬರ್ | 1956 | ಆಧಿವ್ಯಾದಿಗಳು | 224 |
| 122. | 26 | 2 | ಅಕ್ಟೋಬರ್ | 1956 | ವಿದ್ಯಾಭ್ಯಾಸ | 225 |
| 123. | 26 | 3 | ನವೆಂಬರ್ | 1956 | ಸದ್ಗುರುಭಕ್ತಿ | 227 |
| 124. | 26 | 4 | ಡಿಸೆಂಬರ್ | 1956 | ನಿವೃತ್ತಿಧರ್ಮಕ್ಕೆ ಸಿದ್ಧತೆ | 229 |
| 125. | 26 | 5 | ಜನವರಿ | 1957 | ಸಮತ್ವಬುದ್ಧಿ | 231 |
| 126. | 26 | 6 | ಫೆಬ್ರುವರಿ | 1957 | ಕರ್ಮದ ಫಲ | 233 |
| 127. | 26 | 7 | ಮಾರ್ಚ್ | 1957 | ಮೋಹಬಂಧದಿಂದ ಮುಕ್ತಿ | 234 |
| 128. | 26 | 8 | ಏಪ್ರಿಲ್ | 1957 | ಎಲ್ಲರನ್ನೂ ಮೆಚ್ಚಿಸುವದು | 236 |
| 129. | 26 | 9 | ಮೇ | 1957 | ವೇದಾಂತದಿಂದ ಲಾಭವಾದದ್ದಕ್ಕೆ ಗುರುತು | 237 |
| 130. | 26 | 10 | ಜೂನ್ | 1957 | ಸಾಧನೆಗೆ ಸ್ಥೈರ್ಯ ಬೇಕು | 238 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 131. | 26 | 11 | ಜುಲೈ | 1957 | ಕುಟುಂಬಪೋಷಣೆ | 239 |
| 132. | 26 | 12 | ಆಗಸ್ಟ್ | 1957 | ಜನರ ಮನಸ್ಸನ್ನು ಒಲಿಸುವದು | 240 |
| 133. | 27 | 1 | ಸೆಪ್ಟೆಂಬರ್ | 1957 | ಆಸ್ತಿಕ್ಯಬುದ್ಧಿ | 242 |
| 134. | 27 | 2 | ಅಕ್ಟೋಬರ್ | 1957 | ದರಿದ್ರನಾರಾಯಣ | 243 |
| 135. | 27 | 3 | ನವೆಂಬರ್ | 1957 | ಉಪಾಸನೆಯ ಆವಶ್ಯಕತೆ | 245 |
| 136. | 27 | 4 | ಡಿಸೆಂಬರ್ | 1957 | ಮನಸ್ಸಿಗೆ ಶಾಂತಿ | 247 |
| 137. | 27 | 5 | ಜನವರಿ | 1958 | ಬ್ರಾಹ್ಮಣ್ಯ ರಕ್ಷಣೆ | 250 |
| 138. | 27 | 6 | ಫೆಬ್ರುವರಿ | 1958 | ವಯಸ್ಸಾದ ಹಾಗೆ ಏನು ಚಿಂತಿಸಬೇಕು? | 252 |
| 139. | 27 | 7 | ಮಾರ್ಚ್ | 1958 | ಸಂನ್ಯಾಸಾಶ್ರಮವು ಸಾರ್ಥಕವಾಗುವ ಬಗೆ | 254 |
| 140. | 27 | 8 | ಏಪ್ರಿಲ್ | 1958 | ಗುರುಕೃಪೆಯು ಹೇಗೆ ಆಗುವದು? | 256 |
| 141. | 27 | 9 | ಮೇ | 1958 | ಸಾವಿನ ಅಂಜಿಕೆ | 258 |
| 142. | 27 | 10 | ಜೂನ್ | 1958 | ವಿವಾಹದ ಅರ್ಥ | 261 |
| 143. | 27 | 11 | ಜುಲೈ | 1958 | ಆರ್ಜವ | 263 |
| 144. | 27 | 12 | ಆಗಸ್ಟ್ | 1958 | ಮಹಿಳೆಯರು ಮಾಡಬಹುದಾದ ದೇಶಸೇವೆ | 265 |
| 145. | 28 | 1 | ಸೆಪ್ಟೆಂಬರ್ | 1958 | ನಿಜವಾದ ವಿದ್ಯೆ | 267 |
| 146. | 28 | 2 | ಅಕ್ಟೋಬರ್ | 1958 | ಭಗವಂತನ ನಾಮಸ್ಮರಣೆಯೇ ಅಧ್ಯಾತ್ಮಸಾಧನ | 268 |
| 147. | 28 | 3 | ನವೆಂಬರ್ | 1958 | ಪ್ರಾರಬ್ಧ ಪ್ರಯತ್ನ | 270 |
| 148. | 28 | 4 | ಡಿಸೆಂಬರ್ | 1958 | ಓದುವವರೂ ಅಧ್ಯಾತ್ಮಸಾಧನವೂ | 271 |
| 149. | 28 | 5 | ಜನವರಿ | 1959 | ವೇದಾಂತಚರ್ಚೆಯೂ ಅಧ್ಯಾತ್ಮಸಾಧನವೂ | 272 |
| 150. | 28 | 6 | ಫೆಬ್ರುವರಿ | 1959 | ಆರ್ಜವದಿಂದ ಜ್ಞಾನಪ್ರಾಪ್ತಿ | 273 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 151. | 28 | 7 | ಮಾರ್ಚ್ | 1959 | ವರ್ತಮಾನಪತ್ರಿಕೆಗಳೂ ಗ್ರಂಥಕಾಲಕ್ಷೇಪವೂ | 275 |
| 152. | 28 | 8 | ಏಪ್ರಿಲ್ | 1959 | ಜನತಾಸೇವೆ | 277 |
| 153. | 28 | 9 | ಮೇ | 1959 | ವಿವಾಹದ ಕಗ್ಗಂಟಿನ ಪ್ರಶ್ನೆ | 278 |
| 154. | 28 | 10 | ಜೂನ್ | 1959 | ಜೀವನದ ಗುರಿ | 281 |
| 155. | 28 | 11 | ಜುಲೈ | 1959 | ಸದ್ಗುರುವಿನ ಅನುಗ್ರಹ | 283 |
| 156. | 28 | 12 | ಆಗಸ್ಟ್ | 1959 | ವೈರಾಗ್ಯ ಜೀವನ | 284 |


### ಭಾಗ–III


| | | | | | | |
|---|---|---|---|---|---|---|
| 157. | 29 | 1 | ಸೆಪ್ಟೆಂಬರ್ | 1959 | ಭೌತಿಕವಿಜ್ಞಾನವೂ ತತ್ತ್ವಜ್ಞಾನವೂ | 286 |
| 158. | 29 | 2 | ಅಕ್ಟೋಬರ್ | 1959 | ಮನಸ್ಸಿನ ದುಗುಡಕ್ಕೆ ಪ್ರತೀಕಾರ | 287 |
| 159. | 29 | 3 | ನವಂಬರ್ | 1959 | ಮಿತಸಂತತಿಯೂ ಕುಟುಂಬಭರಣವೂ | 288 |
| 160. | 29 | 4 | ಡಿಸೆಂಬರ್ | 1959 | ದೀಪಾವಳಿಯಲ್ಲಿ ಮಾಡತಕ್ಕದ್ದೇನು? | 289 |
| 161. | 29 | 5 | ಜನವರಿ | 1960 | ವಿದ್ಯಾಭ್ಯಾಸವೂ ಪರಮಾರ್ಥದ ಒಲವೂ | 290 |
| 162. | 29 | 6 | ಫೆಬ್ರವರಿ | 1960 | ವೇದಾಂತವಿಚಾರದಲ್ಲಿ ಮುಂದುವರಿಯುವದು ಹೇಗೆ? | 291 |
| 163. | 29 | 7 | ಮಾರ್ಚ್ | 1960 | ವೈದ್ಯವಿದ್ಯೆ | 292 |
| 164. | 29 | 8 | ಏಪ್ರಿಲ್ | 1960 | ಇಂಗ್ಲಿಷು, ಸಂಸ್ಕೃತ | 293 |
| 165. | 29 | 9 | ಮೇ | 1960 | ವಿವಾಹದ ಪಾವಿತ್ರ್ಯ | 295 |
| 166. | 29 | 10 | ಜೂನ್ | 1960 | ಪ್ರಾರ್ಥನೆಯ ಆವಶ್ಯಕತೆ | 298 |
| 167. | 29 | 11 | ಜುಲೈ | 1960 | ಆಚಾರದ ಆವಶ್ಯಕತೆ | 299 |
| 168. | 29 | 12 | ಆಗಸ್ಟ್ | 1960 | ಆಚಾರವಿಶೇಷಗಳು | 301 |
| 169. | 30 | 1 | ಸೆಪ್ಟೆಂಬರ್ | 1960 | ಚಿತ್ತಶುದ್ಧಿ | 303 |
| 170. | 30 | 3 | ಅಕ್ಟೋಬರ್ | 1960 | ಹನುಮಂತನ ಭಾಷೆ | 304 |
| 171. | 30 | 4 | ನವಂಬರ್ | 1960 | ಅಧ್ಯಾತ್ಮಸಾಧನೆಗೆ ಅಡಚಣೆ | 305 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 172. | 30 | 5 | ಜನವರಿ | 1961 | ಜನಾಂಗದ ಒಗ್ಗಟ್ಟಿಗೆ ಉಪಾಯ | 306 |
| 173. | 30 | 6 | ಫೆಬ್ರವರಿ | 1961 | ವಿಶ್ರಾಂತಿ | 308 |
| 174. | 30 | 7 | ಮಾರ್ಚ್ | 1961 | ಸಂನ್ಯಾಸ | 309 |
| 175. | 30 | 8 | ಏಪ್ರಿಲ್ | 1961 | ಸ್ವಾಮಿಭೃತ್ಯ ಸಂಬಂಧ | 310 |
| 176. | 30 | 9 | ಮೇ | 1961 | ರಾಮನಾಮ | 311 |
| 177. | 30 | 10 | ಜೂನ್ | 1961 | ದೇವತಾರ್ಚನೆ | 312 |
| 178. | 30 | 11 | ಜುಲೈ | 1961 | ನಮ್ಮ ಕರ್ಮಕ್ಕೆ ಯಾರು ಹೊಣೆ? | 313 |
| 179. | 30 | 12 | ಆಗಸ್ಟ್ | 1961 | ರಾಮಾಯಣ ಮಹಾಭಾರತಗಳು | 314 |
| 180. | 31 | 1 | ಸೆಪ್ಟಂಬರ್ | 1961 | ಶ್ರೀಕೃಷ್ಣಭಗವಂತ | 315 |
| 181. | 31 | 2 | ಅಕ್ಟೋಬರ್ | 1961 | ಸರ್ವಸಹಾನುಭೂತಿ | 317 |
| 182. | 31 | 3 | ನವೆಂಬರ್ | 1961 | ಪರಮಾತ್ಮನ ಸಾಕ್ಷಾತ್ಕಾರ | 318 |
| 183. | 31 | 4 | ಡಿಸೆಂಬರ್ | 1961 | ಹೊರಗಿನ ವೇಷದ ಬೆಲೆ | 319 |
| 184. | 31 | 5 | ಜನವರಿ | 1962 | ವೇದಾಂತಾಭ್ಯಾಸ | 321 |
| 185. | 31 | 6 | ಫೆಬ್ರವರಿ | 1962 | ಸತ್ಸಂಗವೂ ಪರಮಾತ್ಮನ ಧ್ಯಾನವೂ | 322 |
| 186. | 31 | 7 | ಮಾರ್ಚ್ | 1962 | ವೃತ್ತಾಂತಪತ್ರಿಕೆಗಳನ್ನು ಓದುವದು | 323 |
| 187. | 31 | 8 | ಏಪ್ರಿಲ್ | 1962 | ಹಣೆಯಲ್ಲಿ ಧರ್ಮದ ಲಾಂಛನವನ್ನು ಧರಿಸುವ ಪದ್ಧತಿ | 324 |
| 188. | 31 | 9 | ಮೇ | 1962 | ಶಂಕರಜಯಂತಿ, ಶಂಕರಾರಾಧನೆ | 325 |
| 189. | 31 | 10 | ಜೂನ್ | 1962 | ಯಾವುದಕ್ಕೆ ಎಷ್ಟು ಬೆಲೆ | 326 |
| 190. | 31 | 11 | ಜುಲೈ | 1962 | ಗುರುಪೂರ್ಣಿಮೆ | 327 |
| 191. | 31 | 12 | ಆಗಸ್ಟ್ | 1962 | ಸಾಧನದಲ್ಲಿ ಸ್ಥಿರತ್ವ | 328 |
| 192. | 32 | 1 | ಸೆಪ್ಟೆಂಬರ್ | 1962 | ಸದಾಚಾರ | 329 |
| 193. | 32 | 2 | ಅಕ್ಟೋಬರ್ | 1962 | ಪ್ರೇಮವಿವಾಹ | 330 |
| 194. | 32 | 3 | ನವೆಂಬರ್ | 1962 | ದೆವ್ವಗಳಕಾಟ | 331 |
| 195. | 32 | 4 | ಡಿಸೆಂಬರ್ | 1962 | ನಾಸ್ತಿಕ್ಯ | 332 |
| 196. | 32 | 5 | ಜನವರಿ | 1963 | ಆಪತ್ಕಾಲದಲ್ಲಿ ಏನು ಮಾಡಬೇಕು ? | 334 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪೃ.ಸಂ. |
|---|---|---|---|---|---|---|
| 197. | 32 | 6 | ಫೆಬ್ರವರಿ | 1963 | ಸಂನ್ಯಾಸದತತ್ವ | 335 |
| 198. | 32 | 7 | ಮಾರ್ಚ್ | 1963 | ಸಂನ್ಯಾಸಿಗಳ ಕರ್ತವ್ಯ | 336 |
| 199. | 32 | 8 | ಏಪ್ರಿಲ್ | 1963 | ಅಪರಿಹಾರ್ಯ ರೋಗಗಳು | 337 |
| 200. | 32 | 9 | ಮೇ | 1963 | ಬದುಕು ನಿತ್ಯವಲ್ಲ | 338 |
| 201. | 32 | 10 | ಜೂನ್ | 1963 | ಪ್ರಾರ್ಥನೆಯನ್ನು ಹೇಗೆ ಮಾಡಬೇಕು? | 339 |
| 202. | 32 | 11 | ಜುಲೈ | 1963 | ಈಶ್ವರನಲ್ಲಿ ಅಚಲ ಶ್ರದ್ಧೆ | 339 |
| 203. | 32 | 12 | ಆಗಸ್ಟ್ | 1963 | ಅಧ್ಯಾತ್ಮ ವಿದ್ಯೆಯ ಮಾರ್ಗ | 341 |
| 204 | 33 | 1 | ಸೆಪ್ಟಂಬರ್ | 1963 | ಕಷ್ಟಕಾಲ | 342 |
| 205. | 33 | 2 | ಅಕ್ಟೋಬರ್ | 1963 | ಜೀವನದ ಗುರಿ | 343 |
| 206. | 33 | 3 | ನವೆಂಬರ್ | 1963 | ಸತ್ಸಂಗ | 344 |
| 207. | 33 | 4 | ಡಿಸೆಂಬರ್ | 1963 | ತೀರ್ಥಕ್ಷೇತ್ರಗಳು | 345 |
| 208. | 33 | 5 | ಜನವರಿ | 1964 | ಗೀತಾ ಜಯಂತಿ | 346 |
| 209. | 33 | 6 | ಫೆಬ್ರವರಿ | 1964 | ವೇದಾಂತ ಪ್ರಚಾರ | 347 |
| 210. | 33 | 7 | ಮಾರ್ಚ್ | 1964 | ವ್ಯಾಧಿಶಮನಕ್ಕೆ ಉಪಾಯ | 348 |
| 211. | 33 | 8 | ಏಪ್ರಿಲ್ | 1964 | ಅನುಷ್ಠಾನ | 349 |
| 212. | 33 | 9 | ಮೇ | 1964 | ಸಾತ್ವಿಕ ಮನಸ್ಸು | 350 |
| 213. | 33 | 10 | ಜೂನ್ | 1964 | ಸಂನ್ಯಾಸ | 351 |
| 214. | 33 | 11 | ಜುಲೈ | 1964 | ಶಂಕರಾರಾಧನೆ | 352 |
| 215. | 33 | 12 | ಆಗಸ್ಟ್ | 1964 | ಉಪನಯನವೂ, ಉಪಾಕರ್ಮವೂ | 354 |
| 216. | 34 | 1 | ಸೆಪ್ಟಂಬರ್ | 1964 | ಸಂನ್ಯಾಸಿಗಳೂ, ಸಾಧುಗಳೂ | 355 |
| 217. | 34 | 2 | ಅಕ್ಟೋಬರ್ | 1964 | ಮತ್ತೊಬ್ಬರಿಗಾಗಿ ಅನುಷ್ಠಾನವನ್ನು ಮಾಡುವುದು | 356 |
| 218. | 34 | 3 | ನವೆಂಬರ್ | 1964 | ಗಣಪತಿಯ ಪೂಜೆ | 357 |
| 219. | 34 | 4 | ಡಿಸೆಂಬರ್ | 1964 | ಗೋತ್ರ ಪ್ರವರಗಳು | 358 |
| 220. | 34 | 5 | ಜನವರಿ | 1965 | ಜ್ಞಾನಕ್ಕೆ ಸಾಧನ | 359 |
| 221. | 34 | 6 | ಫೆಬ್ರವರಿ | 1965 | ಈಗಿನ ಸ್ಥಿತಿಯಲ್ಲಿಯೇ ತತ್ವಪ್ರಾಪ್ತಿ | 361 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 222. | 34 | 7 | ಮಾರ್ಚ್ | 1965 | ಅಕ್ಷರ ವಿದ್ಯೆ | 362 |
| 223. | 34 | 8 | ಏಪ್ರಿಲ್ | 1965 | ಅಧ್ಯಾತ್ಮ ವಿದ್ಯೆಯ ಗುರಿ | 363 |
| 224. | 34 | 9 | ಮೇ | 1965 | ಸಂನಿವೇಶಕ್ಕೆ ಹೊಂದಿಕೊಳ್ಳುವುದು | 364 |
| 225. | 34 | 10 | ಜೂನ್ | 1965 | ಅಧ್ಯಾತ್ಮ ವಿದ್ಯೆಯನ್ನು ಹೇಗೆ ಸಂಪಾದಿಸಿಕೊಳ್ಳಬೇಕು? | 365 |
| 226. | 34 | 11 | ಜುಲೈ | 1965 | ಕೀರ್ತಿಕಾಮ | 367 |
| 227. | 34 | 12 | ಆಗಸ್ಟ್ | 1965 | ಸದ್ಗುರುಸೇವೆ | 368 |
| 228. | 35 | 1 | ಸೆಪ್ಟಂಬರ್ | 1965 | ಸರ್ವತ್ರ ಭಗವದ್ಭಾವನೆ | 370 |
| 229. | 35 | 2 | ಅಕ್ಟೋಬರ್ | 1965 | ವಿದ್ಯಾಶಾಲೆಗಳ ಬೋಧಕರವೃತ್ತಿ | 372 |
| 230. | 35 | 3 | ನವೆಂಬರ್ | 1965 | ವೈದ್ಯವೃತ್ತಿ | 374 |
| 231. | 35 | 4 | ಡಿಸೆಂಬರ್ | 1965 | ದೇಶಭಕ್ತಿಯನ್ನು ಹೇಗೆ ತೋರಿಸಬೇಕು? | 377 |
| 232. | 35 | 5 | ಜನವರಿ | 1966 | ವೇದಾಂತ ವಿದ್ಯೆಯಿಂದ ಐಹಿಕ ಪ್ರಯೋಜನವುಂಟೇ? | 380 |
| 233. | 35 | 6 | ಫೆಬ್ರವರಿ | 1966 | ವೇದಾಂತದಲ್ಲಿ ಎಲ್ಲರಿಗೂ ಅಧಿಕಾರವಿಲ್ಲವೇ? | 382 |
| 234. | 35 | 7 | ಮಾರ್ಚ್ | 1966 | ವೈರಾಗ್ಯಭಾವನೆ | 384 |
| 235. | 35 | 8 | ಏಪ್ರಿಲ್ | 1966 | ಜ್ಞಾನದ ತತ್ವ | 386 |
| 236. | 35 | 9 | ಮೇ | 1966 | ತರ್ಕದ ಉಪಯೋಗ | 387 |
| 237. | 35 | 10 | ಜೂನ್ | 1966 | ವಿದ್ಯಾಭ್ಯಾಸ | 389 |
| 238. | 35 | 11 | ಜುಲೈ | 1966 | ಕೃಷಿ ಜೀವನ | 390 |
| 239. | 35 | 12 | ಆಗಸ್ಟ್ | 1966 | ಗೋರಕ್ಷಣೆ | 391 |
| 240. | 36 | 1 | ಸೆಪ್ಟಂಬರ್ | 1966 | ಅದ್ವೈತಿಗಳು, ಶೈವರೊ ವೈಷ್ಣವರೊ? | 395 |
| 241. | 36 | 2 | ಅಕ್ಟೋಬರ್ | 1966 | ಪಾಂಚರಾತ್ರರನ್ನು ಶಂಕರಾಚಾರ್ಯರು ಖಂಡಿಸಿದಾರೆಯೆ ? | 397 |
| 242. | 36 | 3 | ನವೆಂಬರ್ | 1966 | ಪರಮಹಂಸ ಪಾರಿವ್ರಾಜ್ಯ | 399 |
| 243. | 36 | 4 | ಡಿಸೆಂಬರ್ | 1966 | ತೀರ್ಥಯಾತ್ರೆ | 401 |
| 244. | 36 | 5 | ಜನವರಿ | 1967 | ವೇದಾಂತ ಜ್ಞಾನದ ಉಪಯೋಗ | 403 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 245. | 36 | 6 | ಫೆಬ್ರವರಿ | 1967 | ಆರ್ಜವ | 406 |
| 246. | 36 | 7 | ಮಾರ್ಚ್ | 1967 | ಆಚಾರ | 408 |
| 247. | 36 | 8 | ಏಪ್ರಿಲ್ | 1967 | ವೇದಾಂತಕ್ಕೆ ಅಧಿಕಾರ | 410 |
| 248. | 36 | 9 | ಮೇ | 1967 | ಕಾಮ್ಯ ನಿಷಿದ್ಧಗಳ ತ್ಯಾಗ | 411 |
| 249. | 36 | 10 | ಜೂನ್ | 1967 | ಸ್ತೋತ್ರಪಾಠ, ಭಜನೆ | 412 |
| 250. | 36 | 12 | ಆಗಸ್ಟ್ | 1967 | ಸದ್ಗುರುವಿನಲ್ಲಿ ಆರ್ಜವ | 414 |


### ಭಾಗ–IV


| | | | | | | |
|---|---|---|---|---|---|---|
| 251. | 37 | 1 | ಸೆಪ್ಟಂಬರ್ | 1967 | ಬುದ್ಧಿಯೂ, ಹೃದಯವೂ | 416 |
| 252. | 37 | 2 | ಅಕ್ಟೋಬರ್ | 1967 | ಆಧ್ಯಾತ್ಮಜ್ಞಾನಕ್ಕೆ ಮುಖ್ಯವಾದ ಅಡ್ಡಿ | 418 |
| 253. | 37 | 3 | ನವೆಂಬರ್ | 1967 | ನಿಜವಾದ ಆಶ್ರಮವು ಎಲ್ಲಿದೆ? | 420 |
| 254. | 37 | 4 | ಡಿಸೆಂಬರ್ | 1967 | ಕುಟುಂಬ ಪ್ರೇಮ | 421 |
| 255. | 37 | 5 | ಜನವರಿ | 1968 | ಓದುವುದಕ್ಕೆ ಆರಿಸಿಕೊಳ್ಳಬೇಕಾದ ಪುಸ್ತಕಗಳು | 422 |
| 256. | 37 | 6 | ಫೆಬ್ರವರಿ | 1968 | ವೇದಾಂತವು ಸಾರ್ವತ್ರಿಕವಲ್ಲವೆ? | 422 |
| 257. | 37 | 7 | ಮಾರ್ಚ್ | 1968 | ಬ್ರಾಹ್ಮಣ್ಯದ ಮಹತ್ವ | 423 |
| 258. | 37 | 8 | ಏಪ್ರಿಲ್ | 1968 | ಜಾತ್ಯಭಿಮಾನ | 425 |
| 259. | 37 | 9 | ಮೇ | 1968 | ನೈಷ್ಠಿಕ ಬ್ರಹ್ಮಚರ್ಯ | 427 |
| 260. | 37 | 10 | ಜೂನ್ | 1968 | ವರ್ಣಾಶ್ರಮ ವ್ಯವಸ್ಥೆ | 429 |
| 261. | 37 | 11 | ಜುಲೈ | 1968 | ಸದ್ಗುರು ಸೇವೆ | 432 |
| 262. | 37 | 12 | ಆಗಸ್ಟ್ | 1968 | ರಾಮಾಯಣ ಮಹಾಭಾರತಗಳು | 434 |
| 263. | 38 | 1 | ಸೆಪ್ಟಂಬರ್ | 1968 | ಸದಾಚಾರ | 436 |
| 264. | 38 | 2 | ಅಕ್ಟೋಬರ್ | 1968 | ಅಧ್ಯಾತ್ಮವಿಚಾರಸಂಘಗಳು | 438 |
| 265. | 38 | 3 | ನವೆಂಬರ್ | 1968 | ವಿದ್ಯಾರ್ಥಿಗಳ ಜೀವನ | 440 |
| 266. | 38 | 4 | ಡಿಸೆಂಬರ್ | 1968 | ಸರಕಾರಿಯ ನೌಕರಿ | 442 |
| 267. | 38 | 5 | ಜನವರಿ | 1969 | ಜ್ಞಾನಸಾಧನಸಂಘದವರು ಏನು ಮಾಡಬೇಕು? | 443 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 268. | 38 | 6 | ಫೆಬ್ರುವರಿ | 1969 | ಪರೋಪಕಾರ | 444 |
| 269. | 38 | 7 | ಮಾರ್ಚ್ | 1969 | ಸಂನ್ಯಾಸವನ್ನು ಯಾವಾಗಹೇಗೆ ಮಾಡಬೇಕು ? | 446 |
| 270. | 38 | 8 | ಏಪ್ರಿಲ್ | 1969 | ಮೌನವನ್ನು ಹೇಗೆ ಮಾಡಬೇಕು? | 448 |
| 271. | 38 | 9 | ಮೇ | 1969 | ಅಧ್ಯಾತ್ಮವಿದ್ಯೆಯಲ್ಲಿ ಶ್ರದ್ಧೆಯ ಸ್ಥಾನ | 450 |
| 272. | 38 | 10 | ಜೂನ್ | 1969 | ಆಶ್ರಮಧರ್ಮ | 452 |
| 273. | 38 | 11 | ಜುಲೈ | 1969 | ಶ್ರದ್ಧೆ | 454 |
| 274. | 38 | 12 | ಆಗಸ್ಟ್ | 1969 | ಅಧ್ಯಾತ್ಮ ಸಾಧನವೂ ಸಿದ್ಧಾಂತವೂ | 456 |
| 275. | 39 | 1 | ಸೆಪ್ಟಂಬರ್ | 1969 | ಪರರ ಗುಣದೋಷಗಳ ವಿಮರ್ಶೆ | 458 |
| 276. | 39 | 2 | ಅಕ್ಟೋಬರ್ | 1969 | ಅಧ್ಯಾತ್ಮವಿದ್ಯಾ ಕಾಲಕ್ಷೇಪ | 459 |
| 277. | 39 | 3 | ನವೆಂಬರ್ | 1969 | ರಾಮಕೃಷ್ಣಹರಿ | 460 |
| 278. | 39 | 4 | ಡಿಸೆಂಬರ್ | 1969 | ಅಧ್ಯಾತ್ಮವಿದ್ಯೆ | 461 |
| 279. | 39 | 5 | ಜನವರಿ | 1970 | ಮನಸ್ಸಿಗೆ ಶಾಂತಿ | 461 |
| 280. | 39 | 6 | ಫೆಬ್ರುವರಿ | 1970 | ವೈರಾಗ್ಯದ ಮರ್ಮ | 462 |
| 281. | 39 | 7 | ಮಾರ್ಚ್ | 1970 | ಯೋಗ ಸಿದ್ಧಿ | 464 |
| 282. | 39 | 8 | ಏಪ್ರಿಲ್ | 1970 | ಮನಃಶಾಂತಿಗೆ ಸಾಧನೆ | 466 |
| 283. | 39 | 9 | ಮೇ | 1970 | ಮರಣಕಾಲದಲ್ಲಿ ಭಗವಂತನ ಸ್ಮರಣೆ | 469 |
| 284. | 39 | 10 | ಜೂನ್ | 1970 | ಅಧ್ಯಾತ್ಮವಿದ್ಯಾ ಪ್ರಸಾರ | 469 |
| 285. | 39 | 11 | ಜುಲೈ | 1970 | ಆಶ್ರಮವಾಸ | 471 |
| 286. | 39 | 12 | ಆಗಸ್ಟ್ | 1970 | ಮನೆಯಲ್ಲಿ ಅಧ್ಯಾತ್ಮವಿದ್ಯಾಭ್ಯಾಸ | 474 |
| 287. | 40 | 1 | ಸೆಪ್ಟಂಬರ್ | 1970 | ತತ್ವವಿಚಾರ ಸಾಧನಾನುಷ್ಠಾನ | 475 |
| 288. | 40 | 2 | ಅಕ್ಟೋಬರ್ | 1970 | ವಾಸನೆ ಅಥವಾ ಸಂಸ್ಕಾರ | 477 |
| 289. | 40 | 3 | ನವೆಂಬರ್ | 1970 | ಭಕ್ತಿಯೂ, ಜ್ಞಾನವೂ | 478 |
| 290. | 40 | 4 | ಡಿಸೆಂಬರ್ | 1970 | ಈಶ್ವರನ ವಿಷಯಕ್ಕೆ ಶಂಕೆಗಳ ಸುರಿಮಳೆ | 479 |
| 291. | 40 | 5 | ಜನವರಿ | 1971 | ಪರಮಾತ್ಮ ಸಾಧನೆಯಲ್ಲಿ ಅಹಂಕಾರವು ಸಲ್ಲದು | 480 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 292. | 40 | 6 | ಫೆಬ್ರವರಿ | 1971 | ಬ್ರಾಹ್ಮಣ್ಯ | 481 |
| 293. | 40 | 7 | ಮಾರ್ಚ್ | 1971 | ಉಪನಯನ | 483 |
| 294. | 40 | 8 | ಏಪ್ರಿಲ್ | 1971 | ಬ್ರಹ್ಮಚರ್ಯ | 485 |
| 295. | 40 | 9 | ಮೇ | 1971 | ಸಂನ್ಯಾಸಾಶ್ರಮ | 488 |
| 296. | 40 | 10 | ಜೂನ್ | 1971 | ಗುರು ಸೇವೆ | 490 |
| 297. | 40 | 11 | ಜುಲೈ | 1971 | ಭಾವನೆಯ ಆವಶ್ಯಕತೆ | 491 |
| 298. | 40 | 12 | ಆಗಸ್ಟ್ | 1971 | ಭೋಗ, ಭಯ, ಕ್ರೋಧ | 493 |
| 299. | 41 | 1 | ಸೆಪ್ಟಂಬರ್ | 1971 | ಸಂನ್ಯಾಸಾಶ್ರಮ | 495 |
| 300. | 41 | 2 | ಅಕ್ಟೋಬರ್ | 1971 | ಸಾಧನಗಳ ಸ್ಥಾನ | 497 |
| 301. | 41 | 3 | ನವೆಂಬರ್ | 1971 | ತಪಸ್ಸಿನಲ್ಲಿ ಮಿತಿ | 498 |
| 302. | 41 | 4 | ಡಿಸೆಂಬರ್ | 1971 | ವೇಷ , ಭಾಷೆ | 500 |
| 303. | 41 | 5 | ಜನವರಿ | 1972 | ಯಜ್ಞದಾನ ತಪಸ್ಸುಗಳು | 502 |
| 304. | 41 | 6 | ಫೆಬ್ರವರಿ | 1972 | ಭಗವದ್ಭಕ್ತಿ | 505 |
| 305. | 41 | 7 | ಮಾರ್ಚ್ | 1972 | ಸಂನ್ಯಾಸಾಶ್ರಮ | 507 |
| 306. | 41 | 8 | ಏಪ್ರಿಲ್ | 1972 | ಭಜನೆ | 509 |
| 307. | 41 | 9 | ಮೇ | 1972 | ಗೀತಾರ್ಥ ಪ್ರಚಾರ | 511 |
| 308. | 41 | 10 | ಜೂನ್ | 1972 | ಸರ್ವತ್ರ ಭಗವದ್ಭಾವನೆ | 512 |
| 309. | 41 | 11 | ಜುಲೈ | 1972 | ಧ್ಯಾನಯೋಗಕ್ಕೆ ಅಣಿಯಾಗುವುದು | 513 |
| 310. | 41 | 12 | ಆಗಸ್ಟ್ | 1972 | ಅಧಿಕಾರವಾದ | 515 |
| 311. | 42 | 1 | ಸೆಪ್ಟಂಬರ್ | 1972 | ಬ್ರಹ್ಮವಿದ್ಯೆಯ ಈಗಿನ ದುರವಸ್ಥೆ | 516 |
| 312. | 42 | 2 | ಅಕ್ಟೋಬರ್ | 1972 | ಸಾಧನೆಯ ಕ್ರಮ | 517 |
| 313. | 42 | 3 | ನವೆಂಬರ್ | 1972 | ಚಾತುರ್ಮಾಸ್ಯವೂ ಮಹಾಲಯವೂ | 518 |
| 314. | 42 | 4 | ಡಿಸೆಂಬರ್ | 1972 | ಪರಮಹಂಸಪರಿವ್ರಾಜ್ಯ | 519 |
| 315. | 42 | 5 | ಜನವರಿ | 1973 | ಪತಿಭಕ್ತಿ | 521 |
| 316. | 42 | 6 | ಫೆಬ್ರವರಿ | 1973 | ಉತ್ಸವಗಳು | 523 |
| 317. | 42 | 7 | ಮಾರ್ಚ್ | 1973 | ಸಾಧುಗಳ ಅನುಕರಣೆ | 526 |
| 318. | 42 | 8 | ಏಪ್ರಿಲ್ | 1973 | ಸಂನ್ಯಾಸದ ತತ್ತ್ವ | 527 |

## ಲೇಖನಗಳ ಮೂಲ–ವಿಷಯಾನುಕ್ರಮಣಿಕೆ


| ಸಂ. | ಸಂಪುಟ | ಸಂಚಿಕೆ | ತಿಂಗಳು | ಇಸವಿ | ವಿಷಯ | ಪು.ಸಂ. |
|---|---|---|---|---|---|---|
| 319. | 42 | 9 | ಮೇ | 1973 | ಜಪದ ಮರ್ಮ | 528 |
| 320. | 42 | 10 | ಜೂನ್ | 1973 | ಆತ್ಮ ನಿಶ್ಚಯ | 529 |
| 321. | 42 | 11 | ಜುಲೈ | 1973 | ಅಧ್ಯಾತ್ಮವಿದ್ಯೆಯು ಯಾರಿಗಾಗಿ ಹೇಳಿದ್ದು? | 530 |
| 322. | 42 | 12 | ಆಗಸ್ಟ್ | 1973 | ಇನ್ನಾದರೂ ಕಾಲವನ್ನು ಸದುಪಯೋಗಮಾಡಿಕೊಳ್ಳಬಾರದೆ? | 531 |
| 323. | 43 | 4 | ಡಿಸೆಂಬರ್ | 1973 | ಪರಮಹಂಸನ ನಿಷ್ಠೆ | 532 |
| 324. | 43 | 5 | ಜನವರಿ | 1974 | ಭಗವಂತನಲ್ಲಿ ಮೊರೆಯಿಡುವುದು | 533 |
| 325. | 43 | 6 | ಫೆಬ್ರವರಿ | 1974 | ಅನುಭವ | 534 |
| 326. | 43 | 7 | ಮಾರ್ಚ್ | 1974 | ಆತ್ಮನ ಸರ್ವವ್ಯಾಪ್ತಿ | 535 |
| 327. | 43 | 8 | ಏಪ್ರಿಲ್ | 1974 | ಅಧ್ಯಾತ್ಮಶಾಸ್ತ್ರದ ಸದುಪಯೋಗ | 537 |
| 328. | 43 | 9 | ಮೇ | 1974 | ಆತ್ಮೈಕತ್ವವಿದ್ಯೆಯಲ್ಲಿ ನಿಷ್ಠೆ | 538 |
| 329. | 43 | 10 | ಜೂನ್ | 1974 | ಋಜುಭಾವ | 538 |
| 330. | 43 | 11 | ಜುಲೈ | 1974 | ಮಹಾವಾಕ್ಯಜಪ | 540 |
| 331. | 43 | 12 | ಆಗಸ್ಟ್ | 1974 | ಮೋಕ್ಷವೆಂಬುದು ನಿತ್ಯಸಿದ್ಧ | 541 |
| 332. | 44 | 1 | ಸೆಪ್ಟಂಬರ್ | 1974 | ಪಾರಿವ್ರಾಜ್ಯವು ವಿಹಿತವೆ? | 542 |
| 333. | 44 | 2 | ಅಕ್ಟೋಬರ್ | 1974 | ಎಲ್ಲಕ್ಕೂ ಹೆಚ್ಚಿನ ಓದು | 544 |
| 334. | 44 | 3 | ನವೆಂಬರ್ | 1974 | ಭಕ್ತಿಯೂ ಅನುಭವವೂ | 546 |
| 335. | 44 | 4 | ಡಿಸೆಂಬರ್ | 1974 | ವ್ಯವಹಾರವನ್ನು ಪರೀಕ್ಷೆ ಮಾಡುವುದು ಹೇಗೆ? | 547 |
| 336. | 44 | 5 | ಜನವರಿ | 1975 | ಗುರುಗಳಾಗುವ ಹವಣಿಕೆಯೇಕೆ ? | 549 |
| 337. | 44 | 6 | ಫೆಬ್ರವರಿ | 1975 | ಅಹಂಕಾರ, ಮಮಕಾರಗಳ ತ್ಯಾಗವೇ ಉತ್ತಮ ಸಾಧನ | 550 |

ಅಧ್ಯಾತ್ಮ ಪ್ರಕಾಶ ಕಾರ್ಯಾಲಯ

ಬ್ರಹ್ಮನಿಷ್ಠಾಯ ವಿದ್ವತ್ಸೇ ಸಂಯಮೀಂದ್ರಾಯ ಧೀಮತೇ

अध्यात्म

ನಮಃ ಸಚ್ಚಿದಾನಂದಃ ಪ್ರಬೋಧಯಾತ್ರೇ

ಹೊಳೆನರಸೀಪುರ

# ವೇದಾಂತ ಸಂದೇಶಗಳು–ಸಂಪುಟ 5

## ಭಾಗ–3

## 157. ಭೌತಿಕವಿಜ್ಞಾನವೂ ತತ್ತ್ವಜ್ಞಾನವೂ

(ಸೆಪ್ಟೆಂಬರ್ 1959)

*'ನಿಮ್ಮ ಪತ್ರವು ತಲುಪಿತು. ತತ್ತ್ವಜ್ಞಾನದತ್ತ ಹೆಚ್ಚಾಗಿ ಮನಸ್ಸನ್ನು ಹೊರಳಿಸಿದರೆ ಭೌತಿಕಪ್ರಪಂಚದ ವಿಜ್ಞಾನವನ್ನು ಕಡೆಗಾಣಿಸಬೇಕಾಗುತ್ತದೆ. ನಮ್ಮ ನಿತ್ಯಜೀವನಕ್ಕೆ ಹಾಸುಗಲ್ಲನ್ನೆಳೆದುಕೊಂಡಂತೆ ಆಗುತ್ತದೆ. ಆದ್ದರಿಂದ ಸದ್ಯಕ್ಕೆ ವೇದಾಂತವನ್ನು ನಮ್ಮ ದೇಶದವರು ಒಂದಿಷ್ಟು ಅತ್ತ ಸರಿಯಿಸಿಟ್ಟರೆ ಒಳ್ಳೆಯದು'–ಎಂದು ನಿಮ್ಮ ಅಭಿಪ್ರಾಯವನ್ನು ಬರೆದಿರುತ್ತೀರಿ. ಜೊತೆಯಲ್ಲಿಯೇ, 'ನನ್ನ ಮನಸ್ಸು ಅದೇಕೊ, ತತ್ತ್ವವಿಚಾರವೂ ಬೇಕೆನಿಸುತ್ತಿದೆ. ಇದಕ್ಕೇನು ಮಾಡೋಣ?' ಎಂದೂ ಬರೆದಿದ್ದೀರಿ.*

ಈ ನಿಮ್ಮ ತೊಡಕನ್ನು ನೀವೇ ಕಲ್ಪಿಸಿಕೊಂಡಿರುತ್ತೀರೆಂದು ನನ್ನ ಭಾವನೆ. ಏಕೆಂದರೆ ಭೂತವಸ್ತುಗಳೂ ಭೌತಿಕವಸ್ತುಗಳೂ ಪರಮಾತ್ಮನಿಂದಲೇ ಉಂಟಾಗಿರುತ್ತವೆ–ಎಂದು ಉಪನಿಷತ್ತುಗಳು ಹೇಳುತ್ತಿವೆ. ಆದ್ದರಿಂದ ಭೌತಿಕವಿಚಾರವನ್ನು ಮಾಡುವಾಗ ನೀವು ಸ್ವತಂತ್ರವಾದ ಜಡವಸ್ತುಗಳ ವಿಚಾರವನ್ನೇನೂ ಮಾಡುತ್ತಿರುವದಿಲ್ಲ. 'ಬೆಳ್ಳಿಯ ಕಡೆಗೆ ಲಕ್ಷ್ಯವಿಟ್ಟರೆ, ಬೆಳ್ಳಿಯ ಒಡವೆ ಹೋದೀತು?' ಎನ್ನಬಹುದೆ? ಬೆಳ್ಳಿಯೇ ಅಲ್ಲವೆ, ಒಡವೆಯಾಗಿ ವ್ಯವಹಾರದಲ್ಲಿ ಕಾಣುತ್ತಿರುವದು?

ತತ್ತ್ವವನ್ನು ವಿಚಾರಮಾಡಿದಂತೆಲ್ಲ, ಅದರ ವಿಭೂತಿಯೇ ಈ ಜಗತ್ತು–ಎಂಬ ಭಾವವೂ ಬರಬಹುದು. ಬಾಹ್ಯ ಜಗತ್ತಿನ ಆಕಾರಗಳನ್ನೂ ಅದರಲ್ಲಿರುವ ವಸ್ತುಗಳ ಸ್ವಭಾವಗಳನ್ನೂ ತಿಳಿಸುವ ಪ್ರಾಕೃತಿಕನಿಯಮಗಳನ್ನೂ ಮನದಂದುಕೊಳ್ಳುವಾಗಲೆಲ್ಲ ಇದೆಲ್ಲ ಆ ಪರಮಾತ್ಮನ ಹೊರಮೈಯ ಮಹಿಮೆ. ಇದರ ತಿರುಳೇ ಆತನು–ಎಂದುಕೊಳ್ಳಿರಿ. ನಿಮ್ಮ ಜ್ಞಾನಕ್ಕೆಲ್ಲ ಮೆರುಗು ಬರುವದು. 'ಏತಾವಾನಸ್ಯ ಮಹಿಮಾ ಅತೋ ಜ್ಯಾಯಾಂಶ್ಚ ಪೂರುಷಃ' ಇದಿಷ್ಟೂ ಅವನ ಮಹಿಮೆ. ಇದಕ್ಕಿಂತಲೂ ಹೆಚ್ಚಿನವನು ಆ ಪುರುಷನು!–ಎಂಬ ಪುರುಷಸೂಕ್ತದ ವಚನವನ್ನು ಮನದಂದುಕೊಳ್ಳುತ್ತಿರಿ. ನಿತ್ಯಜೀವನಕ್ಕೂ ಪರಮಾರ್ಥವಿಚಾರಕ್ಕೂ ಯಾವ ವಿರೋಧವೂ ಕಾಣಿಸುವದಿಲ್ಲ. ನೀವು ತಿಳಿದಿರುವ ಜಗತ್ತು ಮಿಥ್ಯೆ, ನಿಜವಾದ ಜಗತ್ತು ಪರಮಾತ್ಮನ ವಿಭೂತಿಯೇ.

# 158. ಮನಸ್ಸಿನ ದುಗುಡಕ್ಕೆ ಪ್ರತೀಕಾರ

## (ಅಕ್ಟೋಬರ್ 1959)

*ನಿಮ್ಮ ಪತ್ರವನ್ನು ಓದಿದೆ. ಅತ್ಯಂತಪ್ರಿಯನಾದ ಮಗನನ್ನು ಕಳೆದುಕೊಂಡು ಈ ಜೀವನದಲ್ಲಿ ಬಾಳುವದು ನರಕವಾಸಕ್ಕಿಂತ ಹೆಚ್ಚು ಅಸಹ್ಯವಾಗಿರುತ್ತದೆ. ನನ್ನ ಮನಸ್ಸಿನ ನೋವು ಎಂದೆಂದಿಗೂ ಮಾಯುವಹಾಗಿಲ್ಲವೆಂದು ಕಾಣಿಸುತ್ತಿದೆ. ನಾನು ನಿಂತಾಗ, ಕುಳಿತಾಗ, ಓಡಾಡುವಾಗ ಯಾವ ಕೆಲಸವನ್ನು ಮಾಡುತ್ತಿದ್ದರೂ ಅದನ್ನು ಮರೆಯಿಸಿ ಅವನ ಮೂರ್ತಿಯು ನನ್ನೆದುರಿಗೇ ಬಂದು ನಿಂತಂತೆ ಆಗುತ್ತಿದೆ. ಹಗಲೆಲ್ಲ ಅತ್ತೂ ಕರೆದು ಸಾಕಾಗಿ ರಾತ್ರ ಮಲಗಿಕೊಂಡರೆ ನಿದ್ರೆ ಹತ್ತುವದಿಲ್ಲ; ಒಂದುವೇಳೆ ನಿದ್ರೆ ಬಂದರೆ ಕನಸಿನಲ್ಲಿ ಆ ವ್ಯಕ್ತಿಯು ನನ್ನ ಮುಂದೆ ಕಣ್ಣಿಗೆ ಕಟ್ಟಿದಂತೆ ಕಾಣಿಸಿಕೊಳ್ಳುವದು ಖಂಡಿತ! ಗ್ರಹಾವಿಷ್ಟನಾದವನಂತೆ ಆಗಿಬಿಟ್ಟಿರುತ್ತೇನೆ. ನನ್ನನ್ನು ನೋಡಿದವರೆಲ್ಲ 'ಇವನಿಗೇನಾಗಿದೆ?' ಎಂದು ಬೆರಗಾಗಿ ನೋಡುತ್ತಿರುತ್ತಾರೆ. ದಯವಿಟ್ಟು ಈ ಕಷ್ಟನಿಂದ ಪಾರುಮಾಡಬೇಕು–ಎಂತ ಬರೆದಿದ್ದೀರಿ.*

ಇದಕ್ಕೆ ನನಗೆ ಯಾವ ಲೌಕಿಕ ಪ್ರತೀಕಾರವೂ ಕಾಣುವದಿಲ್ಲ. ಕೆಲವರು ದುಃಖವನ್ನು ಮರೆಯುವದಕ್ಕೆ ಸ್ಥಲಾಂತರಕ್ಕೆ ಹೋಗುತ್ತಾರೆ. ಪವಿತ್ರಸ್ಥಾನಗಳ ನೆನಪು ಸ್ವಲ್ಪಮಟ್ಟಿಗೆ ಸಾತ್ತ್ವಿಕಸಂನಿವೇಶವನ್ನು ತಿರುಗಿಸಿಕೊಡಬಹುದಾದರೂ ಮನಸ್ಸು ನಮ್ಮದೇ ಆಗಿರುವದರಿಂದ ಅದರಲ್ಲಿ ದುಗುಡದುಮ್ಮಾನಗಳನ್ನು ತುಂಬಿಕೊಂಡು ಎಲ್ಲಿಗೆ ಹೋದರೂ ಅದರ ಸ್ವರೂಪವು ಮಾರ್ಪಡಲಾರದು. ನನಗೆ ಒಂದು ಉಪಾಯವು ಹೊಳೆಯುತ್ತಿದೆ. ಅದನ್ನು ಮಾಡಿನೋಡಿರಿ. ಭಗವಂತನ ಯಾವದಾದರೂ ಒಂದು ಸುಂದರವಿಗ್ರಹವನ್ನು ಇಟ್ಟುಕೊಂಡು ನೋಡುತ್ತಿರುವದು; ಆ ರೂಪಿನಿಂದ ಪರಮಾತ್ಮನು ಮಾಡಿದ ಲೀಲೆಗಳನ್ನು ಮನಸ್ಸಿನಲ್ಲಿ ಹೊರಳಾಡಿಸುತ್ತಾ ಆತನ ನಾಮವನ್ನು ಎಡೆಬಿಡದೆ ಉಚ್ಚರಿಸುವದು–ಇದನ್ನು ಮಾಡಿರಿ. ಮೊದಮೊದಲು ನಿಮಗೆ ಇದು ಕಷ್ಟವಾಗಿಯೇ ತೋರುತ್ತದೆ. ಏಕೆಂದರೆ ನಿಮ್ಮ ಪುತ್ರನ ಸ್ಮರಣೆಯಲ್ಲಿಯೇ ಮನಸ್ಸನ್ನು ಅದ್ದಿಬಿಟ್ಟಿದ್ದೀರಿ. ಆದರೆ ನಾಮಸ್ಮರಣೆಯು ಸತತವಾಗಿ ಭಗವಂತನ ದಿವ್ಯವಿಗ್ರಹದ ಧ್ಯಾನವನ್ನು ಬಲಪಡಿಸಿದಂತೆ ಆ ಸ್ಮರಣೆಯ ವೇಗವು ಕುಗ್ಗುವದು. ನಾಮಸ್ಮರಣೆಯನ್ನು ಅಭ್ಯಾಸಮಾಡುತ್ತಾ ನೀವು ಇಷ್ಟಪಟ್ಟರೆ ಯಾವದಾದರೊಂದು ಪವಿತ್ರಕ್ಷೇತ್ರಕ್ಕೂ ಹೋಗಿ ಬನ್ನಿರಿ. ಆದರೆ ಮನಸ್ಸಿಗೆ ಮಾತ್ರ ಸ್ವಲ್ಪವೂ ವಿರಾಮವನ್ನು ಕೊಡದೆ ನಾಮಸ್ಮರಣೆಯನ್ನು ಮಾಡುತ್ತಿರಿ. ಪ್ರತಿದಿನವೂ ಭಗವಂತನಲ್ಲಿ ಆತನ ಪಾದಾರವಿಂದದಲ್ಲಿ ಪ್ರೇಮವನ್ನು ನೀಡೆಂದು ಬೇಡಿಕೊಳ್ಳುತ್ತಿರಿ. ದೀನದಯಾಳುವಾದ ಆತನ ಅನುಗ್ರಹದಿಂದ ಎಲ್ಲವೂ ಸರಿಹೋಗುವದೆಂತ ನನಗೆ ಅನಿಸಿದೆ.

## 159. ಮಿತಸಂತತಿಯೂ ಕುಟುಂಬಭರಣವೂ

(ನವಂಬರ್ 1959)

*ನಮಗೆ ಬರುವ ಅಲ್ಪವಾದ ಆದಾಯದಲ್ಲಿ ಕುಟುಂಬವನ್ನು ನೋಡಿಕೊಳ್ಳುವದು ದಿನದಿನಕ್ಕೆ ಕಷ್ಟವಾಗುತ್ತಿದೆ. ಈಗಾಗಲೆ ಇರುವ ಮೂರುಮಕ್ಕಳನ್ನು ಪರೀಕ್ಷೆಗಳಿಗೆ ಓದಿಸಿ ಸಾಕಾಯಿತು; ಅದರಿಂದ ನನಗೆ ಆದ ಋಣಬಾಧೆಯನ್ನು ಆ ಮಕ್ಕಳು ತೀರಿಸುವ ಸ್ಥಿತಿಯಲ್ಲಿಲ್ಲ. ಅವರು ಬೇರೆಬೇರೆಯ ಸ್ಥಲಗಳಿಗೆ ಹೋಗಿ ಬೇರೆಬೇರೆಯ ಉದ್ಯೋಗಗಳನ್ನು ಕೈಗೊಂಡಿರುತ್ತಾರೆ. ಅವರಿಗೆ ತಕ್ಕಮಟ್ಟಿಗೆ ಸಂಬಳವೇನೋ ಸಿಕ್ಕುತ್ತಿದೆ; ಆದರೆ ಈಗಿನ ದಿನಸಿಗಳ ಪೇಟೆಯಧಾರಣೆಯೂ ದಿನದಿನಕ್ಕೆ ಏರುತ್ತಿರುವದರಿಂದ ಅವರಿಗೆ ತಮ್ಮ ತಮ್ಮ ಸ್ಥಾನಮಾನಗಳಿಗೆ ತಕ್ಕಂತೆ ಜೀವನವನ್ನು ಸಾಗಿಸುವದೇ ಕಷ್ಟವಾಗಿರುತ್ತದೆ. ನನಗಂತೂ ಮನೆಯಲ್ಲಿರುವ ಕಿರಿಯ ಹುಡುಗನನ್ನು ನೋಡಿಕೊಳ್ಳುವಷ್ಟು ಚೈತನ್ಯವೂ ಇಲ್ಲವಾಗಿದೆ. ನನ್ನ ಮಿತ್ರರಾದ ಡಾಕ್ಟರುಗಳು ಮಿತಸಂತಾನದ ಆವಶ್ಯಕತೆಯನ್ನು ಬೋಧಿಸುತ್ತಿದಾರೆ. ಇನ್ನು ಮೇಲೆ ನೀವು ಮಕ್ಕಳನ್ನು ಹೆರದಂತೆ ಪ್ರಯತ್ನವನ್ನು ಕೈಗೊಳ್ಳಬೇಕು–ಎಂಬಿದು ಅವರ ಬೋಧನೆ. ಈ ವಿಷಯದಲ್ಲಿ ಮತ್ತೆ ಕೆಲವರಿಗೆ ಭಿನ್ನಾಭಿಪ್ರಾಯವಿದೆ. ತಾವು ಈ ವಿಷಯಕ್ಕೆ ಏನಾದರೂ ಬುದ್ಧಿವಾದವನ್ನು ಕೊಟ್ಟರೆ ಕೃತಜ್ಞನಾಗಿದ್ದೇನು. ಕುಟುಂಬದ ವಿಷಯಕ್ಕೆ ನನ್ನ ಮನಸ್ಸಿನ ಕಿರಿಕಿರಿಯನ್ನು ತಪ್ಪಿಸಿಕೊಳ್ಳುವದಕ್ಕೆ ಯಾವದಾದರು ಉಪಾಯವಿದ್ದರೆ ತಿಳಿಸಬೇಕು–ಎಂತ ಒಬ್ಬ ಗೃಹಸ್ಥರು ಬರೆಯುತ್ತಾರೆ.*

ಒಟ್ಟು ದೇಶದ ಬಹುಜನರಿಗೆ ಬಂದೊದಗಿರುವ ಈ ಕಷ್ಟವನ್ನು ಯಾವನೊಬ್ಬ ವ್ಯಕ್ತಿಯೂ ಪಾರುಗಾಣಿಸಲಾರನು. ಇದಕ್ಕೆ ನಾವೆಲ್ಲರೂ ಶ್ರೀಹರಿಗೇ ಶರಣುಹೋಗುವದು ಉತ್ತಮ ಉಪಾಯವೆಂದು ನನಗೆ ತೋರುತ್ತದೆ. ಬಡವರು ಸಾಲಸೋಲಮಾಡಿ ಮಕ್ಕಳನ್ನು ಕೆಲವು ಪರಿಕ್ಷೆಗಳಲ್ಲಿ ಉತ್ತೀರ್ಣರನ್ನಾಗಿ ಮಾಡಿದರೆ ಕೃತಕೃತ್ಯರಾದೇವೆಂಬ ಭ್ರಾಂತಿಗೆ ಪಕ್ಕಾಗಿರುತ್ತಾರೆ. ಈಗ್ಗೆ ಬೇಕಾಗುವ ಇಂಜನಿಯರ್, ಡಾಕ್ಟರ್, ಲಾಯರು–ಮುಂತದ ಉದ್ಯೋಗಗಳು ನಮ್ಮ ಮಕ್ಕಳಿಗೆ ಒಂದಿಷ್ಟು ಉಸಿರೆಳೆಯುವಷ್ಟು ವಿರಾಮವನ್ನು ಕೊಡಬಹುದು; ಆದರೆ ಈ ಇಂಜನಿಯರ್, ಡಾಕ್ಟರ್ ಮುಂತಾದ ಪರೀಕ್ಷೆಗಳಿಗಾಗಿ ನಾವು ಮಾಡಿರುವ ಋಣಬಾಧೆಗೂ ಮುಂದೆ ಅವರ ಮಕ್ಕಳು ಎಷ್ಟು ಜನ ಇಂಜನಿಯರು ಡಾಕ್ಟರುಗಳಾಗುವರೋ ಅವರ ಉದ್ಯೋಗಗಳಿಗೂ ಯಾರು ಹೊಣೆಯೋ ಶ್ರೀಹರಿಯೇ ಬಲ್ಲ; ಇದ್ದ ಬದ್ದ ಜಮೀನುಗಳನ್ನು ಮಾರಿ ಅಥವಾ ಅಡವಿಟ್ಟು ಓದಿಸಿದ ಹುಡುಗರಿಗೆ ವ್ಯವಸಾಯದಲ್ಲಿ ಅಭಿರುಚಿಯಿಲ್ಲ, ಬೇರೊಂದು ಉದ್ಯೋಗವು ಸಿಕ್ಕಲಿಲ್ಲ, ಹೀಗೆ ತ್ರಿಶಂಕುಗಳಾಗುತ್ತಿದಾರೆ, ಅವರು! ಇನ್ನು ಮಿತಸಂತಾನಕ್ರಮಾನುಷ್ಠಾನದಿಂದ ಆಗುವ ಭ್ರೂಣಹತ್ಯಾದಿ ದೋಷಗಳು, ಶರೀರದ ಅನಾರೋಗ್ಯಾದಿಗಳು, ನೀತಿಯ ಕಟ್ಟು ಸಡಿಲವಾಗುವದು–ಇವಕ್ಕೆಲ್ಲ ಯಾರು ಹೊಣೆ?

ಇಂದ್ರಿಯಸಂಯಮ, ಭಗವದ್ಭಜನೆ, ಇರುವಷ್ಟರಲ್ಲಿ ಅಳವಡುವ ಸಾಧಾರಣ ಉದ್ಯೋಗಗಳ ಅವಲಂಬನೆ–ಇವುಗಳನ್ನು ಈ ಲೇಖಕರು ಅವಲಂಬಿಸಿ ನೋಡಲಿ!–ಎಂದು ನನ್ನ ಸೂಚನೆ.

## 160. ದೀಪಾವಳಿಯಲ್ಲಿ ಮಾಡತಕ್ಕದ್ದೇನು?

(ಡಿಸೆಂಬರ್ 1959)

*ನಿಮ್ಮ ಪತ್ರವು ತಲುಪಿತು. ಬೀದಿಯಲ್ಲಿ ತಿರುಗಾಡುವವರಿಗೆ ದಾರಿಯು ಕಾಣುವಂತೆ ಮನೆಯಮುಂದೆ ಮಿನುಗುವ ಹಣತೆಯ ದೀಪಗಳನ್ನು ಸಾಲು ಸಾಲಾಗಿಡುವದು, ದೂರಕ್ಕೆ ಜನರಿಗೆ ಬೆಳಕು ಕಾಣುವಂತೆ ದೀಪದ ಕಂಬಗಳನ್ನು ಇಡಿಸುವದು–ಮುಂತಾದ ಕರ್ಮಗಳನ್ನು ಈಗಲೂ ಕೆಲವರು ನಡೆಯಿಸಿಕೊಂಡು ಬಂದಿರುವದು ಕಾಲಾನುಗುಣವೆ? ಎಲ್ಲೆಲ್ಲಿಯೂ ವಿದ್ಯುದ್ದೀಪಗಳ ಕಂಬಗಳ ಸಾಲು ಕಾಣಿಸುತ್ತಿರುವ ಈ ಕಾಲಕ್ಕೆ ಆ ದೀಪಗಳಿಂದ ಆಗತಕ್ಕದ್ದೇನು? ರಾಜರುಗಳ ಆಡಳಿತವು ಬಲುಮಟ್ಟಿಗೆ ಮಾಯವಾಗಿರುವ ಈ ಭೂಲೋಕಕ್ಕೆ ಬಲಿಚಕ್ರವರ್ತಿಯ ಸ್ಮಾರಕವಾಗಿ ಹಬ್ಬವನ್ನು ಮಾಡುವದರಿಂದ ಏನಾದೀತು? ಈಗಿನ ಕಾಲಕ್ಕೆ ತಕ್ಕಂತೆ ಈ ಹಬ್ಬಗಳನ್ನು ಮಾರ್ಪಡಿಸುವದಕ್ಕೆ ಏನಾದರೂ ಏರ್ಪಾಡು ಮಾಡಬಹುದೆ? ಸೂಚಿಸಿರಿ–ಎಂದು ಬರೆದಿದ್ದೀರಿ.*

ಈಗಿನ ಕಾಲದಲ್ಲಿ ಎಲ್ಲರೂ ವಿಚಾರಪರರೇ ಆಗಿರುವದರಿಂದ ಹಳೆಯ ಪದ್ಧತಿಗಳು ಆಚಾರಗಳೂ ಅವರಿಗೆ ಕಾಲಾನುಗುಣವಲ್ಲವೆಂದು ತೋರುವದು ಸಹಜವಾಗಿದೆ. ಆದರೂ ವಿದ್ಯುದ್ದೀಪಗಳು ಇನ್ನೂ ಎಲ್ಲಾ ಕಡೆಯಲ್ಲಿಯೂ ಬಂದಿಲ್ಲ; ಬಂದಿರುವ ಕಡೆಗಳಲ್ಲಿಯ ಅವು ಥಳಾರೆಂದು ಹೊಳೆದು ಆಗಾಗ್ಗೆ ಮಾಯವಾಗುತ್ತಿರುವದು ಎಲ್ಲರ ಅನುಭವದಲ್ಲಿದೆ. ಆಗ್ಗೆ ಹಳೆಯ ದೀಪಗಳ ಆವಶ್ಯಕತೆಗೆ ಇನ್ನೂ ಇದೆ ಎಂಬ ಯೋಚನೆ ಹೊಳೆಯುತ್ತಿರುವದು. ಆಧುನಿಕ ವಿಜ್ಞಾನದ ಬೆಳಕು ಬಹುಕಾಲ ಬಾಳಲಾರದು. ಸನಾತನ ಶಾಸ್ತ್ರದೃಷ್ಟಿಯ ಬೆಳಕನ್ನು ಸಂಪಾದಿಸಿಕೊಳ್ಳುವದು ಎಂದೆಂದಿಗೂ ಅವಶ್ಯವಾಗಿರುತ್ತದೆ ಎಂಬುದನ್ನಾದರೂ ಈ ದೀಪಾವಳಿ ನೆನಪಿಗೆ ಕೊಟ್ಟೀತಲ್ಲವೆ? ನರಕಾಸುರನನ್ನು ಕೊಂದದ್ದರ ಸ್ಮಾರಕವಾಗಿ ಅಂಧಂತಮಸ್ಸಿಗೆ ಪರಿಹಾರಕವಾದ ಜ್ಞಾನದೀಪವನ್ನು ಸಂಪಾದಿಸಿಕೊಳ್ಳುವದು, ತತ್ತ್ವಜ್ಞಾನದಾನವನ್ನು ಮಾಡುವದು ಇನ್ನೂ ಉಳಿದಿದೆ–ಎಂಬುದನ್ನೂ ಈ ದೀಪಾವಳಿಯು ಜ್ಞಾಪಿಸಲಾರದೆ?

ಬಲಿಚಕ್ರವರ್ತಿಯು ಚಕ್ರವರ್ತಿಯೆಂಬುದರ ಮೇಲಿಂದಲ್ಲ, ಪೂಜ್ಯನಾಗಿರುವದು. ಮೂರುಲೋಕದ ಆಧಿಪತ್ಯವೇ ತನ್ನದಾಗುವಂತಿದ್ದರೂ ನಿರ್ಮಮತೆಯಿಂದ

ಯೋಗ್ಯಪಾತ್ರದಲ್ಲಿ ಸರ್ವಸ್ವವನ್ನೂ ದಾನಮಾಡಿದವನ ಯಶಸ್ಸು ಎಂದೆಂದಿಗೂ ನಿಲ್ಲುವದು–ಎಂಬುದು ಮಹಾಬಲಿಚಕ್ರವರ್ತಿಯಿಂದ ನಾವು ಕಲಿತುಕೊಳ್ಳಬೇಕಾಗಿರುವ ಪಾಠ. ಇಂದ್ರಾದಿಗಳಿಗೆ ತತ್ಕಾಲಕದ ಸ್ವರ್ಗಾಧಿಪತ್ಯವು ವಿಷ್ಣುವಿನಿಂದ ರಕ್ಷಿತವಾಯಿತು ಎಂಬುದಲ್ಲಿ ವಾಮನಾವತಾರದ ಕಥೆಯಿಂದ ಮುಖ್ಯವಾಗಿ ತಿಳಿದುಕೊಳ್ಳಬೇಕಾದದ್ದು. ಭಗವಂತನು ನಿಷ್ಕಾಮರಾದ ತನ್ನ ಭಕ್ತರ ದ್ವಾರಪಾಲಕನಾಗಿದ್ದು ಅವರ ಯೋಗಕ್ಷೇಮ ಗಳನ್ನು ನೋಡಿಕೊಳ್ಳುತ್ತಿರುವದು ಎಂಬುದೇ ಇಲ್ಲಿ ಮುಖ್ಯವಾದದ್ದು.

## 161. ವಿದ್ಯಾಭ್ಯಾಸವೂ ಪರಮಾರ್ಥದ ಒಲವೂ

**(ಜನವರಿ 1960)**

*ನಿಮ್ಮ ಪತ್ರವನ್ನು ಓದಿದೆನು. ನಿಮ್ಮ ವಿದ್ಯಾಭ್ಯಾಸಕ್ಕೆ ಕೆಲವು ವಿಘ್ನಗಳು ಒದಗಿದ್ದರೂ ನೀವು ಅದನ್ನು ಎದುರಿಸಿ ಮುಂದುವರಿಯುತ್ತಿರುವದು ಹೊಗಳತಕ್ಕದ್ದಾಗಿದೆ. ಆದರೆ ನೀವು ಪರಮಾತ್ಮನಲ್ಲಿ ಭಕ್ತಿಯಿಟ್ಟುಕೊಂಡಿರಬೇಕೆಂದು ಮನಸ್ಸು ಮಾಡಿರುವದಕ್ಕೂ ಈಗ ನಿಮಗೆ ಒದಗಿರುವ ಕಷ್ಟಕ್ಕೂ ಯಾವ ಸಂಬಂಧವನ್ನಾದರೂ ಗಂಟು ಹಾಕಿಕೊಳ್ಳಬೇಡಿರಿ. ನಿಮಗೆ ಈಶ್ವರನ ಕಡೆಗೆ ಒಲವು ಇರಬಹುದು. ಅದನ್ನು ವಿರಾಮವು ದೊರೆತಾಗಲೆಲ್ಲ ನಾಮಸ್ಮರಣೆಯೇ ಮುಂತಾದ ಸಾಧನಗಳಿಂದ ಬಲಪಡಿಸಿಕೊಳ್ಳುವದಕ್ಕೆ ಪ್ರಯತ್ನಿಸಿರಿ. ಆದರಿಂದ ನಿಮಗೆ ಜೀವನದಲ್ಲಿಯೂ ಶ್ರೇಯಸ್ಸಾಗುವದು.*

ನಿಮ್ಮ ಜೇಬಿನಲ್ಲಿದ್ದ ರೂಪಾಯಿಗಳನ್ನು ಯಾರೋ ಅಪಹರಿಸಿದ್ದು ನಿಮ್ಮ ಅಜಾಗರೂಕತೆಯಿಂದಲೇ ಹೊರತು, ನೀವು ದೇವರನ್ನು ಭಜಿಸಿದ್ದರಿಂದಲ್ಲ. ದೇವರು ನಿಮಗೆ ಈಗ ಒಂದು ತಿಳಿವಳಿಕೆಯನ್ನು ಕೊಟ್ಟಿರುತ್ತಾನೆ. ವ್ಯವಹಾರದಲ್ಲಿ ಕುಶಲರಾಗಿದ್ದು ಸೋಮಾರಿತನವನ್ನು ಬಿಟ್ಟು, ವಿದ್ಯಾಭ್ಯಾಸವನ್ನು ಮುಂದುವರಿಸಿದರೆ ನಿಮಗೆ ಒಳ್ಳೆಯದೇ ಆಗುವದು–ಎಂಬ ಎಚ್ಚರಿಕೆಯನ್ನು ಕೊಟ್ಟಿರುತ್ತಾನೆ. ಈ ಕಾರಣದಿಂದ ನೀವು ವಿದ್ಯಾಭ್ಯಾಸ ವನ್ನು ಬಿಟ್ಟಿದ್ದರೆ ನಿಮಗೆ ಅಕೀರ್ತಿಯೂ ಜೀವನದಲ್ಲಿ ಹೇಡಿತನದ ವರ್ತನವೂ ಕಟ್ಟಿಟ್ಟ ಬುತ್ತಿಯಾಗಿರುತ್ತಿತ್ತು.

ನಾನು ಪ್ಯಾಸಾಗುವೆನೊ ಇಲ್ಲವೊ?–ಎಂದು ಕೇಳಿರುವ ಪ್ರಶ್ನೆ ಅವಿವೇಕದ್ದು. ನೀವು ಚೆನ್ನಾಗಿ ಅಭ್ಯಾಸ ಮಾಡಿದ್ದರೆ ಅವಶ್ಯವಾಗಿ ತೇರ್ಗಡೆಯನ್ನು ಹೊಂದುವಿರಿ. ಪ್ರಶ್ನೆಗಳು, ಜ್ಯೋತಿಷ, ಶಕುನ–ಇಂತವುಗಳನ್ನು ನಂಬಿ ನಿಮ್ಮ ಕಾರ್ಯತತ್ಪರತೆಯನ್ನು ಬಿಡಬೇಡಿರಿ.

ನಿಮ್ಮ ಪಾಠಗಳನ್ನು ಓದುವದರ ಜೊತೆಗೆ ವಿರಾಮವು ದೊರಕಿದಂತೆ ಅಧ್ಯಾತ್ಮವಿಚಾರದ ಸಣ್ಣಪುಟ್ಟ ಗ್ರಂಥಗಳನ್ನು ಓದಿರಿ. ಸತ್ಪುರುಷರ ಬೋಧೆಯನ್ನು ಶ್ರವಣ ಮಾಡಿರಿ. ಈಶ್ವರನ ನಾಮವನ್ನು ಆಗಾಗ ಜಪಿಸುತ್ತಿರಿ. ಇದರಿಂದ ನಿಮ್ಮ ಚಿತ್ತಕ್ಕೆ ಶಾಂತಿ ಬರುತ್ತದೆ, ಮನಸ್ಸಿಗೆ ಧೈರ್ಯವು ಕೂಡಿ ಬರುತ್ತದೆ. ಪಾಠಗಳನ್ನು ಅಭ್ಯಾಸ ಮಾಡುವದಕ್ಕೆ ಉತ್ಸಾಹವು ತುಂಬಿಕೊಳ್ಳುತ್ತದೆ.

ಯಾರೋ ಹೇಳಿದ ಮಾತುಗಳನ್ನು ಕೇಳಿ ಹುಸಿವೈರಾಗ್ಯವನ್ನು ಅವಲಂಬಿಸಬೇಡಿರಿ. ಈಗ ನಿಮ್ಮ ಮನಸ್ಸಿನಲ್ಲಿ ಮೊಳೆತುಕೊಂಡಿದ್ದು ವೈರಾಗ್ಯವಲ್ಲ; ಮನಸ್ಸಿನ ದೌರ್ಬಲ್ಯ. ಅದರಿಂದ ನಿಮಗೆ ಯಾವ ಅಧ್ಯಾತ್ಮಿಕಲಾಭವೂ ಆಗುವದಿಲ್ಲ; ಇಹಜೀವನಕ್ಕೆ ಸಹಾಯವೂ ದೊರೆಯುವದಿಲ್ಲ. ಪರಮೇಶ್ವರನಲ್ಲಿ ಶ್ರದ್ಧಾಭಕ್ತಿಗಳನ್ನು ಬೆಳೆಯಿಸಿಕೊಳ್ಳುತ್ತಾ ಕಾರ್ಯತತ್ಪರರಾಗುವದೇ ನಿಮಗೆ ಶ್ರೇಯಸ್ಕರವೆಂದು ನಂಬಿರಿ.

## 162. ವೇದಾಂತವಿಚಾರದಲ್ಲಿ ಮುಂದುವರಿಯುವದು ಹೇಗೆ?

**(ಫೆಬ್ರುವರಿ 1960)**

*ನಿಮ್ಮ ಪತ್ರವು ತಲುಪಿರುತ್ತದೆ. ನಿಮಗೆ ಚಿಕ್ಕ ವಯಸ್ಸಿನಲ್ಲಿಯೇ ವೇದಾಂತಶ್ರವಣದಲ್ಲಿ ಅಭಿರುಚಿಯುಂಟಾಗಿರುವದು ಪರಮೇಶ್ವರನ ಅನುಗ್ರಹದಿಂದಲೇ ಸರಿ. ನೀವು ಈ ವಿಚಾರದಲ್ಲಿ ಹೇಗೆ ಮುಂದುವರಿಯಬೇಕೆಂದು ಕೇಳಿರುವದಕ್ಕೆ ನನ್ನ ಅಭಿಪ್ರಾಯವನ್ನು ಇಲ್ಲಿ ಬರೆದಿರುತ್ತೇನೆ. ಇದನ್ನು ಗುಣಗ್ರಹಣದೃಷ್ಟಿಯಿಂದ ಓದಿ ಲಾಭವನ್ನು ಪಡೆಯುವಿರೆಂದು ನಂಬಿರುತ್ತೇನೆ.*

ವೇದಾಂತವೆಂಬ ಶಬ್ದಶ್ರವಣಮಾತ್ರಕ್ಕೆ ಮರುಳಾಗಿ ಕಂಡ ಕಂಡವರಲ್ಲಿ ಯಾವದಾದರೊಂದು ಗ್ರಂಥವನ್ನು ಓದುವ ಹುಚ್ಚಿಗೆ ಸಿಕ್ಕಿಕೊಳ್ಳಬೇಡಿರಿ. ವೇದಾಂತ ವೆಂಬುದು ಉಪನಿಷತ್ತುಗಳಲ್ಲಿರುವ ತತ್ತ್ವೋಪದೇಶಕ್ರಮವು. ನೀವು ಬ್ರಾಹ್ಮಣರಾಗಿದ್ದು ವೈದಿಕಾಚಾರವನ್ನೇಕೆ ಕೈಬಿಟ್ಟಿರಿ? ಆಚಾರವು ಪ್ರಥಮಧರ್ಮವೆಂದೂ ಧರ್ಮಕ್ಕೆ ಅಚ್ಯುತನೇ ಪ್ರಭುವೆಂದೂ ವಿಷ್ಣುಸಹಸ್ರನಾಮದ ಫಲಶ್ರುತಿಯಲ್ಲಿರುವದನ್ನು ಲಕ್ಷ್ಯದಲ್ಲಿಟ್ಟುಕೊಂಡಿರಿ. ಕೂಡಲೆ ನೀವು ಪಶ್ಚಾತ್ತಾಪದಿಂದ ಶುದ್ಧಾಚಾರವನ್ನು ಕೈಕೊಳ್ಳಿರಿ. ಸಂಧ್ಯಾದಿಕರ್ಮಗಳನ್ನು ಶ್ರದ್ಧೆಯಿಂದ ಮಾಡಿ ಅದನ್ನು ಭಗವಂತನ ಆರಾಧನೆಯೆಂಬ ಭಾವನೆಯನ್ನು ಬೆಳೆಯಿಸಿಕೊಳ್ಳಿರಿ.

ಬೇಗನೆ ಸಂನ್ಯಾಸವನ್ನು ಕೈಗೊಂಡು–ಎಂದರೆ ಕಾವಿಬಟ್ಟೆಯನ್ನುಟ್ಟು–ಒಂದು ಆಶ್ರಮಚಿಹ್ನೆಯ ಹೆಸರನ್ನು ಇಟ್ಟುಕೊಂಡು ಬಹಿರಂಗವಾಗಿ ಉಪನ್ಯಾಸಮಾಡುತ್ತಾ

ಮಹಾಜ್ಞಾನಿಗಳೆಂಬ ಕೀರ್ತಿಯನ್ನು ಸಂಪಾದಿಸಿಕೊಳ್ಳುವದು ಎಂದಿಗೂ ವೇದಾಂತ ವಿಚಾರವಲ್ಲ. ಅದು ಅಹಂಕಾರವನ್ನು ಬೆಳೆಯಿಸಿಕೊಳ್ಳುವ ಹಾದಿ. ಅಷ್ಟೆ. ಅಂತಃಕರಣದಲ್ಲಿ ಗೀತೆಯಲ್ಲಿ ಹೇಳಿರುವ ಅಮಾನಿತ್ವಾದಿಧರ್ಮಗಳನ್ನು ಅಳವಡಿಸಿಕೊಂಡು, ವಿರಕ್ತರಾಗಿ ಬ್ರಹ್ಮನಿಷ್ಠರಾಗಿರುವ ಗುರುಗಳ ಸೇವೆಯಿಂದ ತತ್ತ್ವವನ್ನು ವಿಚಾರಮಾಡುತ್ತಾ ಬನ್ನಿರಿ. ನಿಮ್ಮ ಅಂತಃಕರಣವು ಎಷ್ಟರಮಟ್ಟಿಗೆ ಹೊರಗಿನ ವಿಷಯಗಳಿಂದ ಹಿಮ್ಮೆಟ್ಟಿ ಅಂತರ್ಮುಖ ವಾಗುವದೋ, ಎಷ್ಟರಮಟ್ಟಿಗೆ ಸರ್ವರ ಆತ್ಮನಾದ ಪರಮೇಶ್ವರನ ತತ್ತ್ವವನ್ನು ಕಂಡುಕೊಳ್ಳಬೇಕೆಂದು ಹಾತುವರಿಯುವದೋ ಅಷ್ಟರಮಟ್ಟಿಗೆ ನಿಮ್ಮ ವಿಚಾರವು ಮುಂದುವರಿದಂತೆ.

ಎಲ್ಲರಲ್ಲಿಯೂ ಭಗವದ್ಭಾವನೆಯನ್ನು ಮಾಡುವದು, ಪರಮಾರ್ಥತತ್ತ್ವವನ್ನು ನಿಮ್ಮೊಳಗೇ ಧ್ಯಾನದಿಂದ ಕಂಡುಕೊಳ್ಳುವದಕ್ಕೆ ಪ್ರಯತ್ನಿಸುವದು, ಲಾಭಪೂಜಾ ಕೀರ್ತಿಗಳಿಗೆ ಮನಸ್ಸನ್ನು ಜೋಲಿಸದೆ ಇರುವದು–ಇವೇ ವೇದಾಂತವಿಚಾರವು ಬಲಿಯುವದಕ್ಕೆ ಸಹಕಾರಿಸಾಧನಗಳು. ಯಾರು ಏನಾದರೂ ಅನ್ನಲಿ, ಅದಕ್ಕೆ ಅಂಜದೆ ಪರಿಶುದ್ಧಾಚಾರವನ್ನೇ ಕೈಕೊಳ್ಳಿರಿ. ಧರ್ಮದೊಡೆಯನಾದ ಭಗವಂತನನ್ನೇ ಶರಣು ಹೋಗಿರಿ. ಈ ಎರಡು ಸಾಧನಗಳಿಂದ ನಿಮ್ಮ ವೇದಾಂತವಿಚಾರಕ್ಕೆ ಹೆಚ್ಚಿನ ಪುಷ್ಟಿಯು ದೊರಕುವದೆಂದು ನಾನು ಪ್ರತಿಜ್ಞೆ ಮಾಡಿ ಹೇಳುತ್ತೇನೆ.

## 163. ವೈದ್ಯವಿದ್ಯೆ

(ಮಾರ್ಚ್ 1960)

*ನಿಮ್ಮ ಪತ್ರವು ತಲುಪಿ ಅಭಿಪ್ರಾಯವಾಯಿತು. ನೀವು ವೈದ್ಯರ ಕೆಲಸದಲ್ಲಿರುವದರಿಂದ ಎಷ್ಟೋ ಜನರ ಹಲವು ಬಗೆಯ ರೋಗಗಳಿಗೆ ಚಿಕಿತ್ಸೆಮಾಡುವದು ನಿಮ್ಮ ಜೀವನ ಕ್ರಮವಾಗಿರುತ್ತದೆ. ಭೂತದಯೆ ಎಂಬುದೊಂದು ಸಾಧನವಾದರೆ ವೈದ್ಯನ ಉದ್ಯೋಗದಲ್ಲಿ ಅದು ನಿತ್ಯವೂ ನಡೆದಿರುತ್ತದೆ. ಹೀಗಿದ್ದರೂ ಈ ಉದ್ಯೋಗದ ಅಭ್ಯಾಸದಿಂದ ನನ್ನ ಮನಸ್ಸಿಗೆ ಶಾಂತಿಯು ದೊರಕಿಲ್ಲವಲ್ಲ! ನಾನು ಉದ್ಯೋಗವನ್ನು ಹೇಗೆ ನಡೆಯಿಸಿಕೊಂಡುಹೋದರೆ ಇದೊಂದು ಸಾಧನವೆನಿಸೀತು?– ಎಂದು ಕೇಳಿರುತ್ತೀರಿ.*

ಜನರ ದುಃಖವನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನಿಸುವದೊಂದು ಲೋಕೋಪಕಾರದ ಕೆಲಸವೇ ಸರಿ. ಅದರಲ್ಲಿಯೂ ದಯಾದೃಷ್ಟಿಯಿಂದ ಚಿಕಿತ್ಸಾಕಾರ್ಯ ವನ್ನು ಕೈಗೊಳ್ಳುವದು ಮನಸ್ಸಿಗೆ ಸಮಾಧಾನವನ್ನು ಕೊಡುವ ಉಪಾಯವೆಂಬುದಕ್ಕೆ

ಯಾವ ಸಂಶಯವೂ ಇಲ್ಲ. ಆದರೆ ರೋಗಿಗಳೆಲ್ಲರೂ ಬರಿಯ ಶರೀರ ಎಂಬ ಬುದ್ಧಿಯು ನಿಮ್ಮ ಮನಸ್ಸಿನಲ್ಲಿ ಹೆಚ್ಚಾಗಿ ಇರುವಂತೆ ತೋರುತ್ತದೆ. ರೋಗಿಗಳು ಜೀವರಾದ್ದರಿಂದ ಅವರ ಶಾರೀರಕಾಪರಾಧಗಳಿಂದ ಎಷ್ಟರಮಟ್ಟಿಗೆ ಅವರಿಗೆ ರೋಗಗಳುಂಟಾಗುವವೋ ಮಾನಸಾಪರಾಧಗಳಿಂದಲೂ ಅಷ್ಟರಮಟ್ಟಿಗೇ ರೋಗಗಳು ಬರುತ್ತವೆ. ಇದನ್ನು ನೀವು ಮೊದಲು ಲಕ್ಷ್ಯದಲ್ಲಿಡಬೇಕು.

ರೋಗಿಗಳೆಲ್ಲರೂ ನನ್ನಿಂದ ಉಪಕೃತರಾಗುತ್ತಿದ್ದಾರೆ ಎಂಬ ಬುದ್ಧಿಯನ್ನು ತ್ಯಜಿಸಿಬಿಡಿರಿ. ಪರಮೇಶ್ವರನು ರೋಗಿಗಳಿಗೆ ಸಂಕಟವಿಲ್ಲದಂತೆ ಮಾಡುವದಕ್ಕೆ ನನ್ನನ್ನು ನಿಮಿತ್ತವಾಗಿ ಉಪಯೋಗಿಸಿಕೊಳ್ಳುತ್ತಿದ್ದಾನೆ ಎಂಬ ಭಾವನೆಯು ನಿಮ್ಮ ಉದ್ಯೋಗದಲ್ಲಿ ತುಂಬಲಿ. ಇವರೆಲ್ಲರೂ ಪರಮೇಶ್ವರನ ಮಕ್ಕಳು, ಪರಮೇಶ್ವರಾಂಶರೇ; ಈ ಉದ್ಯೋಗದಮೂಲಕ ಪರಮೇಶ್ವರನ ಆರಾಧನೆಯನ್ನು ಮಾಡುತ್ತಿರುವೆವು–ಎಂದು ದಿನದಿನವೂ ಮನಸ್ಸಿಗೆ ತಂದುಕೊಳ್ಳಿರಿ. ಈ ಕಾರ್ಯದಿಂದ ನಿಮಗೆ ಐಹಿಕಫಲವು ದೊರಕಲಿ ದೊರಕದಿರಲಿ, ಮನಸ್ಸಿಗೆ ಶಾಂತಿಯಂತೂ ದೊರಕುತ್ತದೆ. 'ಎಲ್ಲರೂ ಸುಖಿಗಳಾಗಲಿ!' ಎಂಬ ಉತ್ತಮಭಾವನೆಯು ತಪ್ಪದೆ ನಿಮ್ಮ ಅಂತಃಕರಣದಲ್ಲಿ ತುಂಬಿಕೊಳ್ಳಲಿ.

ನನ್ನ ಈ ಉದ್ಯೋಗವು ಪರಮೇಶ್ವರನ ಆರಾಧನೆಯೇ ಎಂಬ ಭಾವನೆಯು ಬಂದಹಾಗೆಲ್ಲ ರೋಗಿಗಳ ಮನಸ್ಸಿಗೆ ಹರ್ಷವನ್ನುಂಟುಮಾಡುವದೊಂದು ದೈನಂದಿನ ಪೂಜೆಯಾಗಿ ಪರಿಣಮಿಸುವದು. ಮನಸ್ಸಿನಲ್ಲಿ ಈ ಕೃತಿಯಿಂದ ಪರಮೇಶ್ವರನು ತೃಪ್ತನಾಗಲಿ!–ಎಂದು ಪ್ರಾರ್ಥನೆ ಎದ್ದುಕೊಳ್ಳುವದು. ಅದರಿಂದ ಅವಶ್ಯವಾಗಿ ಶಾಂತಿಯು ದೊರಕುವದು.

## 164. ಇಂಗ್ಲೀಷು, ಸಂಸ್ಕೃತ

### (ಏಪ್ರಿಲ್ 1960)

*ನಿಮ್ಮ ಪತ್ರವು ಬಂದು ತಲುಪಿತು. ನಿಮ್ಮ ಹುಡುಗರಿಗೆ ಹಿಂದೀ ಭಾಷೆಗಿಂತಲೂ ಇಂಗ್ಲಿಷ್ ಕಲಿಸುವುದೇ ಮೇಲು ಎಂತ ನಿಮ್ಮ ಭಾವನೆಯಿರುವದಾಗಿ ಬರೆದಿರುತ್ತೀರಿ. ಇಂಗ್ಲಿಷು ಭಾಷಾಜ್ಞಾನದಿಂದ ನಮ್ಮ ದೇಶದ ಜನರಿಗೆ ದೇಶಾಭಿಮಾನ, ಒಗ್ಗಟ್ಟು, ಕಾರ್ಯದಕ್ಷತೆ–ಮುಂತಾದವುಗಳು ಬಂದಿರುತ್ತವೆ. ಇಂಗ್ಲಿಷುಭಾಷೆಯಷ್ಟು ವಿಸ್ತಾರವಾದ ಮತ್ತು ಅನೇಕ ಜನಾಂಗಗಳಿಗೆ ಪರಿಚಯವಿರುವ ವ್ಯಾವಹಾರಿಕ ಭಾಷೆಯು ದುರ್ಲಭವೇ. ಪರದೇಶದವರ ಮೇಲಿನ ಅಸೂಯೆಯಿಂದ ಆ ಭಾಷೆಯನ್ನು ಮೂಲೆಗೊತ್ತುವುದು ಎಂದಿಗೂ ಸರಿಯಲ್ಲ–ಎಂದು*

*ನಿಮ್ಮ ಅಭಿಪ್ರಾಯವನ್ನು ಸೂಚಿಸಿ 'ಮಕ್ಕಳ ಪುರೋಭಿವೃದ್ಧಿಯ ದೃಷ್ಟಿಯಿಂದ ತಮ್ಮ ನಿಶ್ಚಿತವಾದ ಮನೋಗತವನ್ನು ತಿಳಿಸಬೇಕು' ಎಂತ ಕೇಳಿರುತ್ತೀರಿ. ನನ್ನಲ್ಲಿ ವಿಶ್ವಾಸವಿಟ್ಟು ನೀವು ಕೇಳಿರುವದರಿಂದ ನನ್ನ ಮನಸ್ಸಿನಲ್ಲಿರುವದನ್ನು ಬಿಚ್ಚಿ ತಿಳಿಸಿರುತ್ತೇನೆ.*

ಇಂಗ್ಲೀಷುಭಾಷೆಯ ಜ್ಞಾನದಿಂದ ನಮ್ಮ ದೇಶದವರಿಗೆ ದೇಶಾಭಿಮಾನವು ಮೊಳೆಯಿತೆಂಬ ತಪ್ಪುತಿಳಿವಳಿಕೆಯನ್ನು ನೀವು ಬಿಟ್ಟುಬಿಡಬೇಕು. ಏಕೆಂದರೆ ಆ ಭಾಷೆಯನ್ನು ಬಲ್ಲವರು ನಮ್ಮ ದೇಶದಲ್ಲಿ ಎಲ್ಲಿಯೋ ಕೆಲವರು ಮಾತ್ರ; ನೂರಕ್ಕೆ ತೊಂಬತ್ತೈದು ಮಂದಿಗೆ ಇಂಗ್ಲೀಷು ಈಗಲೂ ತಿಳಿಯದು. ಇಂಗ್ಲೀಷನ್ನು ಓದಿ ಪಾಶ್ಚಾತ್ಯದೇಶಗಳಲ್ಲಿ ನಡೆಯಿಸುತ್ತಿರುವ ಮತ್ತು ನಡೆಯುತ್ತಿರುವ ಕ್ರಾಂತಿಗಳ ವಿಷಯವಾಗಿ ಇತಿಹಾಸಗಳಿಂದಲೂ ವೃತ್ತಾಂತಪತ್ರಿಕೆಗಳಿಂದಲೂ ತಿಳಿದ ಕೆಲವರು ತರುಣರು ಇಲ್ಲಿಂದ ಬ್ರಿಟಿಷರನ್ನು ಹೊರಗೆ ಹಾಕುವ ವಿಷಯಕ್ಕೆ ಕಾಲಕರ್ಮಸಂಯೋಗದಿಂದ ಒಗ್ಗಟ್ಟಾಗಿರಬಹುದು. ಆದರೆ ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ ಕಾಶ್ಮೀರದಿಂದ ಅಸ್ಸಾಮಿನವರೆಗೂ ಇರುವ ದೇಶವು ಒಂದೇ ಒಂದು; ಅದು ಆರ್ಯಧರ್ಮದವರ ವಾಸಸ್ಥಲ ಎಂಬುದು ನಮ್ಮ ದೇಶದವರಿಗೆಲ್ಲ ಗೊತ್ತಾಗಿರುವದು ಸಂಸ್ಕೃತಭಾಷೆಯಿಂದ. ಸಂಸ್ಕೃತದಲ್ಲಿರುವ ಪುರಾಣಗಳನ್ನು ಕೇಳುವದು, ಈ ಭಾರತಭೂಮಿಯಲ್ಲಿರುವ ಶೈವ, ವೈಷ್ಣವ, ಶಾಕ್ತೇಯಾದಿ ಕ್ಷೇತ್ರಗಳಿಗೆ ಯಾತ್ರೆಹೋಗಿ ಅಲ್ಲಿರುವ ತೀರ್ಥಗಳಲ್ಲಿ ಮಿಂದು ನದಿಗಳಲ್ಲಿ, ಬೆಟ್ಟಗಳಮೇಲೆ, ಗವಿಗಳೊಳಗೆ ಇರುವ ದೇವತೆಗಳ ಅಥವಾ ಮಹಾತ್ಮರ ಸಮಾಧಿಗಳ ಸಂದರ್ಶನವನ್ನು ಮಾಡಿಕೊಂಡು ಬರುವದು–ಈ ಅಭ್ಯಾಸವು ಸಾವಿರಾರು ವರ್ಷಗಳಿಂದ ನಮ್ಮ ದೇಶದಲ್ಲಿದೆ. ತೀರ್ಥಗಳಲ್ಲಿ ಸ್ನಾನಮಾಡುವಾಗ, ಪಿತೃಗಳಿಗೆ ತರ್ಪಣವನ್ನು ಕೊಡುವಾಗ, ಅಥವಾ ಆಯಾ ದೇವತೆಗಳ ಪೂಜೆಯನ್ನು ಮಾಡುವಾಗ ಈ ದೇಶದಲ್ಲಿ ಎಲ್ಲಿದ್ದರೂ ಪುರೋಹಿತರು ಸಂಸ್ಕೃತದಲ್ಲಿಯೇ ಸಂಕಲ್ಪಮಂತ್ರವನ್ನೂ ಪೂಜಾಮಂತ್ರವನ್ನೂ ಹೇಳಿಸುತ್ತಿದ್ದಾರೆ. ಇದರಿಂದ ಭರತಖಂಡವೆಂಬ ಇಡಿಯ ದೇಶವೇ ನಮ್ಮ ಧರ್ಮಕಾರ್ಯಗಳಿಗೆ ನೆಲೆಬೀಡಾಗಿರುವ ಋಷಿಗಳ, ಸಾಧುಗಳ ಅಥವಾ ಸಂನ್ಯಾಸಿಗಳ ನಿವಾಸ ಭೂಮಿಯು, ಇಲ್ಲಿರುವ ಜನರ ವೇಷಭಾಷಾದಿಗಳು ಎಷ್ಟು ವಿಧವಾಗಿದ್ದರೂ ನಮ್ಮ ದೇಶದ ಧರ್ಮವೂ ಸಂಸ್ಕೃತಿಯೂ ಒಂದೇ ಎಂಬ ದೃಢವಿಶ್ವಾಸವು ಈ ದೇಶದವರಿಗೆ ಶಾಶ್ವತವಾಗಿದ್ದುಬಿಟ್ಟಿರುತ್ತದೆ.

ಭಾರತ, ರಾಮಾಯಣ, ಪುರಾಣಗಳು–ಇವು ಸಂಸ್ಕೃತದಲ್ಲಿಯೇ ಮೊದಲು ಬರೆಯಲ್ಪಟ್ಟಿವೆ. ಅವನ್ನು ಓದಿ ಜನಸಾಮಾನ್ಯಕ್ಕೆ ಶ್ರವಣಮಾಡಿಸುವ ಮಹನೀಯರು ಈಗಲೂ ಇರುತ್ತಾರೆ. ದೇಶಭಾಷೆಗಳಲ್ಲಿಯೂ ಆ ಪವಿತ್ರಗ್ರಂಥಗಳು ಗದ್ಯಪದ್ಯಗ್ರಂಥಗಳ

ರೂಪದಲ್ಲಿಯೂ ಹಾಡುಗಳು ಲಾವಣಿಗಳು ಮುಂತಾದವುಗಳ ರೂಪದಲ್ಲಿಯೂ ಕಂಗೊಳಿಸುತ್ತಿರುವವು. ವರ್ಷದ ಪ್ರತಿಯೊಂದು ಮಾಸದಲ್ಲಿಯೂ ಮಾಡಬೇಕಾದ ವ್ರತಗಳು, ದಾನಧರ್ಮಗಳು–ಮುಂತಾದವುಗಳನ್ನು ತತ್ತದಂಗವಾಗಿ ಬರೆದಿರುವ ಮಾಸಮಾಹಾತ್ಮ್ಯದ ಕಥೆಗಳು ಭರತಖಂಡದ ವಿವಿಧದೇಶಗಳ ಇತಿಹಾಸವನ್ನು ಜನರಿಗೆ ಶ್ರವಣಮಾಡಿಸುತ್ತಿರುವವು. ಇದೆಲ್ಲ ಸಂಸ್ಕೃತಭಾಷೆಯಲ್ಲಿಯೇ ಇರುವದು, ಇಂಗ್ಲೀಷಿನಲ್ಲಲ್ಲ.

ಇಂಗ್ಲೀಷುಭಾಷೆಯಲ್ಲಿ ಭೌತಿಕವಿಜ್ಞಾನದ ಗ್ರಂಥಗಳು, ವಾಣಿಜ್ಯ, ಸಾಮಾಜಿಕ ಮತ್ತು ರಾಜಕಾರಣವಿಚಾರಗಳು ತುಂಬಿತುಳುಕುವ ಗ್ರಂಥಗಳು ಇರುವದು ನಿಜ. ಆ ಕಾರಣದಿಂದ ಐಹಿಕಭೋಗಗಳಿಗೆ ಮರುಳಾಗಿರುವ ದೇಶಗಳಲ್ಲೆಲ್ಲ ಆ ಭಾಷೆಯು ಹಬ್ಬಿಕೊಂಡಿರುವದರಿಂದ ವ್ಯವಹಾರಕ್ಕೆ ಆ ಭಾಷೆಯ ಪರಿಚಯವು ಅವಶ್ಯವೆಂಬುದೂ ನಿಜ. ಅದಕ್ಕಿಂತಲೂ ಆ ಭಾಷೆಯಲ್ಲಿ ವಿವಿಧಧರ್ಮಗ್ರಂಥಗಳನ್ನೂ ಆಚಾರ್ಯರು, ಮಹಾತ್ಮರು–ಮುಂತಾದವರ ಜೀವನಚರಿತ್ರೆಗಳನ್ನೂ ಸೂಕ್ತಿಗಳನ್ನೂ ಪರಿವರ್ತನೆ ಮಾಡುವದು ಹೆಚ್ಚು ಮುಖ್ಯ. ಧರ್ಮ, ಜ್ಞಾನ, ವೈರಾಗ್ಯ, ಭಕ್ತಿ, ಯೋಗ, ಶಾಂತಿದಾಂತ್ಯಾದಿಸಾಧನಗಳು–ಇವುಗಳ ವಿಷಯದಲ್ಲಿ ಬೇರೆ ಬೇರೆಯ ಮಹಾತ್ಮರು ಏನು ಹೇಳಿರುತ್ತಾರೆಂಬುದನ್ನು ಇಂಗ್ಲೀಷು ಭಾಷಾಂತರಗಳ ಮೂಲಕವಾಗಿ ತಿಳಿದು ಕೊಳ್ಳಬಹುದು. ಅಷ್ಟರಮಟ್ಟಿಗೆ ಆ ಭಾಷೆಯ ಪರಿಚಯವು ಸೌಕರ್ಯವೇ ಸರಿ; ಮಿಕ್ಕ ಭಾಗಗಳನ್ನು ಪರಿವರ್ಜನೆ ಮಾಡಬೇಕಾದ ಅಧರ್ಮಾದಿಗಳ ತಿಳಿವಳಿಕೆಗಾಗಿ ಓದಬಹುದೇ ಹೊರತು ಮತ್ತೇತಕ್ಕೂ ಅಲ್ಲ.

ಸಂಸ್ಕೃತಭಾಷೆಯ ಅಭ್ಯಾಸವು–ಇಂಗ್ಲೀಷಿನಲ್ಲಿ ತಿಳಿವಳಿಕೆಯಿಲ್ಲದಿದ್ದರೂ ಚಿಂತೆಯಿಲ್ಲ–ನಮ್ಮ ದೇಶದ ಸಂಸ್ಕೃತಿಯನ್ನೂ ದೇಶಾಭಿಮಾನವನ್ನೂ ಇಹಪರಸುಖಗಳಿಗೆ ಬೇಕಾದ ವಿಶಾಲದೃಷ್ಟಿಯನ್ನೂ ಕೊಡುವಂಥದ್ದು. ಈಗಿನ ವ್ಯವಹಾರದ ತಿಳಿವಳಿಕೆಗೆ ಇಂಗ್ಲೀಷು ಅವಶ್ಯವೇ ಸರಿ. ಯುಕ್ತಾಯುಕ್ತವಿವೇಚನೆಯಿಂದ ನಿಮ್ಮ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸವನ್ನು ಹೇಗೆ ಮಾಡಿಸಬೇಕೆಂಬುದನ್ನು ನೀವೇ ನಿರ್ಣಯಿಸಿಕೊಳ್ಳಿರಿ.

## 165. ವಿವಾಹದ ಪಾವಿತ್ರ್ಯ

### (ಮೇ 1960)

*ನೀವು ಬರೆದ ಪತ್ರವು ತಲುಪಿತು. ವಿವಾಹವು ಶಾಸ್ತ್ರೀಯವಾಗಿ ನಡೆಯಬೇಕೆಂಬ ನಿರ್ಬಂಧವು ಅನೇಕರ ದಾಂಪತ್ಯಸುಖಕ್ಕೆ ಅಡಚಣೆಯಾಗಿರುತ್ತದೆ. ಪ್ರೇಮದಿಂದ ಸ್ತ್ರೀಪುರುಷರು*

*ಪರಸ್ಪರವಾಗಿ ಮದುವೆಮಾಡಿಕೊಳ್ಳುವ ಸ್ವಾತಂತ್ರ್ಯವು ಜನರಿಗೆ ಇರುವದು ಯುಕ್ತವಲ್ಲವೆ? ಮನುಷ್ಯನು ತನ್ನ ಸುಖಸಾಮಗ್ರಿಯನ್ನು ಮತ್ತೊಬ್ಬರ ಅನುಮತಿಯಿಂದ ಆರಿಸಿಕೊಳ್ಳಬೇಕೆಂಬ ನಿರ್ಬಂಧವು ಸರಿಯೆ? ಗೋತ್ರಕುಲಾದಿಗಳ ನಿರ್ಬಂಧವನ್ನು ಬಿಟ್ಟು ಸ್ವತಂತ್ರವಾಗಿ ಮದುವೆಯಾಗುವದಾದರೆ ವರದಕ್ಷಿಣೆಯ ಸಮಸ್ಯೆ ತಾನೇ ಬಿಚ್ಚಿಕೊಳ್ಳುವದು; ಜನರಲ್ಲಿ ಜಾತಿನಿಮಿತ್ತದ ರಾಗದ್ವೇಷಗಳು ಕಣ್ಮರೆಯಾಗುವವು; ಮನುಷ್ಯರೆಲ್ಲರೂ ಒಂದೇ ಕುಲದವರೆಂಬ ಕಾರಣದಿಂದ ಒಗ್ಗಟ್ಟು ಹೆಚ್ಚುವದು ಎಂದು ನನ್ನ ನಂಬಿಕೆ. ವಿವಾಹಕ್ಕೂ ಶಾಸ್ತ್ರಕ್ಕೂ ಗಂಟುಹಾಕುವದು ಯುಕ್ತವೆ, ಅಲ್ಲವೆ?–ಎಂಬುದಕ್ಕೆ ತಮ್ಮ ಅಭಿಪ್ರಾಯವನ್ನು ಕೊಡಬೇಕೆಂದು ಬರೆದಿರುತ್ತೀರಿ.*

ಸ್ವತಂತ್ರವಿಚಾರವು ಪ್ರಬಲವಾಗುತ್ತಿರುವ ಈ ಕಾಲದಲ್ಲಿ ಈ ವಿಷಯಕ್ಕೆ ಒಬ್ಬರಿಗೊಬ್ಬರು ಅಭಿಪ್ರಾಯವನ್ನು ಕೊಡುವದರಿಂದ ಪ್ರಯೋಜನವೇನೂ ನನಗೆ ಕಾಣಿಸುವದಿಲ್ಲ. 'ಲೋಕೋ ಭಿನ್ನರುಚಿಃ' ಆದರೂ ನಿಮ್ಮ ಪ್ರಶ್ನೆಗೆ ಉತ್ತರವನ್ನು ತಿಳಿದಮಟ್ಟಿಗೆ ಬರೆದಿರುತ್ತೇನೆ. ನಮ್ಮ ದೇಶದಲ್ಲಿರುವ ಜಾತಿಪ್ರಭೇದಗಳು ಹಲವು ಇರುತ್ತವೆ. ಪ್ರಚಲಿತ ವಿದ್ಯಾಭ್ಯಾಸದ ಫಲವಾಗಿಯೂ ಜೀವನದ ಸಮಸ್ಯೆಗಳ ಕಾರಣದಿಂದಲೂ ಜಾತಿಯ ಕಟ್ಟಳೆಗಳನ್ನು ಕೆಲವರು ಪಾಲಿಸುತ್ತಿಲ್ಲ; ವಿದ್ಯಾವಂತರ ನಿಂದೆಗೆ ಅಂಜಿ, ಅಥವಾ ಜನನಾಯಕರ ಪ್ರೋತ್ಸಾಹಕ್ಕೆ ಮರುಳಾಗಿ ಜಾತಿಯ ನಿಯಮಗಳನ್ನು ಮೀರಿ ಸ್ವೇಚ್ಛಾಪ್ರವೃತ್ತಿಯಿಂದ ನಡೆಯುವವರನ್ನು ಬಿಟ್ಟರೆ ಈಗಲೂ ಹಳೆಯ ಸಂಪ್ರದಾಯಕ್ಕೆ ಅಂಟಿಕೊಂಡಿರುವವರು ಬಹಳ ಜನರಿರುತ್ತಾರೆ. ಅಂಥವರು ನಿಮ್ಮ ಸೂಚನೆಯಂತೆ ಯಾವ ಕಟ್ಟೂ ಇಲ್ಲದೆ ಮನಬಂದಂತೆ ಮದುವೆಮಾಡಿಕೊಂಡರೆ ನಮ್ಮ ದೇಶದ ಜನರ ಆಚಾರಸಂಕರ, ಸಂಸ್ಕೃತಿವಿನಾಶ, ಹೊಸ ಆರ್ಥಿಕಸಮಸ್ಯೆಗಳು–ಮುಂತಾದವು ತಲೆದೋರುವದು ನಿಶ್ಚಯ. ದಾಂಪತ್ಯಸುಖವು ಹೆಚ್ಚುವದೆಂದೇನೂ ನನಗೆ ತೋರುವದಿಲ್ಲ.

ವಯಸ್ಸಾದ ಮೇಲೆ ಮದುವೆಮಾಡಿಕೊಳ್ಳುವ ಪದ್ಧತಿಯು ನಮ್ಮ ದೇಶದಲ್ಲಿಯೂ ಅನೇಕರಲ್ಲಿತ್ತು, ಈಗ ಅದು ಸುಸಂಸ್ಕೃತರಲ್ಲಿಯೂ ಹೆಚ್ಚಿಕೊಳ್ಳುತ್ತಿದೆ. ಇದು ಪರದೇಶದವರ ಅಂಧಾನುಕರಣೆಯ ಫಲವೆಂಬುದಕ್ಕೆ ಸಂಶಯವಿಲ್ಲ. ಬೇಕಾದವರನ್ನು ಬೇಕಾದಾಗ ಮದುವೆಯಾಗಿ ಬೇಡವಾದಾಗ ಕೈ ಬಿಡುವ ಪದ್ಧತಿಯು ಸುಸಂಸ್ಕೃತರ ಲಕ್ಷಣವೋ, ಕಾಡುಜನರ ಅಥವಾ ಪಶ್ವಾದಿಗಳ ಲಕ್ಷಣವೋ ನೀವೇ ಆಲೋಚಿಸಿರಿ. ಪಶ್ವಾದಿಗಳಲ್ಲಿ ನಿಯಮಿತಕಾಲದಲ್ಲಿ ಮಾತ್ರ ಸ್ತ್ರೀಪುರುಷಸಂಭೋಗವಾಗುತ್ತದೆ. ಆದರೆ ಮನುಷ್ಯನು ತನ್ನ ಬುದ್ಧಿವಂತಿಕೆಯ ದುರುಪಯೋಗವನ್ನು ಮಾಡಿಕೊಂಡಿರುವದರಿಂದ

ವರ್ಣಸಂಕರ, ಆಚಾರಸಂಕರ, ಸಂಸ್ಕೃತಿವಿಲೋಪಾದಿಗಳು ಮಾತ್ರವೇ ಅಲ್ಲ, ಅವನ ಆರೋಗ್ಯಕ್ಕೂ ಹಾನಿ ತಟ್ಟುತ್ತಿದೆ. ಭ್ರೂಣಸಂಖ್ಯೆ ಹೆಚ್ಚಿತೆಂದು ಕಳವಳಪಡುತ್ತಿರುವ ದೇಶಗಳಿಗೇನೂ ಕಡಿಮೆಯಿಲ್ಲ; ಅದನ್ನು ತಡೆಗಟ್ಟುವದಕ್ಕಾಗಿ ಮಿತಸಂತಾನದ ಕ್ರಮವನ್ನು ಕೈಗೊಳ್ಳಬೇಕೆಂದು ಆಹಾರಸಮಸ್ಯೆಯನ್ನು ಬಿಡಿಸಲಾರದ ಸರಕಾರಗಳು ಕೂಗೆಬ್ಬಿಸುತ್ತಿವೆ. ಆ ಕ್ರಮದಿಂದ ಜನರು ನೀತಿಭ್ರಷ್ಟರಾಗಿ ಆರೋಗ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ಫ್ರಾನ್ಸುದೇಶದಂಥ ರಾಜ್ಯಗಳು ಆ ಕ್ರಮವನ್ನು ಬಿರುಸಿನಿಂದ ಕೈಗೊಂಡು ಬಹಳ ನಷ್ಟವನ್ನು ಅನುಭವಿಸಿರುತ್ತವೆ.

ವಿವಾಹವಿಚ್ಛೇದದ ಪದ್ಧತಿಯನ್ನು ಆಚರಣೆಗೆ ತಂದುಕೊಂಡಿರುವ ಕೆಲವು ದೇಶಗಳಲ್ಲಿ ಮಕ್ಕಳು ಯಾವ ತಂದೆತಾಯಿಗಳಿಂದ ಹುಟ್ಟಿದವು, ಅವುಗಳ ಕುಲಗೋತ್ರವು ಯಾವದು?–ಎಂಬುದರ ನಿರ್ಣಯವಿಲ್ಲದೆ ಪೇಚಾಡುತ್ತಿದ್ದಾರೆ. ಹುಡುಗಿಯರು ಮದುವೆಗಿಂತ-ಮುಂಚಿತವಾಗಿ ಗರ್ಭಿಣಿಯರಾಗುವದರಿಂದ ಅವರ ಮಕ್ಕಳನ್ನು ಕಾಪಾಡುವ, ಮತ್ತು ಅವರ ವ್ಯಭಿಚಾರವನ್ನು ಗುಪ್ತವಾಗಿರಿಸುವ ಹೊಣೆಗಾರಿಕೆಯನ್ನು ಸರಕಾರದವರು ವಹಿಸಬೇಕಾಗಿ ಬಂದಿರುತ್ತದೆ. ನಮ್ಮ ದೇಶದಲ್ಲಿಯೂ ಆಗಲೇ ಈ ಸಂಕಷ್ಟವು ತಲೆದೋರಿಕೊಂಡಿದೆ. ಹೆರಾಡ್, ಕಂಸ–ಮುಂತಾದವರಂತೆ ಚಿಕ್ಕ ಮಕ್ಕಳನ್ನು ಕೊಲ್ಲಿಸುವದೂ ಜನಸಂಖ್ಯೆಯನ್ನು ಮಿತಿಯಲ್ಲಿಟ್ಟುಕೊಳ್ಳುವದಕ್ಕೆ ಒಂದು ಉಪಾಯವೇ ಎಂದು ಹೇಳುವವರು ಕೂಡ ಹುಟ್ಟಿಕೊಳ್ಳುತ್ತಿದ್ದಾರೆ!

ಈವರೆಗಿನ ವಿವರಣೆಯು ಶಾಸ್ತ್ರವನ್ನು ಕೈಬಿಟ್ಟು ಲೌಕಿಕದೃಷ್ಟಿಯನ್ನವಲಂಬಿಸಿಯೇ ಕೊಟ್ಟಿದ್ದಾಗಿದೆ. ಶಾಸ್ತ್ರವನ್ನು ನೋಡಿದರೆ ಮನುಷ್ಯನು ಬರಿಯ ಕಾಮರಾಗಬಲದಿಂದ ಜೀವಿಸುವದಕ್ಕೆ ಹುಟ್ಟಿರುವದಿಲ್ಲ, ಧರ್ಮಕ್ಕೆ ಅವಿರುದ್ಧವಾಗಿ ಅರ್ಥಕಾಮಗಳನ್ನು ಅನುಭವಿಸಬೇಕು; ಕ್ರಮಕ್ರಮವಾಗಿ ಚಿತ್ತಶುದ್ಧಿಯಿಂದ ತತ್ತ್ವಜ್ಞಾನವನ್ನು ಪಡೆದುಕೊಂಡು ಸರ್ವರ ಆತ್ಮನಾಗಿರುವ ಪರಬ್ರಹ್ಮದಲ್ಲಿ ಒಂದಾಗಬೇಕು–ಇದೇ ಮಾನವ ಜನ್ಮದ ಸಾಫಲ್ಯವೆಂದು ಶಾಸ್ತ್ರಗಳು ಹೇಳುತ್ತವೆ. ಆ ಕಣ್ಣಿನಿಂದ ನೋಡಿದರೆ ಕಾಮ, ಚೌರ್ಯ, ಹಿಂಸೆ–ಮುಂತಾದ ಆಸುರಭಾವವನ್ನು ತಗ್ಗಿಸಿಕೊಂಡು ಬ್ರಹ್ಮಚರ್ಯ, ಅಸ್ತೇಯ, ಅಹಿಂಸೆ–ಮುಂತಾದ ಉತ್ತಮಸಾಧನಗಳನ್ನು ಪಡೆದು ಧರ್ಮದಿಂದ ಪ್ರಜೆಯನ್ನೂ ಧನವನ್ನೂ ಸಂಪಾದಿಸಿಕೊಳ್ಳುವದೂ, ವೈರಾಗ್ಯವನ್ನು ಸಂಪಾದಿಸಿಕೊಂಡು ಪರಮಪುರುಷಾರ್ಥವನ್ನು ಪಡೆದುಕೊಳ್ಳುವದೂ ವಿವೇಕಿಗಳ ಕರ್ತವ್ಯವೆನಿಸುತ್ತದೆ. ಈ ದೃಷ್ಟಿಯು ಮನುಷ್ಯನಿಗೆ ಹಿತಕರವೋ ಅಲ್ಲವೋ ನೀವೇ ಯೋಚಿಸಿ ನೋಡಿ.

## 166. ಪ್ರಾರ್ಥನೆಯ ಆವಶ್ಯಕತೆ

(ಜೂನ್ 1960)

*ನಿಮ್ಮ ಪ್ರಶ್ನೆಗೆ ಇಲ್ಲಿ ಸಂಕ್ಷೇಪವಾಗಿ ಉತ್ತರವನ್ನು ಬರೆಯುವೆನು. ಮನುಷ್ಯನು ತನ್ನ ಈಗಿನ ಸ್ಥಿತಿಯಲ್ಲಿ ಕಾಮಮಯನಾಗಿರುತ್ತಾನೆ. ಏನಾದರೊಂದನ್ನು ಮಾಡಿ ಯಾವದಾದರೊಂದು ಫಲವನ್ನು ಪಡೆಯಬೇಕೆಂಬುದು ಅವನ ಜೀವನ ಸೂತ್ರ. ಆದ್ದರಿಂದ ತಂದೆತಾಯಿಗಳಲ್ಲಿ ತಮಗೆ ಬೇಕಾದದ್ದನ್ನು ಕೇಳಿಕೊಳ್ಳುವದು, ಹಿರಿಯರಲ್ಲಿ ಏನಾದರೂ ಬೇಡುವದು, ಅಧಿಕಾರಿಗಳಿಗೆ ಅರ್ಜಿಹಾಕುವದು–ಇವೆಲ್ಲ ಪ್ರಾರ್ಥನೆಯ ರೂಪಗಳೆ.*

ಐಹಿಕಫಲಗಳಿಗಾಗಿ ಲೌಕಿಕಜನರನ್ನು ಬೇಡುವಂತೆ ಅದೃಷ್ಟಫಲಗಳಿಗಾಗಿ ದೇವರಲ್ಲಿ ಬೇಡುವದೂ ಸ್ವಾಭಾವಿಕವೇ. ಅನಿಯತಫಲವುಳ್ಳ ರೋಗಚಿಕಿತ್ಸೆಯೇ ಮುಂತಾದವುಗಳಲ್ಲಿ ಲೌಕಿಕ ಪ್ರಾರ್ಥನೆಯ ಜೊತೆಗೆ ದೇವರನ್ನೂ ಬೇಡುವದು ತಪ್ಪಲ್ಲವೆಂಬುದಿಷ್ಟೇ ಅಲ್ಲ, ಅದು ಒಳ್ಳೆಯದೂ ಆಗಿರುತ್ತದೆ. ವೈದ್ಯರೇ ಮುಂತಾದವರಿಗೆ ಬುದ್ಧಿಯನ್ನು ಅನುಗ್ರಹಿಸುವವನೂ ಈಶ್ವರನೇ.

ನಾವು ಮಾಡುವ ಪ್ರಯತ್ನವು ನೆರವೇರುವಂತೆ ಅನುಗ್ರಹಿಸಬೇಕೆಂದು ದೇವರನ್ನು ಬೇಡುವದೂ ಸರಿಯೇ ಆಗಿದೆ. 'ಯಾಂತ್ರಿಕ'ವಾಗಿ ಪ್ರಾರ್ಥನೆ ಮಾಡುವದು ನಿಷ್ಫಲವಲ್ಲ; ಏಕೆಂದರೆ ಅದರಿಂದ ಪ್ರಾರ್ಥನೆಮಾಡುವ ಪದ್ಧತಿಗೆ ಹೊಂದಿಕೊಳ್ಳುತ್ತೇವೆ. ಯಾಂತ್ರಿಕವಾಗಿ ಮಾಡುವ ಕಾರ್ಯಗಳೇ ಅಲ್ಲವೆ, ಕಾಲಕ್ರಮದಲ್ಲಿ ಬುದ್ಧಿಪೂರ್ವಕ ಕಾರ್ಯಗಳಾಗುವವು?

ಶಿಶುಗಳೂ ಪಶುಗಳೂ ಪ್ರಾರ್ಥನೆ ಮಾಡುವದಿಲ್ಲ; ಅವಕ್ಕೆ ಅಳುವದು ಕೂಗಿಕೊಳ್ಳುವದು–ಅಷ್ಟೇ ಲಭಿಸಿರುವ ಉಪಾಯ. ನಾವು ಬೇಡದಿದ್ದರೂ ಹಿರಿಯರು ನಮ್ಮ ಪ್ರಾರ್ಥನೆಯನ್ನು ನೆರವೇರಿಸುವರು, ನಿಜ; ಆದರೆ ಅಷ್ಟರಿಂದ ಯಾರುತಾನೆ ಪ್ರಾರ್ಥನೆಮಾಡದೆ ಇರುತ್ತಾರೆ? ಕರ್ಮಫಲವನ್ನು ಭೋಗಿಸಿಯೇ ತೀರಬೇಕು– ಎಂಬುದು ಸರಿಯಾದ ತಿಳಿವಳಿಕೆಯಲ್ಲ; ಪುರುಷಕಾರವಿಲ್ಲದಿದ್ದರೆ ಮಾತ್ರ ಅದನ್ನು ಅನುಭವಿಸ ಬೇಕಾಗುವದು. ಈಶ್ವರನನ್ನು ಪ್ರಾರ್ಥಿಸುವ ಪುರುಷಕಾರಕ್ಕೆ ಇಲ್ಲಿಯೂ ಸ್ಥಾನವಿದೆ.

ಸರ್ವರೂ ಸುಖಿಗಳಾಗಿರಲಿ!–ಎಂಬ ಪ್ರಾರ್ಥನೆ ತಪ್ಪೆನ್ನಲಾಗದು. ಏಕೆಂದರೆ ಎಲ್ಲರಿಗೂ ಸುಖರೂಪನಾದ ಪರಮಾತ್ಮನಲ್ಲಿ ಸೇರಿಕೊಳ್ಳುವ ಹಕ್ಕೂ ಇರುತ್ತದೆ. ಅದಕ್ಕಾಗಿ ಪ್ರಯತ್ನಮಾಡುವ ಬುದ್ಧಿಯನ್ನು ಪ್ರೇರಿಸೆಂದು ಏತಕ್ಕೆ ಪ್ರಾರ್ಥನೆ ಮಾಡಬಾರದು?

ಪ್ರಾರ್ಥನೆಯು ಪ್ರಕೃತಿಯ ನಿಯಮಗಳನ್ನು ಸಡಿಲಿಸಲಾರದು. ಈಶ್ವರನ ನಿಯಮಗಳನ್ನು ಪಾಲಿಸಿ ನೆಮ್ಮದಿಯಾಗಿರುವ ದಾರಿಯಲ್ಲಿ ನಡೆಯುವದಕ್ಕೆ ಆಶಿಸುವ ಸತ್ಪ್ರಯತ್ನವದು. ಅಂತೂ ಮನುಷ್ಯನಿಗೆ ಪ್ರಾರ್ಥನೆಯನ್ನು ಬಿಡುವದು ಶಕ್ಯವಿಲ್ಲ; ಆದ್ದರಿಂದ ಈಶ್ವರನ ಪ್ರಾರ್ಥನೆಯನ್ನು ಮಾಡಿದರೆ ಉತ್ತಮ.

## 167. ಆಚಾರದ ಆವಶ್ಯಕತೆ

### (ಜುಲೈ 1960)

*ನಿಮ್ಮ ಪತ್ರವು ಬಂದು ತಲುಪಿದೆ. ಆಚಾರದ ವಿಷಯದಲ್ಲಿ ವಿಚಾರ ಮಾಡಿದಷ್ಟೂ, ಈಗಿನ ಕಾಲಕ್ಕೆ ಅದರ ಗೋಜಿಗೆ ಹೋಗದೆ ಇರುವದೇ ಒಳ್ಳೆಯದು ಎನಿಸುತ್ತದೆ. ಮನುಷ್ಯನ ಉನ್ನತಿಗೆ ಮನಸ್ಸಿನ ಮೇಲುಮಟ್ಟವನ್ನು ಕಂಡುಕೊಳ್ಳುವದೇ ದಾರಿ–ಎಂದು ಹಲವರು ಹೇಳುತ್ತಿದಾರೆ. ಹೊಟ್ಟೆಯಪಾಡನ್ನು ನೋಡಿಕೊಳ್ಳುವದಕ್ಕೆ ಹಗಲೂ ಇರುಳೂ ದುಡಿಯಬೇಕಾಗಿರುವ ಸ್ಥಿತಿಯಲ್ಲಿರುವ ನಮಗೆ ಲೌಕಿಕವಿಚಾರಗಳಿಗೂ ಕಾಲವು ಸಾಲದೆ ಇದೆ. ಇನ್ನು 'ಆಚಾರ'ವನ್ನೂ ಗಂಟು ಹಾಕಿಕೊಂಡರೆ ಹೇಗೆ? ಎಂಬ ಪ್ರಶ್ನೆಯನ್ನು ಸ್ನೇಹಿತರು ಹಾಕುತ್ತಾರೆ; ಅವರಿಗೇನು ಉತ್ತರವನ್ನು ಹೇಳೋಣ?–ಎಂದು ಕೇಳಿರುತ್ತೀರಿ.*

ಆಚಾರಪ್ರಿಯರಾದ ನಿಮಗೆ ಈ ಚಿಂತೆಯು ಹತ್ತಿಕೊಂಡದ್ದು ಸಹಜವಾಗಿದೆ. 'ಶುಚಿತ್ವವಾಗಲಿ, ಆಚಾರವಾಗಲಿ, ಸತ್ಯವಾಗಲಿ ಅಸುರರಲ್ಲಿ ಇರುವದಿಲ್ಲ' ಎಂದು ಭಗವಂತನು ಅರ್ಜುನನಿಗೆ ಹೇಳಿರುವದನ್ನು ನೆನಪಿನಲ್ಲಿಡಿರಿ. ಅಸುರರೆಂದರೆ ಅಸುಗಳಲ್ಲಿ, ಪ್ರಾಣಗಳಲ್ಲಿ ಮಾತ್ರವೇ ರತನಾಗಿರುವವರು. ಯಾರು ಹೇಗಾದರೂ ಮಾಡಿ ಹೊಟ್ಟೆಯನ್ನು ಹೊರೆದುಕೊಂಡು ಪ್ರಾಣಸಹಿತವಾಗಿ ಉಳಿದುಕೊಂಡರೆ ಸಾಕೆನ್ನುವರೋ ಅಂಥವರಿಗೆ ಇಂಥ ಪ್ರಶ್ನೆಗಳು ಆಗಾಗ್ಗೆ ಹೊಳೆಯುತ್ತಲೇ ಇರುವವು. ಆಸುರಸಂಪತ್ತಿನ ಜನರು ಸಂಕುಚಿತಬುದ್ಧಿಯವರಾದ್ದರಿಂದ ಅವರಿಗೆ ಹೊಟ್ಟೆಹೊರೆಯುವದೊಂದೇ ಜೀವನದ ಗುರಿ ಎಂದು ತೋರುವದು ಸ್ವಾಭಾವಿಕವಾಗಿದೆ. ಅವರಿಗೆ ಅಸತ್ಯವೇ ವೇದ, ಧರ್ಮಾಧರ್ಮಗಳನ್ನು ಕಡೆಗಣಿಸುವದೇ ನೀತಿ, ಈಶ್ವರನನ್ನಾಗಲಿ ಜಗಚ್ಚಕ್ರವನ್ನು ನಡೆಯಿಸುವದಕ್ಕೆ ಅಧಿಕೃತರಾಗಿರುವ ದೇವರನ್ನಾಗಲಿ ಅವರು ನಂಬುವದಿಲ್ಲ; ಅವರಿಗೆ ಪ್ರತ್ಯಕ್ಷವೇ ಪ್ರಮಾಣವಾಗಿರುವದರಿಂದ ಧರ್ಮಾಧರ್ಮಾದಿಗಳಲ್ಲಿ ನಂಬಿಕೆ ತಪ್ಪುವದೂ ಸಹಜವಾಗಿರುತ್ತದೆ. ಕಾಮವನ್ನು ಪರಿಪೂರ್ತಿಗೊಳಿಸಿಕೊಳ್ಳುವದೇ ಅವರ ಪುರುಷಾರ್ಥ. ಆದರೆ ಆಸುರಸಂಪತ್ತಿನವರಿಗೆ ಅವರು ಕೋರುವಷ್ಟು ಸ್ಥೂಲವಾದ ಸುಖವೂ ದೊರಕಬಾರದೆಂಬುದೇ ಈಶ್ವರನ ನಿಯಮವಾಗಿದೆ. ಆದ್ದರಿಂದ ಈಗಿನ ಕಷ್ಟ

ಪರಂಪರೆಗಳಿಗೆ ಆಸುರದೃಷ್ಟಿಯೇ ಕಾರಣವಾಗಿದೆ. ಇಡಿಯ ಜಗತ್ತೇ ಕ್ಷಯವಾದರೂ ಚಿಂತೆಯಿಲ್ಲ, ನಮ್ಮ ಆಶಾಪ್ರತೀಕ್ಷೆಗಳ ಪರಿಪೂರ್ತಿಯಾಗಬೇಕು ಎಂಬುದು ಅವರ ಸಂಕಲ್ಪ; ಆದ್ದರಿಂದಲೇ ಈಗ ಮಾನವಜಾತಿಯನ್ನೇ ನಾಶಮಾಡುವ ಘಾತುಕ ಸಾಧನಗಳನ್ನು ಸಂಕುಚಿತಬುದ್ಧಿಯ ಜನರು ಶೋಧಿಸುತ್ತಲಿದಾರೆ. ಹೀಗಿರುವದರಿಂದ ಆಸುರದೃಷ್ಟಿಯವರಿಗೆ ನೀವು ಉತ್ತರವನ್ನು ಹೇಳಿ ಸಮಾಧಾನಪಡಿಸುವೆನೆಂಬ ಆಶೆಯನ್ನು ಇಟ್ಟುಕೊಳ್ಳಬೇಡಿರಿ. ಯಾರಿಗೆ ಭಗವತ್ಪ್ರಾಪ್ತಿಯಾಗಲಿ, ಭಗವತ್ಪ್ರಾಪ್ತಿಗೆ ಬೇಕಾದ ಶ್ರದ್ಧಾಭಕ್ತಿಗಳಾಗಲಿ, ದೊರಕುವಹಾಗಿಲ್ಲವೋ ಅವರಿಗೆ ಅತ್ಯಂತ ಅಧೋಗತಿಯು ಕಟ್ಟಿಟ್ಟ ಬುತ್ತಿಯಾಗಿರುತ್ತದೆ.

ಮಾನವನು ಶರೀರಮಾತ್ರವಾಗಿಲ್ಲ. ಅವನಿಗೆ ಇಂದ್ರಿಯಗಳಿವೆ, ಪ್ರಾಣವಿದೆ, ಮನಸ್ಸಿದೆ, ಬುದ್ಧಿಯಿದೆ, ಎಲ್ಲಕ್ಕೂ ಮಿಗಿಲಾಗಿ ಸರ್ವರಿಗೂ ಆತ್ಮನಾಗಿದ್ದುಕೊಂಡಿರುವ ಭಗವಂತನೇ ಅವನ ಆತ್ಮನಾಗಿರುತ್ತಾನೆ. ಮನುಷ್ಯನಿಗೆ ತನ್ನ ಪರಮಾರ್ಥಸ್ವರೂಪವನ್ನು ಕಂಡುಕೊಂಡು ನಿತ್ಯಾನಂದದಲ್ಲಿ ನೆಲೆನಿಲ್ಲುವದೇ ಪರಮಪುರುಷಾರ್ಥವಾಗಿರುತ್ತದೆ. ಆದ್ದರಿಂದ ಅವನಿಗೆ ಅನಿತ್ಯವೂ ಅಶುಚಿಯೂ ದುಃಖಾಸ್ಪದವೂ ಆಗಿರುವ ಶರೀರಾದಿಗಳಲ್ಲಿರುವ ಆತ್ಮಬುದ್ಧಿಯನ್ನು ಎಷ್ಟುಬೇಗನೆ ತೊಲಗಿಸಿಕೊಂಡರೆ ಅಷ್ಟು ಒಳ್ಳೆಯದು. ಈ ಅನಿಷ್ಟನಿವೃತ್ತಿಯೂ ಇಷ್ಟಪ್ರಾಪ್ತಿಯೂ ದೊರಕುವದಕ್ಕಾಗಿಯೇ ಶೌಚ, ಆಚಾರ, ಸತ್ಯ, ಅಹಿಂಸೆ–ಮುಂತಾದ ಸಾಧನಗಳನ್ನು ಶಾಸ್ತ್ರದಲ್ಲಿ ಹೇಳಿರುತ್ತದೆ ಎಂದು ತಿಳಿಯಿರಿ.

ಶರೀರವು ಕ್ಷಣಕ್ಷಣಕ್ಕೂ ತನ್ನ ಅಶುಚಿತ್ವವನ್ನು ಹೊರತೋರಿಸಿಕೊಳ್ಳುತ್ತಿರುವದು. ಅದರ ದ್ವಾರಗಳಿಂದೆಲ್ಲ ಅಶುಚಿಪದಾರ್ಥಗಳು ಜಿನುಗಿ ಹೊರಸೂಸುತ್ತಲೇ ಇರುವವು. ಆದ್ದರಿಂದ ಅದನ್ನು ಪರಿಶುದ್ಧವಾದ ಮೃತ್ತಿಕೆ, ನೀರು–ಇವುಗಳಿಂದ ಆಗಾಗ್ಗೆ ತೊಳೆದುಕೊಳ್ಳುತ್ತಾ ಸ್ನಾನಾದಿಗಳನ್ನು ಮಾಡುತ್ತಿರಬೇಕು; ಪರಿಶುದ್ಧವಾದ ವಸ್ತ್ರಗಳನ್ನು ಧರಿಸುತ್ತಿರಬೇಕು; ಸಾತ್ತ್ವಿಕವಾದ ಆಹಾರವನ್ನು ಸೇವಿಸುತ್ತಿರಬೇಕು. ಇಂದ್ರಿಯಗಳು ಆಗಾಗ್ಗೆ ರಾಗದ್ವೇಷಗಳ ಹೊಡೆತಕ್ಕೆ ಸಿಕ್ಕಿ ಅಶುಚಿಯಾದ ದೃಶ್ಯಗಳನ್ನು ನೋಡುವದಕ್ಕೂ ಕೇಳುವದಕ್ಕೂ ಮುಟ್ಟುವದಕ್ಕೂ ಮೂಸುವದಕ್ಕೂ, ಸವಿಯುವದಕ್ಕೂ ಹಾತುವರಿಯುತ್ತಿರುವವು. ಆದ್ದರಿಂದ ಅವನ್ನು–ವಿವೇಕಿಯಾದ ಸವಾರನು ತುಂಟಕುದುರೆಯನ್ನು ಪಳಗಿಸಿ ಸರಿಯಾದ ನಡೆಯನ್ನು ಕಲಿಸುವಂತೆ–ಪರಿಶುದ್ಧವಿಷಯಗಳ ಸೇವನೆಗೆ ಹತ್ತಿಸಬೇಕು. ಮನಸ್ಸು ಕಾಮೋದ್ದೀಪಕವಸ್ತುಗಳನ್ನು ಮತ್ತೆಮತ್ತೆ ವಿಕಲ್ಪಿಸಿಕೊಳ್ಳುತ್ತಿರುವದರಿಂದ ಇಂದ್ರಿಯಗಳು ಹತೋಟಿಗೆ ಸಿಕ್ಕದೆ ಇರುವವು. ಆದ್ದರಿಂದ

ಭಗವದ್ವಿಭೂತಿಗಳನ್ನು ಕುರಿತು ಚಿಂತಿಸುವದಕ್ಕೆ ಅದನ್ನು ಉಪಯೋಗಿಸಿಕೊಳ್ಳಬೇಕು. ಆದರಿಂದ ಇಂದ್ರಿಯಗಳೂ ಶುಚಿಯಾಗುವವು. ಮನಸ್ಸು ವಿಕಲ್ಪಿಸುವದನ್ನೇ ಬುದ್ಧಿಯು ನಿಶ್ಚಯಿಸುತ್ತದೆ. ಆದ್ದರಿಂದ ಪರಿಶುದ್ಧವಾದ ಆಚಾರದ ಮಹಿಮೆಯನ್ನು ವಿಚಾರಪೂರ್ವಕವಾಗಿ ತಿಳಿದುಕೊಂಡು ಸತ್ಯವಚನ, ಅಹಿಂಸೆ, ಧರ್ಮಾಚರಣೆ–ಇವುಗಳಲ್ಲಿಯೇ ನಿಲ್ಲುವಂತೆ ಏರ್ಪಡಿಸಿಕೊಳ್ಳಬೇಕು. ಇಂಥ ಸಾಧನವನ್ನು ಕೈಕೊಳ್ಳುವವನಿಗೆ ಐಹಿಕಸುಖವೂ ತಪ್ಪಿಹೋಗಬಹುದೆಂಬ ಭ್ರಾಂತಿಯನ್ನು ಬಿಡಿರಿ. ಇಹದಲ್ಲಿಯೂ ಪರದಲ್ಲಿಯೂ ಸುಖವು ದೊರೆಯುವದಕ್ಕೂ ನಮ್ಮ ಪರಮಾರ್ಥಸ್ವರೂಪವನ್ನು ಅರಿತುಕೊಂಡು ನಿತ್ಯಶಾಂತಿಸುಖಗಳನ್ನು ಪಡೆದುಕೊಳ್ಳುವದಕ್ಕೂ ಇದು ಹೇಗೆ ಸಾಧನವಾಗಬಲ್ಲದೆಂಬುದನ್ನು ಇನ್ನೊಂದು ಲೇಖನದಲ್ಲಿ ನಿಮಗೆ ತಿಳಿಯಪಡಿಸುವೆನು.

## 168. ಆಚಾರವಿಶೇಷಗಳು

(ಆಗಸ್ಟ್ 1960)

*ನಾನು ಹಿಂದೆ ಬರೆದ ಪತ್ರದ ಅಭಿಪ್ರಾಯವನ್ನು ನೀವು ಮನನಮಾಡಿರುವಿರೆಂದು ನಂಬಿದೇನೆ. ಆಚಾರದ ಆವಶ್ಯಕತೆಯನ್ನು ಕುರಿತು ಸಾಮಾನ್ಯವಾಗಿ ಆ ಪತ್ರದಲ್ಲಿ ಬರೆದಿರುತ್ತೇನೆ. ಅದನ್ನು ಇನ್ನೊಮ್ಮೆ ಓದಿರಿ; ಹಾಗಾದರೆ ಈ ಪತ್ರದ ಆಶಯವು ನಿಮಗೆ ಹೆಚ್ಚು ಸ್ಫುಟವಾಗುತ್ತದೆ.*

ಶರೀರವನ್ನು ಶುಚಿಯಾಗಿಟ್ಟುಕೊಳ್ಳುವದು ಆರೋಗ್ಯಕ್ಕೆ ಎಂದು ಭಾವಿಸಿರುವವರು ಹಲವರು ಇರುತ್ತಾರೆ. ಆದ್ದರಿಂದ ಅವರಿಗೆ ತಣ್ಣೀರಿನಿಂದ ಅಥವಾ ಬಿಸಿನೀರಿನಿಂದ ಮೈಯನ್ನು ತೊಳೆದುಕೊಳ್ಳುವದು; ಬಗೆಬಗೆಯ ಸಾಬೂನುಗಳಿಂದ ಚರ್ಮವನ್ನು ಸ್ವಚ್ಛವಾಗಿಟ್ಟುಕೊಳ್ಳುವದು, ಅಗಸರು ಒಗೆದು ಮಡಿಮಾಡಿ ತರುವ ಶುಭ್ರವಾದ ಬಟ್ಟೆಗಳನ್ನು ಧರಿಸುವದು, ಆದಷ್ಟು ಬೇಗಬೇಗನೆ ಕ್ಷೌರವನ್ನು ಮಾಡಿಕೊಳ್ಳುವದು, ಆಹಾರವನ್ನು ಕೈಯಿಂದ ಮುಟ್ಟದೆ ಚಮಚಗಳಿಂದ ತೆಗೆದುಕೊಂಡು ತಿನ್ನುವದು–ಇವೇ ಶರೀರಶುಚಿತ್ವಪಾಲನದ ನಿಯಮಗಳು– ಎಂದು ಒಬ್ಬ ಸ್ನೇಹಿತರು ನನಗೆ ಹೇಳಿದರು. ಸಾಬೂನುಗಳಲ್ಲಿ ಪ್ರಾಣಿಸಂಬಂಧವಾದ ಪದಾರ್ಥಗಳು ಸೇರಿರುವವೆಂಬುದೂ, ಅಗಸರು ಮಡಿ ಮಾಡಿ ತಂದ ಬಟ್ಟೆಗಳನ್ನು ಒಗೆದರೆ ಅವುಗಳಲ್ಲಿ ಕಶ್ಮಲವು ಕಾಣುವದೆಂಬುದೂ, ಅರ್ಧಕ್ಷೌರದಿಂದಲೂ ಮತ್ತೆಮತ್ತೆ ಕ್ಷೌರವನ್ನು ಮಾಡಿಸಿಕೊಳ್ಳುವದರಿಂದಲೂ ಮುಖವು ಅಂದವಾಗಿ ಕಾಣಬಹುದಾದರೂ ಕಶ್ಮಲ ನಿವಾರಣೆಯಾಗುವದಿಲ್ಲವೆಂಬುದೂ, ಚಮಚಗಳ ಲೋಹಗಳ ಸ್ಥಿತಿಯನ್ನು ಲೆಕ್ಕಕ್ಕೆ ತಾರದೆ

ಇರುವದರಿಂದ ಅನ್ನದಲ್ಲಿ ಅದು ಬೆರಕೆಯಾಗಬಹುದೆಂಬುದೂ ಅವರಿಗೆ ತಿಳಿದಿರಲಿಲ್ಲ. ಮನಸ್ಸೂ ದೇಹವೂ ಎಲ್ಲಾ ಬಗೆಯಿಂದಲೂ ಶುಚಿಯಾಗಿರುವದಕ್ಕೆ ಬರಿಯ ಆರೋಗ್ಯದೃಷ್ಟಿಯೇ ಅಲ್ಲದೆ ಚಿತ್ತಶುದ್ಧಿಯೂ ಅತ್ಯವಶ್ಯವೆಂಬುದನ್ನು ಅವರು ಲಕ್ಷ್ಯದಲ್ಲಿಟ್ಟೇ ಇರಲಿಲ್ಲ. ಹಲ್ಲುಜ್ಜುವದಕ್ಕೆ ಕಾಡುಹಂದಿಯ ಕೂದಲಿನಿಂದ ಮಾಡಿದ ಬ್ರಷ್‌ಗಳನ್ನುಪಯೋಗಿಸುವದು, ಹಿಂಸೆಗೆ ಪ್ರೋತ್ಸಾಹ, ಅನಾರೋಗ್ಯಕರವಾದ ಅಶುದ್ಧಾಚಾರವೆಂಬುದೂ ಅವರಿಗೆ ಮನವರಿಕೆಯಾಗಿರಲಿಲ್ಲ. ಬೇವು ಮುಂತಾದ ವನಸ್ಪತಿಗಳ ಕಡ್ಡಿಗಳು ದಂತಧಾವನಕ್ಕೆ 'ಟೂತ್ ಪೇಸ್ಟ್' ಮುಂತಾದ ಸಾಧನಗಳಿಗಿಂತ ಧಾರ್ಮಿಕದೃಷ್ಟಿಯಿಂದಲೂ ದೇಹಪರಿಶುದ್ಧಿಯ ದೃಷ್ಟಿಯಿಂದಲೂ ಹೆಚ್ಚು ಉಪಾದೇಯವಾದ ಸಾಧನವೆಂಬುದು, ಅವರಿಗೆ ತಿಳಿದೇ ಇರಲಿಲ್ಲ. ಸ್ನಾನ, ವಸ್ತ್ರಧಾರಣ, ಊಟ, ಸಂಚಾರ–ಮುಂತಾದ ಕ್ರಿಯೆಗಳಲ್ಲಿಯೂ ಭಗವಚ್ಚಿಂತನಾಪೂರ್ವಕವಾಗಿ ನಡೆದರೆ ದೇಹಾದಿಗಳ ಪರಿಶುದ್ಧಿಯೂ ಹೆಚ್ಚುವದೆಂಬುದು, ಪಾಪ! ಅವರಿಗೆ ಹೇಗೆ ತಿಳಿಯಬೇಕು?

ಹೊರಗಿನ ವಸ್ತುಗಳನ್ನೂ ಮನಸ್ಸಿನ ವೃತ್ತಿಗಳನ್ನೂ ಸಾತ್ತ್ವಿಕ, ರಾಜಸ, ತಾಮಸ–ಎಂದು ಮೂರು ವಿಧವಾಗಿ ನಮ್ಮ ಪೂರ್ವಜರು ವಿಂಗಡಿಸಿರುತ್ತಾರೆ. ತಮ್ಮ ಆಹಾರವಿಹಾರಗಳು ಸಾತ್ತ್ವಿಕವಾಗಿದ್ದಷ್ಟೂ ನಮಗೆ ಹರ್ಷವೂ, ಉತ್ಸಾಹವೂ, ಕಾರ್ಯದಕ್ಷತೆಯೂ ಉಂಟಾಗುವವೆಂಬುದನ್ನೂ ಲಕ್ಷ್ಯದಲ್ಲಿಟ್ಟರೆ ಆಚಾರದಿಂದ ಇಹಸುಖಕ್ಕೆ ಎಂಥ ಪ್ರಯೋಜನವಾಗುವದೆಂಬುದು ಸ್ಪಷ್ಟವಾಗುತ್ತದೆ.

ಸಾತ್ತ್ವಿಕಾಚಾರವು ಪರಗತಿಗೂ ಅನುಕೂಲವಾಗಿರುವದೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಏಕೆಂದರೆ 'ಆಚಾರವು ಮೊದಲನೆಯ ಧರ್ಮವು, ಧರ್ಮಕ್ಕೆ ಅಚ್ಯುತನೇ ಪ್ರಭು' ಎಂದು ಸ್ಮೃತಿವಚನವಿದೆ. ನಾವು ಶಾಸ್ತ್ರೀಯವಾದ ಆಚಾರವನ್ನು ಎಷ್ಟರಮಟ್ಟಿಗೆ ಅನುಸರಿಸುವೆವೋ ಅಷ್ಟರಮಟ್ಟಿಗೆ ನಮಗೆ ಧರ್ಮಬುದ್ಧಿಯುಂಟಾಗುವದು. ಧರ್ಮಬುದ್ಧಿಯು ಅಂಕುರಿಸಿದರೆ ಭಗವಂತನ ಅಸ್ತಿತ್ವದಲ್ಲಿ ನಂಬಿಕೆಯು ಹೆಚ್ಚುವದು; ಭಗವಂತನಲ್ಲಿ ಶ್ರದ್ಧಾಭಕ್ತಿಗಳು ಬೆಳೆದುಕೊಳ್ಳುವವು. ಆದ್ದರಿಂದ ನಾವು ಸಾತ್ತ್ವಿಕಾಚಾರವನ್ನು ಎಂದಿಗೂ ಕಡೆಗಣಿಸತಕ್ಕದ್ದಲ್ಲ.

ವಿದ್ಯಾಭ್ಯಾಸ, ವಿಹಾರಾದಿಗಳು, ವ್ಯವಹಾರ, ಕೃಷಿ, ವ್ಯಾಪಾರ–ಮುಂತಾದ ವೃತ್ತಿಗಳು, ವಿನೋದಗಳು ಎಲ್ಲವನ್ನೂ ಸಾತ್ತ್ವಿಕವಾಗುವಂತೆ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ನಮಗೆ ಗೊತ್ತಿಲ್ಲದೆ ನಮ್ಮ ಶರೀರವೂ ಇಂದ್ರಿಯಗಳೂ ಮನಸ್ಸೂ ಅಶುಚಿಯಾಗಿಬಿಡುವವು. ಶ್ರದ್ಧಾಭಕ್ತಿವಿಚಾರವಿಲ್ಲದೆ ಅಸಭ್ಯವಾದ ಅಥವಾ ಪರನಿಂದೆಯ

ಮಾತುಗಳು ಹೆಚ್ಚಾಗಿರುವ ಕಾದಂಬರಿಗಳೇ ಮುಂತಾದ ಗ್ರಂಥಗಳನ್ನು ಓದುವದರಿಂದಲೂ ಪಕ್ಷಪಾತದಿಂದುಂಟಾದ ರಾಗದ್ವೇಷಾದಿಗಳನ್ನು ಬೆಳೆಯಿಸುವ ವೃತ್ತಾಂತಪತ್ರಿಕೆಗಳನ್ನು ಓದುವದರಿಂದಲೂ ನಮ್ಮ ಮನೋವಾಕ್ಕಾಯಗಳು ನಮ್ಮ ಅರಿವಿಲ್ಲದೆಯೇ ಕೊಳೆಯಾಗುವವು. ಕಾಮಪ್ರಧಾನವಾದ ಸಿನೆಮಾ, ನಾಟಕ, ಅಶ್ಲೀಲವಾದ ಕ್ರೀಡೆಗಳು– ಇವುಗಳನ್ನು ನೋಡುವದರಿಂದ ಇಂದ್ರಿಯಗಳೂ ಮನಸ್ಸೂ ಕೆಳಮಟ್ಟಕ್ಕೆ ಇಳಿಯುವವು. ಸಮಾಜಕೂಟಗಳ ಹೆಸರಿನಲ್ಲಿ ಯಾರೋ ಮಾಡಿದ ಆಹಾರಗಳನ್ನು ಸೇವಿಸುವದರಿಂದ ಸಾತ್ತ್ವಿಕರಿಗೆ ಹಾನಿ ತಟ್ಟುವದು, ಶರೀರದ ಆರೋಗ್ಯವು ತಪ್ಪಿಹೋಗುವದು. ರೋಗನಿವಾರಣೆಗೆಂದು ಕಂಡ ಕಂಡವರು ತಂದ ಅಶುಚಿಯಾದ ನೀರು– ಮುಂತಾದವುಗಳನ್ನು ಸೇರಿಸಿದ ಅಥವಾ ಪ್ರಾಣಿಸಂಬಂಧವಾದ ವಸ್ತುಗಳ ಮಿಶ್ರಣವಿರುವ ಔಷಧಿಗಳನ್ನು ಸೇವಿಸುವದರಿಂದ ಆರೋಗ್ಯವೂ ತಪ್ಪುವದು; ಅಥವಾ ಶರೀರ ವಾಕ್ಕಾಯಗಳಿಗೆ ರಾಜಸತಾಮಸಸ್ವಭಾವವು ಕೂಡಿಕೊಳ್ಳುವದು. ರೈಲು, ಮೋಟಾರು, ಏರೋಪ್ಲೇನು–ಮುಂತಾದ ವೇಗವಾದ ವಾಹನಗಳನ್ನು ಅತಿಯಾಗಿ ಉಪಯೋಗಿಸುವದರಿಂದ ಆಹಾರ, ವಿವಿಧಜನಸಂಸರ್ಗ, ನಿದ್ರಾದಿಗಳ ಅಕ್ರಮ–ಇವುಗಳು ಹೆಚ್ಚಿ ಆಚಾರಕ್ಕೂ ಧರ್ಮಕ್ಕೂ ಹಾನಿ ತಟ್ಟುವದು; ದುರಾಚಾರವೇ ಸದಾಚಾರವೆಂಬ ದುರ್ಬುದ್ಧಿಯು ಬೇರುಬಿಟ್ಟುಕೊಳ್ಳುವದು. ಸ್ವಜನಗಳಲ್ಲಿ ಪ್ರೇಮಾದರಗಳು ತಪ್ಪಿಹೋಗುವವು. ಈಶ್ವರಭಕ್ತಿಯು ತಲೆದೋರುವದಕ್ಕೆ ಅಡ್ಡಿಯಾಗುವದು. ಇನ್ನು ಮನಃಶಾಂತಿ ಎಲ್ಲಿಂದ ಬರಬೇಕು? ಇವನ್ನೆಲ್ಲ ನೀವು ಸಾವಧಾನವಾಗಿ ಆಲೋಚಿಸಿರಿ.

## 169. ಚಿತ್ತಶುದ್ಧಿ

**(ಸೆಪ್ಟೆಂಬರ್ 1960)**

*"ಕರ್ಮವನ್ನು ಮಾಡಿದರೆ ಚಿತ್ತಶುದ್ಧಿಯಾಗುತ್ತದೆ ಎನ್ನುತ್ತಾರೆ. ಆದರೆ ಎಷ್ಟೋ ವರ್ಷಗಳಿಂದ ನಾನು, ಸ್ನಾನ, ಸಂಧ್ಯೋಪಾಸನೆ, ದೇವತಾರ್ಚನೆ–ಮುಂತಾದವುಗಳನ್ನು ಮಾಡುತ್ತಲೇ ಇರುತ್ತೇನೆ. ಆದರೂ ನನಗೆ ಜ್ಞಾನದಲ್ಲಿ ಈವರೆಗೂ ಪ್ರವೇಶವಾಗಿಲ್ಲ. ಇದಕ್ಕೆ ಕಾರಣವೇನು?"–ಎಂದು ನೀವು ಕೇಳಿರುವ ಪತ್ರವನ್ನು ಓದಿಕೊಂಡಿರುತ್ತೇನೆ.*

ಕರ್ಮವನ್ನು ಮಾಡುವದೆಂದರೆ ಗಾಣದ ಎತ್ತಿನಂತೆ ಸುಮ್ಮನೆ ಕರ್ಮದ ವೃತ್ತದಲ್ಲಿ ತೊಳಲುತ್ತಿರುವದಲ್ಲ. 'ದೂರೇಣ ಹ್ಯವರಂ ಕರ್ಮ ಬುದ್ಧಿಯೋಗಾದ್ಧನಂಜಯ' ಎಂಬ ಶ್ರೀಕೃಷ್ಣಭಗವಂತನ ವಚನದ ಅಭಿಪ್ರಾಯವನ್ನು ತಿಳಿದುಕೊಳ್ಳಿರಿ. ಯಾವದಾದರೊಂದು

ಫಲದ ಆಶೆಯಿಂದ ಮಾಡಿದ ಕರ್ಮವೇ ಚಿತ್ತಶುದ್ಧಿಗೆ ಕಾರಣವಾಗುವದಿಲ್ಲ; ಇನ್ನು ಮಂತ್ರದ ಅಭಿಪ್ರಾಯ, ಇದನ್ನು ಪರಮೇಶ್ವರನಿಗಾಗಿ ಮಾಡುತ್ತಿದ್ದೇನೆ ಎಂಬ ಭಾವನೆ, ಮನಸ್ಸಿನಲ್ಲಿ ಸಮತೆ–ಇವುಗಳಿಲ್ಲದಿದ್ದರೆ ಅದರಿಂದ ಚಿತ್ತಶುದ್ಧಿಯು ಎಂದಿಗೂ ಆಗಲಾರದೆಂದು ಹೇಳತಕ್ಕದ್ದೇನಿದೆ?

ಯಾವ ಕರ್ಮವನ್ನು ಮಾಡಿದರೂ 'ಇಲ್ಲಿ ಭಗವಂತನು ಇರುತ್ತಾನೆ; ಅವನಿಗಾಗಿ ಈ ಕರ್ಮವನ್ನು ಮಾಡುತ್ತಿದ್ದೇನೆ, ಅವನಿಗೆ ಇದು ಸಂಪ್ರೀತಿಯನ್ನುಂಟು ಮಾಡಲಿ' ಎಂದು ಬಲವಾದ ಭಾವನೆಯನ್ನು ಮಾಡಿಕೊಳ್ಳಿರಿ. ಲೌಕಿಕ ಕರ್ಮಗಳನ್ನು ಮಾಡುವಾಗಲೂ ಈ ಭಾವನೆಯನ್ನು ಬೆಳೆಯಿಸಿಕೊಳ್ಳುತ್ತಾ ಬನ್ನಿರಿ. ನಿಮ್ಮ ಸುತ್ತಲೂ ವ್ಯವಹಾರದಲ್ಲಿ ಕಾಣಬರುವ ಜನರಲ್ಲಿಯೂ ಪ್ರಾಣಿಗಳಲ್ಲಿಯೂ ಪರಮಾತ್ಮನು ಇರುತ್ತಾನೆಂಬುದನ್ನು ಮನದಂದುಕೊಂಡೇ ವ್ಯವಹಾರವನ್ನು ಮಾಡುವದಕ್ಕೆ ಪ್ರಾರಂಭಿಸಿರಿ. ನಿಮ್ಮ ಕಾರ್ಯಗಳಿಗೆ ಬೇರೆ ಯಾವದೊಂದು ಫಲವು ಉಂಟಾಗಲಿ ಆಗದೆ ಇರಲಿ, ಮನಸ್ಸಿನ ಸಮತೆಯನ್ನು ಕಳೆದುಕೊಳ್ಳದೆ ಇರಿ. ಇದರಿಂದ ಬೇಗನೆ ಚಿತ್ತಶುದ್ಧಿಯಾಗುವದು.

ಸತ್ಸಂಗವನ್ನು ಮಾಡಬೇಕು, ಸತ್ಪುರುಷರ ನಡೆನುಡಿಗಳನ್ನು ಚಿತ್ತವಿಟ್ಟು ನೋಡಿ ಅನುಕರಿಸುತ್ತಿರಬೇಕು. ಯಾರು ಯಾವಾಗಲೂ ಪರಮಾತ್ಮನ ಚಿಂತೆಯನ್ನೇ ಮಾಡುತ್ತಿರುವರೋ, ಪರಮಾತ್ಮನ ಮಾತನ್ನೇ ಆಡುತ್ತಿರುವರೋ, ಪರಮಾತ್ಮ ವಿಷಯಕವಾದ ಗ್ರಂಥವನ್ನು ಓದುವದು, ಜನರಿಗೆ ಹೇಳುವದು–ಇಂಥ ವ್ಯವಹಾರವನ್ನೇ ಇಟ್ಟುಕೊಂಡಿರುವರೋ ಅವರೇ ಸತ್ಪುರುಷರು, ಅಥವಾ ಸಾಧುಗಳು. ಅವರ ಸಂಗದಿಂದಲೂ ಅನುಕರಣೆಯಿಂದಲೂ ಸಮತ್ವದ ಆನಂದವು ದೊರಕುವದು; ನಾವು ಮಾಡುತ್ತಿರುವ ಕರ್ಮಗಳಿಗೆ ಕಳೆಕಟ್ಟುವದು, ಚಿತ್ತವು ಬೇಗನೆ ಶುದ್ಧವಾಗುವದು; ಪರಮೇಶ್ವರನೂ ನಮ್ಮಲ್ಲಿ ಪ್ರಸನ್ನನಾಗುವನು.

## 170. ಹನುಮಂತನ ಭಾಷೆ

**(ಅಕ್ಟೋಬರ್ 1960)**

*ನಿಮ್ಮ ಪತ್ರವು ತಲುಪಿರುತ್ತದೆ. ಮನುಷ್ಯನನ್ನು ರಾಗದ್ವೇಷಗಳಿಂದ ಬಿಡಿಸುವದಕ್ಕೆ ಪ್ರಯತ್ನಿಸುವ ಇತಿಹಾಸಪುರಾಣಾದಿಗಳಲ್ಲಿಯೂ ರಾಗದ್ವೇಷಗಳ ಬೀಜವನ್ನು ಕಾಣುವ ಈಗಿನವರ ಕಣ್ಣು ನಿಜವಾಗಿಯೂ ಯಾವದೋ ದೋಷದಿಂದ ಗ್ರಸ್ತವಾಗಿರಬೇಕು. ಕಾಮಾಲೆಯಿಂದ ನೋಡಿದವನಿಗೆ ಎಲ್ಲವೂ ಹಳದಿಯ ಬಣ್ಣದ್ದಾಗಿ ಕಂಡರೆ ಆಶ್ಚರ್ಯವೇನು?*

ಶ್ರೀರಾಮನು ಆರ್ಯವಂಶದವನು; ಹನುಮಂತನು ದ್ರಾವಿಡಕುಲದವನು. ಕನ್ನಡಿಗನು–ಹೀಗೆಂಬ ಕಲಹದ ಬೀಜವನ್ನು ನಿಮ್ಮ ಮನಸ್ಸಿನಲ್ಲಿ ಯಾರು ಬಿತ್ತಿದರೋ ನಾನರಿಯೆ. ನಮ್ಮ ಸನಾತನಧರ್ಮದವರ ಅಭಿಪ್ರಾಯದಲ್ಲಿ ಶ್ರೀರಾಮನು ಸಾಕ್ಷಾದ್ವಿಷ್ಣುವಿನ ಅವತಾರವು. ಹನುಮಂತನು ವಾಯುದೇವರ ಮಗನು. ಹೀಗೆಂದು ಪುರಾಣಗಳಲ್ಲಿ ಬರೆದಿದೆ, ರಾಮಾಯಣದಲ್ಲಿಯೂ ಇದು ಸಿಕ್ಕುತ್ತದೆ. ಪರಮಾತ್ಮನೂ ಅವನ ಮಾನುಷಲೀಲೆಗೆ ಪರಿಕರವಾಗಿ ಅವತರಿಸಿದ ದೇವತೆಗಳು ನಮಗೆ ಸಮಾನವಾಗಿ ಪೂಜ್ಯರು. ಅವರಲ್ಲಿ ಆರ್ಯ, ದ್ರಾವಿಡ ಭೇದವನ್ನು ಕಲ್ಪಿಸಿ ಜಗಳವನ್ನು ತೆಗೆಯುವವರನ್ನು ನೋಡಿ ನಗಬೇಕೋ, ಮರುಕವನ್ನು ತೋರಿಸಬೇಕೋ?

ಸಂಸ್ಕೃತವನ್ನು ದ್ರಾವಿಡಭಾಷೆಗಳನ್ನಾಡುವ ಜನರೇಕೆ ಕಲಿಯಬೇಕು? ಅದು ಕಲಿಯುವದಕ್ಕೆ ಕಷ್ಟವಾದ ಮಾತೃಭಾಷೆಯಲ್ಲವೆ?–ಎಂಬ ನಿಮ್ಮ ಪ್ರಶ್ನೆಯು ಕುಹಕಿಗಳು ಯಾರೋ ನಿಮ್ಮ ಮನಸ್ಸಿನಲ್ಲಿ ಎಬ್ಬಿಸಿದ ಅಲೆಯ ಪ್ರಾಭಾವವು. ಹನುಮಂತನು ಆಡಿದ ಭಾಷೆ ಯಾವದೆಂದು ವಾಲ್ಮೀಕರು ಬರೆದಿದ್ದಾರೆಯೋ ನೋಡಿ. ಬೇಕೆಂದ ರೂಪವನ್ನು ಇಚ್ಛಾಮಾತ್ರದಿಂದ ಧರಿಸಬಲ್ಲವನಾಗಿದ್ದ ಹನುಮಂತನು ಭಿಕ್ಷುರೂಪದಿಂದ ರಾಮಲಕ್ಷ್ಮಣರನ್ನು ಮೊದಲು ಕಂಡಾಗ 'ನೀವು ಯಾರು? ನಿಮ್ಮ ಮೈಕಟ್ಟೂ ರೂಪವೂ ತೇಜಸ್ಸೂ ದಿವ್ಯವಾಗಿವೆ; ನೀವು ಈ ಕಾಡಿಗೆ ಏತಕ್ಕೆ ಬಂದಿರಿ?' ಎಂದು ಅವರನ್ನು ಬಗೆಬಗೆಯಾಗಿ ಪ್ರಶ್ನೆ ಮಾಡಿರುತ್ತಾನೆ. ಆ ಸಂದರ್ಭದಲ್ಲಿ ಶ್ರೀರಾಮನು "ಈತನು ವ್ಯಾಕರಣವನ್ನು ಚೆನ್ನಾಗಿ ಬಲ್ಲವನಾಗಿರಬೇಕು; ಇಷ್ಟು ಮಾತನಾಡಿದರೂ ಒಂದು ಅಪಶಬ್ದವನ್ನು ಆಡಿಲ್ಲವಲ್ಲ! ಉಚ್ಚಾರಣೆಯ ಕ್ರಮವು ಎಷ್ಟು ಶುದ್ಧವಾಗಿದೆ?" ಎಂದು ಲಕ್ಷ್ಮಣನಿಗೆ ಹೇಳಿರುತ್ತಾನೆ. ಹೀಗೆಯೇ ಹನುಮಂತನು ಸೀತಾದೇವಿಯನ್ನು ಮೊದಲು ಕಂಡಾಗ 'ಮನುಷ್ಯರ ಭಾಷೆಯಂತೆ ಸಂಸ್ಕೃತವನ್ನೇ ಆಡುವೆನು'–ಎಂದಿರುತ್ತಾನೆ. ಸಂಸ್ಕೃತವನ್ನು ಆಗಿನ ನರರೂ ಕುಶಲರಾದ ವಾನರರೂ ಆಡುತ್ತಿದ್ದರೆಂದು ಇದರಿಂದ ನಿಶ್ಚಯವಾಯಿತಷ್ಟೆ?

ಪುರಾಣಗಳನ್ನು ಪೂಜ್ಯ ಬುದ್ಧಿಯಿಂದ ನೋಡುವ ಅಭ್ಯಾಸವನ್ನು ಇನ್ನು ಮೇಲೆ ಇಟ್ಟುಕೊಳ್ಳಿರಿ. ನಿಮಗೆ ಅದರಿಂದ ಕಲ್ಯಾಣವಾಗುವದು.

## 171. ಅಧ್ಯಾತ್ಮಸಾಧನೆಗೆ ಅಡಚಣೆ

**(ನವೆಂಬರ್ 1960)**

*ನಿಮ್ಮ ಪತ್ರವು ತಲುಪಿರುತ್ತದೆ. ಅಧ್ಯಾತ್ಮಸಾಧನೆಯನ್ನು ಮಾಡುವಾಗ ಅದರಿಂದಾಗುವ ಫಲವು ಸ್ಥೂಲವಾಗಿಯೇ ನಮಗೆ ಕಾಣಬೇಕೆಂಬ ನಿಯಮವೇನೂ ಇಲ್ಲ. ಗೃಹಕೃತ್ಯದ ವಿಚಾರವು*

*ಸುಖಮಯವಾಗುವದು, ಮಕ್ಕಳ ಆರೋಗ್ಯಭಾಗ್ಯವು ಉತ್ತಮವಾಗುವದು, ಧನದ ಕೊರತೆಯು ನೀಗುವದು–ಇಂಥ ಫಲಗಳೂ ಅದರಿಂದ ಆಗಬಹುದು. ಆದರೆ ಅವಕ್ಕಿಂತ ಅಂತಃಕರಣದ ಶುದ್ಧಿಯಾಗಿ ಮನಸ್ಸಿಗೆ ಸುಖಶಾಂತಿಗಳು ದೊರಕುವದೇ ಹೆಚ್ಚಿನ ಪ್ರಯೋಜನವೆಂದು ಎಣಿಸಬೇಕು.*

ಅಧ್ಯಾತ್ಮಸಾಧನೆಯು ಎಂದಿಗೂ ವ್ಯರ್ಥವಾಗುವದಿಲ್ಲ. ನೀವು ಮಾಡುತ್ತಿರುವ ಜಪ, ಅಭಿಷೇಕ, ಅರ್ಚನೆ– ಮುಂತಾದವುಗಳು ಯಾವ ಪ್ರಯೋಜನವನ್ನೂ ಕೊಟ್ಟಿಲ್ಲವೆಂದು ಎಂದಿಗೂ ನಿಟ್ಟುಸಿರುಬಿಡಬೇಡಿ. ಅವುಗಳನ್ನು ಕೈಗೊಂಡ ಮೇಲೆ ನಿಮ್ಮ ಮನಸ್ಸಿನಲ್ಲಿ ಅಷ್ಟಷ್ಟು ಹೊತ್ತು ಭಗವಂತನು ನೆಲೆಸಿರುವದು ಮನವರಿಕೆಯಾಗುತ್ತದೆ. 'ಈಗ ನಾನು ಭಗವಂತನ ಸೇವೆಯಲ್ಲಿದ್ದೇನೆ; ವ್ಯರ್ಥವಾಗಿ ಕಳೆಯುತ್ತಿರುವ ಕಾಲದಲ್ಲಿ ಇಷ್ಟಾದರೂ ಸದ್ವಿನಿಯೋಗವಾಯಿತಲ್ಲ!'–ಎಂಬ ಸಮಾಧಾನವೂ ಇರುತ್ತದೆ.

ಆದರೆ ಸಾಧನೆಯನ್ನು ಮಾಡುವಾಗ, ನಾನು ಮಾಡುತ್ತೇನೆಂಬ ಅಹಂಕಾರ, ಜನರಿಗೆ ಅದನ್ನು ತೋರ್ಪಡಿಸಿಕೊಳ್ಳಬೇಕೆಂಬ ಹಂಬಲು, ಪೂಜಾಸಾಮಗ್ರಿಗಳನ್ನು–ಏನು ಅನ್ಯಾಯ ಮಾಡಿದರೂ ಚಿಂತೆಯಿಲ್ಲ–ಹೇಗೋ ಒದಗಿಸಿಕೊಳ್ಳುವದು–ಇವೇ ಮುಂತಾದ ಅಡಚಣೆಗಳು ತಲೆಹಾಕದಂತೆ ನೋಡಿಕೊಳ್ಳುವದು ಅವಶ್ಯ. ಹಾಲು ಎಷ್ಟೇ ರುಚಿಯಾಗಿದ್ದರೂ ಅದರಲ್ಲಿ ನಿಂಬೆಹುಳಿ ಬಿದ್ದರೆ ಹೇಗೆ ಅದರ ಸ್ವರೂಪವೇ ಬದಲಾಯಿಸುವದೋ, ಹಾಗೆಯೇ ನೀವು ಮಾಡುತ್ತಿರುವ ಸಾಧನೆಗಳಿಗೆ ಇಂಥ ಅಡ್ಡಿಗಳಿದ್ದರೆ ಅವುಗಳ ಬೆಲೆಯು ಬಹಳ ಕಡಿಮೆಯಾಗಿಬಿಡುತ್ತದೆ.

ಸಾಧನವೆಂಬುದು ಅಂತಃಕರಣವನ್ನು ಸರಿಪಡಿಸಿಕೊಳ್ಳುವದಕ್ಕೆ ಮಾಡಬೇಕಾಗಿರುವ ಪ್ರಯತ್ನ. ಅದು ನಮ್ಮನಮ್ಮ ಅಂತಃಕರಣದಲ್ಲಿ ನಮಗೆ ಮಾತ್ರ ಗೋಚರವಾಗತಕ್ಕದ್ದು. ಸಾಧಕನು, ಭಗವಂತ–ಇಬ್ಬರು ಹೊರತು ಮತ್ತೊಬ್ಬರಿಗೆ ಅದರ ವಿಷಯದಲ್ಲಿ ಮತವನ್ನು ಕೊಡುವ ಹಕ್ಕಿಲ್ಲ. ನಿಮ್ಮ ಸಾಧನಗಳು ಭಗವಂತನಿಗೆ ಎಲ್ಲಾ ವಿಧದಿಂದಲೂ ಮೆಚ್ಚಾಗಲಿ!–ಎಂದು ಹಾರೈಸುತ್ತೇನೆ.

## 172. ಜನಾಂಗದ ಒಗ್ಗಟ್ಟಿಗೆ ಉಪಾಯ

### (ಜನವರಿ 1961)

*ನಿಮ್ಮ ಪತ್ರವು ತಲುಪಿದೆ. ಜನಾಂಗದ ಐಕ್ಯವು ಭದ್ರವಾದಲ್ಲದೆ ಕೇವಲ ಬಾಹ್ಯಸಂಪತ್ತಿನಲ್ಲಿ ಎಷ್ಟು ಅಭಿವೃದ್ಧಿಯಾದರೂ ಅದು ಕಾರ್ಯಕಾರಿಯಾಗದೆ ಹೋಗುವದೆಂದು ಈಗ ಜನನಾಯಕರು ಮನವರಿಕೆ ಮಾಡಿಕೊಂಡಿರುತ್ತಾರೆಂಬುದೊಂದು ಸಂತೋಷದ ಸುದ್ದಿ.*

ಇದಕ್ಕಾಗಿ ಪ್ರತಿದಿನವೂ ವಿದ್ಯಾಶಾಲೆಗಳಲ್ಲಿ ಸ್ತೋತ್ರಾದಿಗಳನ್ನು ವಿದ್ಯಾರ್ಥಿಗಳಿಂದ ಮಾಡಿಸಬೇಕೆಂದು ನೀವು ತಿಳಿಸಿರುವದು ಶ್ಲಾಘ್ಯವಾಗಿದೆಯಾದರೂ ಜನಾಂಗದ ನೀತಿಯ ಕಟ್ಟಡಕ್ಕೆ ಬೇಕಾದ ತಳಹದಿ ಮತ್ತೊಂದಿದೆ: ಮನೆಯಲ್ಲಿರುವ ವಿದ್ಯಾರ್ಥಿಗಳ ತಾಯಿತಂದೆಗಳೂ ಪೋಷಕರೂ ಮೊಟ್ಟಮೊದಲು ಅಧ್ಯಾತ್ಮವಿದ್ಯಾಪ್ರಿಯರಾಗಬೇಕು. ಅವರಿಗೆ ಶುಚಿಯಾಗಿರುವದು, ದೇವತಾಭಕ್ತಿ, ನೀತಿಪ್ರಿಯತೆ–ಇವೆಲ್ಲವೂ ಮೆಚ್ಚಾಗಿವೆ ಎಂಬುದು ಅವರ ನಡೆನುಡಿಗಳಿಂದ ಹುಡುಗರಿಗೆ ಮನವರಿಕೆಯಾಗಬೇಕು. **ಸಂಸ್ಕೃತವು ನಮ್ಮ ದೇಶದವರನ್ನೆಲ್ಲ ಒಗ್ಗಟ್ಟು ಮಾಡುವದಕ್ಕೊಂದು ಉತ್ತಮ ಸಾಧನವೆಂಬುದನ್ನು ಹಿಂದುಗಳು, ಅದರಲ್ಲಿಯೂ ಬ್ರಾಹ್ಮಣರು, ಮೊದಲು ಮನಗಾಣಬೇಕು.** ಹೀಗೆ ಮನೆಯಲ್ಲಿ ದೈವಭಕ್ತಿಯೂ ಸಂಸ್ಕೃತಭಾಷಾಭಕ್ತಿಯೂ ಹೆಚ್ಚಿದರೆ ಮಕ್ಕಳು ಅವಶ್ಯವಾಗಿ ನೀತಿವಂತರಾಗುವರು.

ಎರಡನೆಯದಾಗಿ **ಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ಇತರ ವಿದ್ಯಾಶಾಲೆಗಳಲ್ಲಿಯೂ** ಬೋಧಕರಾಗಿರುವವರು ಆಚಾರವಿಚಾರಗಳಿಂದ ಶುದ್ಧರಾಗಿದ್ದು ದೈವಭಕ್ತಿವಂತರಾಗಿರಬೇಕೆಂಬುದನ್ನು ನಾವೆಲ್ಲರೂ ಮನಗಾಣಬೇಕು. ಕೆಲವು ಗದ್ಯಪದ್ಯಪುಸ್ತಕಗಳನ್ನೋದಿ ಚರಿತ್ರೆ, ಭೂಗೋಳ, ಗಣಿತ–ಮುಂತಾದವುಗಳನ್ನು ಬಲ್ಲವರೆಲ್ಲರೂ ಬೋಧಕರಾಗಬಹುದೆಂಬ ತಪ್ಪು ತಿಳಿವಳಿಕೆಯು ಮೊದಲು ಹೋಗಬೇಕು.

ದೇಶದಲ್ಲಿರುವ **ದೇವಸ್ಥಾನಗಳು** ನಿಜವಾಗಿಯೂ ದೇವಸ್ಥಾನಗಳಾಗಬೇಕು. ಅಲ್ಲಿರುವ ಪೂಜಾರಿಗಳೂ ಸೇವೆಗೆ ಬರುವ ಭಕ್ತರೂ ನಿಜವಾಗಿ ತಮ್ಮ ಆದರ್ಶವಾದ ಭಕ್ತಿಯಿಂದ ಜನರಿಗೆ ಆಸ್ತಿಕ್ಯದ ಬೆಲೆಯನ್ನು ತಿಳಿಸಿಕೊಡಬೇಕು.

**ಇವು** ಮೂರಾದರೆ ಜನಸಾಮಾನ್ಯರಲ್ಲಿ ಕೆಲವರಾದರೂ ಈಶ್ವರಾರ್ಥವಾಗಿ ಸ್ವಧರ್ಮವನ್ನು ಮಾಡುವ ಕರ್ಮಯೋಗಿಗಳಾದಾರು. ಆಗ ಬಡತನ, ಬೇನೆ, ಅಜ್ಞಾನ ಇವುಗಳನ್ನು ಕಡಿಮೆಮಾಡುವದಕ್ಕೆ ಜನನಾಯಕರೂ ಸರಕಾರದವರೂ ಮಾಡುತ್ತಿರುವ ಪ್ರಯತ್ನವು ನಿಜವಾಗಿ ಸಫಲವಾದೀತು. ಈಗ ಇರುವಂತೆ ಹೊಟ್ಟೆಬಟ್ಟೆಗಳ ಕೊರತೆಯೊಂದನ್ನೇ ಲೆಕ್ಕದಲ್ಲಿಟ್ಟುಕೊಂಡು ಅವುಗಳ ಸಂಪಾದನೆಗಾಗಿ ಯಾವ ಅನ್ಯಾಯವನ್ನಾದರೂ ಮಾಡಬಹುದೆಂಬ ತಿಳಿವಳಿಕೆ ಇರುವವರೆಗೆ ಬರಿಯ ದೇವರಸ್ತೋತ್ರಗಳನ್ನು ಹೇಳುವ ಗೊಂಬೆಗಳನ್ನು ವಿದ್ಯಾಶಾಲೆಗಳಲ್ಲಿಡುವದು ಈಶ್ವರನನ್ನು ಅಪಹಾಸ್ಯಮಾಡಿದಂತೆ ಆದೀತೆಂದು ನನಗೆ ತೋರುತ್ತಿದೆ. ನೀವೂ ಆಲೋಚನೆ ಮಾಡಿ ನೋಡಿ.

## 173. ವಿಶ್ರಾಂತಿ

### (ಫೆಬ್ರವರಿ 1961)

*ತಮ್ಮ ಪತ್ರವು ತಲುಪಿತು. ಮಕ್ಕಳೆಲ್ಲ ಒಂದೊಂದು ಕೆಲಸದಲ್ಲಿ ನಿಲುಗಡೆಯನ್ನು ಹೊಂದುತ್ತಿದಾರೆ. ಇನ್ನುಮೇಲೆ ವಿಶ್ರಾಂತಿಯನ್ನು ತೆಗೆದುಕೊಳ್ಳಬೇಕೆಂದಿದೇನೆ–ಎಂದು ಬರೆದಿರುತ್ತೀರಿ. ಇದೊಂದು ಅಭಿನಂದನೆಗೆ ತಕ್ಕ ಸಂಕಲ್ಪವೇ ಸರಿ.*

ನೀವು ಈಗಾಗಲೇ ವಯಸ್ಸಾಗಿದ್ದರೂ, ಹಿಂದಿನ ಉಪಾಧ್ಯಾಯವೃತ್ತಿಯಿಂದ ನಿವೃತ್ತರಾಗಿದ್ದರೂ, ಇನ್ನೂ ದೊಡ್ಡವರ ಮಕ್ಕಳಿಗೆ ಪಾಠಹೇಳಿಕೊಟ್ಟು ಉಪಜೀವನ ಮಾಡಬೇಕಾಗಿದೆ ಎಂದು ಬರೆದಿರುವುದನ್ನು ಕೇಳಿ ವ್ಯಥೆಯಾಯಿತು. ನಿಮ್ಮ ಬಂಧುಗಳೊಬ್ಬರು ವಯಸ್ಸು ಮೀರಿದ್ದರೂ ಪ್ಲೀಡರ್ ಕೆಲಸವನ್ನು ಮಾಡುತ್ತಲೇ ಇದಾರೆಂತಲೂ ಕುಟುಂಬಿಗರಿಗೆ ಹೀಗೆ ಮಾಡುವದು ಅನಿವಾರ್ಯವೆಂತಲೂ ಬರೆದಿದ್ದೀರಿ. ಉಪಾಧ್ಯಾಯ ವೃತ್ತಿಯು ಹೇಗೂ ಪ್ಲೀಡರ್ ವೃತ್ತಿಗಿಂತ ಉತ್ತಮವಲ್ಲವೆ?–ಎಂತ ಕೇಳಿರುತ್ತೀರಿ. ಇದಕ್ಕೆ ಉತ್ತರಕೊಡುವದು ನನಗೆ ಕಷ್ಟವಾಗಿದೆ. ಏಕೆಂದರೆ ಯಾವ ವೃತ್ತಿಯೇ ಆಗಲಿ, ಶರೀರಯಾತ್ರೆಗೆ ಮಾತ್ರ ಉಪಯೋಗಕ್ಕೆ ಬಂದೀತೇ ಹೊರತು ಇಳಿವಯಸ್ಸಿನಲ್ಲಿ ವಿಶ್ರಾಂತಿಕೊಡುವ ಯೋಗ್ಯತೆ ಅದಕ್ಕೆ ಇರುವದಿಲ್ಲ. ದುಡ್ಡಿಗಾಗಿ ಶರೀರವನ್ನೂ ಮನಸ್ಸನ್ನೂ ಆಯಾಸಗೊಳಿಸುವದೇ ಜೀವನದ ಗುರಿ ಎಂದು ಯಾವನು ತಾನೆ ಹೇಳಿಯಾನು? ಮನುಷ್ಯನಿಗೆ ಸುಖಶಾಂತಿಗಳು ಬೇಡವೆ?

ವಯಸ್ಸಾದ ಮೇಲೆ ವಿಶ್ರಾಂತಿ ತೆಗೆದುಕೊಳ್ಳಬೇಕು, ಮಕ್ಕಳೆಲ್ಲರೂ ಜೀವನೋಪಾಯವನ್ನು ಹುಡುಕಿಕೊಂಡ ಮೇಲೆಯೇ ವಿಶ್ರಾಂತಿ ತೆಗೆದುಕೊಳ್ಳಬೇಕು–ಎಂಬೀ ಎರಡೂ ತಪ್ಪುಕಲ್ಪನೆಗಳಾಗಿವೆ. ಏಕೆಂದರೆ ಮಾನವನು–ಪರಮಾತ್ಮಸ್ವರೂಪನೇ ಆಗಿದ್ದು ಅದನ್ನು ಮರೆತಿರುತ್ತಾನೆ. ಎಲ್ಲಾ ಪ್ರಾಣಿಗಳೂ ಪರಮಾತ್ಮಸ್ವರೂಪರೇ ಆಗಿರುತ್ತಾರಾದರೂ ಮಾನವನಿಗೆ–ಅದರಲ್ಲಿಯೂ ಬ್ರಾಹ್ಮಣನಿಗೆ–ಈ ತತ್ತ್ವವನ್ನು ಮನಗಂಡು ವಿಶ್ರಾಂತಿಯನ್ನು ಪಡೆದುಕೊಳ್ಳುವ ಸೌಕರ್ಯಗಳು ಹೆಚ್ಚಾಗಿರುತ್ತವೆ. ಇಂಥ ಸದವಕಾಶವಿರುವಾಗಲೂ ಶರೀರವೇ ನಾನೆಂಬ ಬುದ್ಧಿಯನ್ನು ಬೆಳೆಸುತ್ತಲೇ ಇದ್ದು ಎಂದೋ ಒಂದು ದಿನ ವಿಶ್ರಾಂತನಾಗುವೆನೆಂದು ಬಗೆಯುವದು ಎಂಥ ಮೂಢತನ!

ನೀವು ಈ ಜನ್ಮದಲ್ಲಿ ಕುಟುಂಬಪೋಷಣೆಗಾಗಿ ಯಾವ ವೃತ್ತಿಯನ್ನು ಅವಲಂಬಿಸಿದ್ದರೂ ಜನನಮರಣರಹಿತವಾಗಿರುವ ನಿಮ್ಮ ಪರಮಾತ್ಮ ಸ್ವರೂಪವನ್ನು ಕಂಡುಕೊಳ್ಳುವದಕ್ಕೆ ಪ್ರಯತ್ನಿಸದೆ ಇರುವದು ದೊಡ್ಡ ತಪ್ಪಾಗಿದೆ. ಈ ಕೂಡಲೆ ನಿಮ್ಮ

ಪುರುಷಾರ್ಥಕ್ಕೆ ಬೇಕಾದ ಸಾಧನವನ್ನು ಕೈಕೊಂಡು ಅದಕ್ಕೆ ಅವಿರೋಧವಾಗಿಯೇ ಕುಟುಂಬಕ್ಕಾಗಿ ದುಡಿಯುವೆನೆಂದು ಸಂಕಲ್ಪಮಾಡಿಕೊಳ್ಳಿರಿ. ಅದರಿಂದ ನಿಮ್ಮೆಲ್ಲರಿಗೂ ಕ್ಷೇಮವುಂಟು.

## 174. ಸಂನ್ಯಾಸ

### (ಮಾರ್ಚ್ 1961)

*ನಿಮ್ಮ ಪತ್ರವನ್ನು ಓದಿದೆನು. ಸಂನ್ಯಾಸವು ಕಲಿವರ್ಜ್ಯವೆಂಬ ಸ್ಮೃತಿಗಳ ವಿಷಯವಾಗಿ ಕೇಳಿರುತ್ತೀರಿ. ಸಂನ್ಯಾಸದ ವೇಷವನ್ನು ಮಾತ್ರ ಧರಿಸಿ ಜೀವನಮಾಡುವವರನ್ನು ಕುರಿತು ಆ ವಾಕ್ಯಗಳು ಬಂದಿವೆ ಎಂದು ನನ್ನ ಅಭಿಪ್ರಾಯ. ವೇದಾಧ್ಯಯನ, ವೇದೋಕ್ತಕರ್ಮ, ಕರ್ಮಯೋಗ, ಚಿತ್ತಶುದ್ಧಿ, ಧ್ಯಾನಯೋಗ–ಈ ಕ್ರಮದಿಂದಲೇ ಪರಮಾರ್ಥವಾದ ಸಂನ್ಯಾಸವು ಸಾಧಕರಿಗೆ ದಕ್ಕಿತೇ ಹೊರತು ಕಾವಿಬಟ್ಟೆ, ದಂಡ, ಕಮಂಡಲು–ಮುಂತಾದ ವೇಷದಿಂದ ದಕ್ಕಲಾರದು. ಕಲಿಯುಗದಲ್ಲಿ ಜನರಿಗೆ ಇಂದ್ರಿಯನಿಗ್ರಹವು ಬಹಳ ಕಷ್ಟದಿಂದ ಸಾಧ್ಯವಾದೀತು. ಅಥವಾ 'ಕಲಿಯುಗದಲ್ಲಿ' ಎಂದೇಕೆ ಹೇಳಬೇಕು? ಯಾವಾಗ ಇಂದ್ರಿಯಪರವಶತೆಯು ಬರುವದೋ ಆಗಾಗ ಸಾಧಕನಲ್ಲಿ ಕಲಿಯ ಪ್ರವೇಶವಿರುವದು. ಆಗ ಪರಮಾರ್ಥಸಂನ್ಯಾಸಿಗಳ ವೇಷವನ್ನು ಮಾತ್ರ ಹಾಕಿಕೊಳ್ಳುವದು ಆತ್ಮವಂಚನೆ, ಪರವಂಚನೆ, ದಾಂಭಿಕತನ, ದೈವದ್ರೋಹ–ಮುಂತಾದ ಪಾಪಗಳಿಗೆ ತವರುಮನೆಯಾಗುವದು.*

ವೇದವನ್ನು ಸಂನ್ಯಾಸ ಮಾಡಿದರೆ ಶೂದ್ರನಾಗುವನು–ಎಂಬ ವಾಕ್ಯಕ್ಕೆ ಸಂನ್ಯಾಸವು ವಿರುದ್ಧವಲ್ಲವೆ? ಎಂದರೆ ನಿಜ. ವೇಷದ ಸಂನ್ಯಾಸವು ಅದಕ್ಕೆ ವಿರುದ್ಧವೇ. ಆದರೆ ವಿಧಿವತ್ತಾಗಿ ತೆಗೆದುಕೊಂಡ ಸಂನ್ಯಾಸದಲ್ಲಿ ಸರ್ವವೇದಮಯವಾದ ಪ್ರಣವವನ್ನು ಸ್ವೀಕರಿಸಲಾಗಿರುತ್ತದೆ. ವೇದಗಳು, ಗಾಯತ್ರಿ, ವ್ಯಾಹೃತಿಗಳು–ಎಲ್ಲವನ್ನೂ ಪ್ರಣವದಲ್ಲಿ ಪ್ರವೇಶಮಾಡಿಸಿ, ಪ್ರಣವದ ತತ್ತ್ವವು ಪರಮಾತ್ಮನೇ ಎಂಬುದನ್ನು ತಿಳಿದು ತನ್ನ ಸ್ವರೂಪವನ್ನು ಅದರಲ್ಲಿ ಪ್ರವೇಶಮಾಡಿಕೊಂಡಿರುವ ಮಹಾತ್ಮನು ತಾನೇವೇದಸ್ವರೂಪ ನಾಗಿರುತ್ತಾನೆ. ಅಂಥವನು ವೇದಸಂನ್ಯಾಸವನ್ನು ಮಾಡಿರುತ್ತಾನೆಂದು ಹೇಳುವದು ಹೇಗೆ ತಾನೆ ಸಾಧ್ಯ?

ಸಂನ್ಯಾಸಶಬ್ದಕ್ಕೆ ಸಮ್ಯಗ್ದರ್ಶನವೆಂದೇ ಅರ್ಥ. ಯಾವಾಗ ಸರಿಯಾದ ಅರಿವನ್ನು ಸಂಪಾದಿಸಿಕೊಂಡು ಯಾವ ಕರ್ಮವೂ ತನ್ನ ಆತ್ಮನಲ್ಲಿಲ್ಲವೆಂಬುದನ್ನು ಕಂಡು ಕೊಳ್ಳುವನೋ ಆಗಲೇ ನಿಜವಾದ ಕರ್ಮಸಂನ್ಯಾಸವು ದಕ್ಕುವದು. ಇಂಥ ನೈಷ್ಕರ್ಮ್ಯಸಿದ್ಧಿಯನ್ನು ಪಡೆದಾತನು ಎಂದೆಂದಿಗೂ ನಿತ್ಯಸಿದ್ಧವಾಗಿರುವ ಪರಬ್ರಹ್ಮ ರೂಪದಿಂದಲೇ ಇರುವನು.

ಸಾಧಕರಾದವರು ಇಂಥ ಪರಮಸಂನ್ಯಾಸವನ್ನು ಪಡೆದುಕೊಳ್ಳುವದಕ್ಕಾಗಿ ಚಿತ್ತಶುದ್ಧಿಯನ್ನು ಪಡೆದುಕೊಂಡು ಗಾರ್ಹಸ್ಥ್ಯ ಕರ್ಮಗಳನ್ನು ವಿಧಿವತ್ತಾಗಿ ಬಿಡುವದೂ ಗೌಣವೃತ್ತಿಯಿಂದ 'ಸಂನ್ಯಾಸ' ವೆನಿಸುತ್ತದೆ. ಈ ವಿವಿದಿಷಾಸಂನ್ಯಾಸವನ್ನು ಪಡೆದುಕೊಂಡವರು ಲೌಕಿಕವ್ಯವಹಾರದಲ್ಲಿ ಎಂದಿಗೂ ತೊಡಗಬಾರದು. ಶ್ರವಣಮನನಗಳನ್ನೇ ಮಾಡುತ್ತಾ ಕ್ರಮಕ್ರಮವಾಗಿ ಅಮಾನಿತ್ವಾದಿ ಸಾಧನಗಳಲ್ಲಿಯೇ ನಿರತರಾಗಿರಬೇಕು. ಅದು ಕಲಿವರ್ಜ್ಯಸಂನ್ಯಾಸವಾಗುವದಿಲ್ಲ.

## 175. ಸ್ವಾಮಿಭೃತ್ಯ ಸಂಬಂಧ

### (ಏಪ್ರಿಲ್ 1961)

*ನಿಮ್ಮ ಪತ್ರವನ್ನು ಓದಿ ನೋಡಿಕೊಂಡಿರುತ್ತೇನೆ. ಆಳಿಗೂ ಕೆಲಸವನ್ನು ಮಾಡಿಸುವ ಯಜಮಾನನಿಗೂ ಇರಬೇಕಾದ ಸಂಬಂಧವನ್ನು ಕುರಿತು ಪಕ್ಷಪಾತವಿಲ್ಲದೆ ವಿಚಾರಮಾಡಿದ ಹೊರತು ಈಗಿನ ಕಾಲದ ದುರವಸ್ಥೆಯನ್ನು ತಪ್ಪಿಸುವದು ಅಸಾಧ್ಯವೆಂತ ನನಗೆ ತೋರುತ್ತದೆ. ತಾನೇ ತನ್ನ ಕೆಲಸವನ್ನು ಮಾಡಿಕೊಳ್ಳಲಾರದೆ ಇರುವವನು ಆ ಕೆಲಸಕ್ಕೆ ನೆರವಾಗುವಂತೆ ಮತ್ತೊಬ್ಬನನ್ನು ಕೇಳಿಕೊಳ್ಳುವದೂ, ಹಾಗೆ ಕೆಲಸಮಾಡಿಕೊಟ್ಟವರಿಗೆ ಶ್ರಮಕ್ಕೆ ತಕ್ಕಂತೆ ಪ್ರತಿಯಾಗಿ ಧನ, ಧಾನ್ಯ–ಮುಂತಾಗಿ ಏನನ್ನಾದರೂ ಕೊಡುವದೂ ನ್ಯಾಯಪ್ರಾಪ್ತವಾಗಿದೆಯಷ್ಟೆ? ಯಾವನು ಕೆಲಸ ಮಾಡಿಕೊಟ್ಟು ಆ ಕೆಲಸಕ್ಕೆ ಪ್ರತಿಯಾಗಿ ಇಷ್ಟೆಂದು ಗೊತ್ತುಮಾಡಿಕೊಂಡು ಏನಾದರೂ ಪ್ರತಿಯಾಗಿ ತೆಗೆದುಕೊಂಡರೆ ಅದು 'ಭೃತಿ', 'ಭೃತಕ' ಎನಿಸುವದು. ಹಾಗೆ ಭೃತಿಯನ್ನು ತೆಗೆದುಕೊಳ್ಳುವವನು ಭೃತ್ಯನು; ಅದನ್ನು ಕೊಡುವದಕ್ಕೆ ಒಪ್ಪುವವನು ಸ್ವಾಮಿಯು.*

ಹಿಂದಕ್ಕೆ ಧರ್ಮದ ದೃಷ್ಟಿಯಿಂದ ಸ್ವಾಮಿಭೃತ್ಯರು ನಡೆದುಕೊಳ್ಳುತ್ತಿದ್ದದ್ದರಿಂದ ಈ ವ್ಯವಸ್ಥೆಯಲ್ಲಿ ಯಾವ ತೊಡಕೂ ಉಂಟಾಗುತ್ತಿರಲಿಲ್ಲ. ಕೆಲಸವನ್ನು ಮಾಡಿದವನು ಇಷ್ಟು ಕೊಟ್ಟರೆ ಸಾಕೆಂದು ಒಪ್ಪಿರುತ್ತಿದ್ದನು; ಆದರೆ ಧಣಿಯು ಅವನಿಗೆ ಶ್ರಮಕ್ಕೆ ತಕ್ಕಷ್ಟು, ಅಥವಾ ಅವನಿಗೆ ಪ್ರಯೋಜನವಾಗುವಷ್ಟು, ಪ್ರತಿಧನವನ್ನು ಕೊಟ್ಟುಬಿಡುತ್ತಿದ್ದನು. ಧನ, ಧಾನ್ಯ, ವಸ್ತ್ರ, ವಿದ್ಯೆ, ಅಥವಾ ಮತ್ತೆ ಯಾವದಾದರೊಂದು ಪ್ರತ್ಯುಪಕಾರ–ಇವುಗಳನ್ನು ಕೊಟ್ಟು ಕೆಲಸಕ್ಕೆ ನೆರವಾದವನಿಗೆ ಸಹಾಯಮಾಡುವದು ತನ್ನ ಧರ್ಮವೆಂದು ಸ್ವಾಮಿಯಾದವನು ಭಾವಿಸುತ್ತಿರುವವರೆಗೆ ಯಾವ ತಂಟೆತಕರಾರುಗಳೂ ಉಂಟಾಗುತ್ತಿರಲಿಲ್ಲ. ಏಕೆಂದರೆ ಧರ್ಮಕ್ಕೆ ಕಟ್ಟುಬಿದ್ದವರನ್ನು ಈಶ್ವರನು ಕಾಪಾಡುತ್ತಾನೆ.

ಈಗ್ಗೆ ಕೆಲಸಮಾಡುವ ಧಣಿಯು ಹೆಚ್ಚಿನ ಕೆಲಸವನ್ನು ಆದಷ್ಟು ಕಡಿಮೆಯ ಕೂಲಿಯನ್ನು ಕೊಟ್ಟು ಮಾಡಿಸಿಕೊಳ್ಳಬೇಕೆಂದೂ ಹಾಗೆ ಅನ್ಯಾಯವಾಗಿ ಸಂಪಾದಿಸಿಕೊಂಡ

ಕೆಲಸದ ಫಲವನ್ನು ಆದಷ್ಟು ಹೆಚ್ಚಿನ ಲಾಭಸಂಪಾದನೆಗೆ ಸಾಧನವಾಗಿ ಉಪಯೋಗಿಸಿಕೊಳ್ಳಬೇಕೆಂದೂ ಹವಣಿಸುತ್ತಿರುತ್ತಾನೆ. ಕೆಲಸಮಾಡುವವನು ಆದಷ್ಟು ಕಡಿಮೆ ಕೆಲಸಮಾಡಿ ಸಿಕ್ಕಿದಷ್ಟು ಹೆಚ್ಚಿನ ಸಂಪಾದನೆಯನ್ನು ಮಾಡಿಕೊಳ್ಳಬೇಕೆಂದು ಬಯಸುತ್ತಿರುತ್ತಾನೆ. ಇದು ಅತ್ಯಾಸೆಯ ಫಲವಾಗಿ ಮಾಡುವ ಪರಸ್ಪರದ್ರೋಹವಲ್ಲದೆ ಮತ್ತೇನು? ಈ ದ್ರೋಹದಿಂದುಂಟಾದ ಒಳಜಗಳವನ್ನು ತಪ್ಪಿಸುವದಕ್ಕೆ ಸರಕಾರದವರು ಕಾನೂನುಗಳನ್ನುಮಾಡಿ 'ಇಂತಿಷ್ಟು ಕೂಲಿಕೊಡುವದು ನ್ಯಾಯ' ಎಂದು ತೀರ್ಮಾನಿಸುತ್ತಾರೆ! **ಧರ್ಮವನ್ನು ಬಿಟ್ಟು ನ್ಯಾಯವನ್ನು ಅವಲಂಬಿಸುವ ಅತ್ಯಾಸೆಗೆ ದುಃಖವೊಂದೇ ಫಲವೆಂದು ಹೇಳಬೇಕಾಗಿಲ್ಲವಷ್ಟೆ?.**

## 176. ರಾಮನಾಮ

### (ಮೇ 1961)

*ನಿಮ್ಮ ಪ್ರಶ್ನೆಗಳನ್ನು ಓದಿದೆನು. ರಾಮನೆಂಬುವನು ದಶರಥರಾಯನ ಮಗನಲ್ಲವೆ? ಅವನ ನಾಮವನ್ನು ಸ್ಮರಿಸುವದರಿಂದ ಪಾಪವು ಹೇಗೆ ನಾಶವಾದೀತು? ಎಂತ ಕೇಳಿರುತ್ತೀರಿ. ರಾಮನು ಈ ಕಾಲದಲ್ಲಿದಾನೆಯೇ?– ಎಂಬುದು ಇನ್ನೊಂದು ಪ್ರಶ್ನೆ.*

ಶ್ರೀಮಹಾವಿಷ್ಣುವೇ ರಾಮನಾಗಿ ಅವತರಿಸಿದನೆಂಬುದು ಶ್ರದ್ಧಾವಂತರಾದ ಜನರೆಲ್ಲರ ನಂಬಿಕೆ. ವಾಲ್ಮೀಕರು ಹಾಗೆಂದೇ ಬರೆದಿರುತ್ತಾರೆ. ದಶರಥನ ಮಗನಾದ ರಾಮನು ಮನುಷ್ಯನೆಂದರೂ ಧರ್ಮ, ಸತ್ಯ, ದುಷ್ಟನಿಗ್ರಹ, ಶಿಷ್ಟಪರಿಪಾಲನೆ–ಇವುಗಳಿಗೆ ಆದರ್ಶಪುರುಷನವನು. ಶ್ರೀರಾಮನಲ್ಲಿ ವಾಲ್ಮೀಕರು ಹೇಳಿರುವ ಗುಣಗಳು ಒಬ್ಬ ವಿಭೂತಿಪುರುಷನಲ್ಲಿ ಮಾತ್ರವೇ ಇರುವದು ಸಾಧ್ಯ. ಆದ್ದರಿಂದ ರಾಮನಾಮವನ್ನು ಉಚ್ಚರಿಸುತ್ತಾ ಆತನ ಗುಣಗಳನ್ನು ಸ್ಮರಿಸಿಕೊಳ್ಳುತ್ತಿದ್ದರೆ ಪಾಪನಾಶವಾಗುವದು ಖಂಡಿತ.

ಭಗವಂತನೇ ರಾಮನಾಗಿ ಅವತರಿಸಿದನೆಂದು ನಂಬುವವರಿಗೆ ಈಗಲೂ ಶ್ರೀರಾಮನು ಇದಾನೆ. ಅವನನ್ನು ಪೂಜಿಸುವದು, ಅವನ ಸ್ತೋತ್ರಗಳನ್ನು ಹೇಳುವದು, ನಾಮಜಪವನ್ನು ಮಾಡುವದು–ಇಂಥ ಸತ್ಕರ್ಮಗಳಿಂದ ಆತನು ಸಂತುಷ್ಟನಾಗಿ ಭಕ್ತರನ್ನು ಸಂಸಾರದಿಂದ ಉದ್ಧಾರಮಾಡುತ್ತಾನೆ.

ಇನ್ನು ಪರಮಾತ್ಮನು ನಿರ್ಗುಣನು, ಸಚ್ಚಿದಾನಂದಸ್ವರೂಪನು, ನಾಮ ರೂಪಗಳೇ ಇಲ್ಲದಾತನು–ಎಂದು ನಂಬುವವರೂ ಇದಾರೆ. ಅವರ ಮತದಲ್ಲಿ ರಾಮನೆಂದರೆ ನಮ್ಮೆಲ್ಲರ ಆತ್ಮನು. ರಾಮನೆಂಬ ನಾಮವು ಆ ಸರ್ವಾತ್ಮನಿಗೇ ಸಲ್ಲತಕ್ಕದ್ದು. ಇಷ್ಟೇಕೆ? ಸರ್ವನಾಮಗಳೂ ಸರ್ವರೂಪಗಳೂ ಆ ರಾಮನಿಂದಲೇ ಹೊರಹೊಮ್ಮಿ

ತೋರಿಕೊಳ್ಳುತ್ತಿರುವವು. ಆದ್ದರಿಂದ ರಾಮನಾಮವನ್ನುಚ್ಚರಿಸುವದು ಆ ನಮ್ಮ ಆತ್ಮನಾದ ಪರಮಾತ್ಮನನ್ನೇ ಸ್ಮರಿಸಿಕೊಂಡಂತೆ. ಪರಮಾತ್ಮನ ಸ್ಮರಣೆಯಿಂದ ಸಕಲ ಪುರುಷಾರ್ಥಗಳೂ ದೊರಕುವವು.

ರಾಮನೆಂಬುದು ರಾಮನೆಂಬ ನಾಮ, ರಾಮನೆಂಬ ರೂಪ–ಈ ಎರಡರ ತಿರುಳು; ಅದು ಸಕಲವಾಙ್ಮನಸ್ಸುಗಳನ್ನೂ ಮೀರಿದ ಪರತತ್ತ್ವವು ಎಂಬುದು ಜ್ಞಾನಿಗಳ ಅನುಭವವು. ರಾಮನಾಮವನ್ನು ಕೇಳಿದಾಗಲೆಲ್ಲಾ ಅವರಿಗೆ ಆ ತತ್ತ್ವವೇ ಕಾಣಿಸಿಕೊಳ್ಳುವದು.

## 177. ದೇವತಾರ್ಚನೆ

### (ಜೂನ್ 1961)

*ವಿಗ್ರಹಗಳನ್ನು ಪೂಜಿಸುವದು ಪಾಪವೊ, ಪುಣ್ಯವೊ?–ಎಂಬ ವಿಷಯದಲ್ಲಿ ನೀವು ಬರೆದಿರುವ ಪತ್ರವನ್ನು ಓದಿದೆನು. "ಅದು ಪುಣ್ಯವಾದರೂ ಈಗಿನ ವ್ಯವಹಾರನಿಮಿತ್ತದಿಂದ ಅದಕ್ಕೆ ಅವಕಾಶವಿಲ್ಲದವರು ಮಾನಸಪೂಜೆ ಮಾಡಿದರೆ, ಅಥವಾ ಧ್ಯಾನಾದಿಗಳನ್ನು ಮಾಡಿದರೆ, ಅಷ್ಟರಿಂದಲೇ ಮನುಷ್ಯನು ಕೃತಾರ್ಥನಾಗಲಾರನೆ?" ಎಂತ ಕೇಳಿರುತ್ತೀರಿ.*

ಇಂಥ ಪ್ರಶ್ನೆಗಳು ಈಗಿನ ವಿದ್ಯಾಭ್ಯಾಸದ ಫಲವಾಗಿರುತ್ತದೆ. ಪರಮೇಶ್ವರನನ್ನು ಸಂಪೂರ್ಣವಾಗಿ ಮರೆತು ವ್ಯವಹಾರದಲ್ಲಿ ಇಲ್ಲದ ಸಂಕಷ್ಟಗಳನ್ನು ತಂದುಕೊಂಡು, 'ಈಗಿನ ಸ್ಥಿತಿಯಲ್ಲಿ ಈ ಮತಾಚಾರಗಳಿಗೆ ಅವಕಾಶವೆಲ್ಲಿದೆ?' ಎಂದು ಕೇಳುವದೊಂದು ವಿಲಕ್ಷಣವಾದ ತರ್ಕ. ಈಗಿನ ವ್ಯವಹಾರದ ಕಷ್ಟಗಳು ಅತ್ಯಾಶೆಯಿಂದ ಮಾನವನೇ ಸೃಷ್ಟಿ ಮಾಡಿಕೊಂಡವುಗಳಾಗಿವೆ. ಮನುಷ್ಯನಿಗೆ ಅತ್ಯಾಶೆಯಿರುವವರೆಗೆ ಅವನು ಎಷ್ಟು ಹಣ ಗಳಿಸಲಿ, ಎಂಥ ಮೆರುಗಿನ ನಾಗರಿಕತೆಯನ್ನು ವಿಕಾಸಗೊಳಿಸಿಕೊಳ್ಳಲಿ, ಅವನಿಗೆ ಕಷ್ಟಗಳು ತಪ್ಪಿದ್ದಲ್ಲ. ಆಹಾರನಿದ್ರಾವಿನೋದಗಳಿಗೆ ಕೂಡ ಅವಕಾಶವನ್ನು ಕೊಡದ ವ್ಯವಹಾರವು ಹೇಗೆ ತಾನೆ ಸದ್ವ್ಯವಹಾರವೆನಿಸೀತು? ಸರ್ವಕ್ಕೂ ಮೂಲಗನಿಯಾದ ಭಗವಂತನನ್ನು ಕಡೆಗಣಿಸಿದರೆ ವ್ಯವಹಾರವೂ ಸಲೀಸಾಗಿ ಸಾಗುವ ಹಾಗಿಲ್ಲ, ಇನ್ನು ಸುಖಶಾಂತಿಗಳ ಮಾತೆಲ್ಲಿ?

ವಿಗ್ರಹವನ್ನು ಪೂಜಿಸುವದು ಪುಣ್ಯವೇ ಸರಿ. ಈಗಿನವರು ದೇವರ ವಿಗ್ರಹಗಳನ್ನು ಅರ್ಚಿಸದಿದ್ದರೂ, ಭೋಗ್ಯಪದಾರ್ಥಗಳು, ಸಿನೆಮಾನಟಿಯರು, ರಾಜಕೀಯದ ಜನನಾಯಕರು–ಮುಂತಾದವುಗಳ ವಿಗ್ರಹವನ್ನು ಅರ್ಚಿಸುತ್ತಲೇ ಇದಾರೆ. ಭಗವಂತನ ಅವತಾರಗಳನ್ನೂ ಗುಣಕರ್ಮಗಳನ್ನೂ ನೆನಪುಕೊಡುವ ವಿಗ್ರಹಗಳಾಗಲಿ,

ಚಿತ್ರಪಟಗಳಾಗಲಿ, ಮತ್ತೆ ಯಾವ ಪ್ರತೀಕಗಳಾಗಲಿ ಅರ್ಚನೆಗೆ ಅತ್ಯವಶ್ಯ. ಅವುಗಳನ್ನು ಪೂಜಿಸುವದೆಂದರೆ ಭಗವಂತನನ್ನೇ ಪೂಜಿಸಿದಂತೆ. ವಿಭೂತಿಯುಕ್ತವಾದ, ಸಂಪದ್ಯುಕ್ತವಾದ, ಕಾಂತಿಯುಕ್ತವಾದ, ಸೌಂದರ್ಯಯುಕ್ತವಾದ ಯಾವ ವಸ್ತುವನ್ನಾದರೂ ಭಗವಂತನ ತೇಜಸ್ಸಿನ ಅಂಶವೆಂದು ಅರ್ಚನೆ ಮಾಡಬೇಕು. ಅದರಿಂದ ಮನಸ್ಸಿಗೆ ಶುದ್ಧಿಯುಂಟಾಗುವದು, ಸಾತ್ತ್ವಿಕವಾದ ಆಚಾರವಿಚಾರಗಳು ಒಗ್ಗುವವು. ಅಧ್ಯಾತ್ಮ ಜ್ಞಾನಕ್ಕೆ ಸಾಧನವಾಗುವದು.

ಮಾನಸಪೂಜೆ, ಧ್ಯಾನ–ಮುಂತಾದ ಅಂತರಂಗಸಾಧನಗಳು ಹೆಚ್ಚಿನ ಅಂತಸ್ತಿನ ಚಿತ್ತವಿರುವವರಿಗೆ ಮಾತ್ರ ಸಾಧ್ಯ. ಅಂಥ ಯೋಗ್ಯತೆಯಿಲ್ಲದವರು–ಅಥವಾ ಇದ್ದರೂ ಅದರಲ್ಲಿ ಸ್ಥಿರತ್ವವನ್ನು ಇನ್ನೂ ಪಡೆಯದವರು–ಬಾಹ್ಯಾರ್ಚನೆಮಾಡುವದು ತಪ್ಪಲ್ಲ ವೆಂಬುದು ಹಾಗಿರಲಿ, ಅತ್ಯವಶ್ಯವೆಂದು ತಿಳಿಯಬೇಕು.

## 178. ನಮ್ಮ ಕರ್ಮಕ್ಕೆ ಯಾರು ಹೊಣೆ?

**(ಜುಲೈ 1961)**

*ನಾನು ಮಾಡುವ ಕರ್ಮವು ದೇಹಕ್ಕೆ ಸೇರಿದ್ದೆ, ನನ್ನ ಆತ್ಮಕ್ಕೆ ಸೇರಿದ್ದೆ? ನಮ್ಮ ಕರ್ಮಗಳಿಗೆಲ್ಲ ಹೊಣೆ ಯಾರು? ಎಲ್ಲಕ್ಕೂ ಪರಮಾತ್ಮನೇ ಕಾರಣನೆಂದರೆ ಕೆಟ್ಟ ಕರ್ಮಗಳನ್ನು ಮಾಡಿಸುವಾತನೂ ಅವನೇ ಎನ್ನಬೇಕೆ? 'ನಾವೇ ಕರ್ಮಕ್ಕೆ ಹೊಣೆ, ಅದರಂತೆ ಅವನು ಫಲವನ್ನು ಕೊಡುತ್ತಾನೆ–ಎಂದರೆ ಕರ್ಮವೇ ಈಶ್ವರನಿಗಿಂತ ಹೆಚ್ಚಾಯಿತಲ್ಲ!'–ಎಂದು ಬರೆದಿರುವ ನಿಮ್ಮ ಪತ್ರವನ್ನು ಓದಿಕೊಂಡಿರುತ್ತೇನೆ.*

ವ್ಯವಹಾರದಲ್ಲಿ ಕರ್ಮಗಳನ್ನು ಮಾಡುವಾಗ ಇಂಥ ಪ್ರಶ್ನೆಗಳನ್ನು ಜನರು ಯಾರಿಗೂ ಹಾಕುವದಿಲ್ಲ; ಅಥವಾ ತಮ್ಮಲ್ಲಿ ತಾವೂ ವಿಚಾರಿಸುವದಿಲ್ಲ. ಬಹಳ ಜನರು ನಾನು ಕೆಲಸ ಮಾಡಿದರೆ ನನಗೆ ಫಲವು ದೊರೆಯುತ್ತದೆ, ನಾನು ತಪ್ಪು ಮಾಡಿದರೆ ನನಗೆ ತೊಂದರೆಯಾಗುತ್ತದೆ–ಎಂದೇ ನಂಬಿಕೊಂಡು ಕೆಲಸಮಾಡುತ್ತಿದ್ದಾರಲ್ಲ? ಆದ್ದರಿಂದ ಸಾಮಾನ್ಯದೃಷ್ಟಿಯಿಂದ ನೋಡಿದಾಗ ಕರ್ಮವನ್ನು ಮಾಡುವದು, ಬಿಡುವದು, ಅಥವಾ ಬೇರೆಯಾಗಿಯೇ ಮಾಡುವದು–ಇವೆಲ್ಲ ಮನುಷ್ಯನ ಅಧೀನವಾಗಿದೆ ಎಂದು ಸ್ಪಷ್ಟವಾಗಿದೆ.

ದೇಹಕ್ಕಿಂತ ಬೇರೆಯಾಗಿ ಆತ್ಮನಿದಾನೆ ಎಂಬ ವಿಶ್ವಾಸವುಳ್ಳವರಿಗೆ, ನಾನು ದೇಹಾದಿಗಳನ್ನು ಉಪಯೋಗಿಸಿಕೊಂಡು ಕೆಲಸ ಮಾಡುತ್ತೇನೆ ಎಂಬ ನಂಬಿಕೆಯಿರುತ್ತದೆ. ಕೋಲಿನಿಂದ ಒಬ್ಬನನ್ನು ಹೊಡೆದಾಗ, ಅಥವಾ ಬಾವಿಯಲ್ಲಿ ಮುಳುಗುತ್ತಿರುವವನನ್ನು

ಹಗ್ಗವನ್ನು ಇಳಿಯಬಿಟ್ಟು ಮೇಲಕ್ಕೆತ್ತಿದಾಗ 'ನಾನೇ ಹೊಡೆದೆ, ನಾನೇ ಅವನನ್ನು ಎತ್ತಿದೆ' ಎಂಬ ನಂಬಿಕೆ ಸ್ವಭಾವವಾಗಿ ಉಂಟಾಗುತ್ತದೆಯಲ್ಲವೆ? ಹಾಗೆಯೇ ದೇಹಾದಿಗಳಿಂದ ಮಾಡಿದ ಕರ್ಮವು ಜೀವಾತ್ಮನಿಗೇ ಆಗುತ್ತದೆ ಎಂಬುದು ಯುಕ್ತಿಯುಕ್ತವಾಗಿರುತ್ತದೆ. ಶಾಸ್ತ್ರವೂ ಹಾಗೆಂದೇ ಹೇಳುತ್ತಿದೆ.

ಇಲ್ಲೊಂದು ವಿಶೇಷ. ದೇಹಾದಿಗಳನ್ನು ಹೀಗೆಹೀಗೆ ಉಪಯೋಗಿಸಿದರೆ ಇಂಥಿಂಥ ಕರ್ಮವಾಗಬೇಕು, ಇಂಥಿಂಥ ಕರ್ಮ ಪಾಪ ಅಥವಾ ಪುಣ್ಯ, ಈ ಕರ್ಮಕ್ಕೆ ಇಂಥ ಫಲ–ಎಂಬ ನಿಯಮವನ್ನು ನಾವು ಮಾಡಿಲ್ಲ. ಅದು ಸ್ವತಂತ್ರವಾಗಿಯೇ ಇದ್ದುಕೊಂಡುಬಿಟ್ಟಿದೆ. ಬೆಂಕಿಯು ಸುಡಬೇಕು, ನೀರು ನೆನೆಯಿಸಬೇಕು–ಎಂಬ ನಿಯಮವು ನಾವು ಮಾಡಿಕೊಂಡದ್ದೆಂದು ಯಾರೂ ಹೇಳುವದಿಲ್ಲವಷ್ಟೆ– ಈ ದೃಷ್ಟಿಯಿಂದ ನೋಡಿದಾಗ ಕರ್ಮವು ಏರ್ಪಡುವುದಕ್ಕೆ ನಮ್ಮ ದೇಹಾದಿಸಾಮಗ್ರಿಗಳನ್ನು ಕೊಟ್ಟಿರುವದೂ ಅವುಗಳಿಗೆ ತಕ್ಕ ಫಲವನ್ನು ಏರ್ಪಡಿಸಿರುವದೂ ಈಶ್ವರನಿಗೆ ಸೇರಿದ್ದೆಂದು ತಿಳಿಯಬೇಕು. ದೇಶಕಾಲನಿಮಿತ್ತಗಳಿಗೆ ಕಟ್ಟುಬೀಳುವಂತೆ ಕ್ರಿಯೆಗಳೂ ಅವುಗಳ ಫಲವೂ ಆಗಬೇಕೆಂದು ಪರಮೇಶ್ವರನೇ ನಿಯಮಿಸಿದ್ದಾನೆ. ಈ ಅರ್ಥದಲ್ಲಿ ನಮ್ಮ ಕರ್ಮಾದಿಗಳೆಲ್ಲ ಆತನ ಅಧೀನವೇ. ಇದನ್ನು ತಿಳಿದ ಪರಮೇಶ್ವರನಲ್ಲಿ ಕೃತಜ್ಞತೆಯಿಂದ ವರ್ತಿಸುತ್ತಾ ಸತ್ಕರ್ಮವನ್ನು ಮಾಡಿ, ಸತ್ಫಲವನ್ನು ಪಡೆದು ಆನಂದಿಸಬೇಕು.

## 179. ರಾಮಾಯಣ ಮಹಾಭಾರತಗಳು

**(ಆಗಸ್ಟ್ 1961)**

*ನಿಮ್ಮ ಪತ್ರವು ಬಂದು ತಲುಪಿರುತ್ತದೆ. ನೀವು ಅನೇಕ ಪ್ರಶ್ನೆಗಳನ್ನು ಹಾಕಿ ಪತ್ರವನ್ನು ಬರೆದಿರುತ್ತೀರಿ. ಅವುಗಳಲ್ಲಿ ಅಧ್ಯಾತ್ಮಸಾಧನಕ್ಕೆ ಅಡ್ಡಿಯಾಗಿರುವ ಶಂಕೆಗಳಾಗಲಿ, ಅವನ್ನು ತಿಳಿದುಕಂಡು ನೀವು ಮುಂದೆ ಜೀವನದಲ್ಲಿ ಹೇಗೆ ಉಪಯೋಗಿಸಿಕೊಳ್ಳಬೇಕೆಂಬ ಚಿಂತೆಯಾಗಲಿ ನಿಮ್ಮ ಪತ್ರದಲ್ಲಿ ಕಾಣಬರುತ್ತಿಲ್ಲ. ಈ ಪತ್ರಿಕೆಯನ್ನು ಆಸ್ತಿಕರಾಗಿ ಅಧ್ಯಾತ್ಮಮಾರ್ಗದಲ್ಲಿ ಮುನ್ನಡೆಯುವವರ ಸಲುವಾಗಿಯೇ ಹೊರಡಿಸಿರುತ್ತದೆಯಾದ್ದರಿದ ಬರಿಯ ಚರ್ಚಾಕೂಟದ ಪ್ರಶ್ನೆಗಳಿಗೆ ಇಲ್ಲಿ ಸ್ಥಲವಿಲ್ಲ.*

ಆದರೂ ಇವುಗಳಲ್ಲಿ ಯೋಗ್ಯವಾದ ಪ್ರಶ್ನೆಯನ್ನು ಆರಿಸಿಕೊಂಡು ಉತ್ತರವನ್ನು ಕೊಡಬೇಕೆಂತ ನೀವು ಕೇಳಿರುವದರಿಂದ ನನಗೆ ತಿಳಿದಮಟ್ಟಿಗೆ ಇಲ್ಲಿ ಉತ್ತರವನ್ನು ಬರೆಯುವೆನು. ರಾಮಾಯಣ ಮಹಾಭಾರತಗಳು ನಮ್ಮ ದೇಶದವರ ದೊಡ್ಡದೊಂದು

ಪಿತ್ರಾರ್ಜಿತ ಆಸ್ತಿ. ಇಂಥ ಅಮೋಘವಾದ ಕಾವ್ಯಗಳು ಭೂಮಂಡಲದಲ್ಲಿಯೇ ಹುಟ್ಟಿಲ್ಲ. ದೇಶಾಂತರದಲ್ಲಿರುವವರು ಇವುಗಳನ್ನು ನೋಡಿ ಮೂಗಿನ ಮೇಲೆ ಬೆರಳಿಟ್ಟು ಬೆರಗಾಗಿ ನೋಡುತ್ತಿದ್ದಾರೆ. ಇವುಗಳೊಳಗಿರುವ ಅಗಾಧವಿಷಯಗಳಿಗೆ ಮನಸೋತು ಇವನ್ನು ತಮ್ಮ ಭಾಷೆಗಳಿಗೆ ತಿರುಗಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ನೀವು—ಅಥವಾ ನಿಮ್ಮ ಪರಿಚಯದವರು—ಇದನ್ನೊಂದು ಕಲ್ಪನಾಕಥೆಯೆಂದು ಭಾವಿಸಿದ್ದರೂ ಮಾನವನ ಸಂಸ್ಕೃತಿಗೆ ಮೆರುಗನ್ನು ಕೊಡುವ ಕಾವ್ಯಗಳಿವೆಂದು ಅವಶ್ಯವಾಗಿ ನಂಬಿರಿ. ಅದರಿಂದ ನಿಮಗೆ ಇಹಪರಗಳು ಸುಖಮಯವಾಗುವವು.

ರಾಮಾಯಣಮಹಾಭಾರತಗಳು ನಮ್ಮ ದೇಶದಲ್ಲಿ ಎಲ್ಲಾ ಅಂತಸ್ತಿನ ಜನರ ಮನಸ್ಸಿನಲ್ಲಿಯೂ ಆಬಾಲವೃದ್ಧರಿಗೂ ಮೆಚ್ಚಾಗಿರುವ ಧರ್ಮಾರ್ಥಕಾಮಮೋಕ್ಷಗಳ ಗಹನವಿಚಾರಗಳನ್ನು ನಮ್ಮ ಮುಂದಿಟ್ಟಿರುವ ಧರ್ಮಗ್ರಂಥಗಳು, ರಾಮಾಯಣದಲ್ಲಿ ನಾಯಕನಾಗಿರುವ ಶ್ರೀರಾಮನೂ ಮಹಾಭಾರತಕಥೆಗೆ ಸೂತ್ರಧಾರನಂತಿರುವ ಶ್ರೀಕೃಷ್ಣನೂ ಅವತಾರಪುರುಷರೆಂದು ಈ ದೇಶದ ಸನಾತನಧರ್ಮಿಗಳೆಲ್ಲರ ದೃಢವಿಶ್ವಾಸವಿರುತ್ತದೆ. ಧರ್ಮಾಚರಣೆಯಲ್ಲಿ ಅವರು ಹಾಕಿಕೊಟ್ಟಿರುವ ಮೇಲುಪಙ್ಕ್ತಿಗಳನ್ನೂ ಅವರು ಮಾಡಿರುವ ಉತ್ತಮವಾದ ಉಪದೇಶಗಳನ್ನೂ ಜನರು ಎಂದಿಗೂ ಮರೆಯುವಂತಿಲ್ಲ.

ಶ್ರೀರಾಮ, ಶ್ರೀಕೃಷ್ಣ—ಎಂಬ ಹೆಸರುಗಳಿಗೆ ಆಸ್ತಿಕರು ಕೊಟ್ಟಿರುವ ಅರ್ಥಗಳು ಭಕ್ತರ ಹೃದಯಕ್ಕೆ ಶಾಂತಿಸುಖಗಳನ್ನು ಕೊಡುವದಕ್ಕೆ ತಕ್ಕವಾಗಿರುತ್ತದೆ. ಕುಹಕಿಗಳು ಅವರನ್ನು ಕೇವಲ ಮನುಷ್ಯರೆಂದು ತಿಳಿದು ಮಾಡುವ ಕುತರ್ಕಗಳಿಗೆ ಮರುಳಾಗದಿರಿ. ಚಿತ್ರವನ್ನು ಮೂಸಿ ನೋಡಿದರೆ ಅದರ ಸೌಂದರ್ಯವು ಹೇಗೆ ತಿಳಿಯಲಾರದೋ ಹಾಗೆ ತರ್ಕಕ್ಕೆ ಶ್ರೀರಾಮಕೃಷ್ಣಾವತಾರಗಳ ರಹಸ್ಯವು ನಿಲುಕದು. ಈ ಗ್ರಂಥಗಳನ್ನು ಶ್ರದ್ಧಾಭಕ್ತಿಗಳಿಂದ ನೀವೂ ಓದಿ ಅವುಗಳ ರಹಸ್ಯಾರ್ಥಗಳನ್ನು ಹೇಳಬಲ್ಲವರಿಂದ ಕೇಳಿ ನಿಮ್ಮ ಬುದ್ಧಿಗೆ ಶಾಂತಿಯನ್ನು ತಂದುಕೊಳ್ಳಿರಿ. ಶ್ರೀಮನ್ನಾರಾಯಣನು ನಿಮಗೆ ಆ ಬುದ್ಧಿಯನ್ನು ಕೊಡಲಿ!

## 180. ಶ್ರೀಕೃಷ್ಣಭಗವಂತ

### (ಸಪ್ಟೆಂಬರ್ 1961)

*ಶ್ರೀಕೃಷ್ಣಭಗವಂತನ ವಿಷಯಕ್ಕೆ ನಿಮ್ಮ ಜೊತೆಗೆ ಇನ್ನೊಬ್ಬರು ಪ್ರಶ್ನೆಯನ್ನು ಬರೆದು ಕೇಳಿರುತ್ತಾರೆ. ಇಬ್ಬರ ಪ್ರಶ್ನೆಗಳಿಗೂ ಸಂಗ್ರಹವಾಗಿ ಇಲ್ಲಿ ಉತ್ತರವನ್ನು ಬರೆಯುತ್ತೇನೆ.*

ಶ್ರೀಕೃಷ್ಣಭಗವಂತನು 5134 ವರ್ಷಗಳ ಹಿಂದೆ ಶ್ರಾವಣ ಕೃಷ್ಣಾಷ್ಟಮಿಯ ದಿನ ಅವತರಿಸಿದನೆಂದು ಕಲಕತ್ತೆಯ ಒಬ್ಬ ಸಿದ್ಧಾಂತಿಗಳು ನಮಗೆ ಬರೆದಿರುತ್ತಾರೆ. ಜ್ಯೋತಿಃಶಾಸ್ತ್ರದಂತೆ ಈ ಲೆಕ್ಕವು ಅವರಿಗೆ ತಿಳಿದಿರಬೇಕು. ಆದರೆ ಭಗವಂತನು ಕಾಲಾತೀತನು; ಕಾಲವು ಆತನ ಒಂದು ವಿಭೂತಿಯು, ಲೋಕಕ್ಷಯಕ್ಕಾಗಿ ಕಾಲನಾಗಿ ತೋರಿಕೊಂಡಿದೇನೆಂದು ಭಗವಂತನು ವಿಶ್ವರೂಪವನ್ನು ತೋರಿಸಿದಾಗ ಹೇಳಿ ಕೊಂಡಿರುತ್ತಾನೆ. ''ಭಗವಂತನು ದೇವಕಿಯರಲ್ಲಿ ವಸುದೇವನಿಂದ ತನ್ನೊಂದಂಶದಿಂದ ಹುಟ್ಟಿದನು; ಜನ್ಮರಹಿತನೂ ಅವ್ಯಯನೂ ಸರ್ವಭೂತಗಳಿಗೂ ಒಡೆಯನೂ ಆಗಿದ್ದರೂ ದೇಹವುಳ್ಳವನಾಗಿ ಹುಟ್ಟಿದಂತೆ ಲೋಕಾನುಗ್ರಹ ಮಾಡುವವನಾಗಿ ಕಾಣಿಸಿ ಕೊಂಡಿರುತ್ತಾನೆ'' ಎಂದು ಶಂಕರಾಚಾರ್ಯರು ಬರೆದಿರುತ್ತಾರೆ. ಆ ಭಗವಂತನು ಈಗಲೂ ತನ್ನ ಆ ದಿವ್ಯಸ್ವರೂಪದಿಂದ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುತ್ತಾನೆ; ಭಕ್ತರಿಗೆ ಅವರವರಿಗೆ ಅಭೀಷ್ಟವಾದ ರೂಪದಿಂದ ದರ್ಶನವನ್ನು ಕೊಡುತ್ತಾನೆ—ಎಂದು ದೊಡ್ಡವರು ಹೇಳುತ್ತಾರೆ.

ಕೃಷ್ಣಾಷ್ಟಮಿಯಲ್ಲಿ ರಾತ್ರಿ ಸರಿಹೊತ್ತಿನಲ್ಲಿ ಹುಟ್ಟಿದ ಶ್ರೀಕೃಷ್ಣಭಗವಂತನು ದೇವಕೀ ವಸುದೇವರುಗಳ ಬಂಧನವನ್ನು ಕಳಚಿದನು, ಅವರಿದ್ದ ಕಾರಾಗಾರವನ್ನೆಲ್ಲ ಬೆಳಗುವಂತೆ ಮಾಡಿದನು, ಮುಂದೆ ನಂದಗೋಕುಲದಲ್ಲಿ ಗೋವೃಂದಕ್ಕೆಲ್ಲ ಆನಂದವನ್ನು ತಂದುಕೊಟ್ಟನು. ಭಾರತಯುದ್ಧಕಾಲದಲ್ಲಿ ಅರ್ಜುನನಿಗೆ ಮನಃಶಾಂತಿಯನ್ನು ಕೊಡುವ ಗೀತೆಯನ್ನುಪದೇಶಿಸಿ ಲೋಕಕ್ಕೆಲ್ಲ ಉಪನಿಷತ್ಸಾರಾಮೃತವನ್ನು ಅನುಗ್ರಹಿಸಿದನು.

ಭಗವಂತನು 'ನಿನ್ನ ಹೊರತು ಮತ್ತೆ ಯಾರಿಗೂ ಈ ವಿಶ್ವರೂಪವನ್ನು ನೋಡುವದು ಆಗಲಾರದು' ಎಂದು ಹೇಳಿರುವದು ನಿಜ; ಆದರೆ ಅನನ್ಯ ಭಕ್ತಿಯಿಂದ ಈ ರೂಪವನ್ನು ನೋಡಬಹುದು, ಅರಿತು ತನ್ನಲ್ಲಿಯೇ ಸೇರಿ ಮುಕ್ತನಾಗಬಹುದು ಎಂದು (11–54ರಲ್ಲಿ) ಹೇಳಿರುತ್ತಾನೆ. ಆದ್ದರಿಂದ ಅರ್ಜುನನಂಥ ಭಕ್ತರಿಗೆ ಭಗವಂತನ ದರ್ಶನವು ಆಗುತ್ತದೆ—ಎಂದಾಯಿತು.

ಕಲಿಮಹಿಮೆಯಿಂದ ನಮ್ಮ ಹೃದಯದಲ್ಲಿ ಕಲ್ಮಷದ ವಾಸನೆಗಳು ಸೇರಿ ಕೊಂಡಿರುತ್ತವೆಯೆಂಬುದು ನಿಜ. ಆದರೆ ದಯಾಘನನಾದ ಆ ವಾಸುದೇವನು, ಶರಣುಹೊಕ್ಕವರು ಎಂಥ ದುರಾಚಾರಿಗಳಾದರೂ, ಮನಃಪೂರ್ವಕವಾಗಿ ಭಜಿಸಿದವರಿಗೆ ಸನ್ಮಾರ್ಗವನ್ನು ತೋರಿಸುವೆನು ಎಂದು ವಾಗ್ದಾನಮಾಡಿರುತ್ತಾನೆ. ಇದನ್ನು ನಾವು ನೆನಪಿನಲ್ಲಿಡಬೇಕು.

## 181. ಸರ್ವಸಹಾನುಭೂತಿ

### (ಅಕ್ಟೋಬರ್ 1961)

*ಕ್ರಿಸ್ತಿಯನ್ನರು ಪರದೇಶಗಳಿಗೆ ಹೋಗಿ ಧರ್ಮ, ಪ್ರೇಮ, ಸರ್ವಮಾನವರ ಭ್ರಾತೃಭಾವ-ಇವುಗಳನ್ನು ಕ್ರೈಸ್ತನ ಹೆಸರಿನಲ್ಲಿ ಉಪದೇಶಿಸುತ್ತಾರೆ. ಮುಸಲ್ಮಾನರಲ್ಲಿ ಒಗ್ಗಟ್ಟಿರುವದು ಸುಪ್ರಖ್ಯಾತವಾಗಿದೆ. ನಮ್ಮ ಹಿಂದುಗಳಲ್ಲೇಕಿಲ್ಲ?-ಎಂಬ ನಿಮ್ಮ ಪ್ರಶ್ನೆ ವಿಚಾರವನ್ನು ಕೆರಳಿಸುವಂತಿದೆ. ಇದಕ್ಕೆ ನನ್ನ ಸಂಕ್ಷಿಪ್ತವಾದ ಉತ್ತರವೇನೆಂದರೆ, ಹಿಂದುಗಳು-ನಿಜವಾಗಿ ಅವರ ಹೆಸರು ಸನಾತನ ಧರ್ಮಿಗಳು ತಮ್ಮ ಸಂಸ್ಕೃತಿಯ ಅಭಿಮಾನವನ್ನು ಮರೆತುಬಿಟ್ಟಿದಾರೆ. ಪರದೇಶದವರ ಅನುಕರಣೆಗೆ ಬಿದ್ದು 'ಇತೋ ಭ್ರಷ್ಟಃ ತತೋಽಪಿ ಭ್ರಷ್ಟಃ'- ಎಂದಾಗಿರುತ್ತಾರೆ.*

ಮುಸಲ್ಮಾನಮತದವರಾಗಲಿ, ಕ್ರಿಸ್ತಿಯನ್ನರಾಗಲಿ ಹೊಸದಾಗಿ ಜನರ ಒಗ್ಗಟ್ಟನ್ನು ಅಥವಾ ಮಾನವಪ್ರೇಮವನ್ನು ನಮ್ಮ ದೇಶಕ್ಕೆ ತಂದುಕೊಟ್ಟಿಲ್ಲ. ನಾನು ಹಳೆಯ ಶಾಸ್ತ್ರಗಳ ಆಧಾರವನ್ನೇ ಕೊಡುವದಕ್ಕಿಂತ, ಈಗಿನ ಕಾಲದ ಐತಿಹಾಸಿಕ ದೃಷ್ಟಿಯುಳ್ಳವರಿಗೆ ಮನದಟ್ಟಾಗುವಂತೆ ಪ್ರಸಿದ್ಧವಾಗಿರುವ ಒಂದು ಲೇಖನದ ಆಧಾರವನ್ನು[1] ಇಲ್ಲಿ ಕೊಟ್ಟಿರುತ್ತೇನೆ. ಯೇಸುಕ್ರೈಸ್ತನೂ, ಹಜರತ್‌ಮುಹಮ್ಮದನೂ ಉಪದೇಶಕ್ಕೆ ಪ್ರಾರಂಭಿಸುವ ಮುಂಚೆ ಹ್ಯೂಯಂತ್ಸಾಂಗನು ನಮ್ಮ ದೇಶಕ್ಕೆ ಬಂದಿದ್ದನೆಂದು ಈಗ ಗೊತ್ತಾಗಿದೆ. ಬೌದ್ಧಮತಾವಲಂಬಿ ಹರ್ಷವರ್ಧನ ಕಾಲಕ್ಕೆ 500 ಬ್ರಾಹ್ಮಣವಿದ್ವಾಂಸರನ್ನು ಗಡೀಪಾರು ಮಾಡಿದನೆಂದೂ ಹ್ಯೂಯಂತ್ಸಾಂಗನ ಒಂದು ಗ್ರಂಥದಿಂದ ತಿಳಿಯಬಂದಿದೆ. ಹೀಗೆ ಪರದೇಶದವರಿಗೂ ಸನಾತನಮತದವರಿಗೂ ಸಂಬಂಧವಾಗಿರುವಾಗ ಯಾರು ಯಾರಿಂದ ಸಹಾನುಭೂತಿಯನ್ನು ಕಲಿತಿರಬೇಕು, ನೀವೇ ಯೋಚಿಸಿರಿ.

**'ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಮ್', 'ಅಪಕಾರಿಷು ಯಃ ಸಾಧುಃ ಸ ಸಾಧುಃ ಸದ್ಭಿರುಚ್ಯತೇ'**-ಇಂಥ ಮಾತುಗಳು ಗಾದೆಗಳಾಗಿ ನಮ್ಮ ದೇಶದಲ್ಲೆಲ್ಲ ಹರಡಿರುವಷ್ಟು ಮತ್ತೆಲ್ಲಿ ಹರಡಿವೆ? ಸರ್ವಮಾನವಪ್ರೇಮವಂತಿರಲಿ, ಸರ್ವಭೂತದಯೆಯೂ ನಮ್ಮ ದೇಶದಲ್ಲಿಯೇ ಮೊದಲು ಉಪದಿಷ್ಟವಾಯಿತು. **'ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಮ್', 'ಸರ್ವೇ ಜನಾಃ ಸುಖಿನೋ ಭವನ್ತು'**-ಎಂಬ ಪ್ರಾರ್ಥನೆಗಳು ಪ್ರಸಿದ್ಧವಾಗಿವೆ. ಇವಕ್ಕೆಲ್ಲ ನಿಮಗೆ ಅರ್ಥವಾಗಿಯೇ ಆಗುತ್ತದೆ ಎಂಬ ನಂಬಿಕೆಯಿಂದ ನಾನು ಕನ್ನಡದಲ್ಲಿ ಅರ್ಥವನ್ನು ಬರೆದಿಲ್ಲ. ತರ್ಪಣವನ್ನು ಕೊಡುವಾಗ **'ಆಬ್ರಹ್ಮಸ್ತಮ್ಬಪರ್ಯನ್ತಮ್'** (ಬ್ರಹ್ಮನಿಂದ ಸ್ಥಾವರಪ್ರಾಣಿಯವರೆಗೆ) ಎಂದು ಹೇಳುವ ಪದ್ಧತಿಯನ್ನು ನೀವು ಕೇಳಿದ್ದೀರಾ?

1. 'ಪ್ರಾಚೀನಭಾರತೀಯ ಸಂಸ್ಕೃತಿ' ಎಂಬ ಲೇಖನದ ಒಂದು ಭಾಗ. "Truth"June 1961.

ಈ ಎಲ್ಲಾ ಕಾರಣಗಳಿಂದ ನಮ್ಮ ಸನಾತನಧರ್ಮದ ಮೂಲಸೂತ್ರಗಳನ್ನು ನೋಡಿದರೆ, ಮಿಕ್ಕ ಮತಗಳಲ್ಲಿರುವ ಅಸಾಧಾರಣಧರ್ಮಗಳೆಂಬಿವು ಯಾವವೂ ನಮಗೆ ಹೊಸವಲ್ಲ–ಎಂದು ಒಪ್ಪಬೇಕಾಗುತ್ತದೆ. ನಮ್ಮ ದೇಶದಲ್ಲಿ ಮಾತ್ರವೇ ಇಡಿಯ ಬ್ರಹ್ಮಾಂಡಕ್ಕೆಲ್ಲ ಒಂದೇ ಒಂದು ಪರಮಾರ್ಥ ತತ್ತ್ವವು ಆತ್ಮನಾಗಿದೆ ಎಂಬ ಸಿದ್ಧಾಂತವು ಹೊರಕ್ಕೆ ಬಂದಿದೆ. ಮಾನವನು ಮಾತ್ರವೇ ಅಲ್ಲ, ಎಲ್ಲ ಪ್ರಾಣಿಗಳಿಗೂ, ಅದೇ ಆತ್ಮನು–ಎಂದು ಇಲ್ಲಿ ಮಾತ್ರವೇ ಉಪದೇಶಿಸಿದೆ. ಪರಮೇಶ್ವರನು ಒಬ್ಬನೇ, ವಿವಿಧ ಆಕಾರಗಳಿಂದಲೂ ಗುಣಗಳಿಂದಲೂ ಅವನನ್ನೇ ಜನರು ಉಪಾಸಿಸುತ್ತಾರೆ; ಯಾರು ಯಾವ ಹೆಸರಿನಿಂದ ಉಪಾಸನೆ ಮಾಡಿದರೂ ಆ ಪರಮೇಶ್ವರನಿಗೇ ಸಲ್ಲುತ್ತದೆ–ಎಂಬ ಉದಾತ್ತಭಾವನೆಯು ಮತ್ತೆ ಯಾವ ಧರ್ಮದಲ್ಲಿದೆ? ಪಂಚಭೂತಗಳನ್ನು ಪರಮಾತ್ಮನ ವಿಭೂತಿ ಎಂದು ಪೂಜೆ ಮಾಡಿದರೂ ಆತನು ಸಂತುಷ್ಟನಾಗುತ್ತಾನೆ; ಭಕ್ತರ ಅಭೀಷ್ಟವನ್ನು ನೆರವೇರಿಸುತ್ತಾನೆ–ಎಂಬ ತತ್ತ್ವವು ನಮ್ಮ ದೇಶದಲ್ಲಿ ಮಾತ್ರವೇ ಇದೆ.

ನೀವು ನಮ್ಮ ದೇಶದ ಸಂಸ್ಕೃತಿಯಲ್ಲಿ ಅಭಿಮಾನವನ್ನು ಕಾಪಾಡಿಕೊಳ್ಳಿರಿ. ಸಂಸ್ಕೃತಭಾಷೆಯಲ್ಲಿ ಅಭಿಮಾನವನ್ನು ಇಟ್ಟುಕೊಂಡು ಅದನ್ನು ಅಭ್ಯಾಸಿಸಿನೋಡಿರಿ. ಹಳೆಯ ಆಚಾರಗಳನ್ನು ಅನುಷ್ಠಾನಕ್ಕೆ ತಂದುಕೊಂಡು, ಅವುಗಳಲ್ಲಡಗಿರುವ ಸಾರವೇನೆಂಬುದನ್ನು ತಿಳಿದುಕೊಳ್ಳುವದಕ್ಕೆ ಪ್ರಯತ್ನಿಸಿರಿ. ಅದರಿಂದ ನಿಮಗೆ ಶ್ರುತಿಸ್ಮೃತಿ ಪುರಾಣಗಳ ಆಧಾರದಮೇಲೆ ನಿಂತಿರುವ ಸನಾತನಧರ್ಮದ ಹೆಚ್ಚುಗಾರಿಕೆಯು ಮನವರಿಕೆಯಾಗುವದು.

## 182. ಪರಮಾತ್ಮನ ಸಾಕ್ಷಾತ್ಕಾರ

### (ನವೆಂಬರ್ 1961)

*ನಿಮ್ಮ ಪತ್ರವು ತಲುಪಿದೆ. ಅದರಲ್ಲಿ 'ನನಗೆ ಈ ಜನ್ಮದಲ್ಲಿಯೇ ಪರಮಾತ್ಮನ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಬೇಕೆಂದು ಬಹಳ ಹಂಬಲವಿದೆ. ಅದು ಸಾಧ್ಯವೆ?' ಎಂದು ಕೇಳಿರುತ್ತೀರಿ. ಪರಮೇಶ್ವರನ ಅಂಶವೇ ಆಗಿರುವ ಮನುಷ್ಯಜೀವನಿಗೆ ಯಾವದು ತಾನೆ ಅಸಾಧ್ಯವಿದ್ದೀತು? ಕೌಶಿಕನೆಂಬ ಬ್ರಾಹ್ಮಣನಿಗೆ ಮಹಾತಪಸ್ಸಿನಿಂದಲೂ ದೊರಕದೆ ಇದ್ದ ಸಿದ್ಧಿಯು ಪತಿವ್ರತೆಯಾದ ಬ್ರಾಹ್ಮಣಿಗೂ ಮಾತಾಪಿತೃಗಳನ್ನು ಸೇವಿಸುತ್ತಿದ್ದ ಧರ್ಮವ್ಯಾಧನಿಗೂ ಸಿದ್ಧಿಸಲಿಲ್ಲವೆ?*

ನೀವು ಬರೆದಿರುವಂತೆ ಯಾವ ಕರ್ತವ್ಯವನ್ನೂ ಬಿಡದೆ, ಮನಸ್ಸನ್ನು ಕಾಮಕ್ರೋಧಾದಿಗಳಿಗೆ ವಶಮಾಡದೆ ಸಾಧ್ಯವಾದಷ್ಟು ಸಾತ್ತ್ವಿಕಭಾವನೆಗಳನ್ನು

ತುಂಬಿಕೊಂಡು ಪರಮಾತ್ಮಚಿಂತನೆಯಲ್ಲಿ ಕಾಲವನ್ನು ಕಳೆಯುತ್ತಿರುವವರಿಗೆ ಪರಮೇಶ್ವರನ ಅನುಗ್ರಹವು ಅವಶ್ಯವಾಗಿ ಆಗುವದು. ಗುರುವಿನ ಅನುಗ್ರಹವು ಇರಬೇಕೆಂದು ಇತಿಹಾಸಪುರಾಣಗಳಲ್ಲಿ ಹೇಳಿರುವದೂ ದೊಡ್ಡವರು ಹೇಳುತ್ತಿರುವದೂ ನಿಜ. ಆ ಗುರುವಿನ ಅನುಗ್ರಹವೂ ಪರಮೇಶ್ವರನ ಅನುಗ್ರಹದಿಂದಲೇ ಆಗಬೇಕು. ಪರಮೇಶ್ವರನ ಅನುಗ್ರಹವಿಲ್ಲದೆ ಸದ್ಗುರುವಿನ ದರ್ಶನವಾಗಲಿ, ಸಚ್ಛಾಸ್ತ್ರದ ಉಪದೇಶವಾಗಲಿ, ಎಂದಿಗೂ ದೊರೆಯಲಾರದು.

ನೀವು ತ್ರಯೋದಶಾಕ್ಷರೀಮಂತ್ರವನ್ನು ಬೆಳಗ್ಗೆ ಮಡಿಯಲ್ಲಿ ಮಾಡುತ್ತಿರುವದು ಒಳ್ಳೆಯ ಅಭ್ಯಾಸವೇ ಸರಿ. ಕಲಿಗಾಲಕ್ಕೆ ಭಗವನ್ನಾಮಸ್ಮರಣೆಯಷ್ಟು ಬೇಗನೆ ಫಲಕಾರಿಯಾಗುವ ಸಾಧನವು ಮತ್ತೊಂದಿಲ್ಲ. ಈ ಮಂತ್ರಜಪವನ್ನು ಮಿಕ್ಕ ಹೊತ್ತಿನಲ್ಲಿಯೂ ವಿರಾಮವು ದೊರಕಿದಾಗಲೆಲ್ಲ ಮಾಡುತ್ತಲೇ ಬರಬೇಕು. ಅದರಿಂದ ಚಿತ್ತಶುದ್ಧಿಯೂ, ಸತ್ಸಂಗವೂ, ಭಗವದ್ಭಕ್ತಿಯೂ ದೊರಕುವವು; ಭಗವಂತನನ್ನು ಉಪಾಸನೆಮಾಡುವ ಮಾರ್ಗವೂ ಮನವರಿಕೆಯಾಗುವದು. ಭಕ್ತಿಯಿಲ್ಲದ ಒಣವಿಚಾರಕ್ಕೆ ಎಂದಿಗೂ ಮರುಳಾಗಬೇಡಿರಿ. ನಾಮಸ್ಮರಣೆಯು ಅಲ್ಪಸಾಧನವೆಂದೂ ತೀರ ಕೆಳಮಟ್ಟದ ಬುದ್ಧಿಯವರಿಗೆ ಹೇಳಿದ್ದೆಂದೂ ವಾದಿಸುವವರ ಉಪದೇಶಕ್ಕೆ ಕಿವಿಗೊಡಬೇಡಿರಿ.

ಸತ್ಕರ್ಮ, ನಾಮ, ಜಪ, ಭಗವದ್ಭಕ್ತಿ–ಇವುಗಳನ್ನು ಸಂಪಾದಿಸಿಕೊಳ್ಳುವವರಿಗೆ ಅವಶ್ಯವಾಗಿ ಸದ್ವಿಚಾರದ ಮಾರ್ಗವು ಕಾಣಿಸುವದು. ಇಹಲೋಕದ ಜೀವನ ಯಾತ್ರೆಯು ಸುಪಥವಾಗುವದು. ಇತರ ಅನುಕೂಲ್ಯಗಳು ಇರಲಿ, ಇಲ್ಲದಿರಲಿ ಮನಸ್ಸಿಗೆ ಶಾಂತಿಯೂ ಸಾತ್ತ್ವಿಕವ್ಯವಹಾರದಲ್ಲಿ ಆಸಕ್ತಿಯೂ ನಿರಾತಂಕವಾದ ಭಗವದ್ಭಕ್ತಿಯೂ ದೊರಕುವದೇ ಎಲ್ಲಕ್ಕಿಂತಲೂ ಹೆಚ್ಚಿನ ಸುಪಥವಾದ ಬಾಳು ದೊರೆತದ್ದಕ್ಕೆ ಗುರುತು.

ಭಗವಂತನ ಕೃಪೆಯಿಂದ ನಿಮಗೆ ಈಗ ಬಂದಿರುವ ಅಧ್ಯಾತ್ಮವಿಚಾರಾಭಿರುಚಿಯು ಹೆಚ್ಚಲಿ!' ವ್ಯವಹಾರದಲ್ಲಿಯೂ ಆತನ ಚಿಂತನೆಯು ಎಡೆಬಿಡದೆ ನಿಮ್ಮ ಚಿತ್ತದಲ್ಲಿ ಉದಯಿಸಲಿ!.

## 183. ಹೊರಗಿನ ವೇಷದ ಬೆಲೆ

**(ಡಿಸೆಂಬರ್ 1961)**

*ನಿಮ್ಮ ಪತ್ರವು ತಲುಪಿದೆ. ಅಧ್ಯಾತ್ಮಸಾಧನವನ್ನು ಮಾಡುವವರು ಹೊರಗಿನ ವೇಷದಲ್ಲಿ ಹೀಗಿರಬೇಕೆಂಬ ನಿಯಮವುಂಟೆ? ಅದಿಲ್ಲದಿದ್ದರೇನು?–ಎಂದು ನೀವು ಕೇಳಿರುವ ಪ್ರಶ್ನೆಗೆ ನನಗೆ ತಿಳಿದ ಉತ್ತರವನ್ನು ಬರೆದಿರುತ್ತೇನೆ. ಸಾರವನ್ನು ಗ್ರಹಿಸಿ, ನಿಮಗೆ ಯುಕ್ತವಾಗಿ ಕಂಡರೀತಿಯಲ್ಲಿ ನಡೆಯಿರಿ.*

ಎಲ್ಲಕ್ಕೂ ಒಳಗಿರುವ ಸಾರವೇ ಪರಮಾತ್ಮ, ಅದನ್ನು ಅರಿತುಕೊಂಡೇ ನಾವು ಕೃತಕೃತ್ಯರಾಗಬೇಕು. 'ತತ್ ತ್ವಮ್ ಅಸಿ' (ಅದೇ ನೀನಾಗಿರುವೆ) ಎಂದು ಶ್ರುತಿಯಲ್ಲಿ ಸಾರಿಸಾರಿ ಹೇಳಿರುವ ತತ್ತ್ವವಿದು. ಹೊರಗೆ ತೋರಿಕೊಳ್ಳುತ್ತಿರುವದು ಹುಸಿ, ಅದಕ್ಕೆ ಅದರ ರೂಪದಿಂದ ಯಾವ ಬೆಲೆಯೂ ಇಲ್ಲ. ಆದರೆ ಒಳಗಿನ ತತ್ತ್ವಕ್ಕಾಗಿಯೇ ಹೊರಗಿನ ತೋರಿಕೆಗೆ ಬೆಲೆಯಿದೆ. ಹಣ್ಣಿನ ಸಿಪ್ಪೆಗೆ ಏನು ಬೆಲೆ? ಹಣ್ಣನ್ನು ಕಾಪಾಡುವದು, ಅದಕ್ಕೆ ಸವಿಬಿಡುವವರೆಗೂ ಅದನ್ನು ರಕ್ಷಿಸಿಕೊಂಡು ಬರುವದು. ಒಂದು ವಾಕ್ಯವನ್ನು ಬರೆದಿರುವ ಪುಸ್ತಕಕ್ಕೆ ಏನು ಬೆಲೆ? ಅದು ಬರಿಯ ಕಾಗದ. ಮಷಿಯಗೆರೆಗಳು ಅಷ್ಟೇ. ಆದರೆ ಆ ಕಾಗದವಾಗಲಿ ಮಷಿಯಾಗಲಿ ಇಲ್ಲದಿದ್ದರೆ, ನಿಮಗೆ ಕವಿಯ ಹೃದಯದಲ್ಲಿ ಹುದುಗಿಕೊಂಡಿದ್ದ ಭಾವಗಳು ಹೇಗೆ ಹೊಳೆಯುತ್ತಿದ್ದವು? ಗುಡಿಗೆ ದೇವರ ಮನೆಯಾಗಿರುವದರಿಂದಲೇ ಹೇಗೆ ಬೆಲೆಯಿರುವದೋ ಹಾಗೆಯೇ ನಿಮ್ಮ ದೇಹಕ್ಕೆ ನಿಮ್ಮೊಳಗಿನ ಆತ್ಮನನ್ನು ಕಾಣುವ ದ್ವಾರವಾಗಿರುವದರಿಂದಲೇ ಬೆಲೆಯಿದೆ.

ದೇಹವನ್ನು ಶುಚಿಯಾಗಿಟ್ಟುಕೊಳ್ಳುವದು, ಮಡಿಯಾದ ಬಟ್ಟೆಯನ್ನು ಹಾಕಿಕೊಳ್ಳುವದು, ಇಷ್ಟದೇವತೆಯ ನೆನಪನ್ನು ತರುವ ಲಲಾಟ ಚಿಹ್ನೆಯನ್ನು ಇಟ್ಟುಕೊಳ್ಳುವದು, ಜಪಮಾಲಿಕೆಯನ್ನು ಕೊರಳಲ್ಲಿ ಹಾಕಿಕೊಳ್ಳುವದು, ಏಕಾಂತವಾದ ಸ್ಥಳದಲ್ಲಿ ವಾಸ ಮಾಡುವದು, ನಾಮಸಂಕೀರ್ತನೆ ಮಾಡುವದು, ಸತ್ಸಂಗವನ್ನು ಮಾಡುವದು– ಇವಕ್ಕೆಲ್ಲ ಏನು ಬೆಲೆ? ಹೊರಗಿನ ದೃಷ್ಟಿಯಿಂದ ನೋಡಿದಾಗ ಅದಕ್ಕೇನೂ ಬೆಲೆಯಿಲ್ಲವೇ ಇಲ್ಲ. ಆದ್ದರಿಂದ ಯಾವ ಭಗವಂತನ ಭಕ್ತಿಯನ್ನು ಸಂಪಾದಿಸುವದಕ್ಕೆಂದು –ಇವನ್ನೆಲ್ಲ ಮಾಡುವೆವೋ, ಆತನ ನೆನಪನ್ನು ತರುವದರಿಂದ ಇವಕ್ಕೆ ಬಹಳ ಹೆಚ್ಚಿನ ಬೆಲೆಯಿದೆ.

ನಮ್ಮ ದೇಶದ ಆಚಾರ, ಮಡಿಮೈಲಿಗೆ, ಪೂಜಾದಿಗಳ ಕ್ರಮ, ತೀರ್ಥಯಾತ್ರೆಗಳು, ಉಪವಾಸಾದಿಗಳು, ಗ್ರಂಥಪಾರಾಯಣ, ಉತ್ಸವಗಳ ಆಚರಣೆ–ಇವೆಲ್ಲ ಹೊರಗಿನ ವೇಷವೇ ಸರಿ. ಇವನ್ನು ಇವಕ್ಕಾಗಿಯೇ ಮಾಡುವ ದಾಂಭಿಕರಿಗೆ ಇವುಗಳಿಂದ ಲಾಭವೇನೂ ಇಲ್ಲ. ಆದರೆ ಇವನ್ನು ಹೃದಯವು ಅರಳುವದಕ್ಕೂ ಭಗವಂತನಲ್ಲಿ ಭಕ್ತಿಯು ತಳವೂರಿ ನಿಲ್ಲುವದಕ್ಕೂ ಸಹಕಾರಿಯಾಗಿ ಆಚರಿಸಿದಾಗ ಬಹಳ ಅಮೂಲ್ಯವಾಗಿರುವವು. ಆದ್ದರಿಂದ ತಿರುಳಿಗಾಗಿ ಕರಟವೂ ಇರಲಿ; ತಿರುಳನ್ನು ಬಿಸುಟು ಕರಟವನ್ನು ಮಾತ್ರ ಇಟ್ಟುಕೊಳ್ಳಬೇಡಿ.

# 184. ವೇದಾಂತಾಭ್ಯಾಸ

**(ಜನವರಿ 1962)**

*ವೇದಾಂತವೆಂದರೇನೆಂಬುದನ್ನು ಮನಸ್ಸಿಗೆ ತಂದುಕೊಳ್ಳದೆ ಕೆಲವರು ವೇದಾಂತವನ್ನು ಅಭ್ಯಾಸ ಮಾಡುತ್ತಿದ್ದೇವೆಯೆಂದು ಹೇಳುತ್ತಾರೆ. 'ವೇದಾಂತದ ಅಭ್ಯಾಸದಲ್ಲಿ ನನಗೆ ಯಾವ ರುಚಿಯೂ ಹತ್ತಿಲ್ಲ' ಎಂದು ನೀವು ಬರೆದಿರುವದಕ್ಕೂ ವೇದಾಂತಶಬ್ದದ ಅರ್ಥವನ್ನು ತಿಳಿದುಕೊಳ್ಳದಿರುವದೇ ಕಾರಣವಾಗಿದೆ ಎಂದು ನನ್ನ ಅಭಿಪ್ರಾಯ.*

ವೇದಾಂತಗಳು ಎಂದರೆ ಉಪನಿಷತ್ತುಗಳು. ಅವುಗಳಲ್ಲಿ ಬ್ರಹ್ಮಜ್ಞಾನದ ಫಲವನ್ನು ಕುರಿತು ಹೇಳಿರುತ್ತದೆ. ಬ್ರಹ್ಮವು ನಮ್ಮೆಲ್ಲರ ಹೃದಯದಲ್ಲಿಯೇ ಇದ್ದುಕೊಂಡಿರುವ ಸರ್ವಸಾಕ್ಷಿಯಾದ ಆತ್ಮನಾಗಿದೆ. ಅದನ್ನು ಅರಿತುಕೊಳ್ಳುವದರಿಂದ ಪರಮಪುರುಷಾರ್ಥವಾದ ಮೋಕ್ಷವು ದೊರಕುತ್ತದೆ–ಎಂಬುದು ಉಪನಿಷತ್ತುಗಳ ಉಪದೇಶ.

ಬ್ರಹ್ಮಜ್ಞಾನವೆಂದರೆ ಬುದ್ಧಿಶಕ್ತಿಯಿಂದ ಸಂಪಾದಿಸಿಕೊಳ್ಳುವ ಒಂದಾನೊಂದು ತಿಳಿವಳಿಕೆಯಲ್ಲ. ನಮ್ಮ ಆತ್ಮನು ನಮಗಿಂತ ಬೇರೆಯಲ್ಲವಾದರೂ ಅದನ್ನು ಬೇರೊಂದು ವಸ್ತುವೆಂದು ಭಾವಿಸಿಕೊಂಡು ನಾವು ಹೊರಗೇ ಅದನ್ನು ಹುಡುಕುತ್ತಿರುತ್ತೇವೆ. ಹೊರಗಿನ ಸಾಧ್ಯಸಾಧನಗಳ ಪ್ರಪಂಚದಲ್ಲಿ ವಿರಕ್ತಿಯಿಂದ ಯಾವನು ಪ್ರತ್ಯಗ್ದೃಷ್ಟಿ ಎಂಬ–ತನ್ನೊಳಗೆ ನೋಡಿಕೊಳ್ಳುವ–ಒಳನೋಟವನ್ನು ಅಳವಡಿಸಿಕೊಂಡು ಗುರುಗಳ ಬೋಧೆಯಂತೆ ತನ್ನಲ್ಲಿ ತಾನು ನೋಡಿಕೊಳ್ಳುತ್ತಾನೋ ಅವನಿಗೆ ಮಾತ್ರವೇ ಅನುಭವರೂಪವಾದ ಬ್ರಹ್ಮಜ್ಞಾನವು ಆಗುತ್ತದೆ.

ವೇದಾಂತಜ್ಞಾನವು ಪುಸ್ತಕಜ್ಞಾನವಲ್ಲ, ಒಬ್ಬರೊಡನೆ ಮಾಡುವ ಒಣ ಚರ್ಚೆಯಿಂದ ಸಿಕ್ಕುವದಲ್ಲ. ಶಾಂತಿ, ದಾಂತಿ, ಉಪರತಿ, ತಿತಿಕ್ಷೆ, ಶ್ರದ್ಧೆ, ಸಮಾಧಾನ– ಎಂಬ ಆರು ಸಾಧನಗಳಿಂದ ತನ್ನಲ್ಲಿಯೇ ಪರಮಾತ್ಮನನ್ನು ಕಂಡುಕೊಳ್ಳುವ ವಿದ್ಯೆ, ಅದು. ವೇದಾಂತವಿಚಾರವನ್ನು ಮಾಡುವ ಶಕ್ತಿ ಸಾಲದೆ ಇರುವವರು ಸರ್ವಾತ್ಮನಾದ ಆ ಭಗವಂತನನ್ನು ಉಪಾಸನೆಮಾಡುವದನ್ನಾದರೂ ಅಭ್ಯಾಸಮಾಡಬೇಕು. ಅದಕ್ಕೂ ಶಕ್ತಿಯಿಲ್ಲದವರು ಮೊದಲು ಶ್ರದ್ಧೆಯಿಂದ ಕರ್ಮಯೋಗವನ್ನು ಆಚರಣೆ ಮಾಡಬೇಕು. ನೀವು ಕೇಳಿರುವ ಪ್ರಶ್ನೆ ಬಲು ದೊಡ್ಡದು. ಬಹಳ ಸಂಕ್ಷೇಪವಾಗಿ ಉತ್ತರವನ್ನು ಬರೆದಿರುತ್ತೇನೆ. ಭಕ್ತಿಯಿಂದ ಭಗವನ್ನಾಮವನ್ನು ಜಪಿಸಿರಿ, ಸತ್ಸಂಗವನ್ನು ಮಾಡಿರಿ; ಆಗ ನಿಮಗೆ ಸರಿಯಾದ ವೇದಾಂತ ವಿಚಾರದ ಹಾದಿ ಗೋಚರವಾಗುವದು.

## 185. ಸತ್ಸಂಗವೂ ಪರಮಾತ್ಮನ ಧ್ಯಾನವೂ

### (ಫೆಬ್ರವರಿ 1962)

*ತಾಯೀ, ನಿಮ್ಮ ಪತ್ರವು ತಲುಪಿರುತ್ತದೆ. ಸತ್ಸಂಗವೆಂದರೆ ಸತ್ಪುರುಷರ ಹತ್ತಿರವೇ ಇರುವದೆಂದು ಅರ್ಥವಲ್ಲ. ಹತ್ತಿರವಿರುವವರಲ್ಲಿಯೂ ಕೆಲವರಿಗೆ ಅವರಲ್ಲಿ ಗೌರವವು ಹುಟ್ಟದೆ ಇರಬಹುದು. ನೀವು ಇದ್ದಲ್ಲಿಯೇ ಇದ್ದು ಏನು ಕೇಳಬೇಕೆಂದಿರುವಿರೋ ಅದನ್ನು ಮನಸ್ಸಿನಲ್ಲಿ ದೃಢವಿಶ್ವಾಸದಿಂದ ಮಾಡಿಕೊಳ್ಳಿರಿ. ಭಗವಂತನ ಕೃಪೆಯಿಂದ ನಿಮಗೆ ಇದ್ದಲ್ಲಿಯೇ ಉತ್ತರವು ದೊರಕುವದು. ಸತ್ಪುರುಷರಿಗೂ ಭಗವಂತನಿಗೂ ಭೇದವಿರುವದಿಲ್ಲ.*

ನಿಮಗೆ ಭಗವಂತನಲ್ಲಿಯೇ ಮನಸ್ಸು ಲೀನವಾಗಿರಲೆಂಬ ಇಚ್ಛೆಯಾಗಿರವದು ಒಳ್ಳೆಯದೇ ಸರಿ. ಭಗವನ್ನಾಮವನ್ನು ಜಪಿಸುತ್ತಾ, ಆತನ ಗುಣಕರ್ಮಲೀಲೆಗಳನ್ನು ಸ್ಮರಿಸುತ್ತಿದ್ದರೆ, ಕ್ರಮಕ್ರಮವಾಗಿ ಆತನಲ್ಲಿಯೇ ಮನಸ್ಸು ನಿಂತುಬಿಡುತ್ತದೆ. ಮೊದಲು ಪ್ರತಿದಿನವೂ ಭಗವಂತನ ಮಾನಸಪೂಜೆಯನ್ನು ಮಾಡುವ ಅಭ್ಯಾಸವನ್ನು ಇಟ್ಟುಕೊಳ್ಳಿರಿ. ಇದು ನಿಮ್ಮ ಇಷ್ಟಾರ್ಥವು ನೆರವೇರುವದಕ್ಕೆ ಸಹಾಯವಾಗುವದು. ನಾಮಜಪ, ನಾಮಸ್ಮರಣೆ, ನಾಮದಲ್ಲಿಯೇ ಒಂದಾಗುವದು—ಇವು ಸಾಧನಸೋಪಾನದ ಮೆಟ್ಟಿಲುಗಳು. ಶ್ರೀರಾಮನ ಕೃಪೆಯಿಂದ ನಿಮಗೆ ಇವು ಸಿದ್ಧಿಸಲಿ !

### ಧ್ಯಾನಕಾಲದಲ್ಲಿ ಕಾಣುವ ಬೆಳಕು

*ಶ್ರೀಯುತರೆ, ನಿಮ್ಮ ಪತ್ರವು ತಲುಪಿದೆ. 1956ರಿಂದಲೂ ಶಿವಮಂತ್ರವನ್ನು ಜಪಿಸುತ್ತಾ ಬಂದಿರುವದು ಅದರಿಂದ ನಿಮಗೆ ಮನಸ್ತೃಪ್ತಿ ದೊರಕಿರುವದೂ ಆನಂದದ ಸಂಗತಿ. ನಿಮಗೆ ಧ್ಯಾನಕಾಲದಲ್ಲಿ ಗುಲಾಬಿ, ಹಳದಿ, ನೀಲವರ್ಣ ವೃತ್ತಗಳಿಂದೊಡಗೂಡಿದ ಗೋಲಾಕಾರವು ಕಾಣಿಸುತ್ತದೆ ಎಂದು ಬರೆಯುತ್ತೀರಿ. ಇಂಥ ಅನುಭವವು ನನಗೆ ಇಲ್ಲವಾದರೂ ಧ್ಯಾನಕಾಲದಲ್ಲಿ ಈ ಬಗೆಯ ದೃಶ್ಯಗಳು ತೋರುವವೆಂದು ಕೇಳಿರುತ್ತೇನೆ. ಇದೊಂದು ಶುಭಚಿಹ್ನೆಯೇ ಸರಿ.*

ಊರ ಮುಂದಿನ ತೋಪನ್ನು ಕಂಡರೆ ಊರಿಗೆ ಬಂದೆವೆಂಬ ಹರ್ಷವು ತಾನೇ ಉಂಟಾಗುವಂತೆ ಇದನ್ನು ತಿಳಿಯಬೇಕು. ಈ ದೃಶ್ಯಕ್ಕೆ ಹೆಚ್ಚಿನ ಮಹತ್ತ್ವವನ್ನೇನೂ ಕೊಡದೆ ಇದಕ್ಕೆ ಆಧಾರವಾಗಿರುವ ಶಿವನನ್ನು ಮನಸ್ಸಿನಲ್ಲಿ ನಿಲ್ಲಿಸಬೇಕು. ನೀಲಲೋಹಿತನೂ ಪಿಂಗಲವರ್ಣನೂ ಆಗಿರುವ ಶಿವನ ಸಾಕಾರದರ್ಶನಕ್ಕೆ ಇದು ಮೊದಲಾಗಿರಬಹುದು. ಆದರೆ ಸರ್ವಜ್ಞನೂ ಸರ್ವೇಶ್ವರನೂ ಸಕಲರ ಅಂತರ್ಯಾಮಿಯೂ ಸರ್ವಜಗತ್ಕಾರಣನೂ ಆಗಿರುವ ಆ ಪರಮೇಶ್ವರನಲ್ಲಿ ನಿಮ್ಮ ಮನಸ್ಸು ಅಚಲವಾಗಿ ನಿಂತರೆ, ಆಗ ನಿಮಗೆ ಶಿವನ ಅನುಗ್ರಹವು ಪೂರ್ಣವಾದಂತೆ. ಆತನ ಸಗುಣರೂಪದಲ್ಲಿ ಚಿತ್ತವನ್ನು ನೆಲೆ ನಿಲ್ಲಿಸೆಂದು ನಮ್ರತೆಯಿಂದ ಪ್ರಾರ್ಥಿಸಿಕೊಳ್ಳಿರಿ.

# 186. ವೃತ್ತಾಂತಪತ್ರಿಕೆಗಳನ್ನು ಓದುವದು

## (ಮಾರ್ಚ್ 1962)

ನಿಮ್ಮ ಪತ್ರವನ್ನು ಓದಿದೆನು. *'ಈಗ ಕೆಲವು ದಿನಗಳಿಂದ ಮತದಾರರಿಗೆ ತಿಳಿವಳಿಕೆಕೊಡುವ ವಿಚಾರವೇ ಪತ್ರಿಕೆಗಳಲ್ಲಿ ಬರುತ್ತಿದೆ. ಯಾವ ಪತ್ರಿಕೆಯನ್ನು ಓದಿದರೂ ಬಗೆಬಗೆಯ ಪಕ್ಷಗಳ ದೂಷಣೆ, ಅಥವಾ ಸ್ತೋತ್ರ–ಇವುಗಳೇ ತುಂಬಿರುತ್ತವೆ. ಅವುಗಳನ್ನು ಓದಿ ದಿಕ್ಕುಕಾಣದವನಾಗಿರುತ್ತೇನೆ. ಈ ಬುದ್ಧಿಯ ವಿಭ್ರಮಣೆಗೆ ಏನು ಮಾಡಬೇಕು? ತಿಳಿಸಿರಿ'–ಎಂತ ಬರೆದಿದ್ದೀರಿ.*

ಕಲಿಗಾಲದ ರಾಷ್ಟ್ರದಾಡಳಿತದ ಪದ್ಧತಿಯೇ ಹೀಗೆ. ಹಿಂದೆ ಜನರು ತಮ್ಮನ್ನು ನೆಮ್ಮದಿಯಾಗಿಡುವ ಒಬ್ಬ ರಾಜನು ಸಿಕ್ಕಿದರೆ ಸಾಕೆಂದು ಹುಡುಕಿದರೂ ಒಬ್ಬರೂ ಆ ಕೆಲಸಕ್ಕೆ ಒಪ್ಪಲಿಲ್ಲ. ರಾಜ್ಯವಾಳುವದರಲ್ಲಿ ಆಗುವ ಪಾಪಗಳಿಗೆ ತಾವು ಹೊಣೆಯಾಗಬೇಕಾದೀತಲ್ಲ!–ಎಂಬ ಅಂಜಿಕೆಯಿಂದ ದೊಡ್ಡದೊಡ್ಡ ಧಾರ್ಮಿಕರೂ ಶೂರರೂ ಆದವರುಕೂಡ ಹಿಂಜರಿಯುತ್ತಿದ್ದರಂತೆ. ಕೊನೆಗೆ ರಾಜ್ಯಭಾರವನ್ನು ಧರ್ಮಕ್ಕನುಗುಣವಾಗಿ ಹೀಗೆ ಆಳಿದರೆ ರಾಜನಿಗೆ ಪಾಪವಿಲ್ಲ ಎಂದು ಬ್ರಹ್ಮದೇವರು ಕಟ್ಟಲೆಗಳನ್ನು ಮಾಡಿಕೊಟ್ಟರಂತೆ. ಶಾಸನ ಕ್ರಮವನ್ನು ಅನುಸರಿಸುವದೂ ಕಷ್ಟವೇ ಎಂದು ದಕ್ಷರಾದವರೂ ಈ ಕೆಲಸಕ್ಕೆ ಒಪ್ಪಲಿಲ್ಲವಂತೆ. ಕೊನೆಗೆ ಪ್ರಜೆಗಳು 'ನೀವು ಸ್ವಪ್ರಯತ್ನದಿಂದ ಕೂಡಿದಮಟ್ಟಿಗೂ ನಮ್ಮ ಯೋಗಕ್ಷೇಮ ನೋಡಿಕೊಳ್ಳಿರಿ; ನಾವು ಮಾಡಿದ ಪುಣ್ಯದಲ್ಲಿ ಕಾಲುಪಾಲನ್ನು ನಿಮಗೆ ಧಾರೆಯೆರೆಯುತ್ತೇವೆ; ಪಾಪಕ್ಕೆ ನಿಮ್ಮ ಹೊಣೆಗಾರಿಕೆಯೇನೂ ಇರುವದಿಲ್ಲ' ಎಂದು ಒಬ್ಬ ಮಹಾರಾಯನನ್ನು ಒಪ್ಪಿಸಿದರಂತೆ!

ಇದಂತಿರಲಿ. ನೀವು ಈ ವೃತ್ತಾಂತಪತ್ರಿಕೆಗಳನ್ನು–ವೃತ್ತಾಂತ ಎಂದರೆ ನಡೆದದ್ದು; ನಡೆದ ಸುದ್ದಿಯನ್ನು ತಿಳಿಯಿಸುವದನ್ನು ಬಿಟ್ಟು ಏನೇನೋ ಹರಡುತ್ತಿರುವ ಪತ್ರಿಕೆಗಳನ್ನು–ಓದಿ ನಿಮ್ಮ ಮನಸ್ಸನ್ನು ಹೊಲೆಗೆಡಿಸಿಕೊಳ್ಳುವದರಲ್ಲಿಯೇ ಏತಕ್ಕೆ ಕಾಲವನ್ನು ಹಾಕುತ್ತಿದ್ದೀರಿ? ಪರಮಾತ್ಮನ ಅಂಶದಿಂದ ಅವತರಿಸಿದ ಮಹಾತ್ಮರ ಗುಣಗಳನ್ನೂ ಅದ್ಭುತಲೀಲೆಗಳನ್ನೂ ಓದಿ ಮನಸ್ಸಿಗೆ ಏತಕ್ಕೆ ಶಾಂತಿಯನ್ನು ತಂದುಕೊಳ್ಳಬಾರದು? ಭಗವಂತನ ಅವತಾರಗಳಲ್ಲಿ ನಿಮಗೆ ಯಾವದು ಮೆಚ್ಚಾಗುವದೋ ಆ ಅವತಾರದ ನಾಮವನ್ನು ಅಡಿಗಡಿಗೆ ಸ್ಮರಿಸುತ್ತಿರಿ; ಆತನ ರೂಪವನ್ನು ಮನಸ್ಸಿನಲ್ಲಿ ಚಿಂತಿಸುತ್ತಿರಿ; ಆತನ ಲೀಲೆಗಳನ್ನು ಮನದಂದುಕೊಳ್ಳುತ್ತಾ ಇರಿ. ಇವುಗಳನ್ನು ಕುರಿತು ನಿಮ್ಮ ಮಿತ್ರರಿಗೂ ತಿಳಿಸುತ್ತಾ ಬನ್ನಿರಿ. ನಿಮ್ಮ ಸಂನಿವೇಶವು ಶಾಂತವಾಗುವದು.

ಸುಳ್ಳು, ಮೋಸ, ಕಪಟ, ಆಸೆ, ಸಿಟ್ಟು, ಅಭಿಮಾನ, ಜಂಭ–ಮುಂತಾದ ದೋಷಗಳು ನಿಮ್ಮ ಹತ್ತಿರಕ್ಕೆ ಬಂದ ಮಾತ್ರಕ್ಕೆ ಸೂರ್ಯನ ಬಿಸಿಲಿಗೆ ಕರಗುವ ಮಂಜಿನಂತೆ ಮಾಯವಾಗುವವು.

## 187. ಹಣೆಯಲ್ಲಿ ಧರ್ಮದ ಲಾಂಛನವನ್ನು ಧರಿಸುವ ಪದ್ಧತಿ

(ಏಪ್ರಿಲ್ 1962)

*ನಿಮ್ಮ ಪತ್ರವು ತಲುಪಿದೆ. ಜನರು ಬೇರೆ ಬೇರೆಯ ಹೆಸರುಗಳಿಂದ ದೇವರನ್ನು ಆರಾಧಿಸುತ್ತಾ ತಮ್ಮ ಧರ್ಮದ ಗುರುತಾಗಿ ಬೇರೆ ಬೇರೆಯ ಲಾಂಛನಗಳನ್ನು ಧರಿಸುವದರಿಂದ ಜನರ ಭಿನ್ನಾಭಿಪ್ರಾಯಗಳಿಂದ ಒಬ್ಬರನ್ನೊಬ್ಬರು ದ್ವೇಷಿಸಬಹುದು; ಇದರಿಂದ ಅನರ್ಥವೂ ಸಂಭವಿಸಬಹುದು. ಈ ಲಾಂಛನಧಾರಣೆಯ ಆವಶ್ಯಕತೆ ಇದೆಯೆ? ದೇವರು ಒಬ್ಬನೇ ಎಂದು ಏಕತ್ವವನ್ನು ತೋರಿಸುವ ಲಾಂಛನವು ಯಾವದಾದರೂ ಇದೆಯೆ?–ಎಂತ ಕೇಳಿರುತ್ತೀರಿ.*

ದೇವರು ಒಬ್ಬನೇ. ಅವನನ್ನೇ ಬಗೆಬಗೆಯ ಹೆಸರುಗಳಿಂದ ಪೂಜಿಸುತ್ತಾರೆ, ಅವನಲ್ಲಿ ಭಕ್ತಿಯನ್ನು ಬೆಳೆಯಿಸಿಕೊಂಡು ಸಂಸಾರದ ಮಾಯೆಯನ್ನು ದಾಟುವದಕ್ಕೆ ತಿಲಕ, ನಾಮ, ಗಂಧ, ವಿಭೂತಿ–ಮುಂತಾದವುಗಳನ್ನು ಧರಿಸುವದೂ ಒಂದು ಉಪಾಯ. ಈ ಮರ್ಮವನ್ನು ತಿಳಿದವರು 'ಬೇರೆಬೇರೆಯ ಊರಿಗೆ ಒಂದೇ ರೈಲಿನಲ್ಲಿ ಹೋಗುವವರನೇಕರು ಬೇರೆ ಬೇರೆ ಬೆಲೆಯ ಟಿಕೆಟುಗಳನ್ನು ಕೊಳ್ಳುವಂತೆ ಜನರು ವೇಷ, ಭೂಷಣ, ಮಾತು, ಆಚಾರ–ಮುಂತಾದವುಗಳು ಬೇರೆಯಾಗಿದ್ದರೂ ಒಬ್ಬನೇ ಭಗವಂತನ ಮೂಲಕ ತಮ್ಮತಮ್ಮ ಇಷ್ಟಾರ್ಥವನ್ನು ಪಡೆಯುತ್ತಿದ್ದಾರೆ' ಎಂದು ತಿಳಿದುಕೊಂಡು ಸಂತೋಷವನ್ನೇ ಅನುಭವಿಸುತ್ತಾರೆ. ಧರ್ಮದ ಹೆಸರಿನಲ್ಲಿ ಆಗಿರುವ ದ್ವೇಷಗಳು ಮತಲಾಂಛನ, ದೇವಸ್ಥಾನ, ಮಸೀದಿ–ಮುಂತಾದವುಗಳಿಂದಲ್ಲ, ಸ್ವಾರ್ಥಿಗಳಾದ ನಾಸ್ತಿಕರು ಇವುಗಳ ನೆಪದಿಂದ ಹೊಡೆದಾಡುತ್ತಿದಾರೆ, ಅಷ್ಟೆ.

### ಉತ್ತರಾಯಣಮಾರ್ಗ

ಉತ್ತರಾಯಣವೆಂಬುದು ಕಾಲವಾಚಕವಲ್ಲ, ಆಯಾ ದೇವತೆಗಳ ಹೆಸರು. ಭಗವಂತನ ಉಪಾಸಕರನ್ನು ಈ ದೇವತೆಗಳು 'ಉತ್ತರಾಯಣ' ಮಾರ್ಗವೆಂಬ ದೇವಮಾರ್ಗದಿಂದ ಬ್ರಹ್ಮಲೋಕಕ್ಕೆ ಒಯ್ಯುತ್ತಾರೆ ಎಂದು ಶಾಸ್ತ್ರದಲ್ಲಿ ಹೇಳಿದೆ. ಗೀತೆಯ ಮೇಲಿನ ಭಾಷ್ಯವನ್ನು ನೋಡಿರಿ. ಆಗ ನಮ್ಮ ಸಂಶಯವು ದೂರವಾಗುವದು.

ಸಾಯುವ ಕಾಲವು ಮುಖ್ಯವಲ್ಲ, ಆಗ್ಗೆ ಮನಸ್ಸು ಭಗವಂತನ ಸ್ಮರಣೆಯಲ್ಲಿದ್ದರೆ ಉತ್ತಮಗತಿಯಾಗುವದು. ಇದು ಉಪಾಸಕರ ಮಾತಾಯಿತು.

ಭಗವಂತನ ತತ್ತ್ವದ ಜ್ಞಾನವನ್ನು ಪಡೆದುಕೊಂಡು ಪರಭಕ್ತಿಯನ್ನು ಮಾಡುವವರಿಗೆ ಇಲ್ಲಿಯೇ ಆತನ ಸಾಯುಜ್ಯವು ದೊರೆತುಬಿಡುತ್ತದೆ. ಇದೇ ಸದ್ಯೋಮುಕ್ತಿ ಎಂಬುದು. ವಿವೇಕಿಗಳಾದವರು ಯಾವಾಗಲೂ ಸತ್ಕರ್ಮ, ಸತ್ಸಂಗ, ಭಗವದ್ಭಕ್ತಿ–ಇವುಗಳನ್ನು ಸಂಪಾದಿಸಿದರೆ ಅದೇ ಪರಗತಿಗೆ ಮಾರ್ಗವಾಗುವದೆನ್ನುವದರಲ್ಲಿ ಸಂಶಯವಿಲ್ಲ.

## 188. ಶಂಕರಜಯಂತಿ, ಶಂಕರಾರಾಧನೆ

### (ಮೇ 1962)

*ನಿಮ್ಮ ಪ್ರಶ್ನೆಗೆ ಉತ್ತರವನ್ನು ಬರೆಯುವುದು ಕಷ್ಟವಾಗಿದೆ. ಶ್ರೀಶಂಕರ ಭಗವತ್ಪಾದಾಚಾರ್ಯರು ಎಲ್ಲಿ ಯಾವಾಗ ಅವತರಿಸಿದರು? ಅವರು ಕಾಲವಾದದ್ದು ಯಾವಾಗ? ಅವರ ಜಯಂತಿಯನ್ನೂ ಆರಾಧನೆಯನ್ನೂ ಹೇಗೆ ಮಾಡಬೇಕು?–ಎಂಬ ಪ್ರಶ್ನೆಗಳಿಗೆ ಮುಖ್ಯವಾಗಿ ಉತ್ತರವನ್ನು ಕೇಳಿರುತ್ತೀರಿ. ಆಚಾರ್ಯರು ಒಬ್ಬ ಐತಿಹಾಸಿಕ ವ್ಯಕ್ತಿ ಎಂಬ ದೃಷ್ಟಿಯಿಂದ ಈ ಪ್ರಶ್ನೆಗಳನ್ನು ಹಾಕಿದ್ದರೆ ಐತಿಹಾಸಿಕರೇ ಇದನ್ನು ನಿರ್ಣಯಿಸಬೇಕು. ನನಗಂತೂ ಇದರ ನಿರ್ಣಯವು ಇನ್ನೂ ಆಗಿಲ್ಲ. ವೈಶಾಖ ಶುದ್ಧ 5 ದಿನ ಜಯಂತಿ, ವೈಶಾಖ ಶುದ್ಧ 12 ದಿನ ಆರಾಧನೆ–ಎಂದು ನಮ್ಮ ದೇಶದಲ್ಲಿ ಅನೇಕರು ಆಚರಿಸುತ್ತಿದಾರೆ; ದಶಮಿಯ ದಿನ ಜಯಂತಿಯನ್ನೂ ಹುಣ್ಣಿಮೆಯ ದಿನ ಆರಾಧನೆಯನ್ನೂ ಕೆಲವರು ಆಚರಿಸುತ್ತಿದಾರೆ.*

ಆಚಾರ್ಯರು ತಮ್ಮ ಭಾಷ್ಯಗಳಲ್ಲಿ ಉಪದೇಶಿಸಿರುವ ತತ್ತ್ವವು ದೇಶಕಾಲಗಳಿಗೆ ಮೀರಿದ್ದು. ಆ ತತ್ತ್ವವನ್ನು 'ಬ್ರಹ್ಮ' ಎಲ್ಲಕ್ಕೂ ದೊಡ್ಡದು ಎಂದು ಉಪನಿಷತ್ತುಗಳು ಕರೆಯುತ್ತವೆ. ಅದು ಎಲ್ಲಾ ಜೀವರುಗಳಿಗೂ ಆತ್ಮನು ಎಂದು ಸಾರುತ್ತಿವೆ. ಆ ದೃಷ್ಟಿಯಿಂದ ನೋಡುವಾಗ ಶಂಕರಾಚಾರ್ಯರು ವೈಶಾಖದಲ್ಲಿ ದೇಹಧಾರಿಗಳಾಗಿ ಕಾಲಟಿಯಲ್ಲಿ ಜನರಿಗೆ ಕಾಣಿಸಿಕೊಂಡು ಅನುಗ್ರಹಿಸಿದರೆಂಬುದು ಲೌಕಿಕದೃಷ್ಟಿ. ಅವರು 'ಅಹಂ ಬ್ರಹ್ಮಾಸ್ಮಿ' ನಾನು ಬ್ರಹ್ಮವೇ ಎಂಬ ಅನುಭವದ ತುಟ್ಟ ತುದಿಯನ್ನು ಮುಟ್ಟಿದ್ದರು. 'ತತ್ತ್ವಮಸಿ' (ನೀನು ಅದೇ ಆಗಿರುವೆ), 'ಬ್ರಹ್ಮೈವೇದಂ ವಿಶ್ವಮ್' (ಈ ಜಗತ್ತೆಲ್ಲವೂ ಬ್ರಹ್ಮವೇ) ಎಂಬುದನ್ನು ತಮ್ಮ ಅಮೋಘ ಉಪದೇಶಗಳಿಂದ ತಿಳಿಯ ಹೇಳಿದರು.

ನಿಮ್ಮ ದೇಶದಲ್ಲಿರುವ ಆಚಾರದಂತೆ ಒಂದೊಂದು ದಿನವನ್ನು ಆರಿಸಿಕೊಂಡು ಅವರ ಜಯಂತಿಯನ್ನೂ ಆರಾಧನೆಯನ್ನೂ ಆಚರಿಸುವದರಿಂದ ಪುಣ್ಯವುಂಟು. ಆದರೆ

'ನ ಜಾಯತೇ ಮ್ರಿಯತೇ ವಾ' ನಮ್ಮೆಲ್ಲರ ಆತ್ಮನು ಹುಟ್ಟುವದಿಲ್ಲ, ಸಾಯುವದೂ ಇಲ್ಲ– ಎಂಬ ಘನತತ್ತ್ವವನ್ನು ಮನದಂದುಕೊಂಡರೆ ಅದಕ್ಕಿಂತ ಹೆಚ್ಚಿನ ಜಯಂತಿಯಾಗಲಿ ಆರಾಧನೆಯಾಗಲಿ ಇರಲಾರದು.

ಜಯಂತಿಯ ದಿನದಿಂದ ಆರಾಧನೆಯ ದಿನದವರೆಗೂ ಈ ತತ್ತ್ವವನ್ನು ಬಲ್ಲವರ ಉಪದೇಶದಿಂದ ಶ್ರವಣಮಾಡಿರಿ, ನಿಮಗೆ ತಿಳಿದ ಮಟ್ಟಿಗೆ ನಿಮ್ಮ ಮಿತ್ರರಿಗೂ ತಿಳಿಯಹೇಳಿರಿ. ಅದಕ್ಕಿಂತ ಹೆಚ್ಚಿನ ಶಂಕರ ಸೇವೆ ನಿಮಗೆ ಎಂದಿಗೂ ಲಭಿಸಲಾರದು.

## 189. ಯಾವದಕ್ಕೆ ಎಷ್ಟು ಬೆಲೆ?

### (ಜೂನ್ 1962)

*ನಿಮ್ಮ ಪತ್ರವು ತಲುಪಿದೆ. ಪರಮಾರ್ಥಕ್ಕೆ ನನಗೆ ಕಾಲವು ಸಿಕ್ಕದೆ ಇರುತ್ತದೆ; ನಮ್ಮ ಕುಟುಂಬದವರು ಭಾಗಭಾಗವಾಗಿ ಹರಿದು ಹಂಚಿ ಬೇರೆ ಬೇರೆಯ ಕಡೆಗಳಲ್ಲಿ ವಾಸಮಾಡುತ್ತಿರುತ್ತಾರೆ. ದೊಡ್ಡ ಕುಟುಂಬವಾದ್ದರಿಂದ ಒಬ್ಬರಲ್ಲದಿದ್ದರೆ ಒಬ್ಬರಿಗೆ ಏನಾದರೊಂದು ತೊಂದರೆ ಇದ್ದೇ ಇರುತ್ತದೆ. ನಾನು ಬಿಡಿಯಾಗಿರುವವನೆಂದು ತಿಳಿದು ಎಲ್ಲರೂ ನನ್ನ ಸಹಾಯವನ್ನು ಕೋರುತ್ತಾ ಇರುತ್ತಾರೆ. ಹೀಗಾಗಿ ನನಗೆ ಬಿಡುವಿನ ಕಾಲವೇ ಇಲ್ಲವಾಗಿಬಿಟ್ಟಿದೆ. ಈ ಸ್ಥಿತಿಯಲ್ಲಿ ನಾನು ಪರಮಾರ್ಥಸಾಧನೆಯನ್ನು ಹೇಗೆ ಮಾಡಿಕೊಳ್ಳಲಿ? ದಯವಿಟ್ಟು ತಿಳಿಸೋಣಾಗಲಿ!– ಎಂದು ಬರೆದಿದೀರಿ.*

ಪರಮಾರ್ಥದ ಒಲವು ಬಹಳ ಜೋರಾಗಿದ್ದವರಿಗೆ ಈ ಶಂಕೆ ಹುಟ್ಟುವದಕ್ಕೆ ಕಾರಣವಿಲ್ಲ. ಮಹಾಜ್ಞಾನಿಗಳಾದ ಯಾಜ್ಞವಲ್ಕ್ಯರು ಕೂಡ ತಮ್ಮ ಕುಟುಂಬವು ದೊಡ್ಡದಾಗಿದ್ದು– ರಾಜಾಶ್ರಯ, ವಿದ್ಯಾರ್ಥಿಗಳ ಸೇವೆ, ವಿದ್ಯಾಪ್ರಚಾರಕ್ಕೆ ಸೌಲಭ್ಯ ಇಂಥ– ಪರೋಪಕಾರಕ್ಕೆ ಉತ್ತಮ ಸಂನಿವೇಶವಿದ್ದಾಗಲೂ ಬ್ರಹ್ಮಚಿಂತನೆಗಾಗಿಯೇ ಮೀಸಲಾಗಿರುವ ಪಾರಮಹಂಸ್ಯವನ್ನು ಸ್ವೀಕರಿಸಿದರು– ಎಂಬುದನ್ನು ಮನಸ್ಸಿಗೆ ತಂದುಕೊಳ್ಳಿರಿ. ಆಗ ನಿಮಗೆ ಯೋಗ್ಯವಾದ ಉತ್ತರವು ದೊರಕುತ್ತದೆ.

ಆಲಸ್ಯದಿಂದ ಕಾಲವನ್ನು ಕಳೆಯುವದಕ್ಕಿಂತ ಕರ್ತವ್ಯಪಾಲನೆಗೆ ಹೆಚ್ಚಿನ ಸ್ಥಾನವನ್ನು ಕೊಡಬೇಕು. ಕುಟುಂಬರಕ್ಷಣೆ, ಆಶ್ರಿತವಾತ್ಸಲ್ಯ, ಸ್ವದೇಶಪ್ರೇಮ– ಮುಂತಾದವುಗಳನ್ನು ಬಿಟ್ಟು ಹೇಗೊ ಹಾಗೆ ಕಾಲವನ್ನು ನೂಕುವ ಜೀವನವು ನಿಂದ್ಯವಾದದ್ದು. ವ್ಯವಹಾರದಲ್ಲಿಯೂ ಸ್ವಾರ್ಥತ್ಯಾಗ, ಕುಟುಂಬ ರಕ್ಷಣೆ, ಅದಕ್ಕಿಂತ ಮಹಾಜನರ ಸೇವೆ, ದೇಶದ ಅಭ್ಯುದಯಕ್ಕಾಗಿ ದುಡಿಯುವದು– ಇವುಗಳು ಮೇಲಿನ

ಅಂತಸ್ತಿಗೆ ಸೇರಿರುತ್ತವೆ. ಆದರೆ ವ್ಯವಹಾರದಲ್ಲಿ ವಿದ್ಯಾವಿನೋದ, ಕೀರ್ತಿಕರವಾದ ಸತ್ಕಾರ್ಯ–ಇವುಗಳಿಗಿಂತಲೂ ಸ್ವಧರ್ಮ ರಕ್ಷಣೆಯು ಹೆಚ್ಚಿನದೆನಿಸುವದು. ಧರ್ಮವಿರುದ್ಧವಾಗಿ ಮಾಡುವದು–ನಿಜವಾಗಿ ಸತ್ಕಾರ್ಯವೆನಿಸಲಾರದು. ಆದರೆ ಉತ್ತಮರೀತಿಯಿಂದ ಧರ್ಮಾರ್ಥಕಾಮಗಳನ್ನು ಸಂಪಾದಿಸಿಕೊಳ್ಳುವದಕ್ಕಿಂತಲೂ ಧರ್ಮದಿಂದ ಚಿತ್ತಶುದ್ಧಿಯನ್ನು ಸಂಪಾದಿಸಿಕೊಂಡು ತನ್ನ ಪರಮಪುರುಷಾರ್ಥಕ್ಕೆ ಬೇಕಾದ ಸಾಧನದಲ್ಲಿ ಮುಳುಗಿಬಿಡುವದು ಎಲ್ಲಕ್ಕೂ ಹೆಚ್ಚಿನದೆನಿಸುವದು.

ಈಗ ನಮಗೆ ಕುಟುಂಬಸೇವೆಗಿಂತ ಹೆಚ್ಚಿನ ಪರಮಪುರುಷಾರ್ಥದ ಒಲವು ಬಲವಾಗಿಲ್ಲದೆ ಇರಬಹುದು. ಆದ್ದರಿಂದ ನಿಮಗೆ ಆದಷ್ಟು ಬಿಡುವು ಸಿಕ್ಕುವ ಸ್ಥಲದಲ್ಲಿದ್ದುಕೊಂಡು ನಿಮ್ಮ ಕರ್ತವ್ಯವನ್ನು ಭಗವತ್ಸೇವೆ ಎಂಬ ದೃಷ್ಟಿಯಿಂದ ಮಾಡುತ್ತ ಭಗವನ್ನಾಮಜಪವನ್ನು ಬಿಡದೆ ಮಾಡುತ್ತಿರಿ. ಕಾಲಾನುಕಾಲಕ್ಕೆ ನಿಜವಾದ ಮುಮುಕ್ಷುತ್ವವು ದೊರಕುವದು.

## 190. ಗುರುಪೂರ್ಣಿಮೆ

(ಜುಲೈ 1962)

*ಬರುವ ವ್ಯಾಸಪೂರ್ಣಿಮೆಯ ದಿನ ನಾವು ಏನು ಮಾಡಬೇಕು? ನಾವು ಏನು ಮಾಡಿದರೆ ಗುರುವಿನ ಅನುಗ್ರಹವಾದೀತು?–ಎಂದು ಪ್ರಶ್ನೆಮಾಡಿ ನೀವು ಬರೆದ ಪತ್ರವು ಬಂದಿತು.*

ವ್ಯಾಸರು ಸರ್ವಜ್ಞರು; ಶ್ರೀಮಹಾವಿಷ್ಣುವಿನ ಅಂಶದಿಂದ ಅವತರಿಸಿದ ಮಹಾತ್ಮರು. ಅವರನ್ನು ಶ್ರದ್ಧಾಭಕ್ತಿಗಳಿಂದ ಪೂರ್ಣಿಮೆಯಿಂದ ಪೂಜಿಸಿರಿ. ಸಾಕ್ಷಾತ್ತಾಗಿ ವ್ಯಾಸರ ದರ್ಶನವಂತೂ ನಮ್ಮಗಳಿಗೆ ಈಗ ಆಗಿಲ್ಲ. ಆದ್ದರಿಂದ ಅವರು ಅನುಗ್ರಹಿಸಿರುವ ಮಹಾಭಾರತವೇ ಮುಂತಾದ ಗ್ರಂಥಗಳಲ್ಲಿ ಅವರನ್ನು ಆವಾಹನೆಮಾಡಿಕೊಂಡು ಭಕ್ತಿಯಿಂದ ಪೂಜಿಸಬೇಕು. ಮಹಾಭಾರತದಲ್ಲಿ ಅವರು ಬರೆದಿರುವ ಯಾವದಾದರೊಂದು ಸಾಧನಪರವಾದ ಉಪದೇಶದ ಭಾಗವನ್ನು ಓದಿ ಅಥವಾ ಬಲ್ಲವರಿಂದ ಓದಿಸಿ ಕೇಳಿ ಅರ್ಥವನ್ನು ಅನುಸಂಧಾನ ಮಾಡಬೇಕು.

ನಿಮಗೆ ಗುರುಗಳು ಆಗಲೇ ದೊರೆತಿದ್ದರೆ ಅವರನ್ನೇ ವೇದವ್ಯಾಸರೆಂಬ ಸದ್ಭಾವನೆಯಿಂದ ಪೂಜಿಸಿರಿ. ಆಗ ಗುರುಪೂರ್ಣಿಮೆಯ ಫಲವು ದೊರಕುವದು. ಗುರುವಿನಿಂದ ನಿಮಗೆ ಆಗಬೇಕಾಗಿರುವ ಅನುಗ್ರಹವು ಯಾವದೆಂಬುದನ್ನು ಮೊದಲು ನಿಶ್ಚಯಿಸಿಕೊಳ್ಳಿರಿ. ಸದ್ಗುರುವು ಸಾಕ್ಷಾದ್ಭಗವಂತನೇ; ನಿಮ್ಮ ಹೃದಯದಲ್ಲಿರುವ ಭಕ್ತಿಯ ಆಳಕ್ಕೆ ತಕ್ಕಂತೆ ಅವನ ಅನುಗ್ರಹವಾಗುತ್ತದೆ.

ಗುರುವು ನಮಗೆ ಸತ್ಪ್ರಜಾಸಂತಾನವನ್ನು ಕೊಡಬೇಕು, ಧನಸಂಪತ್ತನ್ನು ದೊರಕುವಂತೆ ಮಾಡಬೇಕು, ಆರೋಗ್ಯವನ್ನು ಕೊಡಬೇಕು, ಗ್ರಂಥಗಳನ್ನು ಓದುವ ಅಥವಾ ಉತ್ತಮಭಾಷಣಗಳನ್ನು ಮಾಡುವ ಬುದ್ಧಿಯನ್ನು ಕೊಡಬೇಕು–ಎಂಬೀ ಬಗೆಯ ಆಸೆಗಳಿದ್ದವರೇ ಬಹಳ. ಆದರೆ 'ಚಿತ್ತಶುದ್ಧಿಯಾಗಬೇಕು, ಶಮದಮಾದಿಗಳು ಅಳವಡಬೇಕು, ಭಗವಂತನಲ್ಲಿ ಭಕ್ತಿಯು ನೆಲೆನಿಲ್ಲಬೇಕು'–ಎಂಬ ನಿಷ್ಕಾಮಭಕ್ತರಿಗೆ ಮಾತ್ರ ಗುರುವಿನ ಪೂರ್ಣಾನುಗ್ರಹವಾದೀತು. ಸಂನ್ಯಾಸಿಗಳಾದ ಗುರುಗಳಿಗೆ ಪಾದಪೂಜೆ, ಭಿಕ್ಷೆ, ಕಾಣಿಕೆ–ಇವುಗಳನ್ನು ಸಲ್ಲಿಸಿದ ಮಾತ್ರದಿಂದ ನಿಮಗೆ ಅವರ ಅನುಗ್ರಹವು ದೊರಕಿತೆಂದು ಭಾವಿಸಿಕೊಳ್ಳಬೇಡಿ. ಅವರ ಪೂಜೆ ಎಂದರೆ ಅಹಂಕಾರದ ಪೂಜೆಯನ್ನು ಬಿಡುವದು, ಭಿಕ್ಷೆ ಎಂದರೆ ನಿಮ್ಮ ಮುಮುಕ್ಷುತೆಯಿಂದ ತೃಪ್ತಿಯನ್ನು ಮಾಡುವದು, ಕಾಣಿಕೆ ಎಂದರೆ ನಿಮ್ಮ ಅಹಂತೆಯನ್ನು ಪೂರ್ಣವಾಗಿ ಬಿಟ್ಟು ಅವರ ಹೃದಯಕ್ಕೆ ಮೆಚ್ಚಾಗುವದು.

## 191. ಸಾಧನದಲ್ಲಿ ಸ್ಥಿರತ್ವ

### (ಆಗಸ್ಟ್ 1962)

*ನೀವು ಬರೆದಿರುವ ಕಾಗದದಲ್ಲಿ ದೊಡ್ಡ ಸಾಧನವನ್ನು ಮಾಡುವವರಿಗೆ ಬೇಗನೆ ಸಿದ್ಧಿಯಾಗುವದೆಂತ ತಿಳಿದುಕೊಂಡಿರುವಂತೆ ಇದೆ. ಅದು ತಪ್ಪು ಭಾವನೆ. ನಿಮ್ಮ ಯೋಗ್ಯತೆಗೆ ತಕ್ಕ ಸಾಧನವನ್ನು ಆರಿಸಿಕೊಳ್ಳಿ; ಅದರಲ್ಲಿ ಸ್ಥಿರವಾಗಿ ನಿಂತು ಅಭ್ಯಾಸಮಾಡಿರಿ. ಆಗ ಅವಶ್ಯವಾಗಿ ನಿಮ್ಮ ಪ್ರಯತ್ನವು ಸಫಲವಾಗುವದು.*

ಕೆಲವರು ವಿಚಾರಕ್ಕೆ ತಕ್ಕ ಸೂಕ್ಷ್ಮಬುದ್ಧಿಯವರಾಗಿರುತ್ತಾರೆ. ಅವರು ಸದ್ಗುರುವನ್ನು ಸೇರಿ ಅನುಭವಾನುಸಾರವಾಗಿ ವಿಚಾರಮಾಡಬೇಕು. ಗುರುವು ತೋರಿಸಿದ ಮಾರ್ಗದಿಂದ ವಿಚಾರವನ್ನು ಮಾಡುತ್ತಾಹೋದರೆ, ಕೊನೆಗೆ ತತ್ತ್ವದ ಅನುಭವವು ಅವರಿಗೆ ಸಿಕ್ಕುತ್ತದೆ. ಮತ್ತೆ ಕೆಲವರು ಭಾವನಾಪ್ರಧಾನರಾಗಿರುತ್ತಾರೆ. ಅವರು ತಮ್ಮ ಅಂತಸ್ತಿಗೆ ತಕ್ಕಂತೆ ಗುರುಬೋಧೆಯನ್ನು ಪಡೆದು ಸಗುಣ ಅಥವಾ ನಿರ್ಗುಣದ ಭಾವನೆಯನ್ನು ಮಾಡಬೇಕು. ಆ ಸಾಧನದಲ್ಲಿಯೇ ನೆಲೆಯಾಗಿ ನಿಂತು ಅಭ್ಯಾಸ ಮಾಡಿದರೆ ಅವರಿಗೂ ತತ್ತ್ವಸಾಕ್ಷಾತ್ಕಾರ ವಾಗುತ್ತದೆ. ಮತ್ತೆ ಕೆಲವರು ಪ್ರೇಮಪ್ರಧಾನರಾಗಿರುತ್ತಾರೆ; ಅವರು ಜಪ, ಭಜನೆ–ಮುಂತಾದವುಗಳಲ್ಲಿ ತಮ್ಮ ಅಂತಸ್ತಿಗೆ ತಕ್ಕ ಸಾಧನವನ್ನು ಗುರುವಿನಿಂದ ಉಪದೇಶವನ್ನು ಪಡೆದು ಸ್ಥೈರ್ಯದಿಂದ ಅಭ್ಯಾಸಮಾಡಬೇಕು. ಒಬ್ಬರಿಗೆ ತಕ್ಕದ್ದು

ಇನ್ನೊಬ್ಬರಿಗೆ ತಕ್ಕದ್ದಲ್ಲ. ಆದ್ದರಿಂದ ಇಂಥ ಸಾಧನೆಯೇ ನನಗೆ ಬೇಕೆಂಬ ಹಠ ಹಿಡಿಯಬೇಡಿ. ಒಂದು ಸಾಧನದಿಂದ ಮತ್ತೊಂದಕ್ಕೆ ಬೇಗ ಬೇಗನೆ ಹಾರಿಕೊಳ್ಳಲೂ ಬೇಡಿ.

ನಿಮಗೆ ನಿಮ್ಮ ಯೋಗ್ಯತೆಯ ಅರಿವು ಇಲ್ಲದಿದ್ದರೆ, ಅಥವಾ ಸದ್ಗುರುವಿನ ದರ್ಶನವಾಗದೆ ಇದ್ದರೆ, ನಿಮ್ಮ ಇಷ್ಟದೇವರ ನಾಮವನ್ನು ಎಡೆಬಿಡದೆ ಸ್ಮರಣೆಮಾಡುತ್ತಿರಿ. ರಾಮ, ಕೃಷ್ಣ ಶಿವ–ಮುಂತಾದ ಯಾವ ನಾಮವನ್ನೇ ಆಗಲಿ ನಿರಂತರವಾಗಿ ಸ್ಮರಿಸುತ್ತಿದ್ದರೆ ನಿಮ್ಮ ಇಷ್ಟಾರ್ಥವು ಕೈಗೂಡುವದು. ಗುರುವಿನ ದರ್ಶನವೂ ನಿಮಗೆ ತಕ್ಕ ಸಾಧನದ ಲಾಭವೂ ದಕ್ಕುತ್ತದೆ.

ಆದ್ದರಿಂದ ಯಾವದಾದರೊಂದು ಸಾಧನದಲ್ಲಿ ಸ್ಥಿರವಾಗಿ ನಿಲ್ಲುವದನ್ನು ಮೊದಲು ಕಲಿತುಕೊಳ್ಳಿರಿ.

## 192. ಸದಾಚಾರ

### (ಸೆಪ್ಟೆಂಬರ್ 1962)

*ನಿಮ್ಮ ಪತ್ರವು ತಲುಪಿರುತ್ತದೆ. ಸಮಾಜವು ಮುಂದುವರಿಯುತ್ತಿರುವ ಈ ಕಾಲದಲ್ಲಿ ಹಳೆಯ ಮಡಿಮೈಲಿಗೆ, ಜಾತಿಭೇದ–ಮುಂತಾದವುಗಳನ್ನು ಈಗಲೂ ಮೆಲುಕು ಹಾಕುತ್ತಿರುವವರ ಮೂಢವಿಶ್ವಾಸಗಳಿಂದ ಎಷ್ಟೋ ಕುಟುಂಬಗಳ ಜೀವನವು ಕಷ್ಟಮಯವಾಗುತ್ತಿದೆ–ಎಂದು ನೀವು ಬರೆದಿರುವದನ್ನು ನೋಡಿ ನನಗೆ ಆಶ್ಚರ್ಯವೂ ಆಯಿತು, ನಗೆಯೂ ಬಂದಿತು. ನಿಮಗೆ ಉತ್ತರವನ್ನು ಬರೆಯಬೇಕೋ, ಬೇಡವೋ ಎಂದು ಕೂಡ ನಾನು ಯೋಚಿಸಿದೆ. ತಿಳಿದದ್ದನ್ನು ಬರೆಯುವದೇ ಯುಕ್ತವೆಂದು ಭಾವಿಸಿ ಈ ಪತ್ರವನ್ನು ಬರೆದಿರುತ್ತೇನೆ.*

ಮಡಿಮೈಲಿಗೆ, ಜಾತಿಭೇದ–ಇವುಗಳನ್ನು ಮತ್ತೊಬ್ಬರ ತೊಂದರೆಯನ್ನು ಪರಿಗಣಿಸದೆ, ಜಂಭಕ್ಕಾಗಿ ಆಚಾರದಲ್ಲಿಟ್ಟುಕೊಳ್ಳುವವರು ನಿಂದನೀಯರೇ ಸರಿ. ಶಾಸ್ತ್ರವು ದಂಭ, ಮಾನ, ಮದ, ಹಿಂಸೆ –ಮುಂತಾದ ದೋಷಗಳನ್ನು ಯಾರಲ್ಲಿದ್ದರೂ ಪಾಪವೆಂದೇ ಪರಿಗಣಿಸುತ್ತದೆ. ಆದರೆ 'ಸಮಾಜವು ಮುಂದುವರಿಯಲಿ' ಎಂದು ಸ್ವೇಚ್ಛಾಚಾರವನ್ನು ಪ್ರೋತ್ಸಾಹಿಸುವದು ಎಂದಿಗೂ ಸರಿಯಲ್ಲ. ಶೌಚ, ಆಚಾರ, ಸತ್ಯ–ಇವುಗಳನ್ನು ಬಿಡುವದು ಎಂದಿಗೂ ಮುಂದುವರಿಯುವ ಗುರುತೆನಿಸಲಾರದು.

ನಿಮ್ಮ ಕುಟುಂಬದ ಸ್ಥಿತಿಯನ್ನು ನೀವು ವರ್ಣಿಸಿರುವ ಬಗೆಯಿಂದ ನೋಡುವಲ್ಲಿ, ನಿಮ್ಮ ಮನೆಗೆ ಆಳುಕಾಳುಗಳ ಆವಶ್ಯಕತೆ ಸ್ವಲ್ಪವೂ ಇರುವಂತೆ ಕಾಣಿಸುವದಿಲ್ಲ. ಬೆಳಗ್ಗೆ ಮುಂಚಿತವಾಗಿ ಎದ್ದು ನಿಮ್ಮನಿಮ್ಮ ಕೆಲಸಗಳನ್ನು ನೀವೇ ಮಾಡಿಕೊಳ್ಳುವದರಿಂದ ಶರೀರಕ್ಕೆ

ಆರೋಗ್ಯವೂ ಅನವಶ್ಯವಾದ ದುಂದುವೆಚ್ಚದ ಮಿಗುತಾಯವೂ ಲಭಿಸುವದು. ಶುದ್ಧಾಚಾರವನ್ನು ಅನುಸರಿಸಿ ಶಾಸ್ತ್ರೋಕ್ತವಾದ ಸಂಧ್ಯಾದಿಕರ್ಮಗಳನ್ನು ಮಾಡಿಕೊಂಡು ಈಶ್ವರನಿಗೆ ನಿವೇದನ ಮಾಡಿದ ಆಹಾರಶೇಷವನ್ನು ಭುಂಜಿಸಿರೆಂದು ನಿಮ್ಮ ತಂದೆಗಳು ಹೇಳುವದು ತಪ್ಪಲ್ಲ; ನಿಮ್ಮ ಶ್ರೇಯಸ್ಸಿಗೇ ಕಾರಣ. ಗುರುಹಿರಿಯರನ್ನು ಗೌರವಿಸುವದು, ನಿಮ್ಮ ಉದ್ಯೋಗಕ್ಕೆ ಪ್ರತಿಕೂಲವಲ್ಲದ ಪೂರ್ವಾಚಾರಗಳನ್ನು ಉಳಿಸಿಕೊಂಡು ಬರುವದು–ಇವು ಇಹಪರಗತಿಗೆ ಕಾರಣವಾಗುವವು.

ನನ್ನ ಅಭಿಪ್ರಾಯವನ್ನು ನೀವು ಕೇಳಿದ್ದರಿಂದ ಸ್ವಲ್ಪದರಲ್ಲಿ ನಿಮಗೆ ಇಷ್ಟನ್ನು ಹೇಳಬಯಸುತ್ತೇನೆ; ಆಧುನಿಕ ತಿಳಿವಳಿಕೆಯನ್ನೂ ಚೆನ್ನಾಗಿ ಸಂಪಾದಿಸಿಕೊಂಡು ನಮ್ಮ ದೇಶದ ಸಂಸ್ಕೃತಿಯನ್ನೂ ಕಾಪಾಡಿಕೊಂಡು ಬರುವದೇ ಶ್ರೇಯಸ್ಕರ. ಯಾವ ಪ್ರಯೋಜನವೂ ಇಲ್ಲದೆ ಪರದೇಶದ ಆಚಾರಗಳನ್ನು ಅನುಸರಿಸುವದು ನಿಷ್ಫಲ. ಮೂಢವಿಶ್ವಾಸಗಳು ಎಲ್ಲಿದ್ದರೂ ಅವುಗಳನ್ನು ಕಿತ್ತುಬಿಸುಡುವದೇ ಯುಕ್ತ; ಆದರೆ ನೀವು ಹೇಳಿದಂಥ ನಡೆವಳಿಕೆಗಳು ಮೂಢವಿಶ್ವಾಸದ ಫಲವೊ, ಅಥವಾ ಅನುಸರಿಸುವದು ಕಷ್ಟ, ಅಥವಾ ನಿಮ್ಮ ಗೌರವಕ್ಕೆ ಕಡಿಮೆ ಎಂಬ ಕಾರಣದಿಂದ ನೀವು ಅಸಡ್ಡೆಮಾಡುತ್ತಿರುವ ಸದಾಚಾರವೊ?–ಇದನ್ನು ಮನಸ್ಸಿನಲ್ಲಿ ಒಮ್ಮೆ ಹೊರಳಾಡಿಸಿ ನೋಡಿಯೇ ಯಾವದಾದರೊಂದು ಕಾರ್ಯಕ್ಕೆ ಕೈಹಾಕುವದು ಒಳ್ಳೆಯದು.

## 193. ಪ್ರೇಮವಿವಾಹ

### (ಅಕ್ಟೋಬರ್ 1962)

*ನಿಮ್ಮ ಪತ್ರವು ತಲುಪಿರುತ್ತದೆ. ಧಾರ್ಮಿಕರಾದ ತಂದೆತಾಯಿಗಳು ಮಕ್ಕಳ ಚಿಕ್ಕವಯಸ್ಸಿನಲ್ಲಿ ಏರ್ಪಡಿಸುವ ವಿವಾಹಗಳು ಅವರ ಮನೋಭಿವೃದ್ಧಿಗೆ ಕುಂದಕವನ್ನು ತರುತ್ತವೆ ಎಂದೂ: ಜಾತಿ, ಕುಲ, ಸಾಮಾಜಿಕಸ್ಥಿತಿ, ಜಾತಕಗಳ ಕೂಟ ಮುಂತಾದ ಮೂಢವಿಶ್ವಾಸಗಳ ಫಲವಾಗಿ ನಡೆಯುವ ವಿವಾಹಗಳು ದಾಂಪತ್ಯಸುಖಕ್ಕೆ ಕಾರಣವಾಗಲಾರವೆಂದೂ ಆ ಕಾರಣದಿಂದ ತಂದೆತಾಯಿಗಳ ಆಜ್ಞೆಯನ್ನು ಮೀರಿ ಮಾಡಿಕೊಂಡ ಪ್ರೇಮವಿವಾಹಗಳಿಗೆ ಹೆಚ್ಚಿನ ಬೆಲೆಯನ್ನು ಕೊಡುವದು ತಪ್ಪೆ?–ಎಂದು ಪ್ರಶ್ನೆಯನ್ನು ಹಾಕಿ ಬರೆದಿದ್ದೀರಿ.*

ಸಾಮಾಜಿಕ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವ ಒಲವು ನನಗಿಲ್ಲ. ಏಕೆಂದರೆ ಇಂಥ ಪ್ರಶ್ನೆಗಳಲ್ಲಿವಾದ ವಿವಾದಗಳು ಬೆಳೆಯುತ್ತವೆ; ಅವುಗಳಿಗೂ ಅಧ್ಯಾತ್ಮವಿಚಾರಕ್ಕೂ ಯಾವ ಸಂಬಂಧವೂ ಇರುವದಿಲ್ಲ.

ಆದರೆ ನೀವು ಹೇಳಿರುವ ಮೂಢವಿಶ್ವಾಸಗಳು ಬಲವಾಗಿದ್ದು ನಮ್ಮ ದೇಶದಲ್ಲಿ ವಿವಾಹವಿಚ್ಛೇದಗಳು ಪ್ರಬಲವಾಗಿದ್ದವೆಂಬುದಕ್ಕಾಗಲಿ ದಾಂಪತ್ಯಸುಖವು ಜನರಿಗೆ ದೊರಕುತ್ತಿರಲಿಲ್ಲವೆಂಬುದಕ್ಕಾಗಲಿ ಅಧಾರವೇನೂ ಇಲ್ಲ. ಈಗ ಪ್ರೇಮವಿವಾಹವೆಂಬ ಹೆಸರಿನಿಂದ ಪಾಶ್ಚಾತ್ಯದೇಶಗಳಲ್ಲಿ ಆಗುತ್ತಿರುವ ವಿವಾಹಗಳು ವಿದ್ಯುದ್ವೇಗದಿಂದ ವಿಚ್ಛೇದವಾಗುತ್ತಿವೆ ಎಂದು ಇಂಗ್ಲೆಂಡು, ಅಮೆರಿಕ–ಮುಂತಾದ ದೇಶಗಳಲ್ಲಿ ನಡೆಯುತ್ತಿರುವ ಸೆನ್ಸಸ್ (ಜನಸಂಖ್ಯಾಗಣನೆ), ಪರಿಶೋಧಗಳು–ಮುಂತಾದವುಗಳಿಂದ ಗೊತ್ತಾಗುತ್ತಿದೆ. ಅಂಥ ವಿವಾಹವಿಚ್ಛೇದವನ್ನು ಅನುಭವಿಸುವ ಹೆಂಗಸರು ಮತ್ತೆಮತ್ತೆ ಮದುವೆಯಾಗುತ್ತಲೇ ಇರುವರೆಂದೂ ತಿಳಿಯಬರುತ್ತಿದೆ.

ತಂದೆತಾಯಿಗಳು ಏರ್ಪಡಿಸುವ ಧಾರ್ಮಿಕ ವಿವಾಹವು ಐಹಿಕಸುಖಕ್ಕೇ ಅಲ್ಲದೆ ಆಭ್ಯುದಯಕ್ಕೂ ಕಾರಣವಾಗುತ್ತದೆ. ದಂಪತಿಗಳು ಪರಸ್ಪರಸಹಕಾರದಿಂದ ಪರಲೋಕಸುಖಕ್ಕೂ ಮೋಕ್ಷಕ್ಕೆಕೂಡ ಸಾಧನಗಳನ್ನು ಸಂಪಾದಿಸಿಕೊಳ್ಳುವದಕ್ಕೆ ಅವಕಾಶವಿದೆ ಎಂಬುದು ಅನುಭವದಿಂದ ಗೊತ್ತಾಗುತ್ತದೆ.

ಸ್ತ್ರೀಯರ ಪಾವಿತ್ರ್ಯ, ಸಂತತಿಯ ಪರಿಶುದ್ಧಿ, ಧರ್ಮದ ಅಭಿವೃದ್ಧಿ, ಚಿತ್ತ ಶುದ್ಧಿಯಿಂದ ಅಧ್ಯಾತ್ಮವಿಚಾರಕ್ಕೆ ಯೊಗ್ಯತೆಯನ್ನು ಸಂಪಾದಿಸಿಕೊಳ್ಳುವದು–ಇವುಗಳು ಯಾವ ಬಗೆಯ ವಿವಾಹದಿಂದ ಹೆಚ್ಚಾಗಿ ಸಿಕ್ಕುವ ಸಂಭವವಿದೆ ಎಂಬುದನ್ನು ಶಾಂತವಾದ ಮನಸ್ಸಿನಿಂದ ನೀವೇ ಯೋಚಿಸಿನೋಡಿ. ಈ ವಿಷಯದಲ್ಲಿ ನಿಮಗೆ ಮತ್ತೊಮ್ಮೆ ಬರೆಯಬೇಕೆಂದಿರುತ್ತೇನೆ.

## 194. ದೆವ್ವಗಳ ಕಾಟ

(ನವಂಬರ್ 1962)

*ನಿಮ್ಮ ಪತ್ರವು ತಲುಪಿರುತ್ತದೆ. ದೆವ್ವಗಳಲ್ಲಿ ನಂಬಿಕೆಯಿರುವದು ಸರಿಯೆ, ಅಲ್ಲವೆ?–ಎಂಬುದನ್ನು ಇಲ್ಲಿ ನಾವು ಚರ್ಚಿಸುವದಿಲ್ಲ. ದೆವ್ವದ ಕಾಟವೆಂಬುದು ಒಂದು ಮನೋರೋಗ ಮಾತ್ರ ಎಂದು ಕೆಲವರು ಅಭಿಪ್ರಾಯಪಡುತ್ತಾರೆ; ಆಶಾಗ್ರಸ್ತರಾದವರು ಹಲವು ಕಾರಣಗಳಿಂದ ಪಿಶಾಚಿಗಳಾಗಿ ಜನರನ್ನು ಕಾಡುತ್ತಾರೆ ಎಂದು ಜನ್ಮಾಂತರವನ್ನು ನಂಬುವವರು ಹೇಳುತ್ತಾರೆ. ಇದು ಪ್ರಕೃತವಲ್ಲ. ಎಂಥವರ ಮನಸ್ಸು ಈ 'ದೆವ್ವದ ಕಾಟಕ್ಕೆ' ವಶವಾಗುತ್ತದೆ? ಅದಕ್ಕೆ ಸಿಕ್ಕಿದವರು ಏನು ಮಾಡಬೇಕು? ಮಿಕ್ಕವರು ಅದಕ್ಕೆ ಸಿಕ್ಕದಂತೆ ಯಾವ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು?–ಎಂಬುದೇ ಎಲ್ಲರಿಗೂ ಬೇಕಾದ ಪ್ರಶ್ನೆ.*

'ದೆವ್ವಹಿಡಿದವರನ್ನು' ಗದರಿಸುವದು, ಅವರ ಸಮೀಪದಲ್ಲಿ ಮನಸ್ಸಿಗೆ ವಿಕ್ಷೋಭವನ್ನುಂಟುಮಾಡುವ ಮಾತುಗಳನ್ನಾಡುವದು, ಕಾರ್ಯಗಳನ್ನು ಮಾಡುವದು—ಇವುಗಳಿಂದ ಪ್ರಯೋಜನವಿಲ್ಲವೆಂಬುದಿಷ್ಟೇ ಅಲ್ಲ; ಆ ಪಿಶಾಚಗ್ರಸ್ತರಿಗೆ ಹೆಚ್ಚಿನ ಅಪಕಾರವನ್ನೇ ಮಾಡಿದಂತೆ ಆಗುತ್ತದೆ. ಹೀಗೆ ಗ್ರಹಗ್ರಸ್ತರಾದವರಿರುವ ಮನೆಯವರೆಲ್ಲರೂ ಮನಸ್ಸನ್ನು ಅತ್ಯಂತ ಶುಚಿಯಾಗಿಟ್ಟುಕೊಂಡಿರಬೇಕು; ಅಸದ್ವಿಷಯಗಳ ಸಂಭಾಷಣೆಯನ್ನು ಎಂದಿಗೂ ಮಾಡಬಾರದು. ನಾಟಕ, ಸಿನೆಮ, ಕಾದಂಬರಿಗಳು—ಇವುಗಳಲ್ಲಿ ತಾವು ಕಂಡುಕೇಳಿರುವ ಅದ್ಭುತಚರಿತ್ರೆಗಳನ್ನು ಎಂದಿಗೂ ಮಾತಿನಲ್ಲಿ ಪ್ರಸ್ತಾಪಿಸಬಾರದು. ಇವೆಲ್ಲವನ್ನೂ ಬಿಟ್ಟು ಶುಚಿಯಾಗಿ ತಮ್ಮತಮ್ಮ ಮತಾಚಾರಕ್ಕೆ ತಕ್ಕ ಕರ್ಮಗಳನ್ನು ಮಾಡಬೇಕು. ಭಗವಂತನ ನಾಮಸ್ಮರಣೆ, ಭಜನೆ, ಕೀರ್ತನೆ, ಪುರಾಣ ಶ್ರವಣ—ಮುಂತಾದವುಗಳನ್ನು ಅಂಥವರ ಸಮೀಪದಲ್ಲಿ ನಡೆಯಿಸಬೇಕು.

ಅಂತಃಕರಣವೆಂಬುದು ಒಂದು ಬಹುಸೂಕ್ಷ್ಮ ರಚನೆಯುಳ್ಳ ಯಂತ್ರದಂತೆ ಇರುತ್ತದೆ. ಒಳಗಿನ ಅಥವಾ ಹೊರಗಿನ ದುರ್ವ್ಯಾಪಾರಗಳಿಂದ ಅದಕ್ಕೆ ಒಮ್ಮೆ ಧಕ್ಕೆಯಾಗಿಬಿಟ್ಟರೆ, ಅದನ್ನು ಸರಿಪಡಿಸುವದು ಬಹಳ ಕಷ್ಟವಾಗುತ್ತದೆ. ಸದಾಚಾರ, ಸದ್ವಿಚಾರ, ಸಭ್ಯಭಾಷಣ—ಮುಂತಾದವುಗಳಿಂದ ಅದಕ್ಕೆ ಹೆಚ್ಚಿನ ಬಲವೂ ಧೈರ್ಯವೂ ಬರುತ್ತದೆ. ಮುಖ್ಯವಾಗಿ ಭಗವಂತನ ಸ್ಮರಣೆ, ಭಗವತ್ತತ್ತ್ವದ ವಿಚಾರ, ಭಗವನ್ನಾಮ ಕೀರ್ತನೆ—ಮುಂತಾದವುಗಳು ಇರುವಲ್ಲಿ ಯಾವ ಭೀತಿ ಶಂಕೆಯೂ ನಿಲ್ಲುವದಿಲ್ಲ.

ಆರ್ತರು, ವಿಷಣ್ಣರಾದವರು, ಶಿಥಿಲಮನಸ್ಸಿನಲ್ಲಿರುವವರು, ಭೀತಿಶಂಕೆಯವರು ನಾರಾಯಣ! ಕೃಷ್ಣ! ಹರೇ! ರಾಮ! ಶಿವ!— ಮುಂತಾದ ನಾಮಗಳ ಕೀರ್ತನೆಯನ್ನು ಮಾಡಿದರೆ ಅವರಿಗೆ ಸುಖಶಾಂತಿಗಳು ದೊರಕುವವು. ಅವರ ಸಂಪರ್ಕದಲ್ಲಿರುವವರಿಗೂ ಇಹಪರಸುಖವು ಕಟ್ಟಿಟ್ಟಬುತ್ತಿಯಾಗುವದು.

## 195. ನಾಸ್ತಿಕ್ಯ

(ಡಿಸೆಂಬರ್ 1962)

*ಈಶ್ವರನಿಲ್ಲ, ಪರಲೋಕವಿಲ್ಲ, ಜನ್ಮಾಂತರಗಳೆಂಬುದು ಸುಳ್ಳು—ಎಂದು ಜನರಿಗೆ ಬೋಧೆಯನ್ನು ಮಾಡುವವರು ನಿಮ್ಮ ಪ್ರಾಂತದಲ್ಲಿ ಹೆಚ್ಚಾಗುತ್ತಿದಾರೆಂದು ಬರೆದಿದ್ದೀರಿ. ಕೆಲವರಿಗೆ ಈಗಿನ ವಿದ್ಯಾಭ್ಯಾಸದ ಫಲವಾಗಿ ಇಂಥ ಮನೋಭಾವವು ಬಂದಿರುತ್ತದೆ. ಮತ್ತೆ ಕೆಲವರಿಗೆ*

*ಸರಿಯಾದ ತಿಳಿವಳಿಕೆಯನ್ನು ಹೇಳುವವರಿಲ್ಲದೆ ಸ್ವೇಚ್ಛಾಪ್ರವೃತ್ತಿಯೇ ಮೈಯುಂಡುಕೊಂಡು ಬಿಟ್ಟಿರುತ್ತದೆ. ಅಂಥವರಿಗೆ ಮನಸ್ಸಿನಲ್ಲಿ ಆಗಾಗ್ಗೆ ಅಂಜಿಕೆಯು ತಲೆದೋರುತ್ತಿರುತ್ತದೆ. 'ನಾನು ಈವರೆಗೆ ಹೇಗೋ ಕಾಲವನ್ನು ಹಾಕಿದೆನು; ನಿಜವಾಗಿಯೂ ಈಶ್ವರನಿದ್ದರೆ, ಲೋಕಾಂತರವೂ ಜನ್ಮಾಂತರವೂ ಇದ್ದರೆ, ನನ್ನ ಕರ್ಮಗಳಿಗೆ ಯಾವ ದುಷ್ಫಲವಾಗುವದೊ!' ಎಂಬ ಅಂಜಿಕೆಯು ಅವರನ್ನು ಬಾಧಿಸುತ್ತಿರುತ್ತದೆ. ಅವರು ತಮ್ಮ ನಿಜಸ್ಥಿತಿಯನ್ನು ಒಪ್ಪಿಕೊಳ್ಳಲಾರದೆ 'ಈಶ್ವರನಿಲ್ಲ, ಲೋಕಾಂತರವಿಲ್ಲ, ಜನ್ಮಾಂತರವಿಲ್ಲ, ಶಾಸ್ತ್ರಗಳನ್ನು ನಂಬಬಾರದು!' ಎಂಬ ಕೂಗನ್ನು ಎಬ್ಬಿಸಿ ತಮಗೆ ತಾವು ಧೈರ್ಯವನ್ನು ತಂದುಕೊಳ್ಳುವದಕ್ಕೂ ಮತ್ತೊಬ್ಬರು ತಮ್ಮನ್ನು ನೋಡಿ ಹಾಸ್ಯ ಮಾಡದೆ ಇರುವದಕ್ಕೂ ಆ ಕೂಗನ್ನು ಸಹಾಯವಾಗಿ ಉಪಯೋಗಿಸಿಕೊಳ್ಳುತ್ತಿರುತ್ತಾರೆ.*

ಆಸ್ತಿಕರಾದವರು ಇಂಥ ಜನರನ್ನು ನೋಡಿ ತಮ್ಮ ಶ್ರದ್ಧೆಯನ್ನು ಸಡಿಲಿಸಬಾರದು; ಶಾಸ್ತ್ರದೃಷ್ಟಿಯ ಅವಲಂಬನೆ, ಈಶ್ವರನ ಅಸ್ತಿತ್ವದಲ್ಲಿ ನಂಬಿಕೆ–ಇವುಗಳಿಂದ ತಮಗೆ ಆಗುತ್ತಿರುವ ಲಾಭವನ್ನು ಕಳೆದುಕೊಳ್ಳಬಾರದು. ಮನುಷ್ಯನಿಗೆ ಅಭಯ, ಚಿತ್ತಶುದ್ಧಿ, ಈಶ್ವರಭಕ್ತಿ, ಜ್ಞಾನವೈರಾಗ್ಯಗಳ ಬೆಂಬಲ–ಇವುಗಳಿಂದ ಆಗುವ ಫಲವು ಈ ಲೋಕದಲ್ಲಿಯೇ ಪ್ರತ್ಯಕ್ಷವಾಗಿ ಆಗುತ್ತಿರುವಾಗ, ಇವುಗಳನ್ನು ಕುತರ್ಕಕ್ಕೆ ಗುರಿಮಾಡಿ ಆತ್ಮವಂಚನೆಯನ್ನು ಮಾಡಿಕೊಳ್ಳಬಾರದು; ಹೃದಯಕ್ಕೆ ಶಾಂತಿಯನ್ನು ಕೊಡುವ ಅಧ್ಯಾತ್ಮಸಾಧನಗಳನ್ನು ತರ್ಕಕ್ಕೆ ವಿಷಯವಾಗಿ ಮಾಡಿಕೊಳ್ಳುವವರು, ಸುಂದರವಾದ ಚಿತ್ರದ ಸೊಬಗನ್ನು ತಿಳಿಯುವದಕ್ಕೆಂದು ಮೂಗಿನಿಂದ ಮೂಸಿನೋಡುವ ಮೂರ್ಖರಾಗುವರು. ಆತ್ಮ, ಈಶ್ವರ–ಮುಂತಾದವುಗಳ ಸಿದ್ಧಿಯು ಯುಕ್ತಿಯುಕ್ತವಾಗಿಲ್ಲವೆಂದೇನೂ ನನ್ನ ಅಭಿಪ್ರಾಯವಲ್ಲ. ನಮ್ಮೆಲ್ಲರ ಆತ್ಮನೇ ಪರಮೇಶ್ವರನಾಗಿರುತ್ತಾನೆಂಬ ವೇದಾಂತಸಿದ್ಧಾಂತವು ಉತ್ತಮತರ್ಕಕ್ಕೆ ಹೊಂದುಗೆಯಾಗಿಯೇ ಇದೆ. ಆದರೂ ನಮಗೆ ಯಾವ ತರ್ಕವೂ ಹೊಳೆಯದೆ ಇದ್ದಮಾತ್ರದಿಂದ ಶ್ರದ್ಧಾಭಕ್ತಿಗಳನ್ನೇಕೆ ಕೈಬಿಡಬೇಕು? ಭಗವಂತನ ಸಾಂನ್ನಿಧ್ಯವನ್ನು ಶ್ರದ್ಧಾಭಕ್ತಿಧ್ಯಾನಗಳಿಂದ ಅರಿತುಕೊಳ್ಳಬಹುದು. ಅದರ ಫಲವನ್ನು ನೀವೂ ಅನುಭವಿಸಿ ನಿಮ್ಮ ಸುತ್ತಲಿರುವವರಿಗೂ ಹಂಚಬಹುದು.

ಅಚಲಶ್ರದ್ಧೆಯಿಂದ ಸನ್ಮಾರ್ಗವನ್ನವಲಂಬಿಸಿರಿ. ಈಶ್ವರನ ಕೃಪೆಯಿಂದ ನಿಮ್ಮ ಸಾಧನವು ಕೈಗೂಡಿ ನಾಸ್ತಿಕರಮೇಲೂ ನಿಮ್ಮ ವರ್ಚಸ್ಸಿನ ಪ್ರಭಾವವು ಕಾಲಕ್ರಮದಲ್ಲಿ ಆಗುವದೆಂಬುದರಲ್ಲಿ ಸಂಶಯವಿಲ್ಲ.

## 196. ಆಪತ್ಕಾಲದಲ್ಲಿ ಏನು ಮಾಡಬೇಕು?

**(ಜನವರಿ 1963)**

*ನಿಮ್ಮ ಪತ್ರವು ತಲುಪಿದೆ. ಚೀನದೇಶದವರ ದಂಡಯಾತ್ರೆಯಿಂದ ಭಾರತ ದೇಶದವರೆಲ್ಲರ ಮನಸ್ಸೂ ಈಗ ತಲ್ಲಣಿಸುತ್ತಿದೆ. 'ದೇಶರಕ್ಷಣೆಗೆ ಸಹಾಯ ಮಾಡಿರಿ!' ಎಂದು ಸರಕಾರದವರೂ ಜನನಾಯಕರುಗಳೂ ಕರೆಯನ್ನು ಕೊಡುತ್ತಿದಾರೆ. ರಕ್ಷಣೆಗೆ ಧನ ಬೇಕು. ದಂಡಿನ ಸಹಾಯವು ಬೇಕು, ಶಸ್ತ್ರಾಸ್ತ್ರಗಳು ಬೇಕು, ದೇಶಭಕ್ತಿಯನ್ನು ಪ್ರೋತ್ಸಾಹಿಸುವ ಭಾಷಣಗಳೂ ಕವಿತೆಗಳೂ ಬೇಕು. ಆದರೆ ವಯಸ್ಸು ಮೀರಿರುವ ವೃದ್ಧರೂ, ಎಳೆಯ ಹುಡುಗರೂ ಈ ಕಾರ್ಯದಲ್ಲಿ ಯಾವ ಸಹಾಯವನ್ನು ಮಾಡಲಾದೀತು? ಸ್ತ್ರೀಯರು ಏನು ಮಾಡಲಾದೀತು? ವಿದ್ಯಾಭ್ಯಾಸದಲ್ಲಿ ಮುಂದುವರಿಯದೆ ಇರುವ ಜನರು ಏನು ಮಾಡಬೇಕು? ಈ ವಿಷಯಕ್ಕೆ ನಿಮ್ಮ ಅಭಿಪ್ರಾಯವನ್ನು ಕೊಡಿರಿ–ಎಂತ ಬರೆದಿರುತ್ತೀರಿ.*

ಈಗ ಎಲ್ಲರಿಗೂ ಆತ್ಮರಕ್ಷಣೆ ಅತ್ಯವಶ್ಯವಾಗಿದೆ. ಮತ್ತು ಎಲ್ಲರಿಂದಲೂ ಅದನ್ನು ಮಾಡಿಕೊಳ್ಳುವದಕ್ಕೆ ಸಾಧ್ಯವಿದೆ. ಹಿತಮಿತವಾದ ಆಹಾರವಿಹಾರಗಳು, ಶರೀರವ್ಯಾಪಾರ, ನಿದ್ರೆ–ಇವುಗಳನ್ನು ಮೊದಲು ಅನುಸರಿಸಬೇಕು. ಅನವಶ್ಯವಾದ ವೆಚ್ಚವನ್ನು ಮಾಡದೆ, ಮೋಹಾದಿಗಳಿಗೆ ಎಡೆಗೊಡುವ ಕೆಲಸಗಳನ್ನು ಅನುಸರಿಸದೇಇರುವದು ಎಲ್ಲರಿಗೂ ಶಕ್ಯ. ಮನಸ್ಸಿಗೆ ಅಂಜಿಕೆಯನ್ನುಂಟುಮಾಡುವ ಮನೋವಾಕ್ಕಾಯಗಳ ವ್ಯಾಪಾರವನ್ನು ಬಿಟ್ಟು ಬಿಡಬೇಕು. ಕೈಯಲ್ಲಿ ಸಾಗುವವರು ಆಹಾರವನ್ನು ಬೆಳೆಯಬೇಕು. ವರ್ತಕರು ಧರ್ಮದಿಂದ ವಾಣಿಜ್ಯವನ್ನು ಮಾಡಬೇಕು, ಸರ್ವರೂ ಪಾಪಾಚರಣೆಯನ್ನು ಬಿಡಬೇಕು.

ಇಂಥ ಒಳ್ಳೆಯ ನಡತೆಗೆ ಆಧಾರವಾದದ್ದು ಭಗವಂತನ ಅನುಗ್ರಹ, ಅಶಕ್ತರೂ ಸಶಕ್ತರೂ ವಿದ್ಯಾವಂತರೂ ಸಾಮಾನ್ಯವಾದ ತಿಳಿವಳಿಕೆಯವರೂ ಮುದುಕರೂ, ಹುಡುಗರೂ, ಗಂಡಸರೂ, ಹೆಂಗಸರೂ ಎಲ್ಲರೂ ಭಗವಂತನಕಡೆಗೆ ಮನಸ್ಸನ್ನು ಹೊರಳಿಸಬೇಕು. ತಾವು ಯಾವ ಕೆಲಸದಲ್ಲಿದ್ದರೂ ಸದ್ಬುದ್ಧಿಯನ್ನು ಕೊಡೆಂದು ಭಗವಂತನನ್ನು ಪ್ರಾರ್ಥಿಸಬೇಕು. ಭಗವಂತನ ನಾಮವನ್ನು ಸ್ಮರಿಸುತ್ತಿರುವದು ಎಲ್ಲರಿಗೂ ಸಾಧ್ಯ. ಬಿಡುವಾದಾಗ ಅನೇಕರುಸೇರಿ ಭಜನೆಯನ್ನು ಮಾಡಬೇಕು. ಸ್ತೋತ್ರಗಳನ್ನು ಕಂಠಪಾಠವಾಗಿರುವವರೂ ಓದಬಲ್ಲವರೂ ವಿಷ್ಣುಸಹಸ್ರನಾಮ, ಶಿವಸಹಸ್ರನಾಮ, ಶಿವಕವಚ, ನಾರಾಯಣಕವಚ, ರಾಮರಕ್ಷಾಸ್ತೋತ್ರ– ಇಂಥ ಸ್ತೋತ್ರಗಳನ್ನು ಹೇಳಿಕೊಳ್ಳುತ್ತಿರಬೇಕು.

ಎಲ್ಲರಿಗೂ ಸದ್ಬುದ್ಧಿಯನ್ನು ಕೊಡು–ಎಂದು ಆರ್ತರಾಗಿ ಬೇಡಿಕೊಳ್ಳಬೇಕು. ಭಗವಂತನು ಆಪತ್ತುಗಳನ್ನು ಪರಿಹರಿಸುವನು. ಸರ್ವಸಂಪತ್ತುಗಳನ್ನೂ ಕೊಡುವನು.

## 197. ಸಂನ್ಯಾಸದ ತತ್ತ್ವ

### (ಫೆಬ್ರವರಿ 1963)

*ನಿಮ್ಮ ಪತ್ರವು ತಲುಪಿರುತ್ತದೆ. ಅಧ್ಯಾತ್ಮವಿಚಾರದಲ್ಲಿಯೇ ಕಾಲವನ್ನು ಹೆಚ್ಚಾಗಿ ಕಳೆಯುತ್ತಾ ಬಂದಿರುವ ನಿಮಗೆ ಈ ಮುಪ್ಪಿನಕಾಲದಲ್ಲಿ ಸಂನ್ಯಾಸದ ಕಡೆಗೆ ಮನಸ್ಸು ತಿರುಗಿರುವದೇನೂ ಆಶ್ಚರ್ಯವಲ್ಲ. ಸಂಸಾರದ ಸುಖದುಃಖಗಳನ್ನು ಅನುಭವಿಸಿದ ಮೇಲೆ ನಮ್ಮಲ್ಲಿ ಪ್ರತಿಯೊಬ್ಬನೂ ಸಂನ್ಯಾಸಿಯಾಗಿಯೇ ಶರೀರವನ್ನುಬಿಡುವ ಗುರಿಯನ್ನು ಇಟ್ಟುಕೊಂಡಿರಬೇಕು. ಇದು ನಮ್ಮ ಜನಾಂಗಕ್ಕೇ ಸೇರಿದ್ದು.*

ಆದರೆ ಈ ಸಾಮಾನ್ಯ ನಿಯಮಕ್ಕೂ ಪ್ರತಿಷೇಧಗಳಿವೆ. ಯಾವನಿಗೆ ಪರಮ ವೈರಾಗ್ಯವು ಬಂದೊದಗಿಲ್ಲವೋ ಅವನು ಈ ತುರೀಯಾಶ್ರಮಕ್ಕೆ ಅರ್ಹನಲ್ಲ. **'ಯದಹರೇವ ವಿರಜೇತ್ ತದಹರೇವ ಪ್ರವ್ರಜೇತ್'** ಎಂದಿನ ದಿನದಲ್ಲಿ ವೈರಾಗ್ಯ ವುಂಟಾಯಿತೋ ಅಂದಿನ ದಿನವೇ ಮನೆಯನ್ನು ಬಿಟ್ಟು ಹೋಗಬೇಕು–ಎಂದು ಶ್ರುತಿ ಹೇಳುತ್ತಿದೆ. ಕೊನೆಯವರೆಗೂ ವೈರಾಗ್ಯವು ಅಷ್ಟಕ್ಕಷ್ಟೇ ಇದ್ದು ಸಂನ್ಯಾಸದ ವಾಸನೆಯಿರುವವನು ಆತುರಸಂನ್ಯಾಸವನ್ನು ತೆಗೆದುಕೊಳ್ಳಬಹುದು.

ಯಾವನಿಗೆ ಯಮನಿಯಮಾದಿಗಳನ್ನು ಪಾಲಿಸಿಕೊಂಡು ಸ್ವತಂತ್ರನಾಗಿ ಸಂಚರಿಸಿ ಭಿಕ್ಷಾವೃತ್ತಿಯಿಂದ ಜೀವಿಸುತ್ತಾ ಗುರುಗಳ ಸೇವೆಯಿಂದ ಶ್ರವಣ ಮನನಾದಿಗಳನ್ನು ಮಾಡುವ ಯೋಗ್ಯತೆಯಿಲ್ಲವೋ **ಅವನಿಗೆ ಸಂನ್ಯಾಸಕ್ಕಿಂತ ಕರ್ಮಯೋಗವೇ ಹೆಚ್ಚಿನದು.** ಕಾಲಕ್ರಮದಲ್ಲಿ ಸಂನ್ಯಾಸಕ್ಕೆ ಅವನೂ ಅರ್ಹನಾಗುತ್ತಾನೆ.

ಗೃಹಸ್ಥನಾಗಿದ್ದರೂ ಶರೀರದ ಅಂಗಗಳು ಗಳಿತವಾಗಿ ಮತ್ತೊಬ್ಬರ ಸಹಾಯವಿಲ್ಲದೆ ಸಂನ್ಯಾಸಿಯಾಗಿ ಬಾಳುವದು ಕಷ್ಟವಾದವನಿಗೆ, ಆ ಆಶ್ರಮವು ತಕ್ಕದ್ದಲ್ಲ. ಅವನಿಗೆ ಮಾನಸಸಂನ್ಯಾಸವೇ ಹೇಳಿದ್ದು. ವಯಸ್ಸಾಗುತ್ತಾ ಬಂದಂತೆಲ್ಲ ಲೋಕದ ವ್ಯವಹಾರವನ್ನು ಆದಷ್ಟುಮಟ್ಟಿಗೂ ಕಡಿಮೆಮಾಡಿಕೊಂಡು ಅಧ್ಯಾತ್ಮ ಚಿಂತನೆಯಿಂದಲೇ ಕಾಲವನ್ನು ಹಾಕುತ್ತಿರುವವನಿಗೆ ಭಗವಂತನು ಅವಶ್ಯವಾಗಿ ಜ್ಞಾನವನ್ನು ಅನುಗ್ರಹಿಸುವನು. ಇದರಲ್ಲಿ ಸಂಶಯವಿಲ್ಲ.

ಒಂದು ಮಾತನ್ನು ನೆನಪಿನಲ್ಲಿಡಬೇಕು. ಯಾವ ಕಾರಣದಿಂದಲೂ ವೈರಾಗ್ಯದ ವೇಷಭಾಷೆಗಳನ್ನು ತಳೆದು ಧರ್ಮಧ್ವಜಿಯಾಗಬಾರದು. ಅದರಿಂದ ಅಧ್ಯಾತ್ಮಜೀವನಕ್ಕೆ ಹೆಚ್ಚಿನ ಅಡ್ಡಿಯಾಗುತ್ತದೆ. ಭಗವಂತನು ಸಗುಣನೂ ನಿರ್ಗುಣನೂ ಆಗಿರುತ್ತಾನೆ. ಲೋಕವಾರ್ತೆಗೆ ಮನಸ್ಸನ್ನೇ ಹಾಕದೆ ನಿತ್ಯವೂ ತನ್ನ ಮನಸ್ಸಿನ ಒಲವಿಗೆ ತಕ್ಕಂತೆ

ಭಗವಚ್ಚಿಂತನೆಯಲ್ಲಿಯೇ ನಿರತನಾಗಿರುವವನಿಗೆ ನಿಷ್ಕ್ರಿಯಾತ್ಮನಲ್ಲಿ ನೆಲೆನಿಲ್ಲುವ ಪರಮಾರ್ಥಸಂನ್ಯಾಸವು ಅವಶ್ಯವಾಗಿ ದಕ್ಕುವದು. ಅಂಥ ಮಹನೀಯನ ಮಟ್ಟಕ್ಕೆ ವೇಷದ ಸಂನ್ಯಾಸಿಗಳು ಎಂದಿಗೂ ಏರಲಾರರು.

## 198. ಸಂನ್ಯಾಸಿಗಳ ಕರ್ತವ್ಯ

### (ಮಾರ್ಚ್ 1963)

*ತಮ್ಮ ಪತ್ರವು ತಲುಪಿರುತ್ತದೆ. ಈ ಕಷ್ಟಕಾಲದಲ್ಲಿ ಸಂನ್ಯಾಸಿಗಳಾಗಿರುವ ನಮ್ಮಂಥವರು ಏನು ಮಾಡುವದು ಸಾಧ್ಯ? ಐಶ್ವರ್ಯವಂತರು ಹಣವನ್ನು ಕೊಡಬಹುದು; ಬಲಿಷ್ಠರಾದವರು ಕಾದಾಡುವದಕ್ಕೆ ಹೋಗಬಹುದು; ಭಿಕ್ಷಾವೃತ್ತಿಯಿಂದ ಜೀವಿಸುವ ನಮ್ಮಂಥವರು ದೇಶದ ಸೇವೆಯನ್ನು ಹೇಗೆ ಮಾಡಬೇಕು? ಎಂತ ಬರೆದಿರುತ್ತೀರಿ.*

ಸಂನ್ಯಾಸಿಗಳು ಭಿಕ್ಷಾವೃತ್ತಿಯಿಂದ ದೇಹಯಾತ್ರೆಯನ್ನು ಮಾಡಿಕೊಳ್ಳಬೇಕೆಂಬುದೇನೋ, ಸರಿಯೆ, ಆದರೆ ಭಿಕ್ಷಾವೃತ್ತಿಯೇ ಅವರ ಗುರಿಯಲ್ಲ. ಈ ಜಗತ್ತೆಲ್ಲವೂ ಪರಮಾತ್ಮನ ವಿಭೂತಿಯಾಗಿರುತ್ತದೆ; ಪರಮಾತ್ಮನೇ ಜಗತ್ತಿಗೆಲ್ಲ ಆತ್ಮನಾಗಿರುತ್ತಾನೆ, ಪರಮಾತ್ಮನೊಬ್ಬನೇ ಪರಮಾರ್ಥಸತ್ಯವು ಎಂಬುದನ್ನು ಮನಗಾಣುವದಕ್ಕೆ ಅನುಸರಿಸಬೇಕಾದ ನಿವೃತ್ತಿಧರ್ಮದಲ್ಲಿ ನಿಂತಿರುವದೇ ಸಂನ್ಯಾಸಿಗಳ ಕರ್ತವ್ಯ. ಈ ಕರ್ತವ್ಯವನ್ನು ಪಾಲಿಸಿದರೆ ನಿಮ್ಮಲ್ಲಿ ಜನರಿಗೆ ಪೂಜ್ಯ ಬುದ್ಧಿ ಹುಟ್ಟುತ್ತದೆ. ಅವರೆಲ್ಲರೂ ನಿಮ್ಮಂತೆಯೇ ತಮ್ಮ ತಮ್ಮ ಕರ್ತವ್ಯವನ್ನು ಪಾಲಿಸುತ್ತಾರೆ.

ಈಶ್ವರನ ಅರ್ಚನೆಯೆಂಬ ಬುದ್ಧಿಯಿಂದ ತಮ್ಮ ಕರ್ತವ್ಯವನ್ನು ಮಾಡಬೇಕೆಂಬುದನ್ನು ನಿಮ್ಮ ನಡೆನುಡಿಗಳಿಂದ ಜನರಿಗೆ ನೀವು ತಿಳಿಯಿಸಬೇಕು. ದೇಶಕ್ಕೆ ಒದಗಿರುವ 'ಈ ಸಂಕಟಕಾಲದಲ್ಲಿ ನಿಮ್ಮನಿಮ್ಮ ತನುಮನೋಧನಗಳನ್ನು ತ್ಯಾಗ ಮಾಡಬೇಕು. ಮಹಾಜನರಿಗೆಲ್ಲ ಕಲ್ಯಾಣವಾಗಲಿ–ಎಂದು ಹಾರೈಸಬೇಕು' ಎಂಬ ಉದಾತ್ತತತ್ತ್ವವನ್ನು ನಿಮ್ಮಲ್ಲಿಗೆ ಬರುವ ಶಿಷ್ಯರಿಗೆ ಬೋಧಿಸಿರಿ. ಈಶ್ವರನು ಎಲ್ಲರ ಹೃದಯದಲ್ಲಿಯೂ ಇರುತ್ತಾನೆ–ಎಂಬ ತತ್ತ್ವವನ್ನು ಮನಸ್ಸಿಗೆ ತಂದುಕೊಳ್ಳುತ್ತಿರಿ. ಸರ್ವಪ್ರಾಣಿಗಳಲ್ಲಿಯೂ ಇರುವ ಪರಮಾತ್ಮನನ್ನು ಸರ್ವಭಾವಗಳಿಂದಲೂ ಉಪಾಸನೆ ಮಾಡಿರಿ. ನಿಮ್ಮಲ್ಲಿ ದುಂದುವೇಷದ ಬಟ್ಟೆಗಳಾಗಲಿ, ಸಾಮಗ್ರಿಗಳಾಗಲಿ ಇರಬಾರದು. ''ಕೌಪೀನವನ್ತಃ ಖಲು ಭಾಗ್ಯವನ್ತಃ'' ಎಂಬ ಸೂಕ್ತಿಯನ್ನು ಮನಸ್ಸಿನಲ್ಲಿ ಹೊರಳಾಡಿಸಿರಿ. ಶಿಷ್ಯರು ನಿಮ್ಮ ಭಿಕ್ಷಾದಿಗಳಿಗೆ ಹೆಚ್ಚಿನ ವೆಚ್ಚವನ್ನು ಮಾಡದಂತೆ ನೋಡಿಕೊಳ್ಳಿರಿ. ಜನರಿಗೆ ಧರ್ಮ ಮಾರ್ಗವನ್ನು ಅನುಸರಿಸುತ್ತಾ ಅರ್ಥಸಂಪಾದನೆಯನ್ನು ಮಾಡುವ ಮಾರ್ಗವನ್ನು

ಅನುಸರಿಸುವ ಬುದ್ಧಿ ಬರುವಂತೆ ಮಾಡಿರಿ. ಪರಿವ್ರಾಜಕರಾದ ಮೇಲೆ ನಿಮ್ಮ ದೇಹದಲ್ಲಿ ದಾರ್ಢ್ಯವಿರುವವರೆಗೆ ದೇಶಸಂಚಾರವಾಡುತ್ತಾ ಜನರಿಗೆ ಸನ್ಮಾರ್ಗಕ್ಕೆ ಆದರ್ಶಪ್ರಾಯರಾಗಿದ್ದುಕೊಂಡು 'ಆತ್ಮೈವೇದಂ ಸರ್ವಮ್, ಅಹಂ ಬ್ರಹ್ಮಾಸ್ಮಿ' ಮುಂತಾದ ವೇದಾಂತವಾಕ್ಯಗಳ ಅರ್ಥವನ್ನು ಮನಸ್ಸಿನಲ್ಲಿ ಹೊರಳಾಡಿಸುತ್ತಿರಿ. ಇದೇ ದೇಶ ಸೇವೆ, ಈಶ ಸೇವೆ.

## 199. ಅಪರಿಹಾರ್ಯರೋಗಗಳು

### (ಏಪ್ರಿಲ್ 1963)

*ನಿಮ್ಮ ಪ್ರಶ್ನೆಗೆ ಒಂದೇ ಒಂದು ಉತ್ತರವು ತೋರುತ್ತಿರುವದು. ವಿಶೇಷ ಸಂದರ್ಭಗಳಲ್ಲಿ ಹೊರತು ಸಾಮಾನ್ಯವಾಗಿ ಮನುಷ್ಯನಿಗೆ ವೈದ್ಯರ ಸಹಾಯವಿಲ್ಲದೆಯೇ ಹಿತಮಿತಮೇಧ್ಯವಾದ ಆಹಾರ, ಶುಚಿಯಾದ ನಡೆನುಡಿಗಳು–ಇವುಗಳಿಂದಲೇ ಆರೋಗ್ಯವನ್ನು ಸಂಪಾದಿಸಿಕೊಳ್ಳುವದಕ್ಕೆ ಸಾಧ್ಯವಿದೆ. ಆದರೂ ಈಗಿನ ಕಾಲದಲ್ಲಿ ವಿಲಾಸಜೀವನದ ನಿಮಿತ್ತದಿಂದಲೂ ಮನಸ್ಸಿಗೆ ಇಲ್ಲದ ಕಿರಿಕಿರಿಯನ್ನು ಹತ್ತಿಸಿಕೊಳ್ಳುವದರಿಂದಲೂ ಹೊಸಹೊಸ ರೋಗಗಳು ಉತ್ಪನ್ನವಾಗುತ್ತಿರುವವು.*

ಇನ್ನು ನಿಮ್ಮ ವಿಷಯಕ್ಕೆ ಡಾಕ್ಟರುಗಳು ಇದು ಅಪರಿಹಾರ್ಯರೋಗವೆಂದೇ ಸ್ಪಷ್ಟವಾಗಿ ಹೇಳುತ್ತಿರುವದರಿಂದ, ಈಗ ಮಾಡತಕ್ಕದ್ದು ಒಂದೇ ಉಳಿದಿರುತ್ತದೆ. ರೋಗವು ಯಾವ ಆಚಾರದಿಂದ ಮತ್ತು ಆಹಾರವಿಹಾರಗಳಿಂದ ಉಲ್ಬಣವಾಗುವದೆಂದು ನಮ್ಮ ಅನುಭವಕ್ಕೆ ಬಂದಿದೆಯೋ ಅದನ್ನು ಬಿಟ್ಟುಬಿಡುವದು. ರೋಗವು ಪಾಪದ ಫಲವೆಂದು ಶಾಸ್ತ್ರಗಳು ಹೇಳುತ್ತವೆ. ಪಾಪವು ಈ ಜನ್ಮದಲ್ಲಿ ಮಾಡಿದ್ದಾಗಿರಬಹುದು; ಹಿಂದಿನ ಜನ್ಮದಲ್ಲಿ ಮಾಡಿದ್ದಾದರೂ ಇರಬಹುದು. ಹೇಗೇ ಆಗಲಿ, ಭಗವಂತನಿಗೆ ಶರಣು ಹೋಗುವದರಿಂದ ಎಲ್ಲಾ ಪಾಪಗಳೂ ಸುಟ್ಟು ಬೂದಿಯಾಗಿವವೆಂಬುದಕ್ಕೆ ಸಂಶಯವಿಲ್ಲ. ಆದ್ದರಿಂದ ಭಗವಂತನೊಬ್ಬನೇ ಶರಣು ಎಂದು ಗಟ್ಟಿಯಾಗಿ ನಂಬಿರಿ.

ಶರೀರ, ಇಂದ್ರಿಯಗಳು, ಮನಸ್ಸು–ಇವುಗಳಿಗೆ ಯಾವ ಬಾಧೆಯುಂಟಾದರೂ ಆ ನೋವು ನಮಗೆ ಎಚ್ಚರಿಕೆಯನ್ನು ಕೊಡುವದಕ್ಕೆ ಬಂದಿದೆ ಎಂದು ತಿಳಿಯಬೇಕು. ರೋಗವು ಬಂದುಹೋಗುವಂತಿದ್ದರೆ ನಮ್ಮ ಕರ್ತವ್ಯವನ್ನು ಮರೆಯುವ ಸಂಭವವೂ ಇದೆ. ಆದರೆ ಹೀಗೆ ಮತ್ತೆಮತ್ತೆ ಅದು ಬರುತ್ತಲೇ ಇರುವದರಿಂದ ಅದು ನಮಗೆ ಬುದ್ಧಿವಾದವನ್ನು ಹೇಳುತ್ತಿದೆ, 'ಜನ್ಮವು ಶಾಶ್ವತವಲ್ಲ, ಇಷ್ಟು ಮಟ್ಟಿಗಾದರೂ ಶರೀರಾದಿಗಳು ನಿನ್ನ ಸ್ವಾಧೀನವಾಗಿರುವಾಗ ಭಗವಂತನಲ್ಲಿಯೇ ಭರವಸೆಯನ್ನು

ಇಟ್ಟುಕೊಳ್ಳುವದು ಒಳ್ಳೆಯದು' ಎಂದು ಮೇಲಿಂದ ಮೇಲೆ ಸೂಚಿಸುತ್ತಲೇ ಇದೆ ಎಂದು ತಿಳಿಯಬೇಕು.

'ಇನ್ನು ಔಷಧಿಗಳ ಸೇವನೆಯು ಸಾಕು, ಭಗವಂತನ ಮತ್ತು ಭಗವದ್ಭಕ್ತರ ಪಾದತೀರ್ಥವೇ ಔಷಧವು; ಭಗವಂತನೇ ವೈದ್ಯನು' ಎಂಬ ಭಾವನೆಯನ್ನು ಬಲಪಡಿಸಿಕೊಳ್ಳಿರಿ. ಭಗವಂತನ ನಾಮವನ್ನು ಎಡೆಬಿಡದೆ ಜಪಿಸುತ್ತಾ ಪರಿಶುದ್ಧವಾದ ಭಾವನೆಗಳಿಂದ ಮನಸ್ಸನ್ನು ನಿರ್ಮಲಗೊಳಿಸಿಕೊಳ್ಳುವದಕ್ಕೆ ಯತ್ನಿಸಿರಿ. ನಿಮಗೆ ಸನ್ಮಂಗಲವಾಗುವದು.

## 200. ಬದುಕು ನಿತ್ಯವಲ್ಲ

### (ಮೇ 1963)

*ನಿಮ್ಮ ಪತ್ರವು ತಲುಪಿದೆ. ನಿಮ್ಮ ಅಭಿಪ್ರಾಯವೇ ಬಹು ಜನರನ್ನು ಬಾಧಿಸುತ್ತಿದೆ. ಪರಮಾರ್ಥವೇನೋ ಬೇಕು, ಆದರೆ ಕರ್ತವ್ಯವು ನಮ್ಮನ್ನು ಬೆಂಬಿಡದಲ್ಲ!–ಎಂದೇ ಹಲವರು ಹಲುಬುತ್ತಿರುವರು. ಮನುಷ್ಯನಿಗೆ ಯಾವದಾದರೊಂದು ಕರ್ತವ್ಯವು ಅಂಟಿಕೊಂಡಿರುತ್ತದೆ. ಕರ್ತವ್ಯವು ಇಲ್ಲಿಗೆ ಮುಗಿಯಿತೆಂದು ಯಾರು ತಾನೆ ಹೇಳಬಲ್ಲರು? ಸಾಯುವಾಗ ಕೂಡ 'ಅಯ್ಯೋ, ನಾನು ಇದೊಂದು ಕರ್ತವ್ಯವನ್ನು ಮಾಡಲಿಲ್ಲವಲ್ಲ!' ಎಂದು ಕೊರಗುತ್ತಾ ಪ್ರಾಣವನ್ನು ಬಿಡುವದೇ ಈ ಕರ್ತವ್ಯ ಪರಾಯಣರ ಹಣೆಯ ಬರಹ!*

'ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ' ತನಗಾಗಿ ಮತ್ತೆಲ್ಲವೂ ಪ್ರಿಯವಾಗಿರುತ್ತದೆ ಎಂಬ ಶ್ರುತಿಯ ಬೋಧೆಗೆ ಕಿವಿಗೊಡುವದು ಒಳ್ಳೆಯದು. ತನ್ನ ವಿಷಯದಲ್ಲಿರುವ ದೊಡ್ಡ ಕರ್ತವ್ಯವನ್ನು ಮರೆತು ಬೇರೆಯ ಕರ್ತವ್ಯಗಳನ್ನು ಕುರಿತು ಕನವರಿಸಿಕೊಳ್ಳುತ್ತಿರುವವನು ಎಂಥ ಮೂರ್ಖನು! 'ನಾನು'–ಎಂದರೆ ಈ ಶರೀರದಲ್ಲಿರುವ ನನ್ನ ಸ್ವರೂಪವು–ಯಾವದು? ಯಾವ ಅಪರಾಧದಿಂದ ಹೀಗೆ ನಾನು ಸಂಸಾರದಲ್ಲಿ ತೊಳಲುತ್ತಿದ್ದೇನೆ?–ಎಂಬುದನ್ನು ವಿಚಾರಿಸುತ್ತಿರುವದು ನಮ್ಮ ಆದ್ಯ ಕರ್ತವ್ಯ' ಮಿಕ್ಕವು ಅದಕ್ಕೆ ಅಂಗವಾಗಿರಬೇಕಾದ ಕರ್ತವ್ಯಗಳು.

ಆಯುಸ್ಸು ಸವೆಯುತ್ತಲೇ ಇದೆ, ಹರೆಯವು ಕುಗ್ಗಿ ಮುಪ್ಪು ಸಮೀಪಿಸುತ್ತಲೇ ಇದೆ, ಕಳೆದ ದಿನಗಳು ಹಿಂದಕ್ಕೆ ಎಂದಿಗೂ ಬರಲಾರವು. ನಮ್ಮ ಸಿರಿಸಂಪತ್ತು ಎಷ್ಟು ದಿನವಿದ್ದೀತು? ಶರೀರದಲ್ಲಿರುವ ರೋಗಾದಿಗಳಿಂದಾದರೂ ಎಚ್ಚರಿಕೆಯನ್ನು ತೆಗೆದುಕೊಂಡು ಈಗಲಾದರೂ ಸತ್ಸಂಗವನ್ನು ಮಾಡಿ ಕೃತಾರ್ಥರಾಗುವದಕ್ಕೆ ಯತ್ನಿಸದೆ ಇರುವದೆ? ಇದು ಎಂದಿಗೂ ಕರ್ತವ್ಯ ಪರಾಯಣತೆ ಎನಿಸದು.

ನಿಮ್ಮ ಕರ್ತವ್ಯವನ್ನು ಪಾಲಿಸುತ್ತಿರಿ, ಅದನ್ನು ಈಶ್ವರನ ಆರಾಧನೆ ಎಂದು ಮಾಡುತ್ತಿರಿ. ಪರಮೇಶ್ವರನ ಚಿಂತೆಗೆ ಅಡ್ಡಿ ಬರುವದು ಮಾತ್ರ ಯಾವದೊಂದೂ ಕರ್ತವ್ಯವೆನಿಸಲಾರದೆಂಬುದನ್ನು ಮರೆಯದೆ ಇರಿ. ಅಖಂಡವಾಗಿ ಭಗವನ್ನಾಮವನ್ನು ಜಪಿಸುತ್ತಿರಿ. ಭಗವಂತನು ಮುಖ್ಯ ಕರ್ತವ್ಯವನ್ನು ಪಾಲಿಸುವ ಹಾದಿಯನ್ನು ನಿಮಗೆ ಬೇಗನೆ ತೋರಿಸುವನು.

## 201. ಪ್ರಾರ್ಥನೆಯನ್ನು ಹೇಗೆ ಮಾಡಬೇಕು?

**(ಜೂನ್ 1963)**

*ನಿಮ್ಮ ಪ್ರಶ್ನೆಗೆ ಬಹುಸಂಕ್ಷೇಪವಾಗಿ ಉತ್ತರವನ್ನು ಬರೆಯುತ್ತಿದೇನೆ. ಇದನ್ನು ಅನುಷ್ಠಾನಕ್ಕೆ ತಂದು ನಿಮ್ಮ ಸಂಶಯಗಳನ್ನು ತಿಳುಹಿಸಿದರೆ ಮತ್ತೆ ಬರೆಯುವೆನು.*

ಭಗವಂತನು ಎಲ್ಲೆಲ್ಲಿಯೂ ಇರುತ್ತಿದ್ದರೂ ಮೊಟ್ಟಮೊದಲು ಆತನನ್ನು ನಮ್ಮ ಹೃದಯದಲ್ಲಿ ಕಂಡುಕೊಳ್ಳಬೇಕಾಗಿರುತ್ತದೆ. ನಿಮಗೆ ಭಗವಂತನಲ್ಲಿ ಏನನ್ನು ಕೇಳಿಕೊಳ್ಳ ಬೇಕೆಂಬುದು ತಿಳಿಯದೆ ಇದ್ದರೆ 'ದೇವ, ನನಗೆ ನಿನ್ನಲ್ಲಿ ಏನನ್ನು ಬೇಡಬೇಕೆಂಬುದೂ ತಿಳಿಯಲೊಲ್ಲದು. ಆದ್ದರಿಂದ ನೀನೇ ನನಗೆ ಅದನ್ನೂ ಹೇಳಿಕೊಡಬೇಕು. ಅಜ್ಞರಿಗೆ ಜ್ಞಾನವನ್ನು ನೀನೇ ಕೊಡುವೆಯಂತೆ; ಆದ್ದರಿಂದ ನೀನೇ ನನಗೆ ಹಿತವಾದದ್ದು ಯಾವುದು? – ಎಂಬುದರ ಅರಿವನ್ನು ಅನುಗ್ರಹಿಸಬೇಕು.

ನನಗೆ ಏನು ಬೇಕಾಗಿದ್ದರೂ, ನನಗೆ ಯಾವ ತಿಳಿವಳಿಕೆ ಬೇಕಾಗಿದ್ದರೂ ಅದಕ್ಕಾಗಿ ನಿನ್ನಲ್ಲಿಯೇ ಮೊರೆಯಿಡುವಂತೆ ಕರುಣಿಸು. ಹಸುಮಗುವಿನಂತೆ ಇರುವ ನಾನು ಏನು ತಾನೆ ಬಲ್ಲೆನು? ನಾನು ನಿನ್ನ ಕಡೆಗೆ ತಿರುಗಬೇಕೆಂಬ ಬುದ್ಧಿಯನ್ನು ಕೊಟ್ಟಿರುವೆಯಷ್ಟೆ? ಈ ಬುದ್ಧಿಯು ನನ್ನನ್ನು ಬಿಟ್ಟು ಅಗಲದಿರಲಿ! ಹಸಿದ ಮಗುವಿಗೆ ಸ್ತನ್ಯವನ್ನು ಕೊಟ್ಟು ಸಂತೈಸುವ ತಾಯಿಯಂತೆ, ನೀನೇ ಮರುಕದಿಂದ ನನಗೆ ಬೇಕಾದ ಜ್ಞಾನವನ್ನೂ ಪುರುಷಾರ್ಥವನ್ನೂ ಕೊಟ್ಟು ಕಾಪಾಡಬೇಕು. ಇದಕ್ಕಿಂತ ಹೆಚ್ಚಿಗೆಯೇನೂ ನನಗೆ ತಿಳಿಯುವದಿಲ್ಲ' ಎಂದು ದಿನದಿನವೂ ಮನಸ್ಸಿನಲ್ಲಿಯೇ ಪ್ರಾರ್ಥಿಸುತ್ತಿರಿ. ನಿಮಗೆ ಕ್ಷೇಮವಾಗುವದು.

## 202. ಈಶ್ವರನಲ್ಲಿ ಅಚಲಶ್ರದ್ಧೆ

**(ಜುಲೈ 1963)**

*ನಿಮ್ಮ ಪತ್ರವು ತಲುಪಿದೆ. ಪರಮೇಶ್ವರನನ್ನು ನಂಬುವದೆಂದರೆ ಹೇಗೆ? ಎಂದು ಕೇಳಿರುತ್ತೀರಿ. ಯಾವದಾದರೂ ಹೆಚ್ಚಿನ ನಿಯಮಗಳನ್ನು ಅನುಸರಿಸುವದು, ತೀರ್ಥಯಾತ್ರೆಯನ್ನು*

*ಕೈಗೊಳ್ಳುವದು, ಅಸಾಧಾರಣವಾದ ದಾನಧರ್ಮಗಳನ್ನು ಮಾಡುವದು–ಮುಂತಾದವುಗಳನ್ನು ಅನುಷ್ಠಾನದಲ್ಲಿಟ್ಟುಕೊಂಡಾಗ ನಮಗೆ ಈಶ್ವರನಲ್ಲಿ ಶ್ರದ್ಧಾಭಕ್ತಿಗಳು ಹೆಚ್ಚಾದವೆಂದೂ ಕೆಲವರು ಭಾವಿಸುತ್ತಾರೆ. ಅವೂ ಶ್ರದ್ಧೆಗೆ ಮಾರ್ಗಗಳೇ ಸರಿ. ಆದರೆ ನಿಜವಾದ ಶ್ರದ್ಧೆ ಎಂಬುದು ಅಂತಃಕರಣಕ್ಕೆ ಸೇರಿದ್ದು; ಅದರ ಅನುಷ್ಠಾನವು ಒಂದು ದೃಷ್ಟಿಯಿಂದ ಬಹು ಸುಲಭ; ಇನ್ನೊಂದು ದೃಷ್ಟಿಯಿಂದ ಬಹಳ ಕಷ್ಟ.*

'ನನ್ನ ಈ ರೋಗವು ವಾಸಿಯಾದರೆ, ಅವಶ್ಯವಾಗಿ ದೇವರಲ್ಲಿ ನಾನು ಎಂದೆಂದಿಗೂ ಶ್ರದ್ಧೆಯನ್ನಿಟ್ಟಿರುವೆನು', 'ನನಗೆ ಈ ವ್ಯಾಪಾರದಲ್ಲಿ ಲಾಭವು ದೊರಕಿದರೆ ನಾನು ಎಂದೆಂದಿಗೂ ಈಶ್ವರನನ್ನೇ ನಂಬಿಬಿಡುತ್ತೇನೆ', 'ನನಗೆ ಈ ಪರೀಕ್ಷೆಯಲ್ಲಿ ತೇರ್ಗಡೆಯಾದರೆ ನಾನು ಪರಮೇಶ್ವರನಲ್ಲಿಯೇ ಅಚಲಶ್ರದ್ಧೆಯನ್ನಿಡುವೆನು'– ಎಂದು ಮುಂತಾದ ರೀತಿಯಲ್ಲಿ ಈಶ್ವರನಲ್ಲಿ ಕೆಲವು ಷರತ್ತುಗಳ ಮೇಲೆ ಶ್ರದ್ಧೆಯನ್ನಿಡುವದಕ್ಕೆ ಸಿದ್ಧರಾಗಿರುವವರು ಕೆಲವರು ಇದಾರೆ. 'ನನ್ನ ಮಕ್ಕಳು ಸ್ವತಂತ್ರರಾಗಿ ಬಾಳುವ ಹಾಗಾದಮೇಲೆ', ಅಥವಾ 'ನಾನು ನೌಕರಿಯಿಂದ ವಿಶ್ರಾಂತನಾದ ಮೇಲೆ', 'ನನ್ನ ಸಾಲವು ಪೂರ್ಣವಾಗಿ ತೀರುತ್ತಲೂ' ಭಕ್ತಿಮಾರ್ಗಕ್ಕೆ ತಿರುಗುವೆನು–ಎಂದು ಕಾಲಾವಧಿಯನ್ನು ಹಾಕಿಕೊಳ್ಳುವವರೂ ಇದಾರೆ. ಇಂಥವರ ಮಾರ್ಗವು ಸಂಪೂರ್ಣವಾಗಿ ಹೇಯವೆಂದೇನೂ ನನ್ನ ಅಭಿಪ್ರಾಯವಲ್ಲ. ಆದರೆ ಅಚಲಶ್ರದ್ಧೆಯ ಮಾರ್ಗವು ಇದಲ್ಲ.

'ಭಗವಂತನನ್ನು ನಂಬಿ ಕೆಟ್ಟವರಿಲ್ಲವೇ ಇಲ್ಲ. ಭಗವಂತನು ಕರುಣಾನಿಧಿ, ಪ್ರೇಮದ ಸಾಗರನು; ಅವನ ಇಚ್ಛೆಗೆ ಯಾವದೂ ತಡೆಯಾಗುವದಿಲ್ಲ. ಅವನು ನನಗೆ ಯಾವದು ಹಿತವೆಂದು ಅನುಗ್ರಹಿಸುವನೋ ಅದು ಆಗಲಿ. ನಾನು ಆತನನ್ನೇ ಸ್ಮರಿಸುತ್ತಾ ನನ್ನ ಕರ್ಮಗಳನ್ನು ಆತನ ಆರಾಧನೆಯೆಂದೇ ಮಾಡುವೆನು' ಎಂದು ಸಂಪೂರ್ಣವಾಗಿ ನಂಬಿ ತನ್ನನ್ನು ಭಗವಂತನಿಗೇ ಅರ್ಪಿಸಿಕೊಳ್ಳುವದೇ ಪೂರ್ಣವಾದ ಶ್ರದ್ಧೆ. ಆ ಅಚಲಶ್ರದ್ಧೆಯಲ್ಲಿರುವವನಿಗೆ ಯಾವ ಕೇಡೂ ಆಗುವ ಸಂಭವವಿಲ್ಲ.

ನಿಮ್ಮ ಲೌಕಿಕ ಪ್ರಯತ್ನಗಳು ಎಷ್ಟೋ ವಿಫಲವಾಗಿವೆ. ಶರೀರದ ಸ್ವಾಸ್ಥ್ಯವು ಪ್ರಯತ್ನವನ್ನು ಮಾಡಿದ ಮೇಲೂ ದೊರಕಿಲ್ಲ, ಅಲ್ಲವೆ? ಹಾಗಾದರೆ ದಯಾಘನನಾದ ಪರಮೇಶ್ವರನು ನನಗೆ ಹಿತವನ್ನೇ ಮಾಡುವನು ಎಂದು ಪೂರ್ಣವಾಗಿ ನಂಬಿ, ನಿಮ್ಮ ನಿತ್ಯಕರ್ಮದಲ್ಲಿ ತೊಡಗಿರಿ. ನಿಮಗೆ ಶ್ರೇಯಸ್ಸಾಗುವದು.

# 203. ಅಧ್ಯಾತ್ಮವಿದ್ಯೆಯ ಮಾರ್ಗ

(ಆಗಸ್ಟ್ 1963)

*ನಿಮ್ಮ ಪ್ರಶ್ನೆಗೆ ಉತ್ತರವನ್ನು ಸಂಕ್ಷೇಪವಾಗಿ ಬರೆಯುತ್ತೇನೆ. ನನ್ನ ಅಭಿಪ್ರಾಯವೇನೆಂಬುದು ನಿಮಗೆ ಇಷ್ಟರಿಂದಲೇ ಮನಸ್ಸಿಗೆ ಬರುವದೆಂದು ನಂಬಿರುತ್ತೇನೆ.*

'ಅಧ್ಯಾತ್ಮವಿದ್ಯೆ' ಎಂದರೆ ಗ್ರಂಥಗಳ ತಿಳಿವಳಿಕೆ ಹೆಚ್ಚಾಗಿರುವದೆಂದು ಭಾವಿಸಬೇಡಿರಿ. ಯಾರಾದರೂ ಉತ್ತಮವಾದ ಕಥೆಗಳನ್ನೂ ದೃಷ್ಟಾಂತಗಳನ್ನೂ ಸೇರಿಸಿ ಮಾಡಿರುವ ಭಾಷಣಗಳನ್ನು ಮತ್ತೆಮತ್ತೆ ಓದುವದೂ ಅಥವಾ ಮತ್ತೊಬ್ಬರಿಗೆ ಒಪ್ಪಿಸುವದೂ ಅಧ್ಯಾತ್ಮವಿದ್ಯೆಯಲ್ಲ. ಸ್ನಾನ, ಜಪ, ಪಾರಾಯಣ–ಮುಂತಾದವುಗಳನ್ನು ಪದ್ಧತಿಯಂತೆ ಮಾಡುವದು, ದೇವರನ್ನು ಧೂಪದೀಪನೈವೇದ್ಯಾದಿಗಳಿಂದ ಅರ್ಚಿಸುವದು–ಇವೂ ಅಧ್ಯಾತ್ಮವಿದ್ಯೆಯಲ್ಲ. ತೆಂಗಿನಕಾಯಿಗೆ ಸಿಪ್ಪೆ, ಕರಟ–ಮುಂತಾದವುಗಳಿರುವಂತೆ ಇವು ಅಧ್ಯಾತ್ಮವಿದ್ಯಾ ಪ್ರಾಪ್ತಿಯ ಹೊರಮೈಮಾತ್ರವಾಗಿವೆ. ಇದೂ ಅಲ್ಲದೆ, ಈ ಸಾಧನಗಳನ್ನು ಪದ್ಧತಿಯಂತೆ ದಿನದಿನವೂ ಮಾಡಿಮುಗಿಸುತ್ತಾಬಂದರೆ ಅದೊಂದು ಯಾಂತ್ರಿಕದಿನಚರ್ಯೆಯಾಗಿಬಿಡುವದೆಂಬ ಅಂಜಿಕೆಯೂ ಉಂಟು.

ಅಧ್ಯಾತ್ಮವೆಂದರೆ ನಮ್ಮ ಒಳಗಡೆಯಿಂದ ಅಂತಃಕರಣ ಮತ್ತು ಅದರಲ್ಲಿ ಕಂಡುಕೊಳ್ಳಬೇಕಾಗಿರುವ ಆತ್ಮತತ್ತ್ವ. ಹೊರಗಡೆಯ ಯೋಚನೆಯನ್ನು ಬಿಟ್ಟು ನಿಮ್ಮ ಒಳಗೇ ಇರುವ ಪರಮಾತ್ಮನನ್ನು ಕಾಣುವ ಹಂಬಲಿಕೆ ನಿಮಗೆ ಉಂಟಾಗಿದೆಯೆ? ಆ ಹಂಬಲಿಕೆಯನ್ನು ಸತ್ಸಂಗದಿಂದಲೂ ಸತತ ಚಿಂತನೆಯಿಂದಲೂ ಬೆಳೆಯಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿದ್ದೀರ? ಹಾಗಾದರೆ ನೀವು ಅಧ್ಯಾತ್ಮವಿದ್ಯೆಯ ಮಾರ್ಗದಲ್ಲಿ ಇರುತ್ತೀರಿ.

ನೀವು ಮಾಡುವ ಆಚಾರ, ಜಪಾದಿಸಾಧನಗಳು–ಇವುಗಳು ನಿಮ್ಮ ಹೃದಯದಲ್ಲಿ ಭಗವಂತನ ಸಾನ್ನಿಧ್ಯವನ್ನು ಅನುಭವಿಸುವದಕ್ಕೆ ಸಾಧನವಾಗಿವೆಯೆ? ನೀವು ಯಾವ ಬಾಹ್ಯವೃತ್ತಿಯಲ್ಲಿರಲಿ, ಗರ್ಭಿಣಿಯಾದವಳಿಗೆ ತನ್ನ ಹೊಟ್ಟೆಯಲ್ಲಿ ಮಗುವಿರುವದೆಂಬ ಅರಿವು ಎಡೆಬಿಡದೆ ಇರುವಂತೆ, ಹೃದಯದಲ್ಲಿರುವ ಭಗವಂತನ ಚಿಂತೆಯು ತಪ್ಪದೆ ಇದೆಯೆ? ಹಾಗಾದರೆ ಅಧ್ಯಾತ್ಮವಿದ್ಯೆಯ ಮಾರ್ಗವದು.

## 204. ಕಷ್ಟಕಾಲ

### (ಸಪ್ಟೆಂಬರ್ 1963)

ನಿಮ್ಮ ಪತ್ರವು ತಲುಪಿತು. *'ಈಗ ನನಗೆ ಕಷ್ಟಕಾಲ, ಹಣಕಾಸಿನ ಮುಗ್ಗಟ್ಟು ಹೆಚ್ಚಾಗಿದೆ, ಆರೋಗ್ಯವು ತಪ್ಪುತ್ತಿದೆ; ಮನೆಯವರೂ ನೆಂಟರಿಷ್ಟರೂ ಮೊದಲಿನಂತೆ ನನ್ನನ್ನು ಆದರದಿಂದ ಕಾಣುವದಿಲ್ಲ; ಅವರಿಗೆಲ್ಲ ನನ್ನ ಸಹಾಯವೇನೋ ಬೇಕು, ಆದರೆ ನನ್ನ ಕಷ್ಟವನ್ನು ಕೇಳುವವರೇ ಇಲ್ಲ. ಹೀಗಾಗಿ ಪರಮಾರ್ಥದತ್ತ ಮನಸ್ಸು ತಿರುಗುವದೇ ದುಸ್ತರವಾಗಿದೆ. ಅಧ್ಯಾತ್ಮವಿಚಾರವು ಈಗ ನನಗೆ ಯಾವ ಸಹಾಯವನ್ನು ಮಾಡೀತು? ನನ್ನ ಕರ್ಮದ ಫಲವನ್ನು ನಾನು ಅನುಭವಿಸಲೇಬೇಕಷ್ಟೆ?'*–ಎಂದು ಮುಂತಾಗಿ ಬರೆದಿರುತ್ತೀರಿ.

ಕಷ್ಟವೆಂಬುದು ಯಾರಿಗಾದರೂ ದುಃಸಹವೇ ಸರಿ. ಆದರೆ ಅದಕ್ಕೂ ಅಧ್ಯಾತ್ಮ ವಿಚಾರಕ್ಕೂ ಗಂಟುಹಾಕಿಕೊಂಡು ಈಗ್ಗೆ ನನಗೆ ಅದರ ಸಹಾಯವಾಗಲಾರದು ಎಂದು ಬಗೆಯುವದು ಮಾತ್ರ ತಪ್ಪು.

ಅಧ್ಯಾತ್ಮ ವಿಚಾರವೆಂದರೆ, ನಮ್ಮ ಹೃದಯದಲ್ಲಿಯೇ ಇದ್ದುಕೊಂಡು ಅಭಯ ಹಸ್ತವನ್ನು ನೀಡುತ್ತಿರುವ ಪರಮಾತ್ಮನ ಚಿಂತೆ. ಮನುಷ್ಯನು ಮಿಕ್ಕದ್ದೆಲ್ಲವನ್ನೂ ಮಾಡಿಕೊಂಡಿದ್ದು ಅಧ್ಯಾತ್ಮಸಾಧನವನ್ನೂ ಅಧ್ಯಾತ್ಮವಿಚಾರವನ್ನೂ ದೂರಕ್ಕೆ ಹಾಕಿದರೆ ತನಗೆ ತಾನೇ ಕೇಡು ಮಾಡಿಕೊಂಡಂತಾಗುತ್ತದೆ. ಪರಮಾತ್ಮನು ಬ್ರಹ್ಮಾದಿಸ್ತಂಬಪರ್ಯಂತ ವಾಗಿರುವ ಪ್ರಾಣಿಗಳಿಗೆಲ್ಲ ಆತ್ಮನು. ಮನಸ್ಸನ್ನು ಆತ್ಮನಲ್ಲಿಟ್ಟುಕೊಳ್ಳದೆ ಹೊರಮುಖನಾಗಿರುವದರಿಂದಲೇ ನಮ್ಮ ಮನಸ್ಸಿನ ಸಮತೂಕವು ತಪ್ಪಿರುತ್ತದೆ. ಅನಾರೋಗ್ಯ, ಬಡತನ, ಜನರಿಂದ ಸಹಾಯವು ಆಗದೆ ಇರುವದು–ಇವುಗಳು ಹೆಚ್ಚುವದು ಅಧ್ಯಾತ್ಮವನ್ನು ಮರೆತದ್ದರಿಂದಲೇ ಎಂದು ತಿಳಿಯಬೇಕು. ರೋಗ, ಬಡತನ, ಸಹಾಯವಿಲ್ಲದಿರುವದು–ಇವೆಲ್ಲಕ್ಕೂ ಹೊರಗೆ ತೋರುವ ಕಾರಣಗಳು ಯಾವವೇ ಇರಲಿ, ಎಲ್ಲ ಕಷ್ಟಕ್ಕೂ ಪರಮ ಮೂಲವು ನಮ್ಮ ಸ್ವಾರ್ಥತೆಯೇ–ಎಂದರೆ ದೇಹಾಭಿಮಾನವೇ–ಎಂಬುದನ್ನು ಮರೆಯದೆ ಇರಬೇಕು.

ನಿಮ್ಮ ಕಷ್ಟಗಳು ಯಾವವೇ ಇರಲಿ, ಎಷ್ಟೇ ತೀವ್ರ ವೇದನೆಯನ್ನು ತರುತ್ತಿರಲಿ, ಅದನ್ನು ಲಕ್ಷ್ಯದಲ್ಲಿಡಬೇಡಿರಿ. ಭಗವನ್ನಾಮವನ್ನುಚ್ಚರಿಸುವದು, ಸತ್ಸಂಗವನ್ನು ಮಾಡುವದು, ಅವರು ತೋರಿಸುವ ಸನ್ಮಾರ್ಗದಲ್ಲಿ ನಡೆಯುವದು–ಇವನ್ನು ಮೊದಲು ಕೈಗೊಳ್ಳಿರಿ. ಭಗವಂತನ ಸಂತತ ಚಿಂತೆಯು ಮನಸ್ಸಿನಲ್ಲಿ ಮೂಡಿದ ಮಾತ್ರದಿಂದ ಸೂರ್ಯೋದಯಕ್ಕೆ ಕರಗುವ ಕಾವಳದಂತೆ ಎಲ್ಲಾ ಕಷ್ಟಗಳೂ ಮೈಗರೆಯುವವು. ನಿಮ್ಮ ಮನಸ್ಸಿನಲ್ಲಿ ಶಾಂತಿಯು ನೆಲಸವುದು.

# 205. ಜೀವನದ ಗುರಿ

## (ಅಕ್ಟೋಬರ್ 1963)

*ನಿಮ್ಮ ಪತ್ರವು ತಲುಪಿದೆ. ಅಧ್ಯಾತ್ಮವಿದ್ಯೆಯೂ ನನಗೆ ಬೇಕು–ಎನ್ನುವದು ಅಧ್ಯಾತ್ಮವಿದ್ಯೆಯ ಹಂಬಲು ಎನಿಸಿಕೊಳ್ಳುವದಕ್ಕೆ ತಕ್ಕದ್ದಲ್ಲ. 'ನನಗೆ ಪರಮಾತ್ಮನೇ ಬೇಕು. ಅವನನ್ನು ಕಾಣುವದಕ್ಕಾಗಿಯೇ ನಾನು ಪ್ರಯತ್ನಿಸುತ್ತಾ ಜೀವನವನ್ನು ಸಾಗಿಸುವೆನು' ಎಂಬ ದೃಢನಿಶ್ಚಯವೇ ನಿಮ್ಮ ನಿತ್ಯದ ನಡತೆಗೆ ಸೂತ್ರವನ್ನು ಕಲ್ಪಿಸಿಕೊಡುವದಾದರೆ ಅದು ಅಧ್ಯಾತ್ಮದ ಹಂಬಲು.*

ಆ ಪರೀಕ್ಷೆ, ಈ ಪರೀಕ್ಷೆ–ಯಾವದಾದರೊಂದರಲ್ಲಿ 'ಪ್ಯಾಸ್' ಆದರೆ ನನ್ನ ಜೀವನದ ಗುರಿಯನ್ನು ಮುಟ್ಟಿದಂತೆ ಆಯಿತು–ಎಂಬ ಹುಚ್ಚನ್ನು ಬಿಡಿರಿ. ಅದರಲ್ಲಿ ಪ್ಯಾಸ್ ಆದ ಕೂಡಲೆ ಇನ್ನೊಂದು ಗುರಿಯು ನಿಮ್ಮ ಮುಂದೆ ಕಾಣಹತ್ತುವದು. ಅವರಿವರು ಹೇಳಿದ ಎಂಜಲು ಮಾತುಗಳನ್ನು ಆಡುತ್ತಾ 'ನನ್ನ ತಂದೆ ತಾಯಿಗಳ ವಿಷಯಕ್ಕೆ ನನ್ನ ಕರ್ತವ್ಯವನ್ನು ನೆರವೇರಿಸುವದಕ್ಕಾಗಿ ಈ ಕೆಲಸವನ್ನು ಮಾಡುತ್ತಿದ್ದೇನೆ', 'ದೇಶದ ಸೇವೆಗಾಗಿ ಈ ಕೆಲಸವನ್ನು ಕೈಗೊಂಡಿದೇನೆ' ಎಂದು ಕೊಚ್ಚಿಕೊಳ್ಳಬೇಡಿರಿ. ನಿಜವಾಗಿ ನಿಮ್ಮ ಹೃದಯದಲ್ಲಿ ಯಾವದಾದರೂ ಬೇಕಾಗಿದೆಯೆನಿಸುತ್ತದೆಯೆ? ಅದನ್ನು ನೀವೇ ನೋಡಿಕೊಂಡು ನಿಶ್ಚಯಿಸಿಕೊಳ್ಳಿರಿ. ಆಮೇಲೆ ನೀವು ಏನು ಮಾಡಬೇಕೆಂಬುದನ್ನು ವಿಚಾರಿಸುವದಕ್ಕೆ ಕಾಲವಾಗುತ್ತದೆ.

'ಅನೇಕ ಜನ್ಮಗಳಲ್ಲಿ ಸಂಸಿದ್ಧನಾಗಿ ಕೊನೆಗೆ ಪರಗತಿಯನ್ನು ಮುಟ್ಟುತ್ತಾನೆ' ಎಂದಿದೆ, ಗೀತಾವಾಕ್ಯ. ಆಧ್ಯಾತ್ಮಿಕ ಸಂಸ್ಕಾರಗಳನ್ನು ಅಂತಃಕರಣದಲ್ಲಿ ಕೂಡಿಹಾಕಿದಂತೆಲ್ಲ ಒಂದು ಹೊಸ ಅನುಭವವು ಬರುತ್ತದೆ. ಅದರ ಬೆಳಕಿನಲ್ಲಿ ನಿಮ್ಮ ಜೀವನವನ್ನು ಸಾಗಿಸಬಹುದು. ಸದಾಚಾರ, ಸತ್ಸಂಗತಿ, ಸದ್ವಿಚಾರ–ಇವೆಲ್ಲ ಮೊದಲಿನ ಮೆಟ್ಟಿಲುಗಳು. ಆ ಬಳಿಕ ನಿಜವಾದ ಅಧ್ಯಾತ್ಮಸಾಧನಕ್ಕೆ ಮೊದಲಾಗುತ್ತದೆ. ಈ ಮೊದಲನೆಯ ಮೆಟ್ಟಿಲುಗಳನ್ನು ತುಳಿಯುವದಕ್ಕಾದರೂ ಪ್ರಯತ್ನವನ್ನು ಮಾಡಿರುತ್ತೀರಾ? ನಿಮ್ಮಲ್ಲಿ ನೀವೇ ವಿಚಾರಿಸಿ ನೋಡಿಕೊಳ್ಳಿರಿ. ನಿಮಗೆ ಯಾವದಾದರೊಂದು ದಾರಿಯು ಸಿಕ್ಕುವವರೆಗೆ ಭಗವಂತನ ನಾಮವನ್ನು ಎಡೆಬಿಡದೆ ಉಚ್ಚರಿಸುವದಕ್ಕೆ ಮೊದಲುಮಾಡಿರಿ. ಆಮೇಲೆ ನಿಮಗೆ ನಿಜವಾದ ಅಧ್ಯಾತ್ಮದ ಹಸಿವು ಉಂಟಾಗುತ್ತದೆ. ನಮ್ಮ ಜೀವನದ ವ್ಯವಹಾರವೆಂಬುದೊಂದು ದೊಡ್ಡ ಪರೀಕ್ಷೆ; ಇದರಲ್ಲಿ ಪ್ಯಾಸ್ ಆಗುವದಕ್ಕೆ ಒಂದು ನಿಶ್ಚಿತವಾದ ಗುರಿಯಿರಬೇಕು. ಭಗವಂತನು ನಿಮಗೆ ಅಂಥ ನಿಶ್ಚಯವನ್ನು ಅನುಗ್ರಹಿಸಲೆಂದು ಹಾರೈಸುತ್ತೇನೆ.

## 206. ಸತ್ಸಂಗ

### (ನವೆಂಬರ್ 1963)

*ನಿಮ್ಮ ಪತ್ರವನ್ನು ಓದಿಕೊಂಡಿರುತ್ತೇನೆ. ''ಸುತ್ತಮುತ್ತಲಿನ ಜನರು ಆಡುವ ಮಾತಿನಿಂದ ನನ್ನ ಮನಸ್ಸಿನಮೇಲೆ ಹೆಚ್ಚಿನ ಪರಿಣಾಮವಾಗುತ್ತದೆ. ಯುದ್ಧದ ಸುದ್ದಿ, ನೆರೆಯವರ ಕೆಟ್ಟನಡತೆ, 'ಇಂಥದ್ದು ಅಗ್ಗವಾಗಿ ಸಿಕ್ಕುತ್ತದೆ' ಅಥವಾ 'ಆಹಾರಾದಿಗಳ ಬೆಲೆ ಏರಿದೆ' ಇಂಥ ಮಾತುಗಳನ್ನು ಕೇಳಿಕೇಳಿ ನನಗೆ ಬೇಸರವಾಗಿದೆ. ಇದರಿಂದ ಅಧ್ಯಾತ್ಮ ಚಿಂತನೆಗೆ ಅಡ್ಡಿಯಾಗಿದೆ. ಇದರಿಂದ ಪಾರಾಗುವದಕ್ಕೆ ತಾವು ಯಾವದಾದರೊಂದು ಉಪಾಯವನ್ನು ಹೇಳಿರಿ'' ಎಂದು ಕೇಳಿಕೊಂಡಿರುತ್ತೀರಿ.*

ಜನಸಾಮಾನ್ಯರಲ್ಲಿ ಇಂಥ ಮಾತುಗಳು ಸಂಭಾಷಣೆಯಲ್ಲಿ ಬರುವದು ಸ್ವಾಭಾವಿಕ; ಆದರೆ ನಿಮಗೆ ಅಧ್ಯಾತ್ಮದ ಚಿಂತನೆಯೇ ಬೇಕಾಗಿದ್ದರೆ ಆ ವಿಷಯವನ್ನು ಕುರಿತೇ ಜನರಲ್ಲಿ ಸಂಭಾಷಣೆಯನ್ನು ಮಾಡುವದಕ್ಕೆ ಏತಕ್ಕೆ ಮೊದಲುಮಾಡಬಾರದು? ನೀವು ಭಗವಂತನ ಮಹಿಮೆಯನ್ನು ಕುರಿತು ಅಥವಾ ಅಧ್ಯಾತ್ಮ ಸಾಧನಗಳನ್ನು ಕುರಿತು ಮಾತನಾಡುವದಕ್ಕೆ ಪ್ರಾರಂಭಿಸಿದರೆ ನಿಮ್ಮ ಮಿತ್ರರೂ ಅದೇ ರಾಗದಲ್ಲಿ ಹಾಡುವದಕ್ಕೆ ಮೊದಲುಮಾಡುವರು; ಅವರಿಗೆ ಅದು ಒಗ್ಗದಿದ್ದರೆ ನಿಮ್ಮ ಸಹವಾಸವನ್ನು ತಾವೇ ಬಿಟ್ಟುಬಿಡುತ್ತಾರೆ. ಇದನ್ನು ಪ್ರಯತ್ನಿಸಿ ನೋಡಿರಿ.

ಇದಕ್ಕಿಂತಲೂ ಹೆಚ್ಚಿನ ಉಪಾಯವೊಂದುಂಟು; ಎಂಥವರಾದರೂ ನೀತಿ, ದೈವಭಕ್ತಿ—ಮುಂತಾದ ವಿಷಯದಲ್ಲಿ ಒಂದಿಷ್ಟು ಏನಾದರೂ ಆಡಿಕೊಳ್ಳುತ್ತಲೇ ಇರುತ್ತಾರೆ. ಅವರ ಸಂಭಾಷಣೆಯಲ್ಲಿರುವ ಈ ಬಗೆಯ ಒಳ್ಳೆಯ ವಿಷಯವನ್ನು ಆರಿಸಿಕೊಳ್ಳುವದಕ್ಕೆ ಹೊರಡಿರಿ. ಅಥವಾ ಭಗವಂತನ ಲೀಲೆಗಳನ್ನು ಕುರಿತು ಮಾತನಾಡುತ್ತಿರುವದು; ಪೂಜೆ, ಪಾರಾಯಣ, ಕೀರ್ತನೆ, ಜಪ, ಭಜನೆ—ಮುಂತಾದ ಸಾಧನಗಳಲ್ಲಿ ನಿರತರಾಗಿರುವದು—ಇವುಗಳಲ್ಲಿಯೇ ನಿರತರಾಗಿರುವ ಮಹಾತ್ಮರನ್ನು ಕುರಿತು ನೀವು ಕೇಳಿದ್ದರೆ—ಅವರು ಎಷ್ಟೇ ದೂರದಲ್ಲಿರಲಿ—ಅಂಥವರ ಸಂಗಕ್ಕಾಗಿ ಅವರಿರುವಲ್ಲಿಗೆ ಹೋಗಿ ಅವರ ಸಂಭಾಷಣೆಯ ತೀರ್ಥದಲ್ಲಿ ಆಗಾಗ್ಗೆ ಮಿಂದು ಬನ್ನಿರಿ. ನಿಮ್ಮ ಶರೀರದಲ್ಲಿ ಚಟುವಟಿಕೆ, ಇಂದ್ರಿಯಗಳಿಗೆ ಸಾತ್ತ್ವಿಕಬಲ, ಮನಸ್ಸಿಗೆ ಸದ್ವಿಚಾರದ ಹುರುಪು—ಎಲ್ಲವೂ ಲಭಿಸುವದು. ಶರೀರದ ಆರೋಗ್ಯಕ್ಕಾಗಿ ಜನರು ಉತ್ತಮವಾದ ವಾಯುಗುಣದ ಸ್ಥಲಗಳನ್ನು ಹುಡುಕಿಕೊಡು ಹೋಗಿ ಅಲ್ಲಿ ಸ್ವಲ್ಪಕಾಲ ವಾಸಮಾಡಿಬರುವಂತೆ ಸತ್ಸಂಗದ ವಾತಾವರಣದಲ್ಲಿರುವದಕ್ಕೆ ಮನಸ್ಸುಮಾಡಿರಿ. ಇದರಿಂದ ನಿಮಗೆ ವಿಷಯ ಸಂಗದ ಕಾಟವು ತಪ್ಪುವದು. ಅಧ್ಯಾತ್ಮ ಸಾಧನೆಯಲ್ಲಿ ಹೆಚ್ಚು ಹೆಚ್ಚಾಗಿ ಸವಿಯು ಕಾಣುವದಕ್ಕೆ ಮೊದಲಾಗುವದು.

# 207. ತೀರ್ಥಕ್ಷೇತ್ರಗಳು

## (ಡಿಸೆಂಬರ್ 1963)

*ನಿಮ್ಮ ಪತ್ರವು ತಲುಪಿರುತ್ತದೆ. ನೀವು ಕೇಳಿರುವ ಪ್ರಶ್ನೆಯಲ್ಲಿ ಅರ್ಥವಿಲ್ಲದೆ ಇಲ್ಲ. ಈಗ್ಗೆ ಜನರಿಗೆ ಲೌಕಿಕಭಾವನೆಗಳು ಬಲವಾಗಿಬಿಟ್ಟಿವೆ. ಶಾಸ್ತ್ರೀಯವಿಚಾರಗಳನ್ನು ಲೌಕಿಕವ್ಯವಹಾರಕ್ಕೆ ತಿರುಗಿಸಿಕೊಂಡುಬಿಟ್ಟಿರುತ್ತಾರೆ. ದೇವಾಲಯಗಳೂ ತೀರ್ಥಕ್ಷೇತ್ರಗಳೂ ವ್ಯವಹಾರಕ್ಷೇತ್ರವಾಗಿ ಬಿಟ್ಟಿವೆ; ಅಲ್ಲಿಯೂ ವಾಣಿಜ್ಯವು ನಡೆಯುತ್ತಿದೆ; ಅಲ್ಲಿಗೂ ಜನರು ಸಾಮಾಜಿಕ, ರಾಜಕೀಯ ವಿಚಾರಗಳನ್ನು ತಂದುಬಿಟ್ಟಿರುತ್ತಾರೆ. ಆಸ್ತಿಕರು ಈಗೇನು ಮಾಡಬೇಕು?–ಎಂಬುದು ನಿಮ್ಮ ಪ್ರಶ್ನೆ.*

ಇದಕ್ಕೆ ನನ್ನ ಉತ್ತರವೇನೆಂದರೆ: ಹಿಂದಿನ ಕಾಲದಲ್ಲಿ ಜನರು ಲೌಕಿಕ ವ್ಯವಹಾರದಲ್ಲಿ ಮುಳುಗಿ ಭಗವಂತನನ್ನು ಮರೆತೇವೆಂಬ ಅಂಜಿಕೆಯಿಂದ ಮನೆಗಳಲ್ಲಿ ದೇವರಪೂಜೆ, ಅತಿಥಿಸತ್ಕಾರ, ಹಬ್ಬಹರಿದಿನಗಳು–ಮುಂತಾದವುಗಳಿಂದ ಭಗವಂತನನ್ನು ನೆನಪಿಗೆ ತಂದುಕೊಳ್ಳುತ್ತಿದ್ದರು. ಆಗಾಗ್ಗೆ ತೀರ್ಥಕ್ಷೇತ್ರಗಳಿಗೆ ಹೋಗಿ ಅಲ್ಲಿರುವ ಪಾವಿತ್ರ್ಯದ ಪ್ರಭಾವವನ್ನು ಮನಸ್ಸಿಗೆ ತಟ್ಟಿಸಿಕೊಂಡು ಬರುತ್ತಿದ್ದರು. ಈಗ ಎಲ್ಲೆಲ್ಲಿಯೂ ಲೌಕಿಕವ್ಯವಹಾರವೇ ಆಗಿದೆ ಎಂಬುದು ನಿಜ. ಆದರೂ ಆಸ್ತಿಕರು ಅಂಜಬೇಕಾದದ್ದೇನೂ ಇಲ್ಲ. ಏಕೆಂದರೆ ಇರುವದೆಲ್ಲ ಒಂದೇ ಪ್ರಪಂಚ; ಅದರಲ್ಲಿ ಲೌಕಿಕಭಾವನೆಯನ್ನು ಸಾಮಾನ್ಯರು ಮಾಡಿಕೊಳ್ಳುವಂತೆ, ಆಸ್ತಿಕರು ಶ್ರದ್ಧಾಭಕ್ತಿಗಳಿಂದ ದೈವೀಭಾವನೆಯನ್ನು ಮಾಡಿಕೊಳ್ಳುವದಕ್ಕೆ ಯಾವ ಅಡ್ಡಿಯೂ ಇಲ್ಲ.

ಸರಿಯಾಗಿ ನೋಡಿದರೆ ಜಗತ್ತೆಲ್ಲವೂ ಭಗವನ್ಮಯವಾಗಿಯೇ ಇದೆ. ಅಲ್ಲಿ ಭಗವದ್ಭಾವನೆಯನ್ನು ಮಾಡಿಕೊಂಡು ನಲಿಯಲಾರದೆ ಜನರು ತಮ್ಮ ವ್ಯವಹಾರದ ಭಾನೆಯನ್ನೇ ೞ ಹೆಚ್ಚಿಸಿಕೊಳ್ಳುತ್ತ ದುಃಖಪಡುತ್ತಿದಾರೆ– ಅಷ್ಟೆ. ಆದ್ದರಿಂದ ಈ ವಿಶ್ವವೆಲ್ಲವೂ ವಾಸುದೇವಮಯವಾಗಿರುತ್ತದೆ. ಆ ಭಗವಂತನ ಮಹಿಮೆಯೇ ಎಲ್ಲಾ ಮನುಷ್ಯರಲ್ಲಿಯೂ ಎಲ್ಲಾ ಪ್ರಾಣಿಗಳಲ್ಲಿಯೂ ಎಲ್ಲಾ ಸ್ಥಳಗಳಲ್ಲಿಯೂ ಎಲ್ಲಾ ಕಾಲಗಳಲ್ಲಿಯೂ ತುಂಬಿ ತುಳುಕುತ್ತಿದೆ. ಇಲ್ಲಿ ನಮಗೆ ಕಾಣುತ್ತಿರುವ ನದಿಗಳೂ ಸರೋವರಗಳೂ ಪವಿತ್ರ ತೀರ್ಥಗಳು, ಈ ಎಲ್ಲಾ ಸ್ಥಳಗಳೂ ಪವಿತ್ರಕ್ಷೇತ್ರಗಳು–ಎಂಬ ದಿವ್ಯಭಾವನೆಯಿಂದ ಮನಸ್ಸನ್ನು ಊಡಿಸಿಕೊಳ್ಳಿರಿ, ಆಗ ನಿಮಗೆ ಎಲ್ಲೆಲ್ಲಿಯೂ ತೀರ್ಥಕ್ಷೇತ್ರಗಳ ದರ್ಶನದ ಫಲವೇ ಲಭಿಸುವದು. ಲೌಕಿಕವ್ಯವಹಾರದ ಕೋಟಲೆಯು ಮನಸ್ಸಿಗೆ ತಟ್ಟದೆ ಇರುವದು. ನಮ್ಮ ಸುತ್ತುವಳೆಯವು ಒಂದು ಮಹಾಪವಿತ್ರಕ್ಷೇತ್ರವಾಗಿ ನೆರೆಯವರನ್ನು ಪಾವನಗೈಯುವದು.

## 208. ಗೀತಾಜಯಂತಿ

### (ಜನವರಿ 1964)

*ನಿಮ್ಮ ಪತ್ರವು ತಲುಪಿತು. ಗೀತಾಜಯಂತಿಯ ಆಚರಣೆಯನ್ನು ಪದ್ಧತಿಯಂತೆ ಮಾಡುವದು ಯುಕ್ತವೇ ಸರಿ. ಗೀತೆಯ ಪಾರಾಯಣ, ಗೀತಾಪುಸ್ತಕದ ಪೂಜೆ, ಗೀತೆಯ ಉಪದೇಶದ ಬಗ್ಗೆ ಉಪನ್ಯಾಸ, ಪಾರ್ಥಸಾರಥಿಯ ಉತ್ಸವ, ಹುಡುಗರನ್ನು ಗೀತಾಪಾಠದಲ್ಲಿ ಪರೀಕ್ಷಿಸಿ ಬಹುಮಾನವನ್ನು ಕೊಡುವದು–ಇವುಗಳೆಲ್ಲವೂ ಅವಶ್ಯವಾಗಿ ಆಗತಕ್ಕವೇ. ಆದರೆ ಇವೆಲ್ಲಕ್ಕಿಂತಲೂ ಹೆಚ್ಚು ಅವಶ್ಯವಾಗಿರುವ ಜಯಂತಿಯ ಕಾರ್ಯವೊಂದನ್ನು ನಿಮಗೆ ಸೂಚಿಸಬೇಕೆಂದಿದೇನೆ.*

**ಭಗವಂತನು ಉಪದೇಶಿಸಿರುವ ಯೋಗಗಳಲ್ಲಿ ಕರ್ಮಯೋಗವೇ ಮೊಟ್ಟ ಮೊದಲಿನದು.** ಕರ್ಮಯೋಗವು 'ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ' ಎಂಬ ಉಕ್ತಿಯಂತೆ ತನಗೆ ಹೇಳಿದ ಕರ್ಮವನ್ನು ಈಶ್ವರನ ಪೂಜೆ ಎಂದು ಮಾಡುವದರಿಂದ ಚಿತ್ತಶುದ್ಧಿಯನ್ನು ಪಡೆಯುವದು. ಶಾಸ್ತ್ರದಲ್ಲಿ ಹೇಳಿರುವ ಸ್ವಕರ್ಮವು ಯಾವದೆಂಬುದನ್ನು 18ನೆಯ ಅಧ್ಯಾಯದ 42ರಿಂದ 44ನೆಯ ಶ್ಲೋಕಗಳಲ್ಲಿ ಹೇಳಿದೆ.

ಈಗ್ಗೆ ವರ್ಣಾಶ್ರಮವ್ಯವಸ್ಥೆಯು ಸಡಿಲವಾಗಿದ್ದರೂ ಶಮ, ದಮ, ತಪಸ್ಸು–ಮುಂತಾದ ಬ್ರಾಹ್ಮಣಕರ್ಮದಲ್ಲಿಯೂ ಶೌರ್ಯ, ತೇಜ, ಧೃತಿ–ಮುಂತಾದ ಕ್ಷಾತ್ರಕರ್ಮದಲ್ಲಿಯೂ ಕೃಷಿಗೌರಕ್ಷ್ಯವೇ ಮುಂತಾದ ವೈಶ್ಯಕರ್ಮದಲ್ಲಿಯೂ ಸಮಾಜ ಸೇವೆಯರೂಪವಾದ ಶೂದ್ರಕರ್ಮದಲ್ಲಿಯೂ ಒಲವಿರುವ ಸ್ವಭಾವದ ಜನರು ಸಮಾಜಕ್ಕೆ ಅತ್ಯವಶ್ಯವಾಗಿರುತ್ತಾರೆ. ಇವುಗಳೊಳಗೆ ಯಾವದು ನನ್ನ ಸ್ವಭಾವಕ್ಕೆ ಯಾವಾಗಲೂ ಒಲಿಯುತ್ತಿದೆ? ಅದನ್ನು ಬಿಟ್ಟು ಬೇರೊಂದು ಕರ್ಮದಲ್ಲಿ ನಾನು ಕೈ ಹಾಕುತ್ತಿದ್ದೇನೆಯೆ?–ಎಂಬ ಪ್ರಶ್ನೆಯನ್ನು ನಮಗೆ ನಾವೇ ಹಾಕಿಕೊಳ್ಳಬೇಕು. ಆದ ಮಟ್ಟಿಗೆ ನಮ್ಮನಮ್ಮ ಸ್ವಭಾವಕ್ಕೆ ಅನುಗುಣವಾದ ಕರ್ಮವನ್ನು ಕೈಕೊಂಡು ಈಶ್ವರನ ಅರ್ಚನೆಯನ್ನು ಮಾಡಬೇಕು. ಈ ಸಂಕಲ್ಪವನ್ನು 'ನೆರವೇರಿಸಿಕೊಡು, ದೇವ!' ಎಂದು ಭಗವಂತನಲ್ಲಿ ಮೊರೆಯಿಡುವದಕ್ಕೆ ಗೀತಾಜಯಂತಿಯು ತಕ್ಕ ಕಾಲವಾಗಿರುತ್ತದೆ.

ಸದ್ಯಕ್ಕೆ ನಾವುಗಳು ಆರಿಸಿಕೊಂಡಿರುವ ಉದ್ಯೋಗದಲ್ಲಿ ಪ್ರಾಮಾಣಿಕತನದಿಂದ ನಡೆಯುವದು, ಅದರಲ್ಲಿ ನಮಗಿರುವ ಹೊಣೆಗಾರಿಕೆಯನ್ನು 'ಈಶ್ವರನ ಅರ್ಚನೆ' ಎಂಬ ಭಾವನೆಯಿಂದ ಮಾಡುವ ಅಭ್ಯಾಸವನ್ನು ಮಾಡುವ ಸಂಕಲ್ಪವನ್ನು ಕೈಕೊಂಡರೂ ಕರ್ಮಯೋಗದ ಮರ್ಮವು ನಮಗೆ ಸಿಕ್ಕುವಂತೆ ಆದೀತು. ನಮ್ಮ ಉದ್ಯೋಗಕ್ಕೆ

ಪ್ರತಿಫಲವು ತೃಪ್ತಿಕರವಾಗಿ ದೊರಕಲಿ ದೊರಕದಿರಲಿ 'ಸರ್ವರ ಹೃದಯದಲ್ಲಿರುವ ಪರಮಾತ್ಮನ ಸೇವೆಯಿದು' ಎಂಬ ಭಾವನೆಯಿಂದ ನಮ್ಮ ಕರ್ಮವನ್ನು ಮಾಡುವದಕ್ಕೆ ಕೆಲವರಾದರೂ ಹೊರಟರೆ ಸಮಾಜವು ಎಷ್ಟೋ ಪರಿಶುದ್ಧವಾದೀತು; ಹಾಗೆ ಕರ್ತವ್ಯವನ್ನು ಪಾಲಿಸುವವರಿಗೂ ಎಷ್ಟೋ ಮನಃಶಾಂತಿಯೂ ಸುಖವೂ ದೊರಕೀತು.

## 209. ವೇದಾಂತಪ್ರಚಾರ

(ಫೆಬ್ರುವರಿ 1964)

*ನಿಮ್ಮ ಪತ್ರವು ಬಂದು ತಲುಪಿದೆ. ವೇದಾಂತಪ್ರಚಾರವೆಂದರೆ ಗ್ರಂಥಗಳಲ್ಲಿರುವ ವಿಷಯಗಳನ್ನು ಚರ್ಚೆಗೆ ಇಟ್ಟುಕೊಳ್ಳುವದು, ಅಥವಾ ಪಾಠಮಾಡಿಸುವದು–ಎಂದೇ ಈಗ್ಗೆ ಅರ್ಥವಾಗಿದೆ. ಆದರೆ ನಿಜವು ಹೀಗಿಲ್ಲ.*

ಪರಮಾತ್ಮನ ವಿಷಯವಾದ ಶ್ರವಣವೂ ಚಿಂತನೆಯೂ ಧ್ಯಾನವೂ ನಮ್ಮನಮ್ಮ ವೈಯಕ್ತಿಕ ಪ್ರಯೋಜನಕ್ಕಾಗಿ ಮಾಡಿದಾಗಲೇ ಫಲಕಾರಿಯಾಗುವವು. ಶಾಸ್ತ್ರದಲ್ಲಿ ಹೇಳಿರುವಂತೆ ಪರಮಾತ್ಮಸ್ವರೂಪವನ್ನು ಬಲ್ಲವರಿಂದ ಕೇಳಿ ತಿಳಿದುಕೊಳ್ಳಬೇಕು; ಆಮೇಲೆ ಯುಕ್ತಿಗೂ ಅನುಭವಕ್ಕೂ ಹೊಂದಿಸಿಕೊಂಡು ಕೃತಕೃತ್ಯನಾಗಬೇಕು. ತತ್ತ್ವ ವಿಚಾರದಲ್ಲಿ ಆದರವುಳ್ಳವರೊಡನೆ ವಿಷಯನಿರ್ಧಾರಣೆಗೆಂದು ವಾದವನ್ನು ಮಾಡುವದೂ ಜ್ಞಾನೋತ್ಪತ್ತಿಗೆ ಕಾರಣವೇ ಸರಿ; ಆದರೆ ವೇದಾಂತವು ತರ್ಕದಿಂದ ಚರ್ಚಿಸಿ ಮತ್ತೊಬ್ಬರನ್ನು ಗೆಲ್ಲುವದಕ್ಕಲ್ಲ. ಇದನ್ನು ನೆನಪಿನಲ್ಲಿಡಬೇಕು.

ಇನ್ನೊಂದು ವಿಷಯ, ತನ್ನ ಅನುಭವದಲ್ಲಿರುವದನ್ನು ತತ್ತ್ವಜಿಜ್ಞಾಸುಗಳಿಗೆ ತಿಳಿಯಪಡಿಸುವದೂ ಜ್ಞಾನಾಬಿವೃದ್ಧಿಗೇ ಕಾರಣವಾಗುತ್ತದೆ. ಅನುಭವಿಗಳಾದವರು ಅಧಿಕಾರಿಗಳಾದವರಿಗೆ ಹೇಳಿಕೊಟ್ಟರೆ ಲೋಕಸಂಗ್ರಹವಾಗುತ್ತದೆ; ತತ್ತ್ವಾನುಸಂಧಾನದ ಆನಂದವೂ ಅವರಿಗೆ ದೊರಕುತ್ತದೆ. ಆದರೆ ಅಧಿಕಾರಿಗಳಲ್ಲದವರಿಗೆ ಅವರ ಬುದ್ಧಿಗೆ ಎಟುಕದೇಇರುವ ಘನತತ್ತ್ವಗಳನ್ನು ಪ್ರತ್ಯುಪಕಾರದ ಆಶೆಯಿಂದ ಹೇಳಿಕೊಡುವದಕ್ಕೆ ಹವಣಿಸುವದು ಎಂದಿಗೂ ಯುಕ್ತವಲ್ಲ. ಅದರಿಂದ ಬೋಧಕನಿಗೂ ಶ್ರೋತೃವಿಗೂ–ಇಬ್ಬರಿಗೂ ಹಾನಿಯೇ ಆಗುವದು.

ಜ್ಞಾನೋತ್ಪತ್ತಿಗೆ ಅತ್ಯವಶ್ಯಕವಾಗಿರುವ ಕರ್ಮಯೋಗ, ಭಕ್ತಿಯೋಗ–ಇವುಗಳನ್ನು ಅನುಸರಿಸುವದೂ ಜನರನ್ನು ಅವುಗಳ ಅನುಷ್ಠಾನದಲ್ಲಿ ತೊಡಗಿಸುವದೂ ಮಹಾಪುಣ್ಯಕರವಾದದ್ದು. ಜನರಲ್ಲಿ ಸತ್ಯ, ಆಚಾರ, ಶೌಚ–ಮುಂತಾದ ಸಾಧನಗಳ

ವಿಷಯದ ತಿಳಿವಳಿಕೆಯನ್ನು ಹರಡುವದೂ ಭಗವನ್ನಾಮಸ್ಮರಣೆಯಲ್ಲಿ ಆಸಕ್ತಿಯನ್ನುಂಟು ಮಾಡುವದೂ ಉತ್ತಮವಾದ ಪರೋಪಕಾರವಾಗುವದು. ತಾನೂ ಸತ್ಸಾಧನಗಳನ್ನು ಅನುಷ್ಠಾನಮಾಡುತ್ತಾ, ಮತ್ತೊಬ್ಬರನ್ನೂ ಅತ್ತಕಡೆಗೆ ಎಳೆಯುವದೂ, ಭಗವಂತನ ಮಹಿಮೆಯನ್ನು ಆಗಾಗ್ಗೆ ಸ್ಮರಣೆಗೆ ತಂದುಕೊಳ್ಳುವದೂ ಚಿತ್ತಶುದ್ಧಿಗೆ ಹೆಚ್ಚಿನ ಸಾಧನಗಳಾಗುವವು. ಅಂಥವರು ಮಾಡುವ ವೇದಾಂತವಿಚಾರವು ಅತ್ಯುತ್ತಮ ಪ್ರಚಾರ ಕಾರ್ಯವಾಗುವದು.

## 210. ವ್ಯಾಧಿಶಮನಕ್ಕೆ ಉಪಾಯ

### (ಮಾರ್ಚ್ 1964)

*ನಿಮ್ಮ ಪತ್ರವು ತಲುಪಿರುತ್ತದೆ, ಘೋರವಾದ ವ್ಯಾಧಿಗಳಿಂದ ನರಳುವದೆಂದರೆ ಸಹಿಸಲಾರದ ದುಃಖವಲ್ಲವೆಂದು ಯಾರುತಾನೆ ಹೇಳಿಯಾರು? ಆದರೆ ಆಧಿ (ಮನಸ್ಸಿನ ಚಿಂತೆ)ಗಳೂ ವ್ಯಾಧಿ (ಶರೀರದ ರೋಗ)ಗಳೂ ನಮ್ಮ ಪಾಪದ ಫಲವೆಂಬುದನ್ನು ಮಾತ್ರ ಜನರು ಮರೆತಿರುತ್ತಾರೆ. ಅವರವರ ಈ ಮರವೆಗೆ ತಕ್ಕಂತೆ ಅವರವರಿಗೆ ದುಃಖವು ತಪ್ಪದೆ ಆಗುತ್ತದೆ. ಬೆಂಕಿಯನ್ನು ಮುಟ್ಟಿ ಸುಡಬೇಡವೆಂದರೆ ಕೇಳಿತೇನು?*

ಪಾಪವೆಂದರೇನು? ನಮ್ಮ ಆತ್ಮನಾದ ಭಗವಂತನನ್ನು ಮರೆತು ಈ ಶರೀರ, ಇಂದ್ರಿಯಗಳು, ಮನಸ್ಸು–ಇವುಗಳು ನಾವು ಸುಖಕ್ಕೆ ಸಂಪಾದಿಸಿಕೊಂಡಿರುವ ಸಾಧನಗಳು ಎಂದು ಬಗೆಯುವದೇ ಆಗಿದೆ. ಇವುಗಳಲ್ಲಿ ಅಭಿಮಾನವು ಎಷ್ಟು ಹೆಚ್ಚುವದೋ ಅಷ್ಟು ಪಾಪವು ನಮಗೆ ಸಂಘಟಿಸುತ್ತದೆ.

ಹೀಗಿರುವದರಿಂದ ವ್ಯಾಧಿಗೆ ಮುಖ್ಯವಾದ ವ್ಯಾಧಿಶಮನೋಪಾಯವು ಯಾವದೆಂದಾಯಿತು? ಇದಕ್ಕೊಂದು ಹಿರಿಯರ ಉಕ್ತಿಯಿದೆ. 'ತಚ್ಛಾನ್ತಿರೌಷಧೈರ್ದಾನೈರ್ಜಪ ಹೋಮಸುರಾರ್ಚನೈಃ' ಔಷಧಿಯೆಂಬುದು ಈಗ ನಮ್ಮನ್ನು ದಿಕ್ಕುಗೆಡಿಸುವ ದಾರಿಯಾಗಿಬಿಟ್ಟಿದೆ. ಆಯುರ್ವೇದ, ಡಾಕ್ಟರೀ, ಯುನಾನಿ, ಅನುಭವವೈದ್ಯ–ಎಷ್ಟು ಬಗೆ! ಇವುಗಳಲ್ಲಿ ಯಾವದಕ್ಕೆ ಎಷ್ಟು ಬೆಲೆಯೋ ದೇವರೇ ಬಲ್ಲ! ಇನ್ನು ದಾನ : ನಾವು ಸಂಪಾದಿಸುವ ರೀತಿ, ಯಾರಿಗೆ ದಾನವನ್ನು ಕೊಡುತ್ತೇವೆಯೋ ಅವರ ಪಾತ್ರತೆ–ಇವನ್ನು ಅದು ಅನುಸರಿಸಿರುತ್ತದೆ.

ಇವನ್ನು ಬಿಟ್ಟರೆ ಉಳಿಯುವದು ಜಪ, ಹೋಮ, ಸುರಾರ್ಚನೆ; ಈ ಮೂರನ್ನೂ ಭಗವಂತನಿಗಾಗಿ ಮಾಡಿಬಿಟ್ಟರೆ ಎಲ್ಲಕ್ಕೂ ಸಾದ್ಗುಣ್ಯವು ಬಂದು ಬಿಡುತ್ತದೆ. ನಾವು ಬಾಹ್ಯದೃಷ್ಟಿಯಿಂದ ತೆಗೆದುಕೊಳ್ಳುವ ಔಷಧಿಗೂ ಅಖಿಲಭಕ್ತಿಯಿಂದ ಮಾಡುವ ದಾನಕ್ಕೂ

ವೀರ್ಯವು ಭಗವಂತನ ಸ್ಮರಣೆಯಿಂದ ಅವಶ್ಯವಾಗಿ ಉಂಟಾದೀತು. ಆತನೇ ಅಲ್ಲವೆ, ಸರ್ವಕ್ಕೂ ಆತ್ಮನು?

ಹೀಗಿರುವದರಿಂದ ನೀವು ಇನ್ನು ಭಗವಂತನ ನಾಮವನ್ನು ಎಡೆಬಿಡದೆ ಜಪಿಸಿರಿ. ಉಣ್ಣುವ ಅನ್ನವನ್ನೂ ಕುಡಿದ ನೀರನ್ನೂ ವೈಶ್ವಾನರರೂಪಿಯಾದ ಆತನಿಗೆಂದು ಮಾಡಿದ ಹೋಮವೆಂದು ಶ್ರದ್ಧೆಯಿಂದ ನಂಬಿರಿ. ಸ್ವಕರ್ಮವನ್ನು ಆತನಿಗೆ ಅರ್ಪಣೆಮಾಡುವದೇ ಆತನ ಅರ್ಚನೆ ಎಂದು ನಂಬಿರಿ, ಭಗವಂತನ ನಾಮಮಾತ್ರವನ್ನು ಉಚ್ಚರಿಸಿದರೂ ದುಃಖ ವಿಮುಕ್ತರಾಗುತ್ತಾರೆ–ಎಂದು ಶಾಸ್ತ್ರವಿದೆ; ಸದ್ಗುರುರೂಪಿಯಾದ ಭಗವಂತನೇ ನನಗೆ ಈ ಉಪಾಯವನ್ನು ಹೇಳಿಕೊಟ್ಟಿರುತ್ತಾನೆ–ಎಂದು ಶ್ರದ್ಧಾಭಕ್ತಿಗಳಿಂದ ಭಗವನ್ನಾಮಸ್ಮರಣೆಯನ್ನೇ ಮಾಡಿರಿ. ಭಗವಂತನ ಅನುಗ್ರಹದಿಂದ ನಿಮಗೆ ಇಹಪರಸುಖಗಳು ಕಟ್ಟಿಟ್ಟ ಬುತ್ತಿಯಾಗುವವು.

## 211. ಅನುಷ್ಠಾನ

**(ಏಪ್ರಿಲ್ 1964)**

*ನೀವು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಕೊಡುವದು ಸ್ವಲ್ಪ ಕಷ್ಟ. ಘೋರವಾದ ಈ ಕಲಿಗಾಲದಲ್ಲಿ ಜನರಿಗೆ ಪಾಪವಾಸನೆಯೇ ಹೆಚ್ಚುತ್ತಿರುವದರಿಂದ, ಸಾಮೂಹಿಕವಾಗಿ ಜಪ, ಹೋಮ, ಭಜನೆ–ಮುಂತಾದವುಗಳನ್ನು ಮಾಡುವದು ಬುದ್ಧಿಶುದ್ಧಿಗೂ ಭಕ್ತಿವೃದ್ಧಿಗೂ ಕಾರಣವಾಗಲಾರದೆಂದು ಯಾರು ತಾನೆ ಹೇಳಲಾಪರು? ಆದರೂ ಸಾಮೂಹಿಕವಾದ ಅನುಷ್ಠಾನಗಳ ವಿಷಯಕ್ಕೆ ತೆಗೆದುಕೊಳ್ಳಬೇಕಾದ ಎಚ್ಚರಿಕೆಯೊಂದಿದೆ; ಅದನ್ನು ನಿಮ್ಮ ಲಕ್ಷ್ಯವಾಗಿಟ್ಟುಕೊಳ್ಳಬೇಕೆಂದು ನನ್ನ ನಮ್ರ ಸೂಚನೆ.*

ಅನುಷ್ಠಾನಗಳು ಹಿಡಿತಕ್ಕೆ ಸಿಕ್ಕದಷ್ಟು ದೊಡ್ಡವಾಗಬಾರದು. ಏಕೆಂದರೆ ಆಗ ಅವುಗಳು ನಿಯಮಾನುಗುಣವಾಗಿ ನಡೆಯುವಂತೆ ನೋಡಿಕೊಳ್ಳುವದು ಕಷ್ಟವಾಗುತ್ತದೆ. ಅನುಷ್ಠಾನಕ್ಕೆ ಸೇರುವವರೆಲ್ಲರೂ ಆಸ್ತಿಕರಾಗಿದ್ದುಕೊಂಡು ಶ್ರದ್ಧೆಯಿಂದ ತಮ್ಮ ಭಾಗವನ್ನು ನೆರವೇರಿಸಿ ತಾವೂ ಕೃತಾರ್ಥರಾಗಬೇಕೆಂಬ ಬುದ್ಧಿಯವರಾಗಿರಬೇಕು. ಅನುಷ್ಠಾನಕ್ಕೆ ಏರ್ಪಡಿಸುವವರಂತೂ ಅದರಲ್ಲಿ ಪೂರ್ಣವಿಶ್ವಾಸವುಳ್ಳವರಾಗಿರಬೇಕೆಂಬುದನ್ನು ಬೇರೆ ಹೇಳಬೇಕಾಗಿಯೇ ಇಲ್ಲವಷ್ಟೆ?

ಜಪ, ಹೋಮ, ತರ್ಪಣ, ಆರಾಧನೆ, ಪಾರಾಯಣ–ಇವೆಲ್ಲಕ್ಕೂ ಏಕ ನಿಷ್ಠೆಯೇ ಗುರಿಯಾಗಿರಬೇಕು. ಭಗವಂತನೊಬ್ಬನೇ ಎಲ್ಲಾ ದೇವತೆಗಳ ರೂಪದಲ್ಲಿಯೂ

ತೋರಿಕೊಂಡು ಭಕ್ತರನ್ನು ಅನುಗ್ರಹಿಸುತ್ತಾನೆಂಬುದು ನಿಜ; ಆದರೂ ಬೇರೆಬೇರೆಯ ದೇವತೆಗಳ ಆರಾಧನೆಯನ್ನು ಒಂದೇಸಲಕ್ಕೆ ಕೈಕೊಳ್ಳುವವರಿಗೆ ಚಿತ್ತವಿಕ್ಷೇಪವಾಗುವ ದೆಂದು ನನ್ನ ನಂಬಿಕೆ.

ಮಂತ್ರದ ಪುರಶ್ಚರಣೆಗೂ ಇಂತಿಷ್ಟು ಸಂಖ್ಯೆಯ ಜಪ, ಇಂತಿಷ್ಟು ಹೋಮಗಳು, ಇಂತಿಷ್ಟು ಬ್ರಾಹ್ಮಣಸಮಾರಾಧನೆ–ಎಂದು ನಿಯಮವಿದೆಯೆಂದು ಮಂತ್ರಶಾಸ್ತ್ರಜ್ಞರು ಹೇಳುತ್ತಾರೆ. ಆದ್ದರಿಂದ ಶಾಸ್ತ್ರನಿಯಮಬದ್ಧರಾಗದೆ ಜಪಾನುಷ್ಠಾನಕ್ಕೆ ಕೈ ಹಾಕಬಾರ ದೆಂಬುದು ನೆನಪಿನಲ್ಲಿರಲಿ.

ಮಂತ್ರಹೀನವಾಗಿ, ವಿಹಿತವಾದ ದಕ್ಷಿಣೆಯಿಲ್ಲದೆ, ಸಾತ್ತ್ವಿಕರಾದ ಶ್ರದ್ಧಾವಂತರಾದ ಅನುಷ್ಠಾತೃಗಳ ನೆರವಿಲ್ಲದೆ, ಪಾತ್ರರಾದವರಿಗೆ ಅನ್ನಸಂತರ್ಪಣೆಯಿಲ್ಲದೆ ಹೊರಗಿನ ಆಡಂಬರಕ್ಕೆ ಮಾತ್ರ ಬೆಲೆಯನ್ನು ಕೊಟ್ಟು ಅವಿಧಿಪೂರ್ವಕವಾಗಿ ಮಾಡುವ 'ನಾಮಯಜ್ಞಗಳು' ಹೆಸರಿಗೆ ಮಾತ್ರ ಯಜ್ಞಗಳೆನಿಸಿಕೊಂಡಿರುವವುಗಳು, ಅಸುರರ ಅನುಷ್ಠಾನಗಳಾಗುವವು. ಅವು ದೇವತೆಗಳಿಗೆ ತೃಪ್ತಿಯನ್ನುಂಟು ಮಾಡಲಾರವು, ಮಾಡಿದವರಿಗೆ ಚಿತ್ತಶಾಂತಿಯನ್ನೂ ಕೊಡಲಾರವು.

ಇಷ್ಟನ್ನು ಲಕ್ಷ್ಯದಲ್ಲಿಟ್ಟುಕೊಂಡು ಹಿತಮಿತವಾಗಿ ಮಾಡುವ ಅನುಷ್ಠಾನವು ಉತ್ತಮ ಫಲಪ್ರದವಾಗಿರುತ್ತದೆ.

## 212. ಸಾತ್ತ್ವಿಕಮನಸ್ಸು

### (ಮೇ 1964)

*ನೀವು ಬರೆದಿರುವದರ ಅಭಿಪ್ರಾಯವು ತಿಳಿಯಿತು. ಯಾವದಾದರೂ ವಿಚಾರ ಪ್ರಧಾನವಾದ ಚರ್ಚೆಯು ನಡೆಯುವಾಗ ಮನಸ್ಸಿಗೆ ಬೇಸರವಾಗುತ್ತದೆ. ಸಾಧನವನ್ನು ಮಾಡುವಾಗ–ಅಂದರೆ ಜಪ, ಧ್ಯಾನ–ಮುಂತಾದವುಗಳಿಗೆ ಕುಳಿತರೆ–ತೂಕಡಿಕೆ ಬರುತ್ತದೆ. ಇದಕ್ಕೇನು ಪರಿಹಾರ?–ಎಂದು ಕೇಳಿರುತ್ತೀರಿ.*

ಮನಸ್ಸು ಸಾತ್ತ್ವಿಕದ ಸ್ಥಿತಿಯ ಮಟ್ಟಕ್ಕೆ ಏರಿದ ಹೊರತು ತತ್ತ್ವವಿಚಾರವಾಗಲಿ, ಜಪಧ್ಯಾನಾದಿಸಾಧನವಾಗಲಿ ಎಂದಿಗೂ ರುಚಿಸಲಾರದು. ಇದಕ್ಕೆ ಪರಿಹಾರವೇನೆಂದರೆ ಮೊದಲು ತಮೋಗುಣವನ್ನು ಕಳೆಯುವ ಸಾಧನಗಳಿಗೆ ಮನಸ್ಸನ್ನು ಬಿಡಬೇಕು. ಶರೀರ

ಪ್ರಧಾನವಾದ ನಮಸ್ಕಾರ, ಸಾಧುಸೇವೆ, ದೇವಸ್ಥಾನಾದಿಗಳಲ್ಲಿ ಯಥಾಶಕ್ತಿಸೇವೆಯನ್ನು ಮಾಡುವದು–ಇಂಥ ಕೆಲಸಗಳಲ್ಲಿ ಮೊದಲು ತೊಡಗಿರಿ. ತಂದೆತಾಯಿಗಳು, ಗುರುಹಿರಿಯರು–ಇವರುಗಳಿಗಾಗಿ ದುಡಿದು ಪುಣ್ಯವನ್ನು ಕಟ್ಟಿಕೊಳ್ಳುವದಕ್ಕೆ ಪ್ರಾರಂಭಿಸಿರಿ.

ಸಾಮೂಹಿಕವಾದ ಭಜನೆ, (ನಾಮಕೀರ್ತನ)ವೇ–ಮುಂತಾದ ವಾಕ್ಪ್ರಧಾನವಾದ ಸಾಧನಗಳನ್ನು ಮಾಡುತ್ತಿರಬೇಕು. ನಿಮಗೆ ಸಂಗೀತದಲ್ಲಿ ಹೆಚ್ಚು ಪರಿಚಯವಿಲ್ಲದಿರುವದರಿಂದ ನಾಮಕೀರ್ತನಾರೂಪವಾದ ಭಜನೆಯಲ್ಲಿಯೇ ನಿರತರಾಗುವದು ಒಳ್ಳೆಯದು.

ಪುರಾಣಶ್ರವಣದಲ್ಲಿ ಭಗವಂತನ ಲೀಲೆಗಳನ್ನೂ ಅವನು ಭಕ್ತರನ್ನು ಉದ್ಧಾರಮಾಡಿದ ಕಥೆಗಳನ್ನೂ ಮುಖ್ಯವಾಗಿ ಕೇಳುತ್ತಾ ಬನ್ನಿರಿ. ಭಗವಂತನ ವಿಭೂತಿಗಳು, ಸಾಧುಸಂತರು–ಇವರಲ್ಲಿ ಭಗವದ್ಭಾವನೆಯನ್ನು ಮಾಡುವ ಅಭ್ಯಾಸವನ್ನು ಮೊದಲು ಮಾಡಿರಿ. ಅನುಭವಿಗಳಾದ ಗುರುಗಳಲ್ಲಿ ಭಕ್ತಿಪ್ರಧಾನವಾದ ಉಪದೇಶಗಳನ್ನು ಸ್ವಲ್ಪ ಹೊತ್ತು ಕೇಳುತ್ತಿರಿ.

ಹೀಗೆ ಮಾಡುತ್ತಿದ್ದರೆ ಕ್ರಮಕ್ರಮವಾಗಿ ನಿಮ್ಮ ಮನಸ್ಸು ಸಾತ್ತ್ವಿಕಸ್ಥಿತಿಯ ಮಟ್ಟಕ್ಕೆ ಏಳುವದು. ಆಮೇಲೆ ಆಧ್ಯಾತ್ಮಿಕವಿಚಾರದಲ್ಲಿಯೂ ಅಭಿರುಚಿಯು ಬರುತ್ತದೆ. ವಾದರೂಪವಾದ ಚರ್ಚೆಗೆ ಮಾತ್ರ ಹೋಗಬೇಡಿರಿ. ನಾಮಜಪವನ್ನು ಗಟ್ಟಿಯಾಗಿಯೇ ಮಾಡುತ್ತಿರುವ ಅಭ್ಯಾಸವನ್ನು ಇಟ್ಟುಕೊಳ್ಳಿರಿ; ಈಗ ಪಿಸುಮಾತಿನಲ್ಲಿ ಜಪಿಸುವ ಗೋಜಿಗೆ ಹೋಗಬೇಡಿರಿ.

'ನಿನ್ನಲ್ಲಿಯೇ ಮನಸ್ಸು ನಿಲ್ಲುವಂತೆ ಅನುಗ್ರಹಿಸು' ಎಂದು ನಿತ್ಯವೂ ಭಗವಂತನಲ್ಲಿ ಮೊರೆಯಿಡುತ್ತಿರಿ. ಕೊನೆಗೆ ಎಲ್ಲವೂ ಸರಿಹೋಗುವದು.

## 213. ಸಂನ್ಯಾಸ

### (ಜೂನ್ 1964)

*ತಾವು ಬರೆಯಿಸೋಣಾವಾದ ಪತ್ರವು ತಲುಪಿದೆ. ಸಂನ್ಯಾಸಾಶ್ರಮವನ್ನು ಸ್ವೀಕರಿಸಿ ಅದರ ಕ್ರಮವನ್ನೇ ಅನುಸರಿಸಬೇಕೆಂದು ಹಂಬಲಿಸುತ್ತಿರುವ ತಮ್ಮಂಥವರಿಗೆ ಯಾವ ಹಿತೋಕ್ತಿಯನ್ನು ತಾನೆ ನಮ್ಮಂಥವರು ಹೇಳಲು ಸಮರ್ಥರಾದಾರು? ಆದರೂ ಪರಮಹಂಸಪರಿವ್ರಾಜಕರಿಗೆಲ್ಲ ಆದರ್ಶಪ್ರಾಯರೆನಿಸಿಕೊಂಡು ಪ್ರಖ್ಯಾತವಾಗಿರುವ ಶ್ರೀಶಂಕರಭಗವತ್ಪಾದರ ಹಿತೋಕ್ತಿಯನ್ನೇ ಇಲ್ಲಿ ಉದಾಹರಿಸುವೆನು:*

ಶಮದಮಾದಿಸ್ತು ತದೀಯೋ ಧರ್ಮೋ ಬ್ರಹ್ಮಸಂಸ್ಥತಾಯಾ
ಉಪೋದ್ಬಲಕೋ ನ ವಿರೋಧೀ। ಬ್ರಹ್ಮನಿಷ್ಠತ್ವಮೇವ ಹಿ

ತಸ್ಯ ಶಮದಮಾದ್ಯುಪಬೃಂಹಿತಂ ಸ್ವಾಶ್ರಮವಿಹಿತಂ ಕರ್ಮ,
ಯಜ್ಞಾದೀನಿ ಚ ಇತರೇಷಾಮ್ । ತದ್ವ್ಯತಿಕ್ರಮೇ ಚ ತಸ್ಯ
ಪ್ರತ್ಯವಾಯಃ ॥ ಸೂ.ಭಾ.3–4–20.

ಗೃಹಸ್ಥರಿಗೆ ಯಜ್ಞದಾನತಪಸ್ಸುಗಳು ಹೇಗೆ ಆಶ್ರಮವಿಹಿತಕರ್ಮವೋ, ಅದನ್ನು ಬಿಟ್ಟರೆ ಹೇಗೆ ಅವರಿಗೆ ಪ್ರತ್ಯವಾಯಪ್ರಾಪ್ತಿಯಾಗುವದೋ ಹಾಗೆಯೇ ಪರಿವ್ರಾಜಕನಿಗೆ ಬ್ರಹ್ಮಸಂಸ್ಥನಾಗಿರುವದು, ಶಮದಮಾದಿಗಳನ್ನು ಅಳವಡಿಸಿಕೊಳ್ಳುವದಕ್ಕೆ ಪ್ರಯತ್ನಿಸುವದು–ಇವೇ ಆಶ್ರಮವಿಹಿತಕರ್ಮವು. ಅದನ್ನು ಬಿಟ್ಟು ಬೇರೆಯೇನಾದರೂ ಮಾಡುವದಕ್ಕೆ ಪ್ರಯತ್ನಿಸಿದರೆ ಅವನಿಗೆ ಪ್ರತ್ಯವಾಯವು ಪ್ರಾಪ್ತವಾಗುತ್ತದೆ ಎಂದು ಆಚಾರ್ಯರು ಸ್ಪಷ್ಟ ನುಡಿಗಳಿಂದ ಹೇಳಿರುತ್ತಾರೆ.

ಆದ್ದರಿಂದ ತಮ್ಮ ಆಶ್ರಮಕ್ಕೆ ಯಾವದಾದರೂ ಕರ್ಮವು ವಿಹಿತವಾಗಿದೆ ಎಂಬ ತಿಳಿವಳಿಕೆಯನ್ನು ಪೂರ್ಣವಾಗಿ ಬಿಟ್ಟು ಶಮದಮಾದಿಗಳನ್ನೂ ಅಮಾನಿತ್ವಾದಿಗಳನ್ನೂ ಅಭ್ಯಾಸಮಾಡುವದಕ್ಕೇ ತಾವು ತಮ್ಮ ಶಕ್ತಿಯನ್ನೆಲ್ಲ ವಿನಿಯೋಗಿಸಬೇಕು. ಶ್ರವಣಮನನ ನಿದಿಧ್ಯಾಸನಗಳನ್ನು ಬಿಡದೆ ಪ್ರಯತ್ನಿಸುತ್ತಾ ಬ್ರಹ್ಮನಿಷ್ಠರಾಗುವದಕ್ಕೇ ಪ್ರಯತ್ನಿಸಬೇಕು. ಬಾಹ್ಯವೇಷಕ್ಕೂ ಆಡಂಬರದ ಕರ್ಮಗಳಿಗೂ ಮನಸೋಲಬಾರದು. ಇನ್ನು ಲೌಕಿಕ ಕರ್ಮಗಳಲ್ಲಿ ಮನಸ್ಸನ್ನು ಹಾಕಿ ಚಂಚಲಗೊಳಿಸಿಕೊಳ್ಳಬಾರದೆಂದು ವಿಜ್ಞಾಪಿಸಿಕೊಳ್ಳುವದೇನಿದೆ?

ಪರಮಾತ್ಮನ ಕಡೆಗೆ ಹಿಂತಿರುಗುವದೇ ಪರಿವ್ರಾಜಕನ ಕರ್ತವ್ಯ. ಮನಸ್ಸನ್ನು ಬಹಿರ್ಮುಖವಾಗಿ ಮಾಡಿಕೊಂಡು ಹರಿದಾಡುವದು ಅವನಿಗೆ ಸರ್ವಥಾ ನಿಷಿದ್ಧ–ಎಂದು ನನ್ನ ನಂಬಿಕೆ.

## 214. ಶಂಕರಾರಾಧನೆ

(ಜುಲೈ 1964)

*ಶ್ರೀಮಚ್ಛಂಕರಭಗವತ್ಪಾದರವರು ಅನ್ವರ್ಥವಾಗಿಯೂ ಜಗದ್ಗುರುಗಳೆನಿಸಿರುತ್ತಾರೆ. ಅಂಥವರ ಆರಾಧನೆಯ ದಿನವನ್ನು ಸ್ಮರಿಸಿಕೊಳ್ಳುವದು ಆಸ್ತಿಕರಿಗೆ ಶ್ರೇಯಸ್ಕರವೆಂಬುದನ್ನು ಹೇಳಬೇಕಾದದ್ದೇ ಇಲ್ಲ. ಆದ್ದರಿಂದ ನಿಮ್ಮ ಊರಿನಲ್ಲಿ ಜನರು ಶ್ರದ್ಧಾಭಕ್ತಿಗಳಿಂದ*

*ದೇವಾಲಯದಲ್ಲಿ ಸೇರಿ ಆರಾಧನೆಯನ್ನು ಮಾಡಿದರೆಂಬುದನ್ನು ಕೇಳಿ ನನಗೆ ಬಹಳ ಹರ್ಷವಾಯಿತು.*

ಆದರೆ ಬರಿಯ ಪಾನಕಪೂಜೆ, ಶಂಕರವಿಜಯದ ಪಾರಾಯಣ, ಶಂಕರಾಚಾರ್ಯರ ವಿಗ್ರಹದ ಉತ್ಸವ–ಇವುಗಳು ಆ ಆಚಾರ್ಯರ ಆರಾಧನೆ ಎನ್ನಿಸಿಕೊಳ್ಳಲಾರವೆಂದು ನಿಮಗೆ ನಿಜವನ್ನು ತಿಳಿಸಿಬಿಡಬೇಕಾಗಿದೆ. ಪಾನಕ ಕೋಸಂಬರಿಗಳನ್ನು ಬ್ರಾಹ್ಮಣಸುವಾಸಿನಿಯರಿಗೆ ಹಂಚುವದಕ್ಕೂ ಮುಮುಕ್ಷುಗಳಿಗೆ ಪ್ರವೃತ್ತಿನಿವೃತ್ತಿಧರ್ಮಗಳ ತತ್ತ್ವವನ್ನು ಬೋಧಿಸಿದ ಆಚಾರ್ಯರ ಆರಾಧನೆಗೂ ಏನು ಸಂಬಂಧವಿದ್ದೀತು? ''ಮಾಧವೀಯ ಶಂಕರವಿಜಯ'' ವೆಂಬುದು ಆಚಾರ್ಯರ ಕಥೆಯನ್ನು ಕಾವ್ಯವಾಗಿ ಬರೆದಿರುವ ಅನೇಕಗ್ರಂಥಗಳಲ್ಲಿ ಒಂದಾಗಿದೆ. ಕಾವ್ಯಗಳನ್ನು ಪ್ರಾಸಾದಿಕ ಗ್ರಂಥಗಳಂತೆ ಪಾರಾಯಣಕ್ಕೆ ಇಟ್ಟುಕೊಳ್ಳುವದು ಎಷ್ಟರ ಮಟ್ಟಿಗೆ ಸರಿ? ಶ್ರೇಷ್ಠ ಕವಿಯಾದ ಕಾಳಿದಾಸನ ಗ್ರಂಥವನ್ನು ಶ್ರೀರಾಮಪ್ರೀತ್ಯರ್ಥವಾಗಿಯಾದರೂ ಪಾರಾಯಣ ಮಾಡುತ್ತಾರೆಯೆ? ನೀವೇ ಯೋಚಿಸಿರಿ.

ಶಂಕರವಿಗ್ರಹದ ಉತ್ಸವವು ಒಂದು ಪುಣ್ಯಕೆಲಸವಾಗಿರಬಹುದು. ಆದರೆ ಆಚಾರ್ಯರ ಉಪದೇಶವನ್ನು ಶ್ರವಣಮಾಡುವದು, ಅದನ್ನು ಆಚರಣೆಗೆ ತರುವೆನೆಂಬ ಸಂಕಲ್ಪವನ್ನು ಮಾಡಿಕೊಳ್ಳುವದು– ಇವು ಆಚಾರ್ಯರಿಗೆ ಹೆಚ್ಚು ಪ್ರೀತಿಯನ್ನುಂಟು ಮಾಡುವ ಕಾರ್ಯಗಳಾಗಿರುತ್ತವೆ.

ಕರ್ಮಯೋಗ, ಧ್ಯಾನಯೋಗ, ಭಕ್ತಿಯೋಗ–ಇವುಗಳ ರಹಸ್ಯವನ್ನು ಬಲ್ಲವರಿಂದ ಕೇಳುವದು ಶಂಕರರ ನಿಜವಾದ ಆರಾಧನೆಯಾಗುತ್ತದೆ. ಶ್ರೀ ಶಂಕರಭಗವತ್ಪಾದರು ವೇದಾಂತಗಳೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಉಪನಿಷತ್ತುಗಳಿಗೆ ಭಾಷ್ಯಗಳನ್ನು ಬರೆದಿರುತ್ತಾರೆ. ಈ ಜಗತ್ತೆಲ್ಲವೂ ಪರಮಾತ್ಮನೇ, ಆತನು ನಮ್ಮೆಲ್ಲರ ನಿಜವಾದ ಆತ್ಮನು–ಎಂಬ ಅಮೋಘಸಿದ್ಧಾಂತವೇ ವೇದಾಂತೋಪದೇಶದ ಸಾರವೆಂದು ಆ ಆಚಾರ್ಯರು ಸಾರಿರುತ್ತಾರೆ.

ಶ್ರೀಶಂಕರಭಗವತ್ಪಾದರ ನಿಜವಾದ ಆರಾಧನೆ ಎಂದರೆ ಶಾಸ್ತ್ರೋಕ್ತವಾದ ನಮ್ಮ ನಮ್ಮ ವರ್ಣಾಶ್ರಮಧರ್ಮಗಳನ್ನೂ, ನಮ್ಮ ಲೌಕಿಕಕರ್ತವ್ಯಗಳನ್ನೂ ಭಗವತ್ಪ್ರೀತ್ಯರ್ಥವಾಗಿ ಮಾಡುವ ಸಂಕಲ್ಪವನ್ನು ಮಾಡಿ ನಮ್ಮ ಕೈಯಲ್ಲಾದಮಟ್ಟಿಗೂ ಆ ರೀತಿಯಲ್ಲಿ ನಡೆಯುವದು, ಆ ಮಹನೀಯರ ಉಪದೇಶಗಳನ್ನು ಶ್ರದ್ಧಾಭಕ್ತಿಗಳಿಂದ ಕೇಳುವದು, ಇವೇ ಆಗಿವೆ–ಎಂಬುದನ್ನು ಮತ್ತೊಮ್ಮೆ ಹೇಳಿ ಈ ಪತ್ರವನ್ನು ಮುಗಿಸುತ್ತೇನೆ.

## 215. ಉಪನಯನವೂ ಉಪಾಕರ್ಮವೂ

(ಆಗಸ್ಟ್ 1964)

*ನಿಮ್ಮ ಪತ್ರವನ್ನು ಓದಿ ನನಗೆ ಬಹಳ ವ್ಯಸನವಾಯಿತು. ಹುಡುಗನಿಗೆ ಜನಿವಾರವನ್ನು ಹಾಕಿಸುವದಕ್ಕೆ ಮಾಡಿದ ಸಾಲವು ತೀರಿಲ್ಲ; ಈಗ ಆವರಿವರು ಹೆಣ್ಣುಕೊಡುವದಕ್ಕೆ ಬರುತ್ತೇವೆನ್ನುತ್ತಿದಾರೆ. ಈ ಹೊರೆಯನ್ನು ಹೊರುವ ಚಿಂತೆಯಿಂದ ನನಗೆ ಯಾವ ಅಧ್ಯಾತ್ಮಸಾಧನಕ್ಕೂ ಬಿಡುವಿಲ್ಲವಾಗಿದೆ–ಎಂದು ಬರೆದಿರುತ್ತೀರಿ.*

ಸನಾತನಧರ್ಮದ ಗುರಿಯನ್ನು ನೀವು ಅರಿತಿದ್ದರೆ ಇಂಥ ಕರೆಕರೆಗೆ ಅವಕಾಶವೇ ಇರುತ್ತಿರಲಿಲ್ಲ. ಹುಡುಗನಿಗೆ ಉಪವೀತವನ್ನು ಧಾರಣೆಮಾಡಿಸುವದು ಬ್ರಹ್ಮಚರ್ಯಕ್ಕೆ ಅಂಗವಾಗಿ. ಬ್ರಹ್ಮವೆಂಬುದು ವೇದ, ವೇದದಲ್ಲಿ ಹೇಳಿರುವ ಪರಮಾತ್ಮತತ್ತ್ವ–ಇವೆರಡಕ್ಕೂ ಹೆಸರು.

ಎಷ್ಟೋ ವಯಸ್ಸಿನವರೆಗೆ ಹುಡುಗನಿಗೆ ಉಪನಯನವನ್ನು ಮಾಡಿಸದೆ, ಅವನನ್ನು ವೇದಕ್ಕೆ ದೂರವಾಗಿ ಮಾಡಿದ್ದು ಮೊದಲನೆಯ ತಪ್ಪು. ಉಪನಯನವೆಂದರೆ ವೇದಾಧ್ಯಯನಕ್ಕಾಗಿ ಗುರುಗಳಲ್ಲಿಗೆ ಬರುವದು ಎಂಬುದು ನಿಮ್ಮ ಕಿವಿಗೆ ಬಿದ್ದೇ ಇಲ್ಲವೆಂದಾಯಿತು. ಉಪನಯನಕ್ಕೆ ನೀವು ಹೇಳುವಷ್ಟು ಸಾಲಮಾಡಬೇಕಾದದ್ದು ಏನೂ ಇರಲಿಲ್ಲ. ಹುಡುಗನಿಗೆ ಗಾಯತ್ರಿಯ ಉಪದೇಶಮಾಡುವ ಯೋಗ್ಯತೆಯನ್ನು ಸಂಪಾದಿಸಿ ಕೊಳ್ಳುವದಕ್ಕೆ ನೀವು ಗಾಯತ್ರೀಜಪವನ್ನು ಹೆಚ್ಚು ಮಾಡಬೇಕಾಗಿತ್ತು; ಅಥವಾ ಯೋಗ್ಯ ರಾದ ಕೆಲವರು ಬ್ರಾಹ್ಮಣರಿಂದ ಅದನ್ನು ನಿಮಗಾಗಿ ಮಾಡಿಸಿ ತಕ್ಕ ದಕ್ಷಿಣೆಯನ್ನು ಅವರಿಗೆ ಕೊಡಬೇಕಿತ್ತು. ಸುಮ್ಮನೆ ನೆಂಟರು, ಇಷ್ಟರು–ಎಲ್ಲರೂ ಬರಬೇಕೆಂದು ದೂರದಿಂದ ಕರೆಯಿಸಿ ರೈಲುಪ್ರಯಾಣದ ವೆಚ್ಚಕ್ಕೆ ಎಲ್ಲರನ್ನೂ ಗುರಿಮಾಡಿ ನೀವೂ ಅನವಶ್ಯವಾದ ಋಣಭಾರಕ್ಕೆ ತುತ್ತಾದಿರಿ. ಹುಡುಗನಿಗೆ ಮಾತ್ರ ಉಪನಯನದ ಫಲವು ಬರಲಿಲ್ಲ.

ಉಪಾಕರ್ಮವೆಂದರೆ ವೇದಾರಂಭವೆಂಬುದನ್ನು ನೆನಪಿನಲ್ಲಿಡಿರಿ. ಅಂದಿನಿಂದ ಮುಖ್ಯವಾದ ವೇದಮಂತ್ರಗಳನ್ನಾದರೂ ಹೇಳಿಕೊಡುವದರಲ್ಲಿ ಅನಾದರಮಾಡುವದು ಬೇಡ; ನಿಮ್ಮ ಶಾಖೆಯ ವೇದದ ಮುಖ್ಯಮಂತ್ರಗಳನ್ನು ಸರಿಯಾಗಿ ಅರ್ಥಸಮೇತವಾಗಿ ಬರೆಯಿಸಿ, ಅಚ್ಚುಮಾಡಿಸಿ ಆ ಮಂತ್ರಗಳನ್ನು ಸರಿಯಾಗಿ ಉಚ್ಚಾರಣೆ ಮಾಡುವದಕ್ಕೆ ಕಲಿಸಿರಿ. ಸಂಧ್ಯಾವಂದನೆ, ಅಗ್ನಿಕಾರ್ಯ–ಮುಂತಾದವುಗಳನ್ನು ಮಾಡುವಾಗ ಉಪಯೋಗಿಸುವ ಮಂತ್ರಗಳ ಅರ್ಥವನ್ನು ಭಾವನೆಮಾಡುತ್ತಲೇ ಕರ್ಮವನ್ನು ಮಾಡುವಂತೆ ಏರ್ಪಾಡುಮಾಡಿರಿ. ಅಚ್ಚುಮಾಡಿಸಿದ ಕೆಲವು ಪ್ರತಿಗಳನ್ನು ಬ್ರಾಹ್ಮಣ ಬ್ರಹ್ಮಚಾರಿಗಳಿಗೂ ಉಚಿತವಾಗಿ ಕೊಡಿರಿ; ಬ್ರಾಹ್ಮಣ್ಯವನ್ನು ಉದ್ಧಾರಮಾಡಿದ ಪುಣ್ಯವೂ ನಿಮಗೆ ಬರುತ್ತದೆ. ಉಪನಯನದ ಪ್ರಯೋಜನವೂ ಆಗುತ್ತದೆ.

# 216. ಸಂನ್ಯಾಸಿಗಳೂ ಸಾಧುಗಳೂ

## (ಸೆಪ್ಟೆಂಬರ್ 1964)

*ಸಂನ್ಯಾಸಾಶ್ರಮಕ್ಕೆ ಮುಖ್ಯ ಧರ್ಮವು ಯಾವದು? ಸಂನ್ಯಾಸಿಯಾಗಿರುವದು ಮೇಲೋ, ಸಾಧುವಾಗಿರುವದು ಮೇಲೋ? ಪ್ರಪಂಚವನ್ನು ಬಿಟ್ಟು ಕಂಡಕಡೆಗೆ ಅಲೆಯುವ ಸಂನ್ಯಾಸಿಗಳಿಗಿಂತ ಅಥವಾ ಸಾಧುಗಳಿಗಿಂತ, ಪ್ರಪಂಚದಲ್ಲಿಯೇ ಗೃಹಸ್ಥನಾಗಿದ್ದು ಯಾವದಾದರೊಂದು ಉದ್ಯೋಗದಲ್ಲಿ ನಿಲ್ಲುವವನು ತನಗೂ ಜನರಿಗೂ ಹೆಚ್ಚಿನ ಉಪಕಾರಿಯಾಗುತ್ತಾನೆ–ಎಂದು ಕೆಲವರು ವಾದಿಸುತ್ತಾರೆ. ಈ ವಿಷಯದಲ್ಲಿ ತಮ್ಮ ಅಭಿಪ್ರಾಯವೇನು?–ಎಂದು ಬರೆದ ತಮ್ಮ ಪತ್ರವನ್ನ ಓದಿಕೊಂಡೆ.*

'ಸಂನ್ಯಾಸಿ', 'ಸಾಧು', 'ಗೃಹಸ್ಥ'–ಎಂಬ ಶಬ್ದಗಳು ಸಂಜ್ಞಾನಾಮಗಳು; ಕೆಲಕೆಲವು ವೇಷದ ಅಥವಾ ವರ್ತನೆಯ ಜನರಿಗೆ ರೂಢಿಯಾಗಿ ಕೊಟ್ಟಿರುವ ಹೆಸರುಗಳು ಎಂದು ನೀವು ಭಾವಿಸಿಕೊಂಡಂತೆ ತೋರುತ್ತಿದೆ. ಆದರೆ ನಿಜವು ಹಾಗಿಲ್ಲ. 'ನಿಷ್ಕ್ರಿಯನಾದ ಪರಮಾತ್ಮನೇ ನನ್ನ ಆತ್ಮನು' ಎಂಬ ಪರಮಾರ್ಥಜ್ಞಾನದಿಂದ ಸ್ವರೂಪನಿಷ್ಠ ನಾಗಿರುವವನೇ ಮುಖ್ಯಾರ್ಥದಲ್ಲಿ 'ಸಂನ್ಯಾಸಿ' ಎನ್ನಿಸಿಕೊಳ್ಳುತ್ತಾನೆ. ಅಂಥ ಜ್ಞಾನವನ್ನು ಸಂಪಾದಿಸಿಕೊಳ್ಳುವ ತೀವ್ರೇಚ್ಛೆಯಿಂದ ವೇದೋಕ್ತವಾದ ಗೃಹಸ್ಥಾಶ್ರಮದ ಕರ್ಮಗಳನ್ನು ಮಾಡುವದನ್ನು ವಿಧ್ಯುಕ್ತರೀತಿಯಿಂದ ಬಿಟ್ಟು ಪರಮಾತ್ಮನ ವಿಷಯದ ಶ್ರವಣ, ಮನನ, ಧ್ಯಾನ–ಇವುಗಳನ್ನು ಮಾಡುವದಕ್ಕೆ ತಕ್ಕಂತೆ ಶಮದಮಾದಿಗಳೊಡಗೂಡಿ ನಾಲ್ಕನೆಯ ಆಶ್ರಮವನ್ನು ಪಡೆದಿರುವವನೂ ಗೌಣಾರ್ಥದಲ್ಲಿ ಸಂನ್ಯಾಸಿ.

'ಸಾಧು' ವೆಂದರೆ ಭಗವಂತನ ಭಕ್ತನಾಗಿದ್ದುಕೊಂಡು ಭಗವತ್ಪ್ರೀತಿಯಾಗಲೆಂದು ಲೋಕೋಪಕಾರದ ಕಾರ್ಯವನ್ನು ಮಾಡುತ್ತಿರುವವನು. ಸಾಧುವು ಸಂನ್ಯಾಸಾಶ್ರಮದಲ್ಲಿರಬೇಕೆಂಬ ನಿಯಮವೇನೂ ಇಲ್ಲ; ಸಂನ್ಯಾಸಿಯೂ ತನ್ನ ಸಾಧನೆಗೆ ಅಡ್ಡಿಯಲ್ಲದಷ್ಟು ಮಟ್ಟಿಗೆ ಸಾಧುವಾಗಿರಬಹುದು.

'ಗೃಹಸ್ಥ' ನೆಂದರೆ ಶಾಸ್ತ್ರೋಕ್ತಕರ್ಮವನ್ನು ಮಾಡುವದಕ್ಕೆಂದು ವಿವಾಹಿತ ನಾಗಿರುವವನು. ಅವನು ತನ್ನ ಕುಟುಂಬಭರಣವನ್ನೇ ಅಲ್ಲದೆ ಅತಿಥಿಅಭ್ಯಾಗತರ ಸೇವೆ, ದೇವಾರಾಧನೆ, ಆಶ್ರಮಕ್ಕೆ ತಕ್ಕಷ್ಟು ಮಟ್ಟಿಗೆ ಅಹಿಂಸಾಬ್ರಹ್ಮಚರ್ಯಾದಿಗಳು– ಇವುಗಳಿಂದ ಕೂಡಿರುತ್ತಾನೆ. ತನ್ನ ಸೀಮಿತಕ್ಷೇತ್ರದಲ್ಲಿ ಅವನೂ 'ಸಾಧು'ವಾಗಿರಬಹುದು.

ಈ ಉತ್ತರದಿಂದ ತಮಗೆ ಎಷ್ಟು ಮಟ್ಟಿಗೆ ಸಮಾಧಾನವಾಯಿತೆಂಬುದಕ್ಕೆ ಬರೆಯಿರಿ. ಅವಶ್ಯವೆಂದರೆ ಅಭಿಪ್ರಾಯವನ್ನು ವಿವರಿಸಿ ಇನ್ನೊಂದು ಪತ್ರವನ್ನು ಬರೆಯುವೆನು.

## 217. ಮತ್ತೊಬ್ಬರಿಗಾಗಿ ಅನುಷ್ಠಾನವನ್ನು ಮಾಡುವದು

**(ಅಕ್ಟೋಬರ್ 1964)**

*ತಮ್ಮ ಪತ್ರವನ್ನು ಓದಿ ಪ್ರಶ್ನೆಯ ಸಾರವನ್ನು ತಿಳಿದುಕೊಂಡೆ. ಮತ್ತೊಬ್ಬರಿಗಾಗಿ ಯಾವದಾದರೊಂದು ಅನುಷ್ಠಾನವನ್ನು ಮಾಡಬಹುದೆ? ಅದರಿಂದ ನನಗೇನಾದರೂ ಕೆಡುಕಾದೀತೆ?–ಎಂದು ನೀವು ಕೇಳಿದ್ದೀರಿ.*

ಸಾತ್ತ್ವಿಕವಾದ ಅನುಷ್ಠಾನಗಳನ್ನು ಮಾಡುವದು ಯಾವಾಗಲೂ ಪುಣ್ಯ ಕಾರ್ಯವೇ; ಆದ್ದರಿಂದ **'ನ ಹಿ ಕಲ್ಯಾಣಕೃತ್ ಕಶ್ಚಿದ್ ದುರ್ಗತಿಂ ತಾತ ಗಚ್ಛತಿ'** ಎಂಬ ಭಗವದ್ವಚನದಂತೆ ಒಳ್ಳೆಯ ಕಾರ್ಯವನ್ನು ಮಾಡಿದವರಿಗೆ ಎಂದಿಗೂ ದುರ್ಗತಿಯಾಗುವ ಹಾಗಿಲ್ಲವೆಂಬುದು ಸ್ಪಷ್ಟ.

ಆದರೆ ಇದರಲ್ಲಿ ಒಂದು ರಹಸ್ಯವಿದೆ. ಪೂಜೆ, ಪಾರಾಯಣ, ಶಾಸ್ತ್ರಚಿಂತನ, ಜಪ, ಹೋಮ–ಮುಂತಾದ ಕಾರ್ಯಗಳು ತನ್ನತನ್ನ ಶ್ರೇಯಸ್ಸಿಗಾಗಿ ಶಾಸ್ತ್ರದಲ್ಲಿ ವಿಹಿತವಾಗುತ್ತವೆ. ಆದ್ದರಿಂದ ಮೊದಲು ತನ್ನತನ್ನ ಪುರುಷಾರ್ಥಕ್ಕೆಂದು ನಿತ್ಯವೂ ಕರ್ಮಾಚರಣೆ, ಜಪಾದಿಗಳ ಅನುಷ್ಠಾನ, ಶಾಸ್ತ್ರಾವಲೋಕನ–ಮುಂತಾದವುಗಳನ್ನು ಮಾಡುತ್ತಿರಬೇಕೆಂಬುದನ್ನು ಹೇಳಬೇಕಾದದ್ದಿಲ್ಲ. ಯಾವನು ತನಗಾಗಿ ಕರ್ಮಾದಿಗಳನ್ನು ಮಾಡಲು ಅಶಕ್ತನಾಗಿರುವನೋ, ಮತ್ತೊಬ್ಬರ ಅಥವಾ ಅನೇಕರ ಸಹಾಯದಿಂದಲೇ ಆಗಬೇಕಾಗಿರುವ ಅನುಷ್ಠಾನವನ್ನು ಕೈಕೊಂಡಿರುವನೋ, ಅಂಥವನಿಗೆ ಸಹಾಯಕರಾಗಿ ಇಂಥ ಅನುಷ್ಠಾನಗಳನ್ನು ಮಾಡುವದೂ ಪುಣ್ಯ ಕಾರ್ಯವಾಗುವದು. ಆದರೆ ತನಗಾಗಿ ಯಾವ ಅನುಷ್ಠಾನವನ್ನೂ ಮಾಡಿಕೊಳ್ಳುವಷ್ಟು ಕಾಲವನ್ನು ಇಟ್ಟುಕೊಳ್ಳದೆ ತನಗೆ ತಿಳಿದಿರುವ ಶಾಸ್ತ್ರಜ್ಞಾನವನ್ನು ಮತ್ತೊಬ್ಬರಿಗಾಗಿ ಮಾಡುವ ಅನುಷ್ಠಾನಕ್ಕೆಂದು, ಧನಾರ್ಜನೆಯ ನಿಮಿತ್ತದಿಂದಲೇ ಯಾವನು ಮಾಡುವನೋ, ಅವನಿಗೆ ಎರಡು ಬಗೆಯ ಪಾಪವು ಗಂಟು ಬೀಳುವದು; ತನ್ನ ನಿತ್ಯಕರ್ತವ್ಯವನ್ನು ಬಿಟ್ಟ ದೋಷವೊಂದು, ಶಾಸ್ತ್ರಾದಿಜ್ಞಾನವನ್ನು ಜೀವಿತಕ್ಕಾಗಿ ಮಾರಿಕೊಂಡ ದೋಷವೊಂದು, ಈ ಎರಡೂ ಹೆಚ್ಚಿನ ಅನರ್ಥಕ್ಕೆ ಕಾರಣವಾಗಿರುತ್ತವೆ. ಇದೂ ಅಲ್ಲದೆ ಕೇವಲ ಅರ್ಥಸಂಪಾದನೆಯ ದೃಷ್ಟಿಯಿಂದಲೇ ಮತ್ತೊಬ್ಬ ಯಜಮಾನನ ಅನುಷ್ಠಾನದಲ್ಲಿ ಭಾಗವಹಿಸುತ್ತಿರುವವನಿಗೆ ಅನುಷ್ಠಾನದ ನ್ಯೂನಾತಿರಿಕ್ತಗಳನ್ನು ಲೆಕ್ಕಕ್ಕೆ ತಾರದೇಇರುವದು, ಪರೋಕ್ಷವಾಗಿ ಅನೃತ, ಹಿಂಸೆ, ಕಾಮಕ್ರೋಧಲೋಭಗಳಿಗೆ ಪರವಶನಾಗುವಿಕೆ–ಇಂಥ ದುಷ್ಕೃತ್ಯಗಳೂ ಅನಿವಾರ್ಯ ವಾಗುವವು.

ಆದ್ದರಿಂದ ಪಾರಾಯಣ, ಪುರಾಣಶ್ರವಣ, ಪೂಜಾದಿಗಳನ್ನು ಮಾಡಿಸುವದು, ತತ್ತ್ವಬೋಧೆ–ಇಂತವುಗಳನ್ನು ದೇಹಯಾತ್ರೆಗೆಂದು ಉಪಯೋಗಿಸಿಕೊಳ್ಳುವದು ಪತನ ಕಾರಣವಾಗುವದೆಂಬುದಕ್ಕೆ ಸಂಶಯವಿಲ್ಲ. ಈ ವಿಷಯದಲ್ಲಿ ಶ್ರೇಯಸ್ಕಾಮಿಗಳು ಬಹಳ ಎಚ್ಚರಿಕೆಯಿಂದಿರಬೇಕು–ಎಂದೇ ಹೇಳಬೇಕಾಗಿದೆ.

## 218. ಗಣಪತಿಯ ಪೂಜೆ

### (ನವೆಂಬರ್ 1964)

*ನಿಮ್ಮ ಊರಿನಲ್ಲಿ ಗಣಪತಿಯ ಉತ್ಸವವು ಬಹಳ ವಿಜೃಂಭಣೆಯಿಂದ ನಡೆಯುತ್ತಿದೆ ಎಂಬುದನ್ನು ಕೇಳಿ ನನಗೆ ಸಂತೋಷವಾಯಿತು. ಆ ಉತ್ಸವಕ್ಕೆ ಸಾವಿರ ಗಟ್ಟಲೆ ರೂಪಾಯಿಗಳು ವೆಚ್ಚವಾಗುತ್ತಿದ್ದರೂ ಅದರಲ್ಲಿ ಧರ್ಮದ ತಿರುಳಿಲ್ಲದೆ ಬರಿಯ ಲೌಕಿಕರೂಪದ ದಂಭದ ಉತ್ಸವವಾಗುತ್ತಾ ಬರುತ್ತಿರುವದು ಮಾತ್ರ ಶೋಚನೀಯ.*

ನಮ್ಮ ದೇಶವು ಧರ್ಮನಿರಪೇಕ್ಷವಾದರೆ ಎಲ್ಲರಲ್ಲಿಯೂ ಒಗ್ಗಟ್ಟು ಉಂಟಾಗುವದೆಂಬ ಭಾವನೆಯಂತೂ ಹುರುಳಿಲ್ಲದ್ದೆಂಬುದಕ್ಕೆ ಸಂಶಯವಿಲ್ಲ. ಏಕೆಂದರೆ ಪರಮಾತ್ಮನು ಎಲ್ಲರಿಗೂ ಆತ್ಮನೆಂಬ ಭಾವನೆಯನ್ನು ಮೈಗೂಡಿಸುವ ಧರ್ಮವನ್ನು ಬಿಟ್ಟರೆ ಜನರಲ್ಲಿ ಐಕಮತ್ಯವು ಹೇಗೆ ಬಂದೀತು? ಧರ್ಮದಿಂದ ದೂರದೂರಕ್ಕೆ ಬಂದಂತೆಲ್ಲ ಜನರಲ್ಲಿ ವೈಷಮ್ಯವು ಹೆಚ್ಚುವದೆಂಬುದು ವರ್ತಮಾನಕಾಲದಲ್ಲಿರುವ ಸ್ಥಿತಿಯ ಅವಲೋಕದಿಂದ ಮಾತ್ರವಲ್ಲ, ಹಿಂದಿನ ಇತಿಹಾಸದಿಂದಲೂ ಗೊತ್ತಾಗುತ್ತದೆ.

ಧರ್ಮದ ಹೆಸರಿನಲ್ಲಿ ಜನಾಂಗಗಳಿಗೆ ಪರಸ್ಪರವಾಗಿ ಕಲಹವಾಗಿರುವದು ನಿಜ; ಅದು ಧರ್ಮದ ಮಹಿಮೆಯನ್ನರಿಯದ ಮತಾಂಧರಿಂದ ಆದದ್ದು. ಜನರನ್ನೆಲ್ಲ ಒಗ್ಗಟ್ಟು ಮಾಡಿ ದೇಶಕ್ಕೆ ಕಲ್ಯಾಣವನ್ನು ಮಾಡುವೆವೆಂದು ಹೇಳಿಕೊಳ್ಳುತ್ತಿರುವ ಸ್ವಾರ್ಥಿ ರಾಜಕಾರಣಿಗಳ ಪಂಗಡಗಳು ಒಬ್ಬರೊಡನೊಬ್ಬರು ಕಚ್ಚಾಡುತ್ತಿರುವದು ದಂಡನೀತಿಯ ತಪ್ಪೆಂದು ಯಾರೂ ಹೇಳಲಾರರಷ್ಟೆ?

ವಿಘ್ನನಿವಾರಣೆಗೂ ಋದ್ಧಿಸಿದ್ಧಿಗಳಿಗೂ ಗಣಪತಿಯ ಉಪಾಸನೆಯನ್ನು ಮಾಡಬೇಕೆಂದು ಬಲ್ಲವರು ಹೇಳುವರು. 'ಗಣೇಶ' ಉಪಪುರಾಣವನ್ನು ಒಂದು ಸಲ ಹೇಳಿಸಿ ಕೇಳಿರಿ. ಆಗ ನಿಮಗೆ ಗಣಪತಿಯಲ್ಲಿ ಭಕ್ತಿಯನ್ನಿಡುವದರಿಂದಾಗುವ ಮಹತ್ತ್ವವು ಮನವರಿಕೆಯಾಗುವದು; ನೀವು ಹಾಸ್ಯಗರ್ಭಿತವಾಗಿ ಪರಾಮರ್ಶಿಸಿರುವ ಗಣಪತಿಯ ಆಕಾರದಲ್ಲಡಗಿರುವ ತತ್ತ್ವವೂ ಮನದಟ್ಟಾಗುವದು. ಯಾವ ರೂಪದಿಂದ ಪೂಜೆ

ಮಾಡಿದರೂ ಒಬ್ಬ ಪರಮೇಶ್ವರನನ್ನೇ ನಾವು ಆಯಾ ವಿಶೇಷ ದೃಷ್ಟಿಯಿಂದ ಶರಣು ಹೊಕ್ಕಿರುವೆವೆಂಬುದನ್ನು ಮರೆಯದೆ ಇರಬೇಕು. ಪರಮೇಶ್ವರನೆಂದರೆ ಯಾವದಾದ ರೊಂದು ಪಂಗಡದ ಜನರನ್ನು ನಿರಂಕುಶವಾಗಿ ಆಳುತ್ತಿರುವ ವ್ಯಕ್ತಿ ವಿಶೇಷವಲ್ಲ. ಸರ್ವಗತನಾಗಿ ಸರ್ವರ ಆತ್ಮನಾಗಿರುವ ಪರಮತತ್ತ್ವವೇ ಆತನು. ಆತನ ಉಪಾಸನೆಯಲ್ಲಿ ಮನಸ್ಸು ಇರುವ ಜನಾಂಗಕ್ಕೆ ಇಹಪರಸುಖಗಳು ಕಟ್ಟಿಟ್ಟ ಬುತ್ತಿಯಾಗಿರುವವು.

ಧರ್ಮವಿರುದ್ಧವಲ್ಲದ ಅರ್ಥಕಾಮಗಳೇ ನಿಜವಾಗಿ ಪುರುಷಾರ್ಥಗಳು; ಇಲ್ಲದಿದ್ದರೆ ಅರ್ಥವು ಅನರ್ಥ, ಕಾಮವು ಜೀವಿತ ವಿರಾಮ. ಈ ಗುಟ್ಟು ಜನರ ಮನದಲ್ಲಿ ಸುಳಿಯುವಂತೆ ಮಾಡುವದಕ್ಕೆ ಗಣಪತಿಯ ಪೂಜಾಸ್ತೋತ್ರಧ್ಯಾನಾದಿಗಳ ತಿಳಿವಳಿಕೆಯು ಅತ್ಯವಶ್ಯ.

## 219. ಗೋತ್ರಪ್ರವರಗಳು

**(ಡಿಸೆಂಬರ್ 1964)**

*ತಮ್ಮ ಪತ್ರವು ತಲುಪಿತು. ವಿಶ್ವಾಮಿತ್ರರು ಕ್ಷತ್ರಿಯರಾಗಿದ್ದು ಬ್ರಹ್ಮರ್ಷಿಯಾದವರು. ಈಗಿನ ಬ್ರಾಹ್ಮಣರು ಅವರ ಗೋತ್ರಜರು ಹೇಗಾದರು?–ಎಂದು ತಮ್ಮ ಪ್ರಶ್ನೆ.*

ಪ್ರವರಗಳಲ್ಲಿ ಕ್ಷತ್ರಿಯರ ಹೆಸರುಗಳು ಇರುವದು ಇದುವರೆಗೂ ತಮಗೆ ತಿಳಿದಿರಲಿಲ್ಲವೆಂದಾಯಿತು. ಉದಾಹರಣೆಗೆ ಅಂಗಿರಸ, ಅಂಬರೀಷ, ಯೌವನಾಶ್ವ. ಈ ಮೂರು ಋಷಿಗಳ ಪ್ರವರವಿದ್ದವರು ಹರಿತಸ ಗೋತ್ರರು.ಇವರಲ್ಲಿ ಇಬ್ಬರು ಕ್ಷತ್ರಿಯರಿರುತ್ತಾರೆ. ಹೀಗೆಯೇ ಎಷ್ಟೋ ಪ್ರವರಗಳಿವೆ. **'ಗೋತ್ರ ಪ್ರವರ ಮಂಜರಿ'** ಯನ್ನು ನೋಡಿರಿ.

ಗೋತ್ರದ ವಿಷಯಕ್ಕೆ ಈಗ್ಗೆ ಜನರಿಗೆ ಬಹಳ ವಿಸ್ಮೃತಿ ಬರುತ್ತಿರುವದು ವಿಷಾದಕರ. ಅದರಲ್ಲಿಯೂ ಗಾಯತ್ರಿಗೆ ಋಷಿಗಳಾದ ವಿಶ್ವಾಮಿತ್ರರ ವಿಷಯಕ್ಕೆ ನಮಗೆ ಸಂಶಯವುಂಟಾಗುವದು ದೌರ್ಭಾಗ್ಯವೇ ಸರಿ. ವೇದಕಾಲದಲ್ಲಿಯೇ ಇದ್ದವರು ವಸಿಷ್ಠವಿಶ್ವಾಮಿತ್ರರು. ಋಗ್ವೇದದಲ್ಲಿ ಹೇಳಿರುವ ಋಷಿಗಳಲ್ಲಿ ಮಹಿಳೆಯರು ಕೂಡ ಇರುತ್ತಾರೆ. ಒಂದೇ ಹೆಸರಿನವರು, ಅನೇಕ ಋಷಿಗಳು ಇರುವರೆಂಬುದನ್ನು ತಾವು ಮನಸ್ಸಿಗೆ ತಂದುಕೊಳ್ಳಿರಿ. ಉದಾಹರಣೆಗೆ ಗೌತಮ (ಅಥವಾ ಗೋತಮ) ಎಂಬ ಹೆಸರು ಅನೇಕರಿಗೆ ಸೇರಿರುತ್ತದೆ.

ಈಗ್ಗೆ ಬ್ರಾಹ್ಮಣರು ವೇದದಲ್ಲಿ ಶ್ರದ್ಧೆಯನ್ನಿಟ್ಟು ತಮ್ಮತಮ್ಮ ಶಾಖೆಯ ಕೆಲಕೆಲವು ಮಂತ್ರಗಳನ್ನಾದರೂ ಅಭ್ಯಾಸಮಾಡುವ ಪದ್ಧತಿಯನ್ನಿಟ್ಟರೆ ಒಳ್ಳೆಯದು. ವೈದಿಕವಾಙ್ಮಯದಲ್ಲಿಯೂ ಸಂಸ್ಕೃತಭಾಷೆಯಲ್ಲಿಯೂ ಬ್ರಾಹ್ಮಣರು ಹೆಚ್ಚಿನ ಅಭಿಮಾನವನ್ನು ತೋರಿಸಿದರೆ, ಉಳಿದವರು ಅವರ ಮೇಲುಪಙ್ಕ್ತಿಯನ್ನನುಸರಿಸುವರು. ಸಂಸ್ಕೃತಭಾಷೆಯ ಕೆಚ್ಚು ಜನರಿಗೆ ಮನದಟ್ಟಾಗುವದು. ಭಾರತದೇಶದ ಅತಿಪ್ರಾಚೀನ ಸಂಸ್ಕೃತಿಯಲ್ಲಿ ಗೌರವವೂ ಉಂಟಾಗುವದು.

## 220. ಜ್ಞಾನಕ್ಕೆ ಸಾಧನ

### (ಜನವರಿ 1965)

*ತಮ್ಮ ಪತ್ರವು ತಲುಪಿದೆ. ನಿಮ್ಮ ಅಭಿಪ್ರಾಯವನ್ನು ಗ್ರಹಿಸಿಕೊಂಡೆ. ಪರಮಾರ್ಥದ ಜ್ಞಾನವಾಗುವದಕ್ಕೆ ಅತ್ಯಂತಸುಲಭವಾದ ಉಪಾಯವು ಯಾವದು? ಜ್ಞಾನಿಗಳು ತಮ್ಮನ್ನು ಸೇವಿಸುವವರಿಗೆ ಮಾತ್ರ ತತ್ತ್ವವನ್ನು ಹೇಳಿಕೊಡುತ್ತಾರೆಯೆ?–ಎಂಬುದು ನಿಮ್ಮ ಪ್ರಶ್ನೆ.*

ಇಂದ್ರಿಯಗಳ ಮೂಲಕ ವಿಷಯಗಳನ್ನು ಅರಿತುಕೊಳ್ಳುವಂತೆ ಪುಸ್ತಕಾದಿಗಳ ಉಪಯೋಗದಿಂದ ಜ್ಞಾನವನ್ನು ಪಡೆದುಕೊಳ್ಳುವದು ಸಾಧ್ಯವೆಂಬ ನಂಬಿಕೆಯೇ ಇಂಥ ಪ್ರಶ್ನೆಗಳಿಗೆ ಎಡೆಯನ್ನು ಕೊಡುತ್ತದೆ. ಆತ್ಮಜ್ಞಾನವೆಂದರೆ ಶಬ್ದಾದಿಗಳ ಜ್ಞಾನದಂತೆ ವಿಷಯೇಂದ್ರಿಯ ಸಂಬಂಧದಿಂದುಂಟಾಗುವ ಒಂದಾನೊಂದು ವೃತ್ತಿರೂಪಜ್ಞಾನವಲ್ಲ. ಅಶರೀರನಾಗಿರುವ, ಅದ್ವಿತೀಯನಾದ, ವಿಜ್ಞಾನಾನಂದಸ್ವರೂಪನಾದ ಪರಮಾತ್ಮನೇ ನಮ್ಮೆಲ್ಲರ ಆತ್ಮನಾಗಿದ್ದರೂ ಶರೀರೇಂದ್ರಿಯಮನಸ್ಸುಗಳ ಸಂಬಂಧವುಳ್ಳವರು ನಾವೆಂದೂ ಇಂದ್ರಿಯಮನಸ್ಸುಗಳ ಸಹಾಯದಿಂದ ಜ್ಞಾನವನ್ನು ಸಂಪಾದಿಸಿ ಸಾಧನವಿಶೇಷಗಳಿಂದ ಸುಖವನ್ನು ಪಡೆದುಕೊಳ್ಳಬೇಕಾಗಿರುವ ಅಜ್ಞರೂ ಪರಿಚ್ಛಿನ್ನರೂ ಆದ ಸಂಸಾರಿಗಳು ನಾವೆಂದೂ ತಿಳಿದಿರುವ ಅಜ್ಞಾನವನ್ನು ನೀಗಿಕೊಂಡು ನಮ್ಮ ಸ್ವರೂಪದಲ್ಲಿ ನೆಲೆನಿಲ್ಲುವದೇ ಆತ್ಮಜ್ಞಾನವು.

ಆತ್ಮಜ್ಞಾನವುಂಟಾಗುವದಕ್ಕೆ ಶರೀರಾದಿಗಳ ಅಭಿಮಾನರೂಪವಾದ ಅಜ್ಞಾನವೇ ಅಡ್ಡಿಯಾಗಿರುವದರಿಂದ ಆ ಅಭಿಮಾನದಿಂದ ಹಿಂತಿರುಗುವದೆಂಬ ನಿವೃತ್ತಿಧರ್ಮವನ್ನೇ ನಾವು ಎಲ್ಲಕ್ಕೂ ಮೊದಲು ಸಾಧಿಸಿಕೊಳ್ಳಬೇಕು. ಶರೀರಾದ್ಯಭಿಮಾನವೇ ಶೌಚಾಚಾರಾದಿಗಳನ್ನು ಉಲ್ಲಂಘಿಸುವದಕ್ಕೆ ಕಾರಣವಾಗಿರುತ್ತದೆ. ನಾನು ಸತ್ಕುಲದಲ್ಲಿ ಹುಟ್ಟಿದವನು, ಧನವಂತನು, ರೂಪವಂತನು, ಯೌವನವಂತನು–ಎಂದು ಮುಂತಾಗಿರುವ

ಅಭಿಮಾನವನ್ನು ಬಿಡುವ ಪ್ರಯತ್ನವನ್ನು ಮೊದಲುಮಾಡಬೇಕು. 'ನನಗೆ ಚುರುಕಾದ ಬುದ್ಧಿಯಿದೆ, ಆದ್ದರಿಂದ ಯಾರ ಉಪದೇಶದ ಅಪೇಕ್ಷೆಯೂ ಇಲ್ಲದೆ ತತ್ತ್ವವನ್ನು ಗ್ರಹಿಸಬಲ್ಲೆನು' ಎಂಬ ದುರಭಿಮಾನವೇ, 'ನಾನು ಮಹಾಧರ್ಮಿಷ್ಠನು, ಅಧ್ಯಯನ ಕರ್ಮಾನುಷ್ಠಾನಾದಿಸಾಧನಸಂಪನ್ನನು' ಎಂಬ ಅಹಂಕಾರವೇ ಮತ್ತೊಬ್ಬರನ್ನು ಕೀಳಾಗಿ ಕಂಡು ತನ್ನ ಧಾರ್ಮಿಕತ್ವವನ್ನೂ ತಿಳಿವಳಿಕೆಯನ್ನೂ ಮತ್ತೊಬ್ಬರ ಮುಂದೆ ತೋರಿಸಿಕೊಳ್ಳುವ ದಾಂಭಿಕತನಕ್ಕೆ ಅವಕಾಶವನ್ನು ಕೊಡುವದು. ಹೀಗೆ ಬಹಿರ್ಮುಖನಾಗಿರುವವನು ಶರೀರೇಂದ್ರಿಯಮನಸ್ಸುಗಳನ್ನು ಮೀರಿರುವ ತತ್ತ್ವವನ್ನು ಹೇಗೆತಾನೆ ಗ್ರಹಿಸಬಲ್ಲನು? ಎಲ್ಲರಲ್ಲಿಯೂ ಯಾವದಾದರೊಂದು ದೋಷವನ್ನು ಕಲ್ಪಿಸುವ ದುರ್ಬುದ್ಧಿಯವನಿಗೆ ತತ್ತ್ವವನ್ನು ತಿಳಿದಿರುವ ಜ್ಞಾನಿಗಳಿಂದ ಜ್ಞಾನಮಾರ್ಗವನ್ನು ಗ್ರಹಿಸುವದು ಹೇಗೆತಾನೆ ಸಾಧ್ಯವಾದೀತು? ಜ್ಞಾನಿಗಳಿಗೆ ತಮ್ಮನ್ನು ಜನರು ಸೇವಿಸಬೇಕು–ಎಂಬ ಇಚ್ಛೆಯೇನೂ ಇರುವದಿಲ್ಲ; ಅಂಥ ಇಚ್ಛೆಯಿರುವವರು ಜ್ಞಾನಿಗಳೇ ಆಗಿರುವದಿಲ್ಲ. ಅಮಾನಿತ್ವಾದಿಗುಣಗಳನ್ನು ಸ್ವಭಾವದಿಂದಲೇ ಅಳವಡಿಸಿಕೊಂಡು ಅಂತರ್ಮುಖರಾಗಿ ಆತ್ಮರತರಾಗಿರುವವರೇ ಅಲ್ಲವೆ, ಜ್ಞಾನಿಗಳು? ಅಂಥ ಆಚಾರ್ಯರ ಉಪಾಸನೆಯಿಂದಲೇ, ಸ್ವಾಭಾವಿಕವಾಗಿರುವ ಅವರ ಮನೋಧರ್ಮವನ್ನು ಅನುಕರಿಸುವ ಸುಯೋಗವು ಲಭಿಸುವದು.

ಎಲ್ಲೆಲ್ಲಿಯೂ ಭಗವದ್ಭಾವನೆಯನ್ನು ಮಾಡುತ್ತಾ ಗುಣಗ್ರಹಣವನ್ನು ಮಾಡುವ ಭಕ್ತಮಹಾಶಯನಿಗೇ 'ಇವರು ಆಚಾರ್ಯರು, ಇವರ ಉಪದೇಶದಿಂದ ನಾನು ತತ್ತ್ವವನ್ನು ತಿಳಿದುಕೊಂಡೇನು' ಎಂಬ ವಿಶ್ವಾಸವುಂಟಾಗುವದು; ಅಂಥವನಿಗೇ ಶಾಸ್ತ್ರಗಳಲ್ಲಿ ಹೇಳಿರುವ ಅಂತರ್ಮುಖತ್ವದ ಮರ್ಮವು ಸ್ಫುರಿಸುವದು. ಜ್ಞಾನನಿಷ್ಠರಾದ ಆಚಾರ್ಯರ ಸೇವೆಯಿಂದಲೂ ಅವರ ಅನುಕರಣೆಯಿಂದಲೂ ಆತ್ಮನಲ್ಲಿಯೇ ಆತ್ಮಬುದ್ಧಿಯುಂಟಾಗುವದು.

ಎಲ್ಲೆಲ್ಲಿಯೂ ಹರಡಿಕೊಂಡಿರುವ ಬೆಳಕಿನಲ್ಲಿಯೇ ಸಂಚರಿಸುತ್ತಿದ್ದರೂ ಬೆಳಕೆಂದರೇನೆಂಬುದನ್ನು ಅರಿಯದಿರುವ ಮೂಢರಂತೆ ಆತ್ಮಚೈತನ್ಯದ ಬೆಳಕಿನಿಂದಲೇ ಸರ್ವವ್ಯವಹಾರಗಳನ್ನೂ ಮಾಡುತ್ತಿದ್ದರೂ ಅಭಿಮಾನ, ದಂಭ, ದರ್ಪ, ಮದ ಮಾತ್ಸರ್ಯಾದಿಗಳಿಂದ ಮರೆಯುತ್ತಿರುವ ಬಹಿರ್ಮುಖನಾದವನು ಆತ್ಮಾನುಭವದಿಂದ ವಂಚಿತನಾಗಿರುವನು. ಅವನಿಗೆ ಜ್ಞಾನಕ್ಕೆ ಸಾಧನವಾಗಿರಬೇಕಾದ ಶರೀರ, ಇಂದ್ರಿಯ, ಮನಸ್ಸು–ಇವುಗಳೇ ಆ ಜ್ಞಾನಕ್ಕೆ ಅಡ್ಡಿಯಾಗಿರುವವು. ಹಿರಿಯರ ಸೇವೆಯನ್ನರಿಯದ ಸ್ತಬ್ಧನಿಗೆ ಶರೀರದ ಅಡ್ಡಿ, ಸ್ಥೂಲವಾದ ವಿಷಯಭೋಗಗಳಲ್ಲಿಯೇ ಆಸಕ್ತಜ

ನಾಗಿರುವವನಿಗೆ ಇಂದ್ರಿಯಗಳ ಅಡ್ಡಿ , ಕಾಮಾಸಕ್ತನಾಗಿ ವಿಷಯಚಿಂತನೆಯಲ್ಲಿಯೇ ಇರುವವನಿಗೆ ಮನಸ್ಸಿನ ಅಡ್ಡಿ–ಹೀಗೆ ಆತ್ಮಜ್ಞಾನಕ್ಕೆ ಮೂರು ವಿಧವಾದ ಅಡ್ಡಿಗಳು ಇರುತ್ತವೆ.

ಶ್ರೋತ್ರಿಯರೂ ಬ್ರಹ್ಮನಿಷ್ಠರೂ ಲೋಕಾನುಗ್ರಹರಸಿಕರೂ ಆಗಿರುವ ಆಚಾರ್ಯರನ್ನು ನಮಸ್ಕರಿಸುತ್ತಾ ಅವರ ಸೇವೆಗೇ ತನ್ನ ಕಾರ್ಯಕರಣಗಳನ್ನು ವಿನಿಯೋಗಿಸುತ್ತಿರುವ ಸಾತ್ತ್ವಿಕನ ತತ್ತ್ವಾನ್ವೇಷಣೆ, ಆ ಮಹನೀಯರ ಉಪದೇಶಗಳ ಶ್ರವಣ, ಅವರಲ್ಲಿ ಯುಕ್ತವಾದ ಪ್ರಶ್ನೆಗಳನ್ನುಮಾಡಿ ಪಡೆದುಕೊಂಡವಿಚಾರಸರಣಿ, ತತ್ತ್ವಾರ್ಥದ ಧ್ಯಾನ–ಇವುಗಳಿಂದ ಅದೇ ಶರೀರೇಂದ್ರಿಯ ಮನಸ್ಸುಗಳೇ ನಿವೃತ್ತಿ ಮಾರ್ಗಕ್ಕೆ ಒಲಿದು ನಿತ್ಯಾನುಭವಸ್ವರೂಪನಾದ ಆತ್ಮನ ತತ್ತ್ವದಲ್ಲಿಯೇ ನೆಲೆನಿಲ್ಲಿಸುವವು.

## 221. ಈಗಿನ ಸ್ಥಿತಿಯಲ್ಲಿಯೇ ತತ್ತ್ವಪ್ರಾಪ್ತಿ

### (ಫೆಬ್ರವರಿ 1965)

*ತಮ್ಮ ಪತ್ರವನ್ನು ಓದಿ ಮುಗಿಸುವ ಹೊತ್ತಿಗೆ ಮತ್ತೊಬ್ಬ ಮಹಾಶಯರ ಪತ್ರವು ತಲುಪಿದೆ. 'ಪ್ರತಿದಿನದ ಕೆಲಸದ ಒತ್ತಡವು ಹೆಚ್ಚಾಗಿರುವದರಿಂದ ಸಾಧನಕ್ಕೆ ಅವಕಾಶವಿಲ್ಲವಾಗಿದೆ. ಈ ಉದ್ಯೋಗವನ್ನು ಬಿಟ್ಟು ಯಾವದಾದರೊಂದು ಏಕಾಂತವಾಗಿರುವ ಆಶ್ರಮದಲ್ಲಿ ಅಧ್ಯಾತ್ಮಸಾಧನವನ್ನು ಮಾಡಬೇಕೆನ್ನಿಸುತ್ತಿದೆ' ಎಂದು ನೀವು ಬರೆದಿರುತ್ತೀರಿ. ಅವರು 'ನಾನಿರುವ ಸ್ಥಲದಲ್ಲಿ ಜನರೇ ಇಲ್ಲ; ಎಲ್ಲಿಯೋ ವನವಾಸಕ್ಕೆ ಬಂದಂತೆ ಆಗಿರುತ್ತದೆ. ಹೆಚ್ಚು ಗದ್ದಲವೂ ಇಲ್ಲದ ಹೆಚ್ಚು ನಿಬಿಡವಾಗಿಯೂ ಇಲ್ಲದ ಒಂದೂರಿನಲ್ಲಿ ತಕ್ಕಮಟ್ಟಿಗೆ ಕೆಲಸವೂ ಇದ್ದು ಜೀವನಕ್ಕೆ ಅನುಕೂಲವಾಗುವಷ್ಟು ಸೌಕರ್ಯವು ದೊರಕಿದರೆ ಸಾಕು, ವಿರಾಮದ ವೇಳೆಯಲ್ಲಿ ಸಾಧನವನ್ನು ಮಾಡಿಕೊಂಡಿರಬಹುದು–ಎನ್ನಿಸುತ್ತಿದೆ' ಎಂತ ಬರೆದಿರುತ್ತಾರೆ.*

ಈ ಸುದ್ದಿಯನ್ನು ಕೇಳಿದರೆ ನೀವೇನೆನ್ನುತ್ತೀರೋ ತಿಳಿಯದು. ''ಅವರಿಗೆ ಏಕಾಂತವಾಸ ಬೆಲೆಯು ತಿಳಿಯದು; ಕೆಲಸವೂ ಜನರ ಗದ್ದಲವೂ ಇರುವ ಕಡೆಯಲ್ಲಿ ಯಾವ ಸಾಧನವು ತಾನೆ ಸಾಗೀತು?'' ಎಂದಲ್ಲವೆ, ನಿಮ್ಮ ಮತ? ಆದರೆ ಅವರೆನ್ನುವದನ್ನು ಕೇಳಿ: ''ಎಲ್ಲಿಯೋ ಒಂದು ಹಾಳುಮೂಲೆಯಲ್ಲಿ ಕುಳಿತುಕೊಂಡು ಸಾಧನವನ್ನು ಮಾಡುತ್ತೇನೆನ್ನುವರಿಗೆ ನಿದ್ರೆ, ಆಲಸ್ಯ, ಸೋಮಾರಿತನ, ಪರರಲ್ಲಿಪ್ರೇಮವನ್ನು ತೋರಿಸುವ ಅವಕಾಶದ ಅಭಾವ–ಇಷ್ಟಲ್ಲದೆ ಮತ್ತೇನು ಸಿಕ್ಕೀತು? ಜನರೂ ವ್ಯವಹಾರದಲ್ಲಿ ತೊಡಗುವದೂ ನಮಗೆ ಅಸಹ್ಯವೆಂದಾದರೆ ಸಮಾಜ ಜೀವನದ ಅರಿವೇ ಇಲ್ಲದೆ ಮಾನವತ್ವಕ್ಕೇ ಎಳ್ಳುನೀರುಬಿಟ್ಟಂತಾದೀತು!''

ಹಾಗಾದರೆ ಈ ಎರಡರಲ್ಲಿ ಯಾವದು ಸರಿ?– ಎಂದು ನೀವು ಕೇಳಬಹುದು, ಇದಕ್ಕೆ ನನ್ನ ಉತ್ತರವೇನೆಂದರೆ, 'ನಾನು ಅವರಂತಾದರೆ ಸಾಧನವನ್ನು ಮಾಡಿಯೇನು' ಎಂಬ ಹಂಬಲವನ್ನು ಬಿಟ್ಟುಬಿಡಬೇಕು. ನಮ್ಮನಮ್ಮ ಮನಸ್ಸಿಗೆ ಹೊಂದುವ ರೀತಿಯಲ್ಲಿ ಸಾಧನವನ್ನು ಕೂಡಿಸಿಕೊಳ್ಳಬೇಕು. ನಿಮಗೆ ಏಕಾಂತವಾಸವು ಬೇಕಾದರೆ ಅವಶ್ಯವಾಗಿ ಅದನ್ನು ಸಂಪಾದಿಸಿಕೊಳ್ಳಿರಿ. ಸಜ್ಜನರ ಸಂಗವಂತೂ ಏಕಾಂತವೇ ಆಗಿರುತ್ತದೆ. ಏಕಾಂತವು ಬೇಕಾಗಿದ್ದು ಅದು ಸದ್ಯಕ್ಕೆ ಸಿಕ್ಕುವಂತಿಲ್ಲದಿದ್ದರೆ, ನಿಮ್ಮ ಸುತ್ತುವಳೆಯವನ್ನೇ ಭಗವಂತನ ವಿಭೂತಿ ಎಂದು ಭಾವಿಸುವದನ್ನು ಅಭ್ಯಾಸಮಾಡಿರಿ. ನೀವು ಮಾಡುತ್ತಿರುವ ಕೆಲಸವನ್ನು ಭಗವಂತನ ಅರ್ಚನೆ ಎಂದು ಭಾವಿಸುವದಕ್ಕೆ ಮೊದಲು ಮಾಡಿರಿ. 'ಇಲ್ಲಿ ಗದ್ದಲವಿದೆ' ಎಂಬ ಭಾವನೆಯೇ ಬಾರದಂತೆ ನಿಮ್ಮ ಕೆಲಸದಲ್ಲಿಯೂ ಸದ್ಭಾವನೆಯಲ್ಲಿಯೂ ಮುಳುಗುವದನ್ನು ಕಲಿಯಿರಿ. ನಿಮಗೆ ಏಕಾಂತಸ್ಥಲವು ಬೇಸರವನ್ನುಂಟುಮಾಡಿದಾಗ ಅಲ್ಲಿ ಕಾಣುವ ಮರಗಿಡಬಳ್ಳಿಗಳು, ಹಕ್ಕಿಗಳು, ಮೃಗಗಳು–ಇವರೆಲ್ಲ ಭಗವಂತನ ಅಂಶರಾದ ಜೀವರೇ; ಆದ್ದರಿಂದ ನಾನು ಒಂಟಿಯಲ್ಲ–ಎಂದು ಭಾವಿಸಿಕೊಳ್ಳಿ. ಅಂತೂ ನೀವಿರುವ ಸ್ಥಾನವನ್ನೇ ನಿಮ್ಮ ಸಾಧನಕ್ಕೆ ಉಪಕರಣವಾಗಿಸಿಕೊಳ್ಳುವ ಜಾಣತನವೇ ಪ್ರಧಾನವಾಗಿರಲಿ.

## 222. ಅಕ್ಷರವಿದ್ಯೆ

(ಮಾರ್ಚ್ 1965)

*ನಿಮ್ಮ ಪತ್ರವು ಬಂದು ತಲುಪಿತು. ನಿಮಗೆ ಅಷ್ಟು ಇಂಗ್ಲೀಷು ಭಾಷೆಯಾಗಲಿ ಸಂಸ್ಕೃತವಾಗಲಿ ಪರಿಚಯದಲ್ಲಿಲ್ಲವಾದ್ದರಿಂದ 'ಲೌಕಿಕ ವ್ಯವಹಾರಕ್ಕೂ ಅಡ್ಡಿಯಾಗಿದೆ, ಅಧ್ಯಾತ್ಮ ಸಾಧನೆಗೂ ಅವಕಾಶವಿಲ್ಲವಾಗಿದೆ' ಎಂದು ಬರೆದಿರುತ್ತೀರಿ.*

ಈಗಿನ ಕಾಲದಲ್ಲಿ ಅಕ್ಷರಸ್ಥರೆನಿಸದಿದ್ದರೆ ವ್ಯವಹಾರವಾಗಲಿ ಪರಮಾರ್ಥವಾಗಲಿ ಸಾಧಿಸಲಾರದೆಂಬ ತಪ್ಪು ಅಭಿಪ್ರಾಯವು ಹೆಚ್ಚಾಗಿ ಹರಡಿಕೊಂಡಿದೆ. ಓದುಬರಹಗಳು ವಶದಲ್ಲಿದ್ದರೆ ಮನುಷ್ಯನಿಗೆ ಪುರುಷಾರ್ಥಕ್ಕೆ ಸಾಧಕವಾಗಬಹುದೆಂಬುದನ್ನು ಅಲ್ಲಗಳೆಯುವಂತಿಲ್ಲ. ಆದರೆ ಓದುಬರಹಗಳ ಸಂಪಾದನೆಯು ಯಾವಾಗಲೂ ಮನುಷ್ಯನಿಗೆ ವರಪ್ರಧಾನವೇ ಆಗಿರುವದೆಂಬ ನಿಯಮವೇನೂ ಇಲ್ಲ. ಕಾಲೇಜು ಗಳವರೆಗೂ ಓದಿರುವ ನಿಮ್ಮ ಒಡನಾಡಿಯರಾದ ಹುಡುಗಿಯರು ಎಲ್ಲರೂ ಚೆನ್ನಾಗಿ ಮನೆತನದ ವ್ಯವಹಾರವನ್ನು ಸಾಗಿಸುತ್ತಿರುವರೆ? ನವನಾಗರಿಕತೆಯ ವೇಷಭಾಷೆಗಳಿಗೆ ಮರುಳಾಗಿ ಅವರಲ್ಲಿ ಎಷ್ಟು ಜನ ಸಂಕಟಕ್ಕೆ ಈಡಾಗಿಲ್ಲ? ಸಂಸ್ಕೃತವನ್ನು–ಕೆಲವು

ಶಾಸ್ತ್ರಗಳನ್ನು ಕೂಡ–ಅಭ್ಯಾಸಮಾಡಿ ಶಾಸ್ತ್ರಿಗಳೆನಿಸಿಕೊಂಡವರೆಲ್ಲರೂ ಶಾಸ್ತ್ರಾಭ್ಯಾಸವನ್ನು ಭಗವದ್ಭಕ್ತಿಯ ಬೆಳವಣಿಗೆಗಾಗಲಿ ಚಿತ್ತದ ಶಾಂತಿಗಾಗಲಿ ಉಪಯೋಗಿಸಿಕೊಂಡಿರುವರೆಂಬ ನಿಯಮವನ್ನು ಕಂಡಿದೀರೇನು?

ವ್ಯವಹಾರದಲ್ಲಿ ನಿಪುಣರಾಗುವವರು ವಿವೇಕಿಗಳಾದ ತಂದೆತಾಯಿಗಳ ಅಥವಾ ಪೋಷಕರ ಕೈಕೆಳಗೆ ನುರಿತಿರಬೇಕು. ಉತ್ತಮ ಜಿಜ್ಞಾಸುಗಳೂ ಮುಮುಕ್ಷುಗಳೂ ಆಗಬೇಕಾದವರಿಗೆ ಸತ್ಸಂಗವೂ ಗುರೂಪದೇಶದ ಯೋಗವೂ ಸಿಕ್ಕಿರಬೇಕು. ಇವೆರಡೂ ಅತ್ಯವಶ್ಯ. ಅವುಗಳಿಲ್ಲದಿದ್ದರೆ ಬರಿಯ ಅಕ್ಷರವಿದ್ಯೆಯು ವ್ಯರ್ಥ. 'ಅಕ್ಷರ' ವೆಂಬುದು ಎಂದೆಂದಿಗೂ ನಾಶವಾಗದ ಭಗವಂತನ ಹೆಸರು. ನೀವು ಭಗವಂತನ ತತ್ತ್ವವನ್ನು ಮನಗಾಣುವ ಅಕ್ಷರವಿದ್ಯೆಯನ್ನು ಮೊದಲು ಸಂಪಾದಿಸಿಕೊಳ್ಳಿರಿ. ಪ್ರಯತ್ನಪಟ್ಟು ಉತ್ತಮವಾದ ಲೋಕವ್ಯವಹಾರಕ್ಕೆ ಬೇಕಾದ ತಿಳಿವಳಿಕೆಯನ್ನು ಕನ್ನಡ ಪುಸ್ತಕಗಳಿಂದಲೇ ಸಂಪಾದಿಸಿಕೊಳ್ಳಿರಿ. ಕನ್ನಡದ ಅಕ್ಷರದಲ್ಲಿರುವ ರಾಮಾಯಣಾದಿಗ್ರಂಥಗಳನ್ನು ಓದಿ ಅಭಿಪ್ರಾಯವನ್ನು ಗ್ರಹಿಸುವದಕ್ಕೆ ಯತ್ನಿಸಿ. ನೀವು ಅನ್ವರ್ಥವಾಗಿಯೇ ಅಕ್ಷರಸ್ಥರಾಗುವಿರಿ.

## 223. ಅಧ್ಯಾತ್ಮವಿದ್ಯೆಯ ಗುರಿ

### (ಏಪ್ರಿಲ್ 1965)

*ನೀವು ಬರೆದ ಪತ್ರದಲ್ಲಿ ''ಯಾವ ಸಾಧನವನ್ನು ಆರಿಸಿಕೊಳ್ಳುವದು ಮೇಲು? ಈವರೆಗೆ ನಾನು ಕೇಳಿದವರಲ್ಲಿ ಒಬ್ಬೊಬ್ಬರು ಒಂದೊಂದು ಬಗೆಯ ಉಪದೇಶವನ್ನು ಮಾಡಿರುತ್ತಾರೆ. ಏನು ಮಾಡಲಿ'' ಎಂದು ಕೇಳಿರುತ್ತೀರಿ.*

ಸಾಧನವೆಂದರೆ ನಮಗೆ ಆಗಬೇಕಾಗಿರುವ ಪ್ರಯೋಜನಕ್ಕೆ ಅನುಸರಿಸಬೇಕಾದ ಉಪಾಯ. ಆದ್ದರಿಂದ ಮೊಟ್ಟಮೊದಲು 'ನನಗೆ ಆಗಬೇಕಾಗಿರುವ ಪ್ರಯೋಜನವು ಯಾವುದು?' ಎಂಬ ಪ್ರಶ್ನೆಗೆ ಉತ್ತರವನ್ನು ಕಂಡುಹಿಡಿದುಕೊಳ್ಳಬೇಕು. ಆಮೇಲೆ ಸಾಧನವು ಯಾವದು?–ಎಂಬ ಪ್ರಶ್ನೆಗೆ ಉತ್ತರವು ತಾನೇ ಸಿಕ್ಕುತ್ತದೆ.

ಪ್ರಯೋಜನವು ಎಲ್ಲರಿಗೂ ಒಂದೇ ಬಗೆಯದಾಗಿರುವದಿಲ್ಲ. 'ನಾನು ಅಧ್ಯಾತ್ಮವಿದ್ಯೆಯನ್ನು ಅಭ್ಯಾಸಮಾಡುತ್ತಿರುವದರಿಂದ ಅಧ್ಯಾತ್ಮವಿದ್ಯೆಯ ಪ್ರಯೋಜನವೇ ನನಗೆ ಬೇಕು. ವೇದಾಂತವೆಂದರೂ ಅಧ್ಯಾತ್ಮವಿದ್ಯೆಯೆಂದರೂ ಒಂದೇ ಎಂದು ನನ್ನ ನಂಬಿಕೆ. ಆದ್ದರಿಂದ ವೇದಾಂತದಿಂದಾಗುವ ಪ್ರಯೋಜನವು ನನಗೆ ದೊರಕಬೇಕಾದರೆ ಏನು ಮಾಡಬೇಕು?' ಎಂದು ಕೆಲವರು ಕೇಳುತ್ತಿರುತ್ತಾರೆ. ಆದರೆ ಆ ಪ್ರಶ್ನೆಯಲ್ಲಿಯೂ

ಅವರ ಅಭಿಪ್ರಾಯವು ಪೂರ್ಣವಾಗಿ ಹೊರಪಟ್ಟಿರುವದಿಲ್ಲ. ಏಕೆಂದರೆ ಕೆಲವರಿಗೆ ಶಾಸ್ತ್ರಿಗಳೆಂಬ ಕೀರ್ತಿಯನ್ನು ಸಂಪಾದಿಸಬೇಕು–ಎಂಬ ಇಚ್ಛೆಯಿರುತ್ತದೆ; ಇನ್ನು ಕೆಲವರಿಗೆ ಈ ವಿದ್ಯೆಯನ್ನು ವ್ಯವಹಾರದಲ್ಲಿ ಬಳಸಿಕೊಂಡು ಸ್ಥಾನಮಾನಧನಾದಿಗಳನ್ನು ಗಳಿಸಬೇಕು–ಎಂಬ ಹವಣಿಕೆಯಿರುತ್ತದೆ. ಮತ್ತೂ ಕೆಲವರಿಗೆ 'ನಾನು ಮತ್ತೇತರ ಆಶೆಯನ್ನೂ ಇಟ್ಟುಕೊಳ್ಳದ ಮಹಾತ್ಮನೆಂದು ಜನರು ನನ್ನನ್ನು ಗೌರವಿಸಬೇಕು'–ಎಂಬ ಹಂಬಲಿಕೆಯೂ ಇರಬಹುದಾಗಿದೆ. **'ಖ್ಯಾತಿಲಾಭಪೂಜಾದಿಗಳು ಯಾವವೂ ಬರುವದು ನನಗೆ ಬೇಕಿಲ್ಲ; ಆತ್ಮವಿದ್ಯೆಯಿಂದಾಗುವ ನಿತ್ಯಶಾಂತಿಸುಖಗಳೇ ನನಗೆ ಬೇಕು; ಮನಸ್ಸಿನಲ್ಲಿರುವ ಕಳವಳವು ಹೋಗಿ ನಿತ್ಯಸಮಾಧಾನಸ್ಥಿತಿಯಲ್ಲಿರುವ ತೃಪ್ತಿಯೇ ನನಗೆ ಬೇಕು'** ಎನ್ನುವವರಿಗೆ ಮಾತ್ರ ವೇದಾಂತಶಾಸ್ತ್ರದ ಪರಮ ಪ್ರಯೋಜನವು ಆಗುತ್ತದೆ.

ಇಂಥ ಅಭಿಲಾಷೆಯು ನಿಮಗೆ ಇದ್ದರೆ ಗೀತೆಯಲ್ಲಿ ಹೇಳಿರುವ ದೈವಸಂಪತ್ತಿನ ಕಡೆಗೇ ನಿಮ್ಮ ಚಿತ್ತವು ಧಾವಿಸುತ್ತಿರಲಿ. ಭಗವಂತನಲ್ಲಿಯೂ ಭಗವದ್ಭಕ್ತರಲ್ಲಿಯೂ ಭಕ್ತಿಯನ್ನು ಸಂಪಾದಿಸಿಕೊಳ್ಳಿರಿ. ಭಗವದ್ಭಕ್ತರ ಸೇವೆಯಿಂದ ನಿಮಗೆ ಅವಶ್ಯವಾಗಿ ಮುಖ್ಯ ಪ್ರಯೋಜನವೂ ಲಭಿಸುವದು.

## 224. ಸಂನಿವೇಶಕ್ಕೆ ಹೊಂದಿಕೊಳ್ಳುವದು

**(ಮೇ 1965)**

*ನಿಮ್ಮ ಪತ್ರವು ತಲುಪಿದೆ. 'ಈಗ ಇರುವ ಸುತ್ತುವಳೆಯದಲ್ಲಿ ನನಗೆ ಯಾವ ಸಾಧನವನ್ನೂ ಮಾಡುವದಕ್ಕೆ ಅವಕಾಶವು ದೊರಕುವಹಾಗೆ ತೋರುತ್ತಿಲ್ಲ. ಬೆಳಗಿನಿಂದ ಸಾಯಂಕಾಲದವರೆಗೂ ಮನೆಯಲ್ಲಿ ಒಂದಲ್ಲಒಂದು ಕಿರಿಕಿರಿಗೆ ಅವಕಾಶವನ್ನೀಯುವ ಸಂದರ್ಭವು ಬಂದೊದಗುತ್ತಲೇ ಇರುತ್ತದೆ. ಮನಸ್ಸಿನ ಆಶೆಯೇನೋ ಹೆಚ್ಚಾಗಿದೆ, ಹೆಚ್ಚುತ್ತಲೂ ಇದೆ. ನಾನು ಎಂದಿಗಾದರೂ ಭಗವಂತನ ಅನುಗ್ರಹಕ್ಕೆ ಪಾತ್ರನಾದೇನೆ?–ಎಂಬ ಶಂಕೆಯು ಮೂಡುತ್ತಲೇಇರುತ್ತದೆ. ಈ ಸಂದರ್ಭದಲ್ಲಿ ನಾನು ಹೇಗೆ ನಡೆದುಕೊಳ್ಳುವದು ಸರಿಯಾದೀತು? ಎಂಬುದು ನಿಮ್ಮ ಪ್ರಶ್ನೆ.*

ಈ ಪ್ರಶ್ನೆಯು ನಿಮಗೆ ಒಬ್ಬರಿಗೇ ಅಲ್ಲ, ಸಾಧಕರಾದವರಿಗೆಲ್ಲರಿಗೂ ಮನಸ್ಸಿನಲ್ಲಿ ಆಗಿಂದಾಗ್ಗೆ ಎದ್ದುಕೊಳ್ಳುತ್ತಲೇ ಇರುವ ಪ್ರಶ್ನೆಯಿದು. ಇಂಥ 'ಅಡ್ಡಿ ಆತಂಕಗಳು' ಬಂದೊದಗಿದಾಗ ವಿಚಾರಮಾಡಿಕೊಳ್ಳಬೇಕಾದದ್ದು ಏನೆಂದರೆ, 'ಅನಿತ್ಯಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಮ್' ಎಂದು ಭಗವಂತನ ಉಪದೇಶ. ಈ ದೇಹವು ಬಹುಕಾಲ ಇರುವದಿಲ್ಲ, ಮನುಷ್ಯಜನ್ಮವು ಕೆಲವು ಪಾಪಪುಣ್ಯಗಳ ಮಿಶ್ರಣದ ಫಲವಾಗಿ

ದೊರಕಿರುತ್ತದೆ. ಪುಣ್ಯದ ಫಲವಾಗಿ ನಮಗೆ ಸದ್ವಾಸನೆಯು ಎದ್ದುಕೊಳ್ಳುತ್ತದೆ. ಅದರಲ್ಲಿಯೂ 'ಭಗವಂತನ ಸೇವೆಯನ್ನು ಮಾಡಬೇಕು' ಎಂಬ ಬುದ್ಧಿಯು ಬರುವದು ಹೆಚ್ಚಿನ ಪುಣ್ಯದ ಫಲ. ಬೇರೆಬೇರೆಯ ಅಡ್ಡಿಗಳು ಬಂದೊದಗುವದು ಪಾಪದ ಫಲವಾದರೂ ಅವುಗಳಲ್ಲಿಯೂ ಭಗವಂತನ ಸಾಂನ್ನಿಧ್ಯವಿರುತ್ತದೆ. ''ಈಗ ನಿನಗಿರುವಷ್ಟು ಆನುಕೂಲ್ಯಗಳನ್ನು ಕಳೆದುಕೊಳ್ಳಬೇಡ; ಎಲ್ಲಾ ಸಂನಿವೇಶಗಳೂ ನಿನ್ನ ಹಿತಕ್ಕೇ ಬಂದೊದಗಿವೆ ಎಂಬುದನ್ನು ಮರೆಯದಿರು. ಅಡ್ಡಿಗಳೆಂದು ನಿನಗೆ ಕಾಣುತ್ತಿರುವವುಗಳನ್ನು ಕೂಡ ನಿನ್ನ ಶ್ರೇಯಸ್ಸಿಗೆ ಸಾಧನವಾಗಿಯೇ ಮಾಡಿಕೊಳ್ಳಬಹುದು' ಎಂದು ಅವು ಮತ್ತೆ ಮತ್ತೆ ಎಚ್ಚರಿಕೆಯನ್ನು ಕೊಡುತ್ತಿರುತ್ತವೆ.

ಅಡ್ಡಿ ಯಾವದಾದರೂ ಬಂದಾಗ 'ಭಗವಂತನನ್ನು ಸ್ಮರಿಸಬೇಕೆಂಬ ಎಚ್ಚರಿಕೆಯಿದು' ಎಂದು ಕೂಡಲೆ ನೆನಪಿಸಿಕೊಳ್ಳಿರಿ. ಮನಸ್ಸಿನ ಸಮತೆಯನ್ನು ಕಾದುಕೊಂಡು ಭಗವಂತನನ್ನು ಸ್ಮರಿಸುವದಕ್ಕಿಂತ ಹೆಚ್ಚಿನ ಸಾಧನವಿಲ್ಲ.

## 225. ಅಧ್ಯಾತ್ಮವಿದ್ಯೆಯನ್ನು ಹೇಗೆ ಸಂಪಾದಿಸಿಕೊಳ್ಳಬೇಕು?

(ಜೂನ್ 1965)

*ನಿಮ್ಮ ಪತ್ರವನ್ನು ಓದಿದ್ದರಲ್ಲಿ ನನಗೆ ತಿಳಿದುಬಂದಿರುವ ಒಂದು ವಿಷಯವನ್ನು ಮುಚ್ಚುಮರೆಯಿಲ್ಲದೆ ನಿಮಗೆ ತಿಳಿಸಿಬಿಡಬೇಕೆಂದು ಸಂಕಲ್ಪಿಸಿ ಈ ಪತ್ರವನ್ನು ಬರೆಯುತ್ತಿದೇನೆ. ಇದನ್ನು ಸಾರಗ್ರಹಣದೃಷ್ಟಿಯಿಂದ ಓದಿ ನಿಮ್ಮ ಜೀವನಕ್ರಮಕ್ಕೆ ಬೇಕಾದ ಸೂತ್ರವನ್ನು ಏರ್ಪಡಿಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕೆಂದು ನನ್ನ ಅಭಿಲಾಷೆ.*

ಅಧ್ಯಾತ್ಮವಿದ್ಯೆಯನ್ನು ತರ್ಕಪ್ರಧಾನವಾದ ಬುದ್ಧಿಯಿಂದ ಗ್ರಹಿಸಬಹುದೆಂಬ ತಪ್ಪುತಿಳಿವಳಿಕೆಯನ್ನು ಮೊದಲುಬಿಡಬೇಕು. ಏಕೆಂದರೆ ತರ್ಕಪ್ರಧಾನವಾದ ಬುದ್ಧಿಗೆ ಹೊರನೋಟವೇ ಸ್ವಭಾವ; ಆದರೆ ಪರಮಾರ್ಥತತ್ತ್ವವು ಎಲ್ಲಕ್ಕೂ ಒಳಗಿರುವ ಆತ್ಮನಾಗಿರುತ್ತದೆ. ಇದೂ ಅಲ್ಲದೆ ಬುದ್ಧಿಯು ಒಂದು ವಿಷಯದಿಂದ ಮತ್ತೊಂದು ವಿಷಯಕ್ಕೆ ಹರಿದಾಡುವ ಸ್ವಭಾವವುಳ್ಳದ್ದಾದ್ದರಿಂದ ಅದು ಯಾವದೊಂದು ಗೊತ್ತಾದ ವಿಷಯದಲ್ಲಿಯೂ ಬಹುಕಾಲ ನಿಲ್ಲುವಹಾಗಿಲ್ಲ. ಆದರೆ ಅಧ್ಯಾತ್ಮತತ್ತ್ವವು ಏಕಾಗ್ರ ಚಿತ್ತದಿಂದ ಒಳಗೇ ನಿಟ್ಟಿಸಿ ನೋಡಿಕೊಳ್ಳದೆ ಅನುಭವಕ್ಕೆ ಬರುವಂತಿರುವದಿಲ್ಲ.

ಈಗಿನ ಕಾಲದಲ್ಲಿ ಮಾನವನು ತನ್ನ ಬುದ್ಧಿಕೌಶಲದಿಂದ ಹೊಸ ಹೊಸ ಭೋಗ ಪ್ರಕಾರಗಳನ್ನೂ ಅವುಗಳ ಸಾಮಗ್ರಿಗಳನ್ನೂ ಕಂಡುಹಿಡಿದುಕೊಂಡಿರುತ್ತಾನಾದ್ದರಿಂದ

ಕಾಮಪ್ರೇರಿತನಾದ ಅವನ ಬುದ್ಧಿಯು ದಿನದಿನವೂ ಹೊಸಹೊಸ ಕಾಮಸಂತೃಪ್ತಿಯ ಪ್ರಕಾರಗಳನ್ನು ಹುಡುಕುತ್ತಿರುತ್ತದೆ. ಜನರು ಸಂಭಾಷಣೆಯಲ್ಲಿಯೂ ವೃತ್ತಪತ್ರಿಕೆಗಳ ಮೂಲಕವೂ ಹೊಸ ಹೊಸ ಭೋಗ್ಯವಸ್ತುಗಳನ್ನು ವರ್ಣನೆಮಾಡುತ್ತಿರುವರು. ಕಾಮದಿಂದ ಕ್ರೋಧವೂ ಕ್ರೋಧದಿಂದ ಮೋಹವೂ ತಪ್ಪದೆ ಉಂಟಾಗುತ್ತಲೇ ಇರುವದರಿಂದ ಲೋಕವಾರ್ತೆಯನ್ನು ತಿಳಿದುಕೊಳ್ಳುವದರಲ್ಲಿಯೇ ನಿರತನಾಗಿರುವಾತನ ಮನಸ್ಸು ಹಲವು ಬಗೆಯ ವಿಕ್ಷೇಪಗಳಿಂದ ಅತ್ಯಂತಚಂಚಲವಾಗುತ್ತದೆ. ಪ್ರಾಕೃತ ಜನರ ಸಂಗದಿಂದಲೂ ವಾರಪತ್ರಿಕೆ, ದಿನಪತ್ರಿಕೆ– ದಿನಪತ್ರಿಕೆಯಲ್ಲಿಯೂ ಬೆಳಗಿನ ಪತ್ರಿಕಾ ಭಾಗ, ಸಾಯಂಕಾಲದ ಪತ್ರಿಕಾ ವಿಭಾಗ– ಹೀಗೆ ಬೇಗಬೇಗನೆ ಹೊರಡುತ್ತಿರುವ ವೃತ್ತಾಂತ ಪತ್ರಿಕೆಗಳಿಂದಲೂ ವ್ಯವಹಾರದವರ ಮನಸ್ಸು ಕದಡಿ ಹೋಗಿ ನಾನಾವೃತ್ತಿಗಳ ಕುಣಿತಕ್ಕೆ ರಂಗಸ್ಥಲವಾಗಿಬಿಡುತ್ತದೆ.

ನೀವು ಅಧ್ಯಾತ್ಮವಿದ್ಯೆಯನ್ನು ಬೇಗ ಗ್ರಹಿಸಬೇಕೆಂಬ ಕುತೂಹಲದಿಂದ ಒಬ್ಬರಿಂದೊಬ್ಬರು ವಿದ್ವಾಂಸರ ಬಳಿಗೆ ಹರಿದಾಡುತ್ತಿರುವಿರಿ, ಹಲವು ಲೋಕವಾರ್ತೆಗಳನ್ನು ಹಲವು ವಿಧದಿಂದ ಸಂಗ್ರಹಿಸುತ್ತಿರುವಿರಿ, ಹಲವರೊಡನೆ ಸಂಭಾಷಣೆಯಲ್ಲಿಯೂ ವಿಚಾರ ವಿನಿಮಯದಲ್ಲಿಯೂ ಕಾಲವನ್ನು ಕಳೆಯುತ್ತಿರುವಿರಿ– ಎಂಬುದು ನಿಮ್ಮ ಪತ್ರದಿಂದ ತಿಳಿಯಬರುತ್ತದೆ. ವಿದ್ಯಾವ್ಯಸನದ ನೆಪದಿಂದ ಸಂಚಾರಬಾಹುಲ್ಯವನ್ನೂ ವಿಕ್ಷೇಪ ಬಾಹುಲ್ಯವನ್ನೂ ಆಮಂತ್ರಿಸುವವರಿಗೆ ಮನಸ್ಸಿನಲ್ಲಿ ಹೇಗೆ ತಾನೆ ಶಾಂತಿಯು ದೊರಕೀತು?

ಯಾರು ಇಂದ್ರಿಯಗಳಿಗೆ ಎಡೆಬಿಡದೆ ಕೆಲಸವನ್ನು ಕೊಡುತ್ತಿರುವರೋ, ಅವರಿಗೆ ಇಂದ್ರಿಯಾತೀತವಾದ, ಅವ್ಯಕ್ತತತ್ತ್ವದ ಅನುಭವವು ಎಂದಿಗೂ ದೊರಕಲಾರದು. ಆದ್ದರಿಂದಲೇ ಶ್ರುತಿಯಲ್ಲಿ ತಮೇವ ಧೀರೋ ''ವಿಜ್ಞಾಯ ಪ್ರಜ್ಞಾಂ ಕುರ್ವೀತ ಬ್ರಾಹ್ಮಣಃ''(ಬೃ.) ಆತನನ್ನೇ ಶಾಸ್ತ್ರಾಚಾರ್ಯರಿಂದ ತಿಳಿದುಕೊಂಡು ಪ್ರಜ್ಞೆಯನ್ನು ಮಾಡಿಕೊಳ್ಳಬೇಕು. ಬಹಳ ಶಬ್ದಗಳನ್ನು ಚಿಂತಿಸುತ್ತಿರಬಾರದು, ಏಕೆಂದರೆ ಅದು ವಾಗಿಂದ್ರಿಯಕ್ಕೆ ಆಯಾಸವನ್ನುಂಟು ಮಾಡುತ್ತದೆ– ಎಂದಿದೆ. ಮತ್ತೊಂದು ಶ್ರುತಿಯಲ್ಲಿ ''ತಮೇವೈಕಂ ಜಾನಥ ಆತ್ಮಾನಂ ಅನ್ಯಾವಾಚೋ ವಿಮುಂಚಥಾಮೃತಸ್ಯೈಷಸೇತುಃ'' (ಮುಂ.) ಎಂದಿದೆ. ಆತ್ಮನೊಬ್ಬನನ್ನೇ ಅರಿತುಕೊಳ್ಳುವ ಪ್ರಯತ್ನವನ್ನು ಮಾಡಿರಿ, ಮಿಕ್ಕ ಮಾತುಗಳನ್ನು ಬಿಡಿರಿ. ಇದೇ ಅಮೃತತ್ವಕ್ಕೆ ಕಾರಣವು ಎಂದು ಶ್ರುತಿಯ ಅರ್ಥ.

ಜನರೊಡನೆ ಬಹುವಾಗಿ ಸೇರಿ ಬೀಳುಮಾತುಗಳನ್ನು ಆಡುತ್ತಿರುವದರಿಂದ ಮನಸ್ಸಿನ ಏಕಾಗ್ರತೆ ತಪ್ಪಿ, ಅದು ಅತ್ತಿತ್ತಚದರುತ್ತದೆ. ಬಹುವಾಗಿ ಮಾತಾಡುವವನು ಸುಳ್ಳಾಡುವದು, ಮತ್ತೊಬ್ಬರ ಮನಸ್ಸಿಗೆ ವ್ಯಥೆಯನ್ನುಂಟುಮಾಡುವದು, ಚಾಡಿಯನ್ನಾಡುವ

ಅಭ್ಯಾಸಕ್ಕೆ ಬೀಳುವದು—ಮುಂತಾದ ದೋಷಗಳಿಗೂ ಪಾತ್ರನಾಗುತ್ತಾನೆ. ಆದ್ದರಿಂದ ನೀವು ಮೊಟ್ಟಮೊದಲು ಕಂಡಕಡೆಗೆ ಅಲೆಯುವ ವ್ಯಸನವನ್ನು ಬಿಟ್ಟುಬಿಡಿರಿ. ವಾಙ್ಮೌನವನ್ನು ಸಂಪಾದಿಸಿಕೊಳ್ಳಿರಿ, ಎಡೆಬಿಡದೆ ಭಗವನ್ನಾಮವನ್ನುಚ್ಚರಿಸುತ್ತಿರಿ; ಅಧ್ಯಾತ್ಮ ಗ್ರಂಥಗಳನ್ನು ಓದುವದು, ಅಧ್ಯಾತ್ಮವಿಚಾರವನ್ನು ಮಾಡುತ್ತಿರುವದು—ಇವುಗಳಿಗಲ್ಲದೆ ಮಿಕ್ಕ ಮಾತುಗಳಿಗೆ ಅವಕಾಶವನ್ನು ಕೊಡದಿರಿ. ಇದರಿಂದ ಮನಸ್ಸು ಶಾಂತವಾಗುವದು, ಕ್ರಮಕ್ರಮವಾಗಿ ಆತ್ಮನಲ್ಲಿಯೇ ನೆಲೆನಿಲ್ಲುವದಕ್ಕೆ ಅಣಿಯಾಗುವದು.

## 226. ಕೀರ್ತಿಕಾಮ

### (ಜುಲೈ 1965)

*ನಿಮ್ಮ ಪತ್ರವು ತಲುಪಿದೆ. ಅಧ್ಯಾತ್ಮವಿಚಾರದ ಉಪನ್ಯಾಸಗಳನ್ನೂ ಸಂಭಾಷಣೆಯ ಗೋಷ್ಠಿಗಳನ್ನೂ ಏರ್ಪಡಿಸಿಕೊಳ್ಳುವದೂ ಒಂದು ಉತ್ತಮವಾದ ಸಾಧನವಷ್ಟೆ? ಅದಕ್ಕಾಗಿ ಬೇಕಾದ ಸಲಕರಣೆಗಳನ್ನು ಕೂಡಿಹಾಕುತ್ತಿದೇನೆ; ಈ ದಿಶೆಯಲ್ಲಿ ನಾನು ಮುಂದುವರಿಯುವದಕ್ಕೆ ಬೇಕಾದ ಸೂಚನೆಗಳನ್ನು ಕೊಡಬೇಕು—ಎಂದು ಕೇಳಿರುತ್ತೀರಿ.*

ನಾನು ಅಂಥ ಉತ್ತಮ ಉಪನ್ಯಾಸಕನಲ್ಲ; ಸಂಭಾಷಣೆಯಲ್ಲಿ ಚಾತುರ್ಯವೂ ನನಗೆ ಅಷ್ಟಕ್ಕಷ್ಟೇ. ಹೀಗಿರುವಲ್ಲಿ ನಿಮಗೆ ನಾನು ಯಾವ ಸೂಚನೆಯನ್ನು ತಾನೆ ಕೊಟ್ಟೇನು? ಆದರೂ ನನ್ನ ಒಂದು ಅಭಿಪ್ರಾಯವನ್ನು ನಿಮ್ಮ ಮುಂದೆ ಇಡುತ್ತೇನೆ, ಇದರಲ್ಲಿ ಸಾರವಾದದ್ದನ್ನೇ ನೀವು ತೆಗೆದುಕೊಳ್ಳಬೇಕು.

ಅಧ್ಯಾತ್ಮಸಾಧಕರಿಗೆ ಕಾಮಿನಿ, ಕಾಂಚನ, ಕೀರ್ತಿ—ಎಂಬ ಮೂರು ಕಕಾರಗಳು ಹೆಚ್ಚಿನ ವಿಘ್ನಗಳು—ಎಂದು ಬಲ್ಲವರು ಹೇಳುತ್ತಾರೆ. ಸಾಧಕರು ಸಂಭಾಷಣೆಗೆಂದು ಕಂಡ ಕಂಡ ಜನರನ್ನು ಆರಿಸಿಕೊಳ್ಳುವದು ಅಷ್ಟು ಯುಕ್ತವೆಂದು ನನಗೆ ಅನಿಸುವದಿಲ್ಲ; ಪ್ರಾಕೃತರೊಡನೆ ಮಾತಾಡಿದಷ್ಟೂ ವಿಷಯಾಸಕ್ತಿಯೇ ಹೆಚ್ಚುವದು. ನೀವು ಬ್ರಹ್ಮಚಾರಿಗಳಾಗಿದ್ದು ಮುಂದೆ ಪಾರಿವ್ರಾಜ್ಯವನ್ನು ಸ್ವೀಕರಿಸಬೇಕೆಂದಿರುವದರಿಂದ ಸತ್ಪುರುಷರ, ಮುಖ್ಯವಾಗಿ ಅಧ್ಯಾತ್ಮಜಿಜ್ಞಾಸುಗಳಗಿರುವವರ ಸಂಗವನ್ನೇ ಸಂಭಾಷಣೆಗೆ ಉಪಯೋಗಿಸಿಕೊಳ್ಳುವದು ಒಳ್ಳೆಯದು. ಸ್ತ್ರೀಯರೊಡನೆ ಸಂಭಾಷಣೆಯನ್ನು ಬೆಳೆಯಿಸಬಾರದು. ವಾದದಲ್ಲಿ ಕೋಪಾದಿಗಳಿಗೆ ಎಡೆಗೊಡದೆ ಇರುವಂತೆ ಎಚ್ಚರಿಕೆ ಇರಬೇಕು. ಹಣಕ್ಕಾಗಿ ಯಾವ ಉಪನ್ಯಾಸವನ್ನೂ ಮಾಡುವದಕ್ಕೆ ಒಪ್ಪಬಾರದು. ಏಕೆಂದರೆ ನಮಗೆ ಹಣವನ್ನು ಕೊಡುವವರ ಮನಸ್ಸಿಗೆ ಒಪ್ಪುವಂತೆ ವಿಚಾರದ ವಿಷಯಗಳನ್ನು ನಿರೂಪಣೆ ಮಾಡಬೇಕಾದ ಸಂದರ್ಭಗಳೂ ಬರಬಹುದಾಗಿದೆ.

ಎಲ್ಲಕ್ಕೂ ಮೇಲಾಗಿ ಉಪನ್ಯಾಸವನ್ನು ಜನಸಾಮಾನ್ಯದ ಸಂದಣಿಯಲ್ಲಿ ಮಾಡುವದು, ಉಪನ್ಯಾಸದ ಸಾರವನ್ನು ವರ್ತಮಾನಪತ್ರಿಕೆಗಳಲ್ಲಿ ಪ್ರಕಟಿಸುವದು, ಭಾಷಣಗಳ ಸಂದರ್ಭದಲ್ಲಿ ನಿಮ್ಮ ಭಾವಚಿತ್ರವನ್ನು ತೆಗೆಯಿಸುವದಕ್ಕೆ ಅವಕಾಶವನ್ನು ಕೊಡುವದು, ಶ್ರೋತೃಗಳಿಂದ ಮಾನಪತ್ರವನ್ನು ಸ್ವೀಕರಿಸುವದು–ಈ ಬಗೆಯ ಘಟನೆಗಳಿಗೆ ಎಂದಿಗೂ ಅವಕಾಶವನ್ನು ಕೊಡಬಾರದು. ಕೀರ್ತಿಕಾಮವೆಂಬ ಮದ್ಯವನ್ನು ಪಾನ ಮಾಡುವವರು ಪ್ರಮತ್ತರಾಗಿಬಿಡಬಹುದು, ದುರಭಿಮಾನಕ್ಕೆ ಎಡೆಯನ್ನು ಕೊಡುವ ಸಂಭವವಿದೆ. ಅಂತರ್ಮುಖತ್ವವಂತೂ ಅದರಿಂದ ಸಂಪೂರ್ಣವಾಗಿ ಹೋಗಿ ಬಿಡುವದು.

## 227. ಸದ್ಗುರುಸೇವೆ

### (ಆಗಸ್ಟ್ 1965)

*ನಿಮ್ಮ ಪತ್ರವನ್ನು ಓದಿ ನೋಡಿದೆನು. ನಿಮ್ಮ ಪ್ರಶ್ನೆಗೆ ಸ್ವಲ್ಪದರಲ್ಲಿ ಉತ್ತರವನ್ನು ಬರೆಯುವದು ಕಷ್ಟ. ಆದರೂ ನನ್ನ ಅಭಿಪ್ರಾಯಗಳನ್ನು ಆದಷ್ಟು ಸಂಗ್ರಹಿಸಿ ಬರೆಯುತ್ತೇನೆ. ಈ ವಿಷಯದಲ್ಲಿ ಮತ್ತೆ ಯಾವದಾದರೂ ಸಂಶಯವು ತಲೆದೋರಿದರೆ ಬರೆಯಿರಿ. ಮತ್ತೊಂದು ಪತ್ರದಲ್ಲಿ ಅದರ ಪರಿಹಾರವನ್ನು ಬರೆಯುವೆನು.*

**ಸದ್ಗುರುವೆಂದರೆ ಶಾಸ್ತ್ರಾಭಿಪ್ರಾಯವನ್ನು ತಿಳಿದುಕೊಂಡಿರುವದಲ್ಲದೆ ತತ್ತ್ವವನ್ನು ಅನುಭವಕ್ಕೆ ತಂದುಕೊಂಡವನೂ ಆಗಿರಬೇಕು. ಅಂಥ ಗುರುವಿನ ಉಪದೇಶದಿಂದ ಉಂಟಾದ ಜ್ಞಾನವೇ ನಿಜವಾಗಿ ಕಾರ್ಯಕಾರಿಯಾಗುತ್ತದೆ.** 'ಸತ್' ಎಂದರೆ ಪರಮಾರ್ಥರೂಪನಾಗಿರುವ ಪರಮಾತ್ಮನು; ಪರಮಾತ್ಮತತ್ತ್ವವನ್ನು ತನ್ನ ನಡೆನುಡಿಗಳಿಂದ ಹೇಳಿಕೊಡಬಲ್ಲ ಸಾಧುಪುರುಷನೇ ಸದ್ಗುರು; ಆತನ **ಸೇವೆಯೇ** ಸದ್ಗುರುಸೇವೆ–ಎನಿಸುತ್ತದೆ. ಇದನ್ನು ಭಗವದ್ಗೀತೆಯ ನಾಲ್ಕನೆಯ ಅಧ್ಯಾಯದಲ್ಲಿ 34, 35ನೆಯ ಶ್ಲೋಕಗಳಲ್ಲಿ ಹೇಳಿದೆ.

ಸದ್ಗುರುವೆಂದರೆ ಭಗವತ್ಸ್ವರೂಪನೇ, ಭಗವಂತನಿಗೂ ಆತನಿಗೂ ಯಾವ ಭೇದವೂ ಇರುವದಿಲ್ಲ–ಎಂಬುದು ಇದರಿಂದ ಸಿದ್ಧವಾಗುತ್ತದೆ. ಯಾವಾತನ ದರ್ಶನ, ಸಂಭಾಷಣ–ಮುಂತಾದವುಗಳಿಂದ ನಮ್ಮ ದೃಷ್ಟಿಕೋಣವೇ ಮಾರ್ಪಡುವದೋ, ಯಾವಾತನು ಉಪದೇಶಿಸಿದ ಮಾತುಗಳಿಂದ ಲೋಕದ ವಿಷಯಗಳ ವಾಸನೆಯು ಸಂಪೂರ್ಣವಾಗಿ ತೊಲಗುವದು ನಮ್ಮ ಅನುಭವಕ್ಕೆ ಬರುವದೋ, ನಿವೃತ್ತಿ ಧರ್ಮದಲ್ಲಿಯೇ ಆಸಕ್ತಿಯು ಹೆಚ್ಚುವದೋ ಆತನೇ ಸದ್ಗುರು. ಆತನು ದೇವರೇ;

ದೇವರಲ್ಲಿನ ಪರಭಕ್ತಿಯೇ ಆತನಲ್ಲಿಯೂ ಯಾವ ಶಿಷ್ಯನಿಗೆ ಇರುವದೋ ಅವನು ಕೃತಕೃತ್ಯನಾದಂತೆಯೇ.

ಸದ್ಗುರುವಿನಲ್ಲಿ ಶರೀರ, ಇಂದ್ರಿಯ, ಮನಸ್ಸು–ಎಂಬ ಬಾಹ್ಯೋಪಾಧಿಗಳ ನಿಮಿತ್ತದಿಂದ ಕೆಲವು ಲೌಕಿಕವ್ಯವಹಾರಗಳೂ ಕಾಣಬರಬಹುದು. ಸಂಗೀತಶಾಸ್ತ್ರವನ್ನು ಅನುಭವಕ್ಕೆ ತಂದುಕೊಂಡಿದ್ದವನಿಗೂ ಗಂಟಲು ಸರಿಯಾಗಿಲ್ಲದಾಗ ಹೇಗೆ ಅವನ ಹಾಡುಗಾರಿಕೆಯಲ್ಲಿ ಕೊರಕಲುಧ್ವನಿಯು ಮಿಶ್ರವಾಗಿರಬಹುದೋ, ಅಥವಾ ಅವನು ಬಳಸುತ್ತಿರುವ ಪಿಟೀಲು, ವೀಣೆ–ಮುಂತಾದ ವಾದ್ಯವು ಕೆಳಮಟ್ಟದ್ದಾಗಿರುವದರಿಂದ ಎಲ್ಲಾ ಬಗೆಯಿಂದಲೂ ಇಂಪಾಗಿರುವ ರಾಗವು ಹೊರಹೊಮ್ಮದೆ ಇರಬಹುದೋ, ಹಾಗೆಯೇ ಉಪಾಧಿನಿಮಿತ್ತದಿಂದ ಸದ್ಗುರುವಾದವನಲ್ಲಿ ಕೆಲಕೆಲವು ವೇಳೆಗಳಲ್ಲಿ ಲೌಕಿಕ ವ್ಯವಹಾರವೂ ಕಾಣಬಹುದು. ಎಲ್ಲರಿಗಿಂತಲೂ ಮೇಲು ಮಟ್ಟದ ಆದರ್ಶಪುರುಷನಾದ ಸದ್ಗುರುವಿನ ದರ್ಶನವು ಸುಲಭವಾಗಿ ಪ್ರಾಪ್ತಿಯಾಗುವ ಸಂಭವವಿಲ್ಲ. ಆದರೂ ಸಚ್ಛಿಷ್ಯನಾದವನು ಗುರುವಿನಲ್ಲಿ ಕಾಣಬಹುದಾದ ಅಂಥ ಸಣ್ಣಮಟ್ಟ ನ್ಯೂನಾತಿರಿಕ್ತಗಳನ್ನು ಕಡೆಗಣಿಸಿ, ಆತನಲ್ಲಿ ಸಾಕ್ಷಾದ್ಭಗವಂತನೆಂಬ ಬುದ್ಧಿಯನ್ನೇ ಮಾಡಿ ತನ್ನ ಪುರುಷಾರ್ಥವನ್ನು ಸಾಧಿಸಿಕೊಳ್ಳಬೇಕು. ಸದ್ಗುರುವನ್ನು ಲೌಕಿಕವ್ಯವಹಾರಕ್ಕೆ ಸಾಧನವಾಗಿ ಬಳಸುವದಕ್ಕೆ ಯಾವ ಕಾರಣದಿಂದಲೂ ಪ್ರಯತ್ನಿಸಬಾರದು.

ಸದ್ಗುರುವನ್ನು ಮನೋವಾಕ್ಕಾಯಗಳಿಂದ ಶ್ರದ್ಧಾಭಕ್ತಿಪುರಃಸರವಾಗಿ ಸೇವಿಸಬೇಕು. ಆತನನ್ನು ಭಗವಂತನೆಂದೇ ಕಾಣಬೇಕು. ದೇವರಿಗೆ ಮಾಡುವ ಷೋಡಶೋಪಚಾರಗಳನ್ನು ತನ್ನ ಕೈಯಲ್ಲಾದಮಟ್ಟಿಗೂ ಶ್ರದ್ಧಾಭಕ್ತಿಗಳಿಂದ ಆತನಿಗೆ ಮಾಡಬೇಕು. ತನ್ನ ಶಕ್ತಿಯನ್ನು ಮೀರಿ ಆತನ ಶರೀರದ ಅನುಕೂಲ್ಯಕ್ಕೆ ಏರ್ಪಡಿಸಬೇಕು. ಆತನ ಇಂಗಿತವನ್ನು ಅರಿತು ಸಮಯಕ್ಕೆತಕ್ಕಂತೆ ಎಲ್ಲಾಬಗೆಯ ವ್ಯವಹಾರ ಸೌಕರ್ಯಗಳನ್ನೂ ಒದಗಿಸುವದಕ್ಕೆ ಪ್ರಯತ್ನಿಸಬೇಕು. ಆತನೂ ತನಗೆ ಸಮಾನವಾದ ಒಬ್ಬ ಮನುಷ್ಯನೆಂಬ ಭಾವನೆಗೆ ಎಂದಿಗೂ ಮನಸ್ಸಿನಲ್ಲಿ ಎಡೆಗೊಡಬಾರದು. ಆತನೊಡನೆ ವ್ಯವಹಾರದಲ್ಲಿ ಹೆಚ್ಚಿನ ಸಲುಗೆಯನ್ನು ವಹಿಸಬಾರದು; ಬಿರುಮಾತನ್ನು ಆಡಬಾರದು; ವಾದಕ್ಕೆ ಹೋಗಬಾರದು; ಯಾವ ಕಾರಣದಿಂದಲಾದರೂ ಆತನ ಬಾಯಿಂದ ಅಪ್ಪಿ ತಪ್ಪಿ ಬಂದ ಸಣ್ಣಮಾತುಗಳಿಗೆ ತಿರಸ್ಕಾರಭಾವದ ಅಭಿಪ್ರಾಯವನ್ನು ಕಲ್ಪಿಸಬಾರದು. ಸೇವೆಯಲ್ಲಿ ಆಗಬಹುದಾದ ತನುಮನಗಳ ಆಯಾಸವನ್ನುಕೂಡ ಲೆಕ್ಕಿಸದೆ ಆತನ ಸುಪ್ರೀತಿಯನ್ನೇ ಗುರಿಯಾಗಿಟ್ಟುಕೊಳ್ಳಬೇಕು. ಆತನ ಬಳಿಯಲ್ಲಿ ಒಳಗೊಂದು ಹೊರಗೊಂದು ನಡೆನುಡಿಗಳ ಪ್ರದರ್ಶನವನ್ನು ಮಾಡಬಾರದು. ಆತನ ಸೇವೆಯಲ್ಲಿ ತಲ್ಲೀನನಾಗಿ ತನ್ನನ್ನು ತಾನು ಮರೆಯುವದನ್ನು ಸಾಧಿಸಿಕೊಳ್ಳಬೇಕು.

ತತ್ತ್ವವಿಷಯಕ್ಕೆ ತನ್ನ ಸದಾಶಯಗಳನ್ನು ಸವಿನಯವಾಗಿ ಮೃದುಮಧುರ ವಚನಗಳಿಂದ ಆತನಲ್ಲಿ ನಿವೇದಿಸಿಕೊಳ್ಳಬೇಕು. ಸದ್ಗುರುವಾದವನು ನೇರಾದ ಉತ್ತರದಿಂದಲಾದರೂ ಕಾಲಾಂತರದ ತನ್ನ ನಡೆನುಡಿಗಳಿಂದಲಾದರೂ ಸಂಶಯಗಳನ್ನು ಕತ್ತರಿಸಿ ಹಾಕುವನೆಂಬ ಶ್ರದ್ಧೆಯು ಪೂರ್ಣವಾಗಿ ಶಿಷ್ಯನಲ್ಲಿರಬೇಕು. ಸದ್ಗುರುವಾದವನು ತನಗೇ ನೇರಾಗಿ ಉಪದೇಶಿಸಲಿ, ಮತ್ತೊಬ್ಬರೊಡನೆ ವ್ಯವಹರಿಸುವಾಗ ಏನನ್ನೇ ಹೇಳಲಿ, ಅದನ್ನು ಚಾತಕಪಕ್ಷಿಯು ಮಳೆಯನ್ನು ನಿರೀಕ್ಷಿಸುತ್ತಿದ್ದು ಉಪಯೋಗಿಸಿಕೊಳ್ಳುವಂತೆ ಇದೆಲ್ಲವೂ ತನ್ನ ಶ್ರೇಯಸ್ಸಿಗೆ ಸಾಧನವೆಂಬ ಭಾವನೆಯಿಂದ ಆ ಉಪದೇಶಗಳನ್ನು ಸಂಗ್ರಹಿಸಿಕೊಂಡು ಆಚರಣೆಯಲ್ಲಿ ಅವುಗಳಿಂದ ಲಾಭವನ್ನು ಪಡೆಯಬೇಕು. ಗುರುಭಕ್ತಿಯನ್ನು ಭಗವದ್ಭಕ್ತಿಗೆ ದ್ವಾರವಾಗುವಂತೆ ಮಾಡಿಕೊಳ್ಳಬೇಕು.

ಗುರುವಿನಲ್ಲಿ ಇಂಥ ಪರಭಕ್ತಿಯುಳ್ಳ, ಶಿಷ್ಯನಿಗೆ ಭಗವಂತನ ಅನುಗ್ರಹದಿಂದ ಅಧ್ಯಾತ್ಮಸಾಧನಗಳು ವೀರ್ಯವತ್ತಾಗುವವು, ಅಧ್ಯಾತ್ಮತತ್ತ್ವಗಳು ಮನಸ್ಸಿನಲ್ಲಿ ತಾವೇ ಹೊಳೆಯುವವು, ಮನಸ್ಸು ಪರತತ್ತ್ವದಲ್ಲಿ ಲೀನವಾಗುವದು, ತತ್ತ್ವಜ್ಞಾನದ ಮರ್ಮವು ಸುಲಭವಾಗಿ ಅಳವಡುವದು.

## 228. ಸರ್ವತ್ರಭಗವದ್ಭಾವನೆ

### (ಸೆಪ್ಟೆಂಬರ್ 1965)

ನಿಮ್ಮ ಪತ್ರವನ್ನು ಓದಿದೆನು. *ಮನುಷ್ಯರಾದವರಲ್ಲಿ ಕೆಲವು ದೋಷಗಳೂ ಕೆಲವು ಗುಣಗಳೂ ಇದ್ದೇಇರುತ್ತವೆ. ಶತ್ರುಮಿತ್ರಾದಿಭಾವನೆಗಳಿಲ್ಲದಿದ್ದರೆ ವ್ಯವಹಾರವು ಸಾಗುವದು ಹೇಗೆ? ನಮಗೆ ತತ್ತ್ವವನ್ನು ಹೇಳುವ ಗುರುಗಳಲ್ಲಿ ದೋಷಗಳು ಕಂಡರೆ ಹೇಗೆ ನಡೆದುಕೊಳ್ಳಬೇಕು?–ಎಂತ ಪ್ರಶ್ನೆಗಳನ್ನು ಹಾಕಿ ಕೆಲವು ಸೂಚನೆಗಳನ್ನು ಕೊಡಬೇಕೆಂತ ಕೇಳಿರುತ್ತೀರಿ.*

ವ್ಯವಹಾರವನ್ನೇ ಪ್ರಧಾನವಾಗಿಟ್ಟುಕೊಂಡಿರುವವರಿಗೆ ಈ ತೊಡಕು ಉಂಟಾಗುವದೇ ಇಲ್ಲವೆಂಬುದು ಸ್ಪಷ್ಟವಾಗಿದೆ. ಏಕೆಂದರೆ ಜನರು ತಾವೇ ಮತ್ತೊಬ್ಬರಿಗೆ ಯಾವ ಕೇಡನ್ನೂ ಬಗೆಯದಿದ್ದರೂ ಮಿಕ್ಕವರೆಲ್ಲರೂ ತಮ್ಮನ್ನು ಹಗೆ ಮಾಡುವದಿಲ್ಲವೆಂದಾಗಲಿ ಮೋಸಗೊಳಿಸುವದಿಲ್ಲವೆಂದಾಗಲಿ ಹೇಳುವದಕ್ಕಾಗುವದಿಲ್ಲ. ಆದರೆ ಆದಷ್ಟು ಮಟ್ಟಿಗೂ ಸ್ವಧರ್ಮವನ್ನು ಕಾಪಾಡಿಕೊಂಡು ಪರಮಪುರುಷಾರ್ಥಕ್ಕೆ ದಾರಿಯನ್ನು ಕಂಡುಕೊಳ್ಳಬೇಕೆನ್ನುವವರು ನೀವು ಕೇಳಿರುವಂಥ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲೇಬೇಕಾಗಿರುತ್ತದೆ.

ಪರಮಾರ್ಥದೃಷ್ಟಿಯಿಂದ ನೋಡಿದಾಗ ಇಡಿಯ ಜಗತ್ತೇ ಬ್ರಹ್ಮಮಯವಾಗಿರುತ್ತದೆ. ಆದ್ದರಿಂದ ನಿಜವಾಗಿ ಅದರಲ್ಲಿ ಗುಣಗಳೂ ಇಲ್ಲ, ದೋಷಗಳೂ ಇಲ್ಲ. ಆದ್ದರಿಂದಲೇ ಭಗವಂತನು ಉದ್ಧವನಿಗೆ ''ಗುಣದೋಷಗಳನ್ನು ಕಾಣುವದೃಷ್ಟಿಯೇ ದೋಷವು, ಅದನ್ನು ಕಾಣದೇಇರುವದೇ ಗುಣವು'' ಎಂದು ಉಪದೇಶಿಸಿರುತ್ತಾನೆ. ಮುಮುಕ್ಷುಗಳಾದವರು ಯಾವ ವ್ಯವಹಾರದಲ್ಲಿಯೂ ತೊಡಗದೆ ಇಡಿಯ ಜಗತ್ತೇ ಭಗವಂತನು ಎಂಬ ಭಾವನೆಯನ್ನು ಬೆಳೆಯಿಸಿಕೊಳ್ಳಬೇಕು–ಎಂದಾಯಿತು.

ಆದರೆ ಇನ್ನೂ ಪರಿಪಕ್ವವಾಗದ ಮನಸ್ಸಿನವರಿಗೆ ಗುಣದೋಷಗಳು ಕಾಣುವದೆಂಬುದು ಸ್ವಾಭಾವಿಕ. ಮುಮುಕ್ಷುಗಳಾದವರು ''ಈಶ್ವರನೇ ಜೀವನೆಂಬ ಅಂಶದಿಂದ ಇಲ್ಲಿ ಪ್ರವಿಷ್ಟನಾಗಿರುತ್ತಾನೆ'' ಎಂದು ಭಾವಿಸಬೇಕು; ಸಂನ್ಯಾಸಿಯಾಗಿರುವವನು ಯಾವ ದೋಷವನ್ನೂ ಮನಸ್ಸಿಗೆ ತಾರದೆ ''ಇಲ್ಲಿ ಭಗವಂತನೇ ಈ ರೂಪದಿಂದ ತೋರಿಕೊಳ್ಳುತ್ತಿದಾನೆ–ಎಂದು ಸಾಮಾನ್ಯಪ್ರಾಣಿಗಳನ್ನುಕೂಡ ಗೌರವದಿಂದಲೇ ಕಾಣುತ್ತಿರಬೇಕು'' ಎಂದು ದೊಡ್ಡವರು ಉಪದೇಶಿಸುತ್ತಿರುತ್ತಾರೆ.

ಗೃಹಸ್ಥರಾಗಿರುವ ಮುಮುಕ್ಷುಗಳಿಗೆ ಈ ಭಾವನೆಯುಕೂಡ ಕಷ್ಟವಾಗಿರುತ್ತದೆ ಎಂಬುದನ್ನು ಹೇಳಲೇಬೇಕಾಗಿಲ್ಲ. ಅಂಥವರು ಭಗವದ್ಗೀತೆಯೇ ಮುಂತಾದ ಗ್ರಂಥಗಳಲ್ಲಿ ಉಪದೇಶಿಸಿರುವ ವಿಭೂತ್ಯುಪಾಸನೆಯನ್ನು ಅವಲಂಬಿಸುವದು ಶ್ರೇಯಸ್ಕರವಾಗಿರುತ್ತದೆ. ಆ ಸಾಧಕರು ಯಾವಯಾವದರಲ್ಲಿ ಯಾವಯಾವ ಹೆಚ್ಚಿನ ಮೆಚ್ಚ ತಕ್ಕ ಗುಣಗಳಿರುವವೋ ಅವನ್ನೇ ಲೆಕ್ಕಕ್ಕೆ ತೆಗೆದುಕೊಳ್ಳುತ್ತಾ ಉತ್ತಮಭಾವನೆಯಿಂದ ಚಿತ್ತಶುದ್ಧಿಯನ್ನು ಹೆಚ್ಚಿಸಿಕೊಳ್ಳುತ್ತಿರಬೇಕು.

ಇನ್ನು ನಮ್ಮ ನೆರೆಹೊರೆಯವರಲ್ಲಿಯೂ ಮಿಕ್ಕವರಲ್ಲಿಯೂ ದೋಷಗಳು ಕಂಡುಬಂದರೆ ಅವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ನಾವು ಮಾತ್ರ ಆದಷ್ಟುಮಟ್ಟಿಗೂ ಸಮಚಿತ್ತತೆಯನ್ನು ಕಾಪಾಡಿಕೊಳ್ಳಬೇಕು. ಗೃಹಸ್ಥರಾದರೂ ಮುಮುಕ್ಷುಗಳಾಗಿದ್ದರೆ ವ್ಯವಹಾರವನ್ನು ಅನವಶ್ಯವಾಗಿ ಬೆಳೆಯಿಸಿಕೊಳ್ಳುವದಕ್ಕೆ ಹೋಗುವದಿಲ್ಲವೆಂಬುದು ತಿಳಿದೇ ಇದೆಯಷ್ಟೆ?

ಇನ್ನು ಗುರುವಿನಲ್ಲಿ ಬಾಹ್ಯದೃಷ್ಟಿಯಿಂದ ಮನುಷ್ಯಮಾತ್ರಕ್ಕೆ ಸಹಜವಾಗಿ ತೋರಬಹುದಾದ ದೋಷಗಳು ಕೆಲವು ಕಾಣಬಹುದು. ಆದರೆ ನಿಜವಾಗಿಯೂ ಗುರುವಾದವನು ಪರಮಾರ್ಥಚಿಂತನೆಯಲ್ಲಿಯೇ ಆದಷ್ಟುಮಟ್ಟಿಗೂ ಕಾಲವನ್ನು ಕಳೆಯುತ್ತಿರುವನಲ್ಲವೆ? ಸದ್ಗುರುವಾದವನು ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆಗಿದ್ದರೆ

ಅವನಲ್ಲಿ ಮನಃಪೂರ್ವಕವಾಗಿ ಉಂಟಾಗುವ ಆಚಾರವ್ಯವಹಾರಲೋಪಗಳು ಎಂದಿಗೂ ಇರಲಾರವು.

ಶಿಷ್ಯನೂ ಸಚ್ಛಿಷ್ಯನೇ ಆಗಿದ್ದರೆ ಗುರುವನ್ನು 'ಸಾಕ್ಷಾತ್‌ಪರಬ್ರಹ್ಮ' ವೆಂದು ಭಾವಿಸುವದಕ್ಕೇ ಪ್ರಯತ್ನಿಸುತ್ತಿರುತ್ತಾನೆ. ಗುರುಶಿಷ್ಯರಲ್ಲಿ ಪರಮಾರ್ಥವಿಚಾರವಲ್ಲದೆ ಮತ್ತೆ ಯಾವ ಲೌಕಿಕವ್ಯವಹಾರವೂ ಹೆಚ್ಚಿಗೆ ಇಲ್ಲದಿದ್ದರೆ ನೀವು ಕೇಳಿರುವ ಪ್ರಶ್ನೆಗಳಿಗೆ ಅವಕಾಶವೇ ಇರುವದಿಲ್ಲ. ಆದರೆ ಒಂದು ಎಚ್ಚರಿಕೆಯಮಾತು: ಗುರುವಾದವನು ಶಿಷ್ಯನಲ್ಲಿರುವ ಪ್ರೇಮದಿಂದ ಹೆಚ್ಚಿನ ಸಲುಗೆಯನ್ನು ಕೊಟ್ಟು ವ್ಯವಹರಿಸಬಹುದು. ನೀವು ಆತನಲ್ಲಿ ಎಷ್ಟೇ ಸಲುಗೆಯಿಂದ ನಡೆದುಕೊಂಡರೂ ಅವನಲ್ಲಿ ನಿಮಗಿರುವ ಗುರುಭಾವನೆಗೆ ಯಾವ ಕಾರಣದಿಂದಲೂ ಕುಂದುಬಾರದಂತೆ ನೋಡಿಕೊಳ್ಳಬೇಕು. ಆತನು ನಿಮ್ಮ ಮೇಲೆ ಯಾವಾಗಲಾದರೂ ಕ್ರೋಧಾದಿಗಳನ್ನು ಪ್ರಕಟಿಸಿದರೂ ನೀವುಮಾತ್ರ ನಿಮ್ಮ ಸ್ಥಾನ ಮರ್ಯಾದೆಯನ್ನು ಮೀರದೆ ಶಾಂತ ರೀತಿಯಿಂದಲೇ ನಡೆದುಕೊಳ್ಳುವದಕ್ಕೇ ಯತ್ನಿಸುತ್ತಿರಿ. ಅದರಿಂದ ಗುರುಪ್ರಸಾದವೂ ಲಭಿಸುವದು, ನಿಮಗೆ ಶ್ರೇಯಸ್ಸೂ ಆಗುವದು.

## 229. ವಿದ್ಯಾಶಾಲೆಗಳ ಬೋಧಕರ ವೃತ್ತಿ

### (ಅಕ್ಟೋಬರ್ 1965)

*"ಬೋಧಕರ ವೃತ್ತಿಯಲ್ಲಿ ಆಧ್ಯಾತ್ಮ ಸಾಧನವನ್ನು ಮಾಡಿಕೊಳ್ಳುವದು ಎಷ್ಟರ ಮಟ್ಟಿಗೆ ಸಾಧ್ಯ? ಸಾಧಕನು ಲೌಕಿಕ ವ್ಯವಹಾರವನ್ನೂ ಸಾಗಿಸಿಕೊಂಡು ಸಾಧನವನ್ನು ಹೇಗೆ ಮಾಡಬೇಕು?" ಎಂದು ಪ್ರಶ್ನೆಯನ್ನು ಹಾಕಿ ಪತ್ರವನ್ನು ಬರೆದಿದ್ದೀರಿ. ಈ ಪ್ರಶ್ನೆಗೆ ಸಾಮಾನ್ಯವಾಗಿ ಒಂದು ಉತ್ತರ, ವಿಶೇಷವಾಗಿ ನಿಮ್ಮ ಸ್ಥಾನಕ್ಕೆ ನಿಲ್ಲುವಂತೆ ಒಂದು ಉತ್ತರ– ಹೀಗೆ ವಿಂಗಡಿಸಿಕೊಂಡು ಬರೆದಿರುತ್ತೇನೆ.*

ಬೋಧಕರೆಂಬ ಮಾತಿನ ಅರ್ಥದಲ್ಲಿ ಪ್ರಾಥಮಿಕ ಶಾಲೆಯಿಂದ ಹಿಡಿದು ಪ್ರೌಢ ವಿದ್ಯಾಲಯಗಳವರೆಗಿನ ಸಂಸ್ಥೆಗಳಲ್ಲಿ ಶಿಕ್ಷಕರಾಗಿರುವವರೆಲ್ಲರನ್ನೂ ಸೇರಿಸಿಕೊಳ್ಳ ಬೇಕಾಗುವದು. ಇವರೆಲ್ಲರಿಗೂ ಸಾಧಾರಣವಾಗಿರುವ ಒಂದೇ ಉತ್ತರವನ್ನು ಬರೆಯ ಬಹುದಾದರೂ ಐಹಿಕದೃಷ್ಟಿಯಿಂದ ಜೀವನಕ್ಕೆ ತಕ್ಕಮಟ್ಟಿಗೆ ಸಾಕಾಗುವಷ್ಟು ಆದಾಯವುಳ್ಳವರು, ಅದಿಲ್ಲದವರು–ಎಂದು ಎರಡು ವರ್ಗಗಳನ್ನು ಮೊದಲು ಮಾಡಿಕೊಳ್ಳುವೆನು. ಈ ಪತ್ರದಲ್ಲಿ ಕಾಲೇಜುಗಳೆಂಬ ಮಹಾವಿದ್ಯಾಲಯಗಳಲ್ಲಿರುವ ಬೋಧಕರನ್ನು ಲೆಕ್ಕಕ್ಕೆ ಹಿಡಿಯದೆ ಮಿಕ್ಕವರನ್ನು ಮಾತ್ರ ಲಕ್ಷ್ಯದಲ್ಲಿಟ್ಟುಕೊಂಡಿರುವೆನು.

ಪ್ರಾಥಮಿಕವಿದ್ಯಾಲಯಗಳಲ್ಲಿರುವವರಿಗೆ ಬಹಳ ಚಿಕ್ಕವಯಸ್ಸಿನ ಹುಡುಗರು ಶಿಷ್ಯರಾಗಿರುತ್ತಾರೆ. ಹೊಸದಾಗಿ ಅಕ್ಷರಾಭ್ಯಾಸ, ಓದುವದು, ಬರೆಯುವದು, ಲೆಕ್ಕ–ಎಂಬ ಮೂರನ್ನು ಮುಖ್ಯವಾಗಿಯೂ ಹೊರಗಿನ ಪ್ರಕೃತಿಯ ಪರಿಚಯವನ್ನು ಸ್ವಲ್ಪ ಮಟ್ಟಿಗೆ ಮಾಡಿಕೊಡುವದೆಂಬುದನ್ನು ಎರಡನೆಯರಾಶಿಯಾಗಿಯೂ ವಿಷಯಗಳನ್ನು ಪಾಠಪದ್ಧತಿಯಲ್ಲಿ ಸೇರಿಸಿಕೊಂಡಿರುತ್ತಾರೆ. ಸರಿಯಾಗಿ ನೋಡಿದರೆ ತೀರ ಚಿಕ್ಕ ವಯಸ್ಸಿನ ಮಕ್ಕಳಿಗೆ ಪಾಠವನ್ನು ಕಲಿಯಿಸುವದಕ್ಕೆ ಮಕ್ಕಳ ವಯಸ್ಸಿನ ಸ್ವಭಾವವನ್ನರಿತವರೂ ತಾಳ್ಮೆಯುಳ್ಳವರೂ ಮಕ್ಕಳ ಪಾಠದಲ್ಲಿಯೇ ಅಲ್ಲದೆ ಆಟದಲ್ಲಿಯೂ ಆಸಕ್ತಿಯನ್ನು ವಹಿಸಬಲ್ಲವರೂ ಆದ ಅನುಭವಸ್ಥರಾದ ಶಿಕ್ಷಕರು ಇರಬೇಕಾದದ್ದು ಅವಶ್ಯವಾಗಿದೆ. ಆದರೆ ಸ್ಕೂಲುಗಳ ಸಂಖ್ಯೆಯೂ ಅವುಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯೂ ಅಪರಿಮಿತವಾಗಿರುವ ಈಗಿನ ಸ್ಥಿತಿಯಲ್ಲಿ ಅಂಥ ಬೋಧಕರನ್ನಿಟ್ಟು ಅವರ ಯೋಗ್ಯತೆಗೆ ತಕ್ಕಂತೆ ಹೆಚ್ಚಿನ ಸಂಬಳವನ್ನು ಗೊತ್ತುಮಾಡುವ ವಿಚಾರವು ಶಾಲಾಧಿಕಾರಿಗಳ ಮನಸ್ಸಿನಲ್ಲಿ ಬರುವದಾಗಲಿ, ಬಂದರೂ ಅದಕ್ಕೆ ಬೇಕಾಗುವಷ್ಟು ಮೂಲಧನವನ್ನು ವ್ಯಯ ಮಾಡುವದಾಗಲಿ ಸಾಧ್ಯವಾಗಲಾರದೆಂದೇ ತೋರುತ್ತಿದೆ.

ಪ್ರಾಥಮಿಕಶಾಲೆಗಳಲ್ಲಿನ ಉಪಾಧ್ಯಾಯರು ಇನ್ನೂ ಲೋಕಾನುಭವವು ಸಾಲದಷ್ಟು ಚಿಕ್ಕ ವಯಸ್ಸಿನವರಾಗಿರುವ ಸಂಭವವೇ ಹೆಚ್ಚಾಗಿದೆ. ಅಂಥವರಲ್ಲಿ ಅಧ್ಯಾತ್ಮ ಸಾಧನೆಯಕಡೆಗೂ ಮನಸ್ಸಿನ ಗುರಿ ಇರಬಹುದಾದವರಿದ್ದರೆ ಅವರು ''ಇಲ್ಲಿರುವ ಮಕ್ಕಳೆಲ್ಲರೂ ಭಗವಂತನೆಂಬ ಸೂರ್ಯನ ಕಿರಣಗಳು; ಇವರೆಲ್ಲರೂ ಇಷ್ಟರಲ್ಲಿಯೇ ವಿಕಾಸವಾಗಿ ಲೋಕದಲ್ಲೆಲ್ಲ ಭಗವಂತನ ಜ್ಞಾನಶಕ್ತಿಯ ಮತ್ತು ಕ್ರಿಯಾಶಕ್ತಿಯ ವಿಲಾಸವನ್ನು ತೋರಿಸುವದಕ್ಕೆ ಸಿದ್ಧರಾಗತಕ್ಕವರಿದಾರೆ. ನನ್ನ ಪುಣ್ಯದಿಂದ ಈ ಮಕ್ಕಳು ನನ್ನ ಶಿಕ್ಷಣಕ್ಕೆ ಒಳಪಟ್ಟಿರುತ್ತಾರೆ. ''ಭಗವಂತನು ನನಗೆ ಅನುಗ್ರಹಿಸಿರುವಷ್ಟು ತಿಳಿವಳಿಕೆಯನ್ನು ಈ ಮಕ್ಕಳಿಗೆ ವಂಚನೆಯಿಲ್ಲದೆ ಹೇಳಿಕೊಟ್ಟು ನನ್ನ ಅರ್ಚನೆಯನ್ನು ಭಗವಂತನಿಗೆ ಒಪ್ಪಿಸಬೇಕಾಗಿದೆ'' ಎಂಬ ಭಾವನೆಯನ್ನು ಮಾಡಿಕೊಳ್ಳಬೇಕು. ''ಮನೆಯ ಸಂಸಾರದಲ್ಲಿ ಒದಗಿರುವ ತೊಡಕುಗಳ ದುಃಖವನ್ನು ಸ್ವಲ್ಪವೂ ಮನಸ್ಸಿಗೆ ಹತ್ತಿಸಿಕೊಳ್ಳದೆ ಬಾಲಕರೊಡನೆಬೆರೆತು ಸಂತೋಷದಿಂದ ವರ್ತಿಸುವಂತೆ ಅನುಗ್ರಹಿಸು'' ಎಂದು ಭಗವಂತನನ್ನು ಬೇಡಿಕೊಳ್ಳುತ್ತಿರಬೇಕು. ಇದು ಮಾಧ್ಯಮಿಕಶಾಲೆಗಳ ಉಪಾಧ್ಯಾಯರಿಗೂ ಅನ್ವಯಿಸುತ್ತದೆ.

ಪ್ರೌಢಶಾಲೆಗಳಲ್ಲಿರುವ ಉಪಾಧ್ಯಾಯರ ಹೊಣೆಗಾರಿಕೆಯು ಇನ್ನಷ್ಟು ಹೆಚ್ಚಿನದಾಗಿರುತ್ತದೆ. ಈಗತಾನೆ ವಿದ್ಯಾರ್ಥಿಗಳು ಲೌಕಿಕವಿದ್ಯಾಪ್ರಸ್ಥಾನಗಳನ್ನು ಅಭ್ಯಾಸ

ಮಾಡುವದಕ್ಕೆ ಹೊರಟಿರುತ್ತಾರೆ. ಅವರು ತಮ್ಮ ವಿಚಾರಶಕ್ತಿಯನ್ನು ಬೆಳೆಯಿಸಿ ಕೊಳ್ಳುವದಕ್ಕೆ ಈಗ ತಾನೆ ಮುಂದಡಿಯಿಡುವದಕ್ಕೆ ಮೊದಲುಮಾಡಿರುತ್ತಾರೆ. ಆದ್ದರಿಂದ ಅವರಿಗೆ ವಿಷಯಗಳನ್ನು ಬೋಧಿಸುವ ಶಿಕ್ಷಕನು ವಿದ್ಯಾನಂದದ ಸವಿಯನ್ನು ತೋರಿಸುವದರಲ್ಲಿ ತನ್ನ ಬುದ್ಧಿಯನ್ನೆಲ್ಲ ವೆಚ್ಚಮಾಡಬೇಕಾಗಿರುತ್ತದೆ. 'ಇಂತಿಷ್ಟು ಪಾಠಗಳನ್ನು ಮುಗಿಸಿದರೆ ಆಯಿತು' ಎಂಬ ಅಲ್ಪತೃಪ್ತಿಯನ್ನು ಇಟ್ಟುಕೊಳ್ಳದೆ "ಈ ಬಾಲಕರ ರೂಪದಿಂದ ಭಗವಂತನೇ ನನ್ನ ಮುಂದೆ ಬಂದು ನನ್ನನ್ನು ಪರೀಕ್ಷೆ ಮಾಡುತ್ತಿದ್ದಾನೆ. ನಿರ್ವಂಚನೆಯಿಂದ ಇವರಿಗೆ ನಾನು ವಿಷಯಗಳನ್ನು ಕಲಿಯಿಸಿ ಭಗವಂತನಿಗೆ ನನ್ನ ತಿಳಿವಳಿಕೆಯ ಪುಷ್ಪಗಳನ್ನು ಅರ್ಪಿಸಬೇಕು" ಎಂಬ ಭಾವನೆಯನ್ನು ತಳೆದಿರಬೇಕು. ತನ್ನ ಶಿಷ್ಯರಾದ ಬಾಲಕರಲ್ಲಾಗಲಿ, ಸಹೋಪಾಧ್ಯಾಯರಲ್ಲಾಗಲಿ ವಿಷಮಬುದ್ಧಿಯಿಂದ ವರ್ತಿಸದೆ ಇರಬೇಕು. ತನ್ನ ನಡೆನುಡಿಗಳ ಯಾವ ಲೋಪದೋಷಗಳಿಂದಲೂ ಹುಡುಗರು ಮಾರ್ಗತಪ್ಪದಂತೆ ಎಚ್ಚರಿಕೆಯಿಂದಿರಬೇಕು. "ವಿದ್ಯಾರ್ಥಿಗಳು ನನ್ನಿಂದ ಕಲಿತುಕೊಳ್ಳುವದಕ್ಕಿಂತಲೂ ನಾನು ವಿದ್ಯಾರ್ಥಿಗಳಿಂದ ಕಲಿತುಕೊಳ್ಳುವದು ಬಹಳವಿದೆ; ನನ್ನಲ್ಲಿರುವ ವಿದ್ಯೆಯನ್ನು ಇವರಿಗೆ ತಿಳಿಸುವದಲ್ಲದೆ ನನ್ನ ನಡತೆಯಿಂದಲೂ ಇವರಿಗೆ ಸನ್ಮಾರ್ಗವು ದೊರಕುವಂತೆಮಾಡಿ ನನ್ನನ್ನು ಕೃತಾರ್ಥನನ್ನಾಗಿ ಮಾಡು, ಭಗವಂತ!" ಎಂದು ದಿನದಿನವೂ ಪರಮಾತ್ಮನನ್ನು ಬೇಡಿಕೊಳ್ಳುತ್ತಿರಬೇಕು. ಮತನೀತಿಗಳನ್ನು ನೇರಾಗಿ ಬೋಧಿಸದೆ ಇದ್ದರೂ ದಿನದಿನದ ಪಾಠಗಳ ಮೂಲಕವೇ ವಿದ್ಯಾರ್ಥಿಗಳಿಗೂ ತನಗೂ ಸದಾಚಾರ, ಸದ್ಧರ್ಮ, ಸದ್ವಿಚಾರಗಳ ಅಭ್ಯಾಸವು ದೊರಕುವಂತೆ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿರಬೇಕು. ಅಂಥವರಮೇಲೆ ತಪ್ಪದೆ ಭಗವಂತನು ಅನುಗ್ರಹವನ್ನು ಮಾಡುವನು.

## 230. ವೈದ್ಯವೃತ್ತಿ

### (ನವೆಂಬರ್ 1965)

*"ಈಗೀಗ ವೈದ್ಯವೃತ್ತಿಗೂ ಹೆಚ್ಚಿನ ಸ್ಥಾನವು ದೊರಕುತ್ತಿದೆ. ನಮ್ಮ ಹುಡುಗರಿಬ್ಬರು ಆಗಲೇ ಡಾಕ್ಟರಾಗಿರುತ್ತಾರೆ; ಮೂರನೆಯವನೂ ಎಮ್.ಬಿ.ಸಿ.ಎಮ್. ಪರೀಕ್ಷೆಗೆ ಓದಬೇಕೆಂದು ಹಠ ಹಿಡಿದಿರುತ್ತಾನೆ. ನನಗೆ ಓದಿಸುವದಕ್ಕೆ ತಕ್ಕಷ್ಟು ಧನಸಂಪತ್ತಿಯಿಲ್ಲ; ಒಬ್ಬ ಮಗನಾದರೂ ಈ ವಾರ್ಧಕಸ್ಥಿತಿಯಲ್ಲಿ ಹತ್ತಿರವಿದ್ದರೆ ಆದೀತೆಂದು ನನಗೆ ಅನಿಸುತ್ತಿದೆ; ಆದರೆ ಈ ಆಶೆ ನೆರವೇರುವಂತೆ ಕಾಣುತ್ತಿಲ್ಲ. ಇದ್ದಷ್ಟು ಭೂಮಿಯನ್ನು ಯಾರಿಗಾದರೂ ಖರೀದಿಮಾಡಿ ಅಥವಾ ಭೋಗ್ಯಕ್ಕೆ ಕೊಟ್ಟು ಚಿಕ್ಕಮಗನನ್ನು ಓದುವದಕ್ಕೆ ಕಳುಹಿಸಿಕೊಡಲೇಬೇಕಾಗಿದೆ. ಮಕ್ಕಳು ಎಲ್ಲೆಲ್ಲಿಯೋ ದೂರದಲ್ಲಿ*

*ಕೆಲಸಮಾಡಿಕೊಂಡಿರುವಲ್ಲಿ, 'ನಾನು ಮನಸ್ಸಿಗೆ ಹೇಗೆ ನೆಮ್ಮದಿಯನ್ನು ತಂದುಕೊಳ್ಳಲಿ!' ಎಂಬ ಚಿಂತೆಯೊಂದು ಮನಸ್ಸಿನಲ್ಲಿ ಕೊರೆಯುವದಕ್ಕೆ ಮೊದಲು ಮಾಡಿದೆ. ಮಕ್ಕಳು ತಮ್ಮ ವೃತ್ತಿಯನ್ನು ಅಧ್ಯಾತ್ಮಸಾಧನೆಗೆ ತಿರುಗಿಸಿಕೊಳ್ಳುವದಕ್ಕೂ, ನಾನು ಈ ಮುಪ್ಪಿನಲ್ಲಿ ಮನಸ್ಸಿನಲ್ಲಿ ಕೊರಗುತ್ತಾ ಕಾಲವನ್ನು ಕಳೆಯುವಂತಾಗದೆ ಇರುವದಕ್ಕೂ ಯಾವದಾದರೂ ಉತ್ತಮ ಸೂಚನೆಗಳನ್ನು ಕೊಡಿರಿ'' ಎಂದು ನೀವು ಬರೆದಿರುವ ಪತ್ರದ ಅಭಿಪ್ರಾಯವಾಯಿತು.*

ಜೀವನದಲ್ಲಿ ಹೆಚ್ಚಿನ ಆದಾಯದ ವೃತ್ತಿ ಎಂಬ ಕಾರಣದಿಂದ ವೈದ್ಯವೃತ್ತಿಯನ್ನು ಆರಿಸಿಕೊಳ್ಳುವದು ತಪ್ಪಲ್ಲವಾದರೂ ಆ ವೃತ್ತಿಯಲ್ಲಿರುವವರು ತಮ್ಮ ಇಹಪರಗತಿಗಳನ್ನು ಲೆಕ್ಕಕ್ಕೆ ಹಿಡಿಯದೆ ಇದ್ದರೆ ಆಧ್ಯಾತ್ಮಿಕದೃಷ್ಟಿಯಿಂದ ಅವರಿಗೆ ಪುರುಷಾರ್ಥವು ಬಲುದೂರವಾಗುವದು. ಇದನ್ನು ವಿವೇಕಿಗಳಾದವರು ಮನಸ್ಸಿಗೆ ತಂದುಕೊಳ್ಳುವದು ಒಳ್ಳೆಯದು. ಯೌವನದ ಸುಖ, ಧನಸಂಪತ್ತಿ, ಅಧಿಕಾರ, ಕೀರ್ತಿ, ಜನಸಹಾಯ– ಮುಂತಾದವುಗಳನ್ನೇ ಮುಖ್ಯವೆಂದು ಬಗೆಯುವವರು ತಮ್ಮ ಗುರಿಯನ್ನು ಮುಟ್ಟುವದಕ್ಕೆ ಯಾವ ಉಪಾಯವನ್ನಾದರೂ–ಮತ್ತೊಬ್ಬರಿಗೆ ಅದರಿಂದ ಆಗಬಹುದಾದ ಹಿಂಸೆಯನ್ನೂ ಲೆಕ್ಕಿಸದೆ–ಕೈಕೊಳ್ಳುವದು ನಿಶ್ಚಿತ. ಸ್ವಾರ್ಥಜೀವನವು ಬಾಹ್ಯಸಾಮಗ್ರಿಗಳನ್ನು ಒದಗಿಸಿ ಕೊಡಬಹುದು; ಆದರೆ ಮನಸ್ಸಿಗೆ ಶಾಂತಿ ಸುಖಗಳನ್ನು ತಂದುಕೊಟ್ಟೇ ಕೊಡುವದೆಂದು ಹೇಳುವದಕ್ಕೆ ಆಗುವದಿಲ್ಲ; ಅಂಥ ಜೀವನವು ಶಾಂತಿ ಸುಖಗಳಿಗೆ ದೂರವಾಗಿರುವ ದೆಂಬುದೇ ಹೆಚ್ಚಾಗಿ ನಿರೀಕ್ಷಿಸತಕ್ಕದ್ದಾಗಿದೆ.

ವೈದ್ಯವೃತ್ತಿಯಲ್ಲಿರುವವರಿಗೆ ಪರೋಪಕಾರವನ್ನೂ ಮಾಡಿ ತಾವು ಶಾಂತಿ ಸುಖಗಳನ್ನು ಸಂಪಾದಿಸಿಕೊಳ್ಳುವದಕ್ಕೆ ಹೆಚ್ಚಿನ ಅವಕಾಶವಿರುತ್ತದೆ. ಈ ಲೋಕದಲ್ಲಿ ಬಡತನದ ಕಾರಣದಿಂದಲೇ ಅಲ್ಲದೆ, ಜನರಿಗೆ ಅತ್ಯಾಹಾರ, ಅನಾಹಾರ, ಅಪಥ್ಯ ಸೇವನೆ, ವಿರಾಮವಿಲ್ಲದೆ ದುಡಿಯುವದು, ಅಸಜ್ಜನರ ಸಹವಾಸ, ಸ್ವೇಚ್ಛಾಚಾರ, ಅನಾರೋಗ್ಯದ ಸಂನಿವೇಶಗಳಲ್ಲಿ ವಾಸಮಾಡುವದು–ಮುಂತಾದ ಕಾರಣಗಳಿಂದಲೂ ರೋಗಗಳು ಗಂಟುಬೀಳುವವು. ತಟ್ಟನೆ ನೋಡಿದರೆ ಯಾವ ಕಾರಣವೂ ಇಲ್ಲದೆಯೇ ಯಾವದಾದರೊಂದು ರೋಗವು ಜನರನ್ನು ಕಾಡುತ್ತಿರಬಹುದು. ಇದು ಪೂರ್ವಜನ್ಮದ ಪಾಪದ ಫಲವೆ ಎಂದು ಬಲ್ಲವರು ಹೇಳುತ್ತಾರೆ. ಇದೆಲ್ಲ ಹೇಗಾದರೂ ಇರಲಿ, ಲೋಕದಲ್ಲಿ ಒಂದಲ್ಲಒಂದು ಕಾರಣದಿಂದ ರೋಗಬಾಧೆಯು ಬರುತ್ತಿರುವದೇ ಬಹಳ. ಆ ಕಾರಣದಿಂದ ನರಳುತ್ತಿರುವ ಮಾನವರಿಗೆ ಶರೀರಸ್ವಾಸ್ಥ್ಯವನ್ನೂ ಮನಃಶಾಂತಿಯನ್ನೂ ತಂದುಕೊಡುವ ಸುಸಂಧಿಯು ವೈದ್ಯನಿಗೇ ಸಿಕ್ಕಿರುತ್ತದೆ. ಆ ಮೂಲಕ ಪರೋಪಕಾರವನ್ನು ಮಾಡಿ ಪುಣ್ಯವನ್ನೂ ಚಿತ್ತಶುದ್ಧಿಯನ್ನೂ ಸಂಪಾದಿಸುವದಕ್ಕೆ ದ್ವಾರವಾಗಿರುವ ವೃತ್ತಿಯು ಪುಣ್ಯದ ಫಲವಿಲ್ಲದೆ ಎಲ್ಲರಿಗೂ ದೊರಕೀತೆ?

ವೈದ್ಯನಾದವನಿಗೆ ರೋಗನಿದಾನ, (ರೋಗದಮೂಲ)ರೋಗದ ಲಕ್ಷಣ, ಚಿಕಿತ್ಸಾ ಕ್ರಮ–ಇಷ್ಟು ತಿಳಿದಿದ್ದರೆ ಸಾಲದು; ರೋಗವನ್ನು ಅನುಭವಿಸುವವರ ಮನಸ್ಸಿನಲ್ಲಿ ಆಗುತ್ತಿರುವ ವ್ಯಥೆಯನ್ನು ಮನಸ್ಸಿಗೆ ತಂದುಕೊಂಡು ಸಹಾನುಭೂತಿಯಿಂದ ವರ್ತಿಸುವ ವಿಶಾಲ ಹೃದಯವೂ ಬೇಕು. ರೋಗವು ಬಂದಮೇಲೆ ಅದಕ್ಕೆ ಯಾವದಾದರೊಂದು ಪ್ರಸಿದ್ಧವಾದ ಔಷಧವನ್ನು ಸೇವಿಸುವಂತೆ ಚೀಟಿಯಲ್ಲಿ ಬರೆದುಕೊಡುವ ಗೀಳುಮಾತ್ರ ಇದ್ದರೆ ಸಾಲದು; ರೋಗಿಯ ವಯಸ್ಸು, ಜೀವನಕ್ರಮ, ವಂಶ, ವಸತಿಯ ಸನ್ನಿವೇಶ–ಮುಂತಾದವುಗಳಿಗೆ ಅನುಗುಣವಾಗಿರುವ ಔಷಧಿಗಳನ್ನು ಕೊಡುವ ಜಾಣ್ಮೆಯೂ ಇರಬೇಕು. ರೋಗಕ್ಕೆ ಮದ್ದುಕೊಡುವದಕ್ಕಿಂತಲೂ ಮುಂದೆ ಬರಬಹುದಾದ ರೋಗದ ನಿರೀಕ್ಷಣೆಯಿಂದ ಈಗಲೇ ತೆಗೆದುಕೊಳ್ಳಬೇಕಾದ ಜಾಗರೂಕತೆಯನ್ನು ತಿಳಿಸುವ ದೂರದೃಷ್ಟಿಯೂ ಅವನಲ್ಲಿರಬೇಕು. ರೋಗಕ್ಕೆ ಶರೀರದ ದುರುಪಯೊಗವು ಹೇಗೋ ಹಾಗೆ ಮನಸ್ಸಿನ ದುರುಪಯೋಗವೂ ಕಾರಣವೆಂಬುದನ್ನು ತಿಳಿದಿರುವ ವೈದ್ಯನಾದರೆ 'ತಚ್ಛಾನ್ತಿರೌಷಧೈರ್ದಾನೈರ್ಜಪಹೋಮಸುರಾರ್ಚನೈಃ' ಎಂಬ ಹಿರಿಯರ ಉಪದೇಶದಲ್ಲಿಯೂ ಅವನು ಶ್ರದ್ಧೆಯನ್ನಿಟ್ಟು ಶರೀರಕ್ಕೆ ಚಿಕಿತ್ಸೆಯನ್ನು ಸೂಚಿಸುವಂತೆ ಮನಸ್ಸಿಗೂ ಸೂಚಿಸುವವನಾದಾನು. ಅಂಥ ವೈದ್ಯನಿಗೆ ಹಣದ ಸುರಿಮಳೆಯು ಲಭಿಸೀತೊ, ಇಲ್ಲವೊ–ನಿಶ್ಚಿತವಾಗಿ ಹೇಳುವದಕ್ಕೆ ಬಾರದೆ ಇದ್ದರೂ, ದೀನರ ಧನ್ಯವಾದಗಳ ಸುರಿಮಳೆಯೂ ಭಗವಂತನ ಅನುಗ್ರಹದ ಸುರಿಮಳೆಯೂ ಅವಶ್ಯವಾಗಿ ದೊರೆತೀತು; ಇಹಪರಸುಖಗಳು ಅವನಿಗೆ ಕಟ್ಟಿಟ್ಟ ಬುತ್ತಿಯಾಗಿರುವವು.

ಈಗಾಗಲೇ ಡಾಕ್ಟರರಾಗಿರುವ ನಿಮ್ಮ ಮಕ್ಕಳು ನೀತಿವಂತರಾಗಿದ್ದು ನಿಮ್ಮ ಬುದ್ಧಿವಾದವನ್ನು ಕೇಳುವವರಾಗಿದ್ದರೆ, ಜನರಿಗೆ ಆರೋಗ್ಯನಿಯಮಗಳು, ರೋಗನಿದಾನ, ಸತ್ಯಶೌಚಾಚಾರಗಳಿಂದ ದೊರಕುವ ಲಾಭ–ಇವುಗಳನ್ನೆಲ್ಲ ತಿಳಿಯಹೇಳಲಿ! ಪ್ರಕಟಣೆಗಳನ್ನು ತಯಾರಿಸಿ ದಳ್ಳಾಳಿವ್ಯಾಪಾರಕ್ಕೆ ವೈದ್ಯರನ್ನು ಒಲಿಸುವ 'ಪೇಟೆಂಟ್' ಚಿಕಿತ್ಸೆಗಳನ್ನೂ–ಅವುಗಳಿಂದಾಗುವ ಕೆಟ್ಟ ಪ್ರತಿಕ್ರಿಯೆಯನ್ನು ತಿಳಿದೂತಿಳಿದೂ ರೋಗಿಗಳಿಗೆ ಕೊಡದಂತೆ ನೋಡಿಕೊಳ್ಳಿರಿ. ಈಗಿನ ವಿಷಮಸ್ಥಿತಿಯಲ್ಲಿ ನಮ್ಮ ಸೇನೆಯಲ್ಲಿ ಗಾಯಗೊಂಡಿರುವವರಿಗೆ ಅವಶ್ಯವಾದ ಚಿಕಿತ್ಸೆಗಳನ್ನೂ, ಅವರ ಶರೀರ ಪುಷ್ಟಿಗೂ ಬಲವೃದ್ಧಿಗೂ ಬೇಕಾಗುವ ಪೋಷಕಾಹಾರಗಳನ್ನೂ ಶೋಧಿಸಿ ಒದಗಿಸುವ ಮಹೋಪಕಾರಕಕಾರ್ಯವನ್ನು ಕೈಕೊಳ್ಳಲಿ! ಅವರಿಗೆ ಇಹದಲ್ಲಿ ಧನಲಾಭವೂ ಕೀರ್ತಿಯೂ ಪರದಲ್ಲಿ ಗತಿಯೂ ಅವಶ್ಯವಾಗಿ ದೊರೆಯುವವು.

ನಿಮ್ಮ ಕಿರಿಯ ಮಗನಿಗೆ ದೇಶದ ಸದ್ಯದ ಪರಿಸ್ಥಿತಿಯನ್ನೂ, ಜನರಿಗೆ ಬಲವಾಗಿರುವ ಆಹಾರದ ಕೊರತೆಯನ್ನೂ ಮನಗಾಣುವಂತೆ ನಯದಿಂದಲೇ ತಿಳಿಸಿಕೊಡಿರಿ. ಊರು ಕೊಳ್ಳೆಯಾದ ಮೇಲೆ ಹೆಬ್ಬಾಗಿಲನ್ನು ಹಾಕಿಸುವದಕ್ಕಿಂತ ಹೇಗೆ ಮೊದಲೇ ಜಾಗರೂಕರಾಗಿರುವದು ಮೇಲೋ ಹಾಗೆ ಆಹಾರವನ್ನು ಬೆಳೆಯುವ ಹೊಲಗದ್ದೆಗಳನ್ನು ಮಾರಿ ವೈದ್ಯವೃತ್ತಿಗೆ ಬೇಕಾದ ಹಣವನ್ನು ಕೂಡಿಹಾಕುವದಕ್ಕಿಂತ, ಇರುವ ಭೂಮಿಗಳಲ್ಲಿ ಬಗೆ ಬಗೆಯ ಆಹಾರ ಧಾನ್ಯವನ್ನು ಬೆಳೆಯುವ ಕೌಶಲವನ್ನು ಅವನಿಗೆ ಹೇಳಿಕೊಡಿರಿ. ಕೂಲಿಯಿಲ್ಲದೆ ಅಲೆದಾಡುವ ಊರಿನ ಬಡವರಿಗೆ ಕೆಲಸವನ್ನು ಒದಗಿಸಿಕೊಟ್ಟು ನಿಮ್ಮ ಭೂಮಿಗಳನ್ನು ಉತ್ತು ಅಕ್ಕಿ, ರಾಗಿ, ಜೋಳ, ತರಕಾರಿ–ಮುಂತಾದವುಗಳನ್ನು ಬೆಳೆಯುವ ಕೆಲಸಕ್ಕೆ ಕೈಹಾಕಿರಿ. ದೂರ ದೇಶಕ್ಕೆ ಗಿರಣಿಗಳಿಗೆ ಹೋಗಿ ಕೆಲಸಮಾಡುವದಕ್ಕಿಂತ ತಮ್ಮ ಊರಿನಲ್ಲಿಯೇ ಇದ್ದ ಭೂಮಿಕಾಣಿಗಳನ್ನು ನೋಡಿಕೊಳ್ಳುವದರಿಂದ ದೇಶಕ್ಕೂ ಅವರಿಗೂ ಲಾಭವುಂಟೆಂಬುದನ್ನು ನಿಮ್ಮ ಸುತ್ತಮುತ್ತಲಿನ ಜನರಿಗೂ ಮನಗಾಣಿಸಿರಿ.

ಹೊಲತೋಟಗದ್ದೆಗಳಲ್ಲಿ ದುಡಿಯುವಾಗಲೂ ಮನೆಗಳಲ್ಲಿ ಕೆಲಸ ಮಾಡುವಾಗಲೂ ನಿಮ್ಮ ಮನೆಯವರೂ ನೆರೆಯವರೂ ಭಗವಂತನ ನಾಮಕೀರ್ತನೆಯನ್ನು ಮಾಡುವ ಉತ್ತಮ ಪದ್ಧತಿಯನ್ನು ಅನುಸರಿಸಲಿ. ''ಎಲ್ಲಾ ಜನರಿಗೂ ಸನ್ಮತಿಯನ್ನು ಕೊಡು, ದೇವ!'' ಎಂದು ಮನಪೂರ್ವಕವಾಗಿ ಭಜನೆ ಮಾಡುವ ಪದ್ಧತಿಯನ್ನು ನೀವೂ ಅನುಸರಿಸಿ ಊರಿನವರಿಗೂ ಮೇಲುಪಙ್ಕ್ತಿಯಾಗಿರಿ. ನಿಮಗೆ ಮುಪ್ಪಿನಲ್ಲಿ ಶಾಂತಿಯು ದೊರಕುವದಕ್ಕೆ ಇದೊಂದೇ ಉತ್ಕೃಷ್ಟವಾದ ಸಾಧನವು. ಇರುವ ಮಗನು ತಾನೂ ದುಡಿಯುತ್ತ ಜನರಿಗೆ ಆದರ್ಶ ಜೀವನವನ್ನು ನಡೆಯಿಸುತ್ತಾ ಮಾತಾಪಿತೃಗಳ ಸೇವೆಯನ್ನು ಮಾಡಿಕೊಡಲಿ!

ನನಗೆ ತಿಳಿದಮಟ್ಟಿಗೆ ಶಾಂತಿಸುಖಗಳ ಉಪಾಯವನ್ನು ನಿಮಗೆ ತಿಳಿಸಿರುತ್ತೇನೆ. ಭಗವಂತನ ಅನುಗ್ರಹದಿಂದ ನಿಮಗೆ ಈ ಸಾಧನವು ವಶವಾಗಲೆಂದು ಹಾರೈಸುತ್ತೇನೆ.

## 231. ದೇಶಭಕ್ತಿಯನ್ನು ಹೇಗೆ ತೋರಿಸಬೇಕು?

**(ಡಿಸೆಂಬರ್ 1965)**

*ನಿಮ್ಮ ಕಾಗದವು ತಲುಪಿತು. ನಿಮ್ಮ ಪತ್ರದಲ್ಲಿ ''ದೇಶಕ್ಕೆ ಒದಗಿರುವ ದುಃಸ್ಥಿತಿಯನ್ನು ನಿವಾರಿಸುವದಕ್ಕೆ ಸರಕಾರದವರು ಪ್ರಜಾವರ್ಗದವರೂ ಏನು ಮಾಡಬೇಕು? ದೇಶಕ್ಕೆ ಪರಕೀಯರ ದುರಾಕ್ರಮಣದಿಂದ ಯುದ್ಧವು ಅನಿವಾರ್ಯವಾಗಿದೆ. ನಿಯತಕಾಲಕ್ಕೆ ಬರಬೇಕಾಗಿದ್ದ*

*ಆಹಾರಸಾಮಗ್ರಿಯು ಒದಗದೆ ಜನರು ಕಣ್ಣುಕಣ್ಣು ಬಿಡುವಂತೆ ಆಗಿದೆ. ಆಹಾರಪದಾರ್ಥಗಳ ಮತ್ತು ಜೀವನದ ಆವಶ್ಯಕತೆಗಳ ಬೆಲೆ ಏರುತ್ತಲೇ ಇದೆ. ಬಹುಕಡೆಗಳಲ್ಲಿ ವಾಯುಗುಣ ಮಾರ್ಪಟ್ಟಿದೆ. ಮಳೆಬೆಳೆಗಳ ನಿರೀಕ್ಷಣೆಯು ನಿರೀಕ್ಷಣೆಯಲ್ಲಿಯೇ ಕೊನೆಗಾಣುವಂತಿದೆ. ಈ ಕಾಲಕ್ಕೆ ಬಡವರ ಗತಿ ಏನು? ನಮ್ಮಂಥವರು ಈಗ ದೇಶದ ಸೇವೆಗೆ ಹೇಗೆ ಸಜ್ಜಾಗಬೇಕು? ತತ್ಕಾಲಕ್ಕಾದರೂ ನಮ್ಮ ದೇಶದವರು ಗೀತಾರಾಮಾಯಣಗಳ ಪಾರಾಯಣವನ್ನೂ ಉಪನ್ಯಾಸಗಳನ್ನೂ ಅಲ್ಲಿಗೆ ನಿಲ್ಲಿಸಿ ಸೊಂಟಕಟ್ಟಿ ಯಾವದಾದರೂ ಒಂದು ನಿಜವಾದ ಕಾರ್ಯಕ್ರಮವನ್ನು ಕೈಕೊಳ್ಳಬೇಡವೆ? ಈ ವಿಷಯಕ್ಕೆ ನಿಮ್ಮ ಸೂಚನೆ ಏನು?'' ಎಂದು ಪ್ರಶ್ನೆಗಳ ಸುರಿಮಳೆಯನ್ನೇ ಕರೆದಿರುತ್ತೀರಿ.*

ನನಗೆ ಆರ್ಥಿಕ, ಸಾಮಾಜಿಕ, ಮತ್ತು ರಾಷ್ಟ್ರದ ಆಡಳಿತದ ವಿಭಾಗಗಳ ತಿಳಿವಳಿಕೆ ಅಷ್ಟೇನೂ ಹೇಳಿಕೊಳ್ಳುವಷ್ಟು ಇಲ್ಲ. ಆದ್ದರಿಂದ ಸಾಮಾನ್ಯಪ್ರಜೆಯೊಬ್ಬನ ದೃಷ್ಟಿಯಿಂದ ಉತ್ತರಗಳನ್ನು ಬರೆಯುತ್ತಿದ್ದೇನೆ. ಇದರಲ್ಲಿ ಗುಣಗ್ರಹಣವನ್ನು ಮಾಡಿರೆಂದು ಕೇಳಿ ಕೊಳ್ಳುತ್ತೇನೆ.

ಸರಕಾರದವರು ಏನು ಮಾಡಬೇಕೆಂಬುದನ್ನು ಹೇಳುವಷ್ಟು ರಾಷ್ಟ್ರಧರ್ಮದ ಜ್ಞಾನವು ನನಗಿಲ್ಲ. ಆದರೂ ಒಂದೆರಡು ವಿಷಯಗಳ ಬಗೆಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ; ಈಗ್ಗೆ ಜನತೆಗೆ ತಕ್ಕಷ್ಟು ಆಹಾರವಿಲ್ಲವಾದ್ದರಿಂದ ನಮ್ಮ ಮಿಕ್ಕ ಯೋಜನೆಗಳಲ್ಲಿ ಕಡಿತವನ್ನುಮಾಡಿ ನಮ್ಮಆಹಾರವನ್ನು ನಾವು ಬೆಳೆದುಕೊಳ್ಳುವ ಯೋಜನೆಗೆ ಸ್ವಲ್ಪವೂ ತಡಮಾಡದೆ—ಭೂಸುಧಾರಣೆಯೇ ಮುಂತಾದ ಗದ್ದಲದ ಪ್ರಶ್ನೆಗಳನ್ನು ಕೂಡ ಬದಿಗಿಟ್ಟು—ಮನಸ್ಸನ್ನು ಹಾಕುವದಕ್ಕೆ ಪ್ರಯತ್ನವನ್ನು ಕೈಕೊಳ್ಳಬೇಕು. ಅಂಗಡಿಯವರು ಪ್ರಾಮಾಣಿಕತೆಯಿಂದ ಧಾನ್ಯವನ್ನು ಮಾರುವಂತೆಯೂ ಲಾಭಗಳಿಸುವ ದಲ್ಲಾಳಿಗಳ ಮೋಸಕ್ಕೆ ಸಿಕ್ಕದಂತೆಯೂ ಏರ್ಪಡಿಸಬೇಕು. ಈಗ ಯುದ್ಧಮಾಡುವ ಜವಾನರರಕ್ಷಣೆಯೂ ಯೋಧಜನರ, ಸಂಖ್ಯೆಯನ್ನು ಹೆಚ್ಚಿಸುವದೂ ನಮಗೆ ಬೇಕಾಗುವ ಮುಖ್ಯಶಸ್ತ್ರಾಸ್ತ್ರಗಳ ಸಂಗ್ರಹವೂ ಅತ್ಯವಶ್ಯವೆಂಬುದನ್ನು ಲಕ್ಷ್ಯವಾಗಿಡಬೇಕು. ಸರಕಾರದ ಅಧಿಕಾರಿಗಳು, ಜನರು ಸಹ ಉಪದೇಶಕ್ಕೆ ಹೆಚ್ಚು ಕಾಲವನ್ನು ಹಾಕದೆ ದೇಶದ್ರೋಹಕ್ಕೆ ಸ್ವಲ್ಪವೂ ಎಡೆಗೊಡದೆ ಎಲ್ಲರೂ ಸೇರಿ ರಾಷ್ಟ್ರರಥದ ಚಕ್ರಗಳು ಸಲೀಸಾಗಿ ಮುಂದೆ ಸಾಗುವಂತೆ ಸಕಲ 'ಪಾರ್ಟಿ'ಗಳ ಸಹಾನುಭೂತಿಯನ್ನೂ ಒದಗಿಸಿಕೊಂಡು ದೇಶಸೇವೆಗೆ ಅಣಿಯಾಗುವದರ ಮೂಲಕ ರಾಷ್ಟ್ರಪುರುಷನ ಅಭ್ಯರ್ಚನೆಯನ್ನು ಕೈಕೊಳ್ಳಬೇಕು.

ಇನ್ನು ಜನರಲ್ಲಿ ಧನಸಂಪತ್ತುಳ್ಳ ಸಿರಿವಂತರು ರಾಷ್ಟ್ರಸೇವೆಗೆ ತಮ್ಮ ಧನವನ್ನು ಕೊಡುಗೈಯಿಂದ ಒದಗಿಸಬೇಕು; ಬಲಸಂಪತ್ತುಳ್ಳವರು ಹಿಂದುಮುಂದುನೋಡದೆ ಶ್ರದ್ಧಾಭಕ್ತಿಗಳಿಂದೊಡಗೂಡಿ ಗಂಡುಗಲಿತನದಿಂದ, ಸೈನ್ಯದ ಬಲವನ್ನು ಹೆಚ್ಚಿಸುವದಕ್ಕೆ

ಮುಂದೆಬರಬೇಕು. ಹೆಚ್ಚಿನ ಧನಬಲ, ಬಾಹುಬಲ–ಮುಂತಾದ ದೈವಾನುಗೃಹೀತ ಸಂಪತ್ತಿಲ್ಲದವರು ಏನುಮಾಡಬೇಕು?–ಎಂಬುದು ನೀವು ಕೇಳಿರುವ ಪ್ರಶ್ನೆಗಳಲ್ಲಿ ಮುಖ್ಯವಾಗಿರುವದರಿಂದ ಅದಕ್ಕೆ ನನ್ನ ಉತ್ತರವನ್ನು ಇಲ್ಲಿ ಬರೆಯುವೆನು. **ಗೀತಾರಾಮಾಯಣಗಳ ಪಾರಾಯಣವನ್ನಾಗಲಿ ಶ್ರವಣವನ್ನಾಗಲಿ ಬದಿಗಿಡುವ ಸಮಯವಿದೆಂದು ನೀವು ಭಾವಿಸಿರುವದು ತಪ್ಪುತಿಳಿವಳಿಕೆಯ ಫಲವೆಂದು ಹೇಳಲೇ ಬೇಕಾಗಿದೆ.** "ಆರ್ಯರಿಗೆ ತಕ್ಕದ್ದಲ್ಲ, ಸ್ವರ್ಗದಿಂದ ಚ್ಯುತಿಗೊಳಿಸುವ, ಅಕೀರ್ತಿಕರವಾದ, ಹೇಡಿತನವನ್ನು ಬಿಟ್ಟು ಸ್ವಧರ್ಮವನ್ನು ಮಾಡು, ಎದ್ದೇಳು!" ಎಂದು ಅರ್ಜುನನನ್ನು ಹುರುಪೇರಿಸಿದ ಭಗವದ್ಗೀತೆಯನ್ನು ಈಗಲ್ಲದಿದ್ದರೆ ಮತ್ತೆಯಾವಾಗ ಶ್ರವಣಮಾಡಬೇಕು? ಧರ್ಮ, ಸತ್ಯ, ವೀರ್ಯ ಇವುಗಳ ಪ್ರತೀಕವಾಗಿರುವ ಶ್ರೀರಾಮಚಂದ್ರನ ಚರಿತ್ರೆಯನ್ನು ಈಗಲ್ಲದೆ ಮತ್ತೆಯಾವಾಗ ಜನರು ಶ್ರವಣಮಾಡಬೇಕು?

ಸಾಮಾನ್ಯಸ್ಥಿತಿಯಲ್ಲಿರುವ ಮಿತಧನಧಾನ್ಯಾದಿಸಂಪತ್ತುಳ್ಳ ಜನರಲ್ಲಿ ಕೆಲಸಗಾರರಿದ್ದರೆ ಅವರಿಗೆ ಉದ್ಯೋಗಶೀಲತೆಯನ್ನು ತಿಳಿಸಿಕೊಡುವದಕ್ಕೆ ಸುಸಮಯವಿದು. ಮನೆಬಾಗಿಲು, ಸ್ವಲ್ಪ ಭೂಮಿಕಾಣಿ–ಇರುವವರು ಕಾಡುಹರಟೆಯನ್ನು ಹೊಡೆಯುತ್ತಾ ಕೂರದೆ ಇರುವಷ್ಟು ಸಾಧನಸಂಪತ್ತಿನಿಂದ ತಮ್ಮತಮ್ಮ ಮನೆಯ ಅಂಗಳದಲ್ಲಿ ತರಕಾರಿ, ಸಣ್ಣ ಪುಟ್ಟ ಪೈರು–ಮುಂತಾದವುಗಳನ್ನು ಬೆಳೆದು ಆಹಾರಾಭಾವವನ್ನು ಕಡಿಮೆಮಾಡಬೇಕು. ಜಾತ್ಯಾಚಾರ, ಮತಾಚಾರಗಳ ಕಟ್ಟಲೆಯಂತೆ ಶನಿವಾರ, ಸೋಮವಾರ, ಏಕಾದಶಿ, ಚತುರ್ದಶಿ, ಅಮಾವಾಸ್ಯೆ–ಮುಂತಾದ ದಿನಗಳಲ್ಲಿ ಯಥಾಯೋಗ್ಯವಾಗಿ ಉಪವಾಸ, ಒಪ್ಪತ್ತುಊಟ, ಫಲಹಾರ–ಮುಂತಾದ ಹಿತಮಿತ ಮೇಧ್ಯಭೋಜನಗಳಿಂದ ಆಹಾರದ ಅಪವ್ಯಯವನ್ನು ತಗ್ಗಿಸಬೇಕು. ದೇವಾಲಯಗಳಲ್ಲಿಯೂ ಧಾರ್ಮಿಕಸಂಸ್ಥೆಗಳಲ್ಲಿಯೂ ಪುರಾಣೇತಿಹಾಸಗಳ ಶ್ರವಣವನ್ನು ಮಾಡಿ ಪೂರ್ವದ ವೀರರ ಚರಿತ್ರೆಯನ್ನೂ ಧರ್ಮಾತ್ಮರ ಕಥೆಯನ್ನೂ ಶ್ರವಣಮಾಡುತ್ತಾ ಧರ್ಮಾರ್ಥಕಾಮಗಳನ್ನು ಶಾಸ್ತ್ರಕ್ಕೆ ಅವಿರುದ್ಧವಾಗಿ ಅನುಭವಿಸುವದಕ್ಕೆ ಸಜ್ಜಾಗಬೇಕು. ಧಾರ್ಮಿಕವಿಚಾರಗಳನ್ನೂ ಭಗವದ್ಭಕ್ತಿಯನ್ನೂ ಹೆಚ್ಚಿಸುವ ಭಾವನೆಗಳನ್ನು ತುಂಬಿಕೊಂಡು ನಾಸ್ತಿಕ್ಯಕ್ಕೆ ಕೊಡಲಿಯಪೆಟ್ಟುಹಾಕಬೇಕು. ನಮ್ಮ ದೇಶದ ಸಂಸ್ಕೃತಿಯು 'ಧರ್ಮಕ್ಕೆ ಜಯವಾಗಲಿ! ಅಧರ್ಮವು ನಾಶವಾಗಲಿ! ಸಜ್ಜನರೆಲ್ಲ ನೆಮ್ಮದಿಯಿಂದಿರಲಿ, ಎಲ್ಲರಿಗೂ ಸುಖವಾಗಲಿ! ಎಂದು ಹಾರೈಸುವ ಗುರಿಯುಳ್ಳದ್ದೆಂಬ ಭಾವನೆಯು ನಮ್ಮೆಲ್ಲರಲ್ಲಿ ತುಂಬಿಕೊಳ್ಳುವಂತೆ ಮಾಡಿಕೊಳ್ಳಬೇಕು. ದುರಾಚಾರಗಳ ದುಂದುವೆಚ್ಚದ ವಿಲಾಸೀ ಜೀವನಕ್ಕೆ ಮನಸೋಲದೆ, ಸತ್ಯ, ಶೌಚ, ಆಚಾರ–ಇವುಗಳನ್ನು ತಪ್ಪದೆ ನಾವೂ ಅನುಷ್ಠಾನಮಾಡುತ್ತಾನಮ್ಮನೆರೆಯವರನ್ನೂ ಶುದ್ಧಜೀವನದ ಗುರಿಯತ್ತತಿರುಗಿಸಬೇಕು.

ಮುಖ್ಯವಾಗಿ ಕುಟುಂಬಗಳು, ವಿದ್ಯಾಶಾಲೆಗಳು, ದೇವಾಲಯಗಳು– ಎಲ್ಲೆಲ್ಲಿಯೂ ಭಗವನ್ನಾಮದ ಕೀರ್ತನೆಯಾಗುತ್ತಿರಬೇಕು.

## 232. ವೇದಾಂತವಿದ್ಯೆಯಿಂದ ಐಹಿಕಪ್ರಯೋಜನವುಂಟೆ?

### (ಜನವರಿ 1966)

*"ಈಗಿನ ಸ್ಥಿತಿಯಲ್ಲಿ ಅನುಷ್ಠಾನಕ್ಕೆ ತರುವದಕ್ಕಾಗುವ ಉಪದೇಶಗಳೇ ಮುಖ್ಯವಲ್ಲವೆ? ವೇದಾಂತದಂಥ ದುರೂಹವಾದ ವಿಚಾರಗಳ ಉಪದೇಶದಿಂದ ಜನಜೀವನಕ್ಕೆ ಏನು ಪ್ರಯೋಜನವಾದೀತು? ಈಗ್ಗೆ ರಾಷ್ಟ್ರಕ್ಕೆ ಪ್ರಾಂತದೇಶಗಳಿಂದ ಬಹಳ ಕಷ್ಟಗಳು ಒದಗುತ್ತಿವೆ. ಪಾಕಿಸ್ತಾನದ ಪಕ್ಷಪಾತಿಗಳು ವೇಷಮರೆಯಿಸಿಕೊಂಡು ಬಂದು ಜನರಲ್ಲಿ ಒಡಕುಮಾಡುತ್ತಿದಾರಂತೆ! ಚೀನದೇಶದವರು ಹಿಮಾಲಯದ ಆಚೆ ಆಟಂಬಾಂಬಿನ ಸ್ಥಾನವಿಶೇಷವನ್ನು ಕಟ್ಟುತ್ತಿರುವರಂತೆ. ಈಗ್ಗೆ ನಾವೆಲ್ಲರೂ ದೇಶರಕ್ಷಣೆಗೆ ಸಿದ್ಧರಾಗಬೇಕಲ್ಲವೆ? ಅಧ್ಯಾತ್ಮವಿದ್ಯೆಯನ್ನು ಈಗ ಜನಸಾಮಾನ್ಯದವರು ಹೇಗೆ ಉಪಯೋಗಿಸಿಕೊಂಡರೆ ದೇಶಸೇವೆಯಾದೀತು?" ಎಂದು ಮುಂತಾಗಿ ನೀವು ಬರೆದ ಒಕ್ಕಣೆಯ ಪತ್ರವನ್ನು ನೋಡಿದೆ.*

ಈ ದಿಶೆಯಲ್ಲಿ ಹಿಂದೆ ಒಬ್ಬ ಮಹನೀಯರ ಪ್ರಶ್ನೆಗೆ ಉತ್ತರವನ್ನು ಕೊಟ್ಟಿರುವದರಲ್ಲಿ ನನ್ನ ಅಭಿಪ್ರಾಯವು ಸ್ವಲ್ಪಮಟ್ಟಿಗಾದರೂ ನಿಮ್ಮ ಮನಸ್ಸಿಗೂ ಹೊಳೆದಿರಬೇಕೆಂದು ನಂಬುತ್ತೇನೆ. ಭಗವದ್ಗೀತೆಯಂಥ ಅಧ್ಯಾತ್ಮಗ್ರಂಥವಿರುವಲ್ಲಿ ಅದರ ಪ್ರಯೋಜನವನ್ನು ಮಾಡಿಕೊಳ್ಳದೆ ಇದ್ದರೆ ನಾವೇ ಭಾಗ್ಯಹೀನರೆನ್ನಬೇಕು. ಪ್ರಜಾಸತ್ತೆಯ ಈ ರಾಷ್ಟ್ರದಲ್ಲಿ ಎಲ್ಲರೂ ದೇಶದಲ್ಲಿ ಅಭಿಮಾನವಿಟ್ಟುಕೊಂಡು ಕರ್ತವ್ಯಪರಾಯಣ ರಾಗುವದಕ್ಕೆ ನಮಗೆಲ್ಲರಿಗೂ ಸಮಾನವಾದ ಹಕ್ಕೂ ಹೊಣೆಗಾರಿಕೆಯೂ ಇದೆ– ಎಂಬುದು ನಿಶ್ಚಯ. ಆದರೆ ನಮ್ಮ ಆ ಹೊಣೆಗಾರಿಕೆಯನ್ನು ನಾವು ಹೇಗೆ ನಿರ್ವಹಿಸಬೇಕು? ವ್ಯಕ್ತಿಯ ಆತ್ಮಮೋಕ್ಷಕ್ಕೆ ಹೇಗೆ ಸ್ವಧರ್ಮಾಚರಣೆಯು ಅತ್ಯವಶ್ಯವೋ, ಹಾಗೆಯೇ ದೇಶದ ಆಪನ್ಮೋಕ್ಷಣಕ್ಕೂ ಅದು ಅಷ್ಟೇ ಅವಶ್ಯ. ಆದ್ದರಿಂದ ನಾವೆಲ್ಲರೂ ಈಗ ಭಗವದ್ಗೀತೆಯಲ್ಲಿ ಉಪದೇಶಿಸಿರುವ 'ಸ್ವಧರ್ಮಾಚರಣೆ' ಯತ್ತ ಸಾವಧಾನವಾಗಿ ದೃಷ್ಟಿಯನ್ನು ಹೊರಳಿಸುವದು ಮೊಟ್ಟಮೊದಲನೆಯ ಕೆಲಸವೆಂದು ನನಗೆ ಎನಿಸುತ್ತಿದೆ. ಹಿಂದಿನ ತಿಂಗಳ ಸಂಚಿಕೆಯಲ್ಲಿ ನಾನು ಬರೆದಿರುವ ಪತ್ರವನ್ನು ದಯವಿಟ್ಟು ಇನ್ನೊಮ್ಮೆ ಚಿತ್ತವಿಟ್ಟು ಓದಿರಿ.

ಪರಮಾತ್ಮನೇ ನಮಗೆಲ್ಲರಿಗೂ ಆತ್ಮನು. ಅಭಯ, ಧೈರ್ಯ, ಉತ್ಸಾಹ– ಮುಂತಾದ ಉತ್ತಮಭಾವಗಳು ಬ್ರಹ್ಮಾತ್ಮಭಾವನೆಯಿಂದ ಬಲವಾದಾವೇ ಹೊರತು ವೇದಾಂತಚಿಂತನೆಯಿಂದ ನಮ್ಮ ಜೀವನಕ್ಕೆ ಕುಂದನ್ನು ತರುವ ಯಾವ ಆತಂಕವೂ

ಒದಗಲಾರದು. 'ಭಗವದ್ಗೀತೆಯಲ್ಲಿ ಸರ್ವಕರ್ಮಸಂನ್ಯಾಸವನ್ನು ಹೊಗಳಿರುವದರಿಂದ ಕ್ರಿಯಾದಕ್ಷರಾಗಿರಬೇಕಾದ ಈ ಕಾಲಕ್ಕೆ ಅದು ಒಗ್ಗುವದಿಲ್ಲ' ಎಂದು ನಿಮ್ಮ ಪತ್ರದಲ್ಲಿ ಒಂದು ಕಡೆ ಇದೆ. ಆದರೆ 'ಸರ್ವಕರ್ಮಸಂನ್ಯಾಸ' ವೆಂಬುದರ ಅರ್ಥವು ಮಾಡುವದನ್ನೆಲ್ಲ ಬಿಟ್ಟು ಅಲಸರಾಗಬೇಕೆಂದೇನೂ ಅಲ್ಲ. ನಮ್ಮ ಆತ್ಮನಲ್ಲಿ ಅನಾತ್ಮದ ವ್ಯಾಪಾರದಿಂದ ಯಾವ ಕಲ್ಮಷದ ಸೋಂಕೂ ಆಗುವದಿಲ್ಲ; ಏಕೆಂದರೆ ಆತ್ಮನೊಬ್ಬನೇ ಪರಮಾರ್ಥಸತ್ಯನಾಗಿರುತ್ತಾನೆ, ಅನಾತ್ಮವೆಲ್ಲವೂ ಅವನಲ್ಲಿ ಕಲ್ಪಿತವಾಗಿದ್ದು, ಸಾರದೃಷ್ಟಿಯಿಂದ ನೋಡಿದಾಗ ಪರಮಾತ್ಮನೇ ಆಗಿರುತ್ತದೆ–ಎಂಬುದರಲ್ಲಿಯೇ ಆ ವಾಕ್ಯಕ್ಕೆ ತಾತ್ಪರ್ಯ. ಈ ಪ್ರಪಂಚವೆಲ್ಲವೂ ನಾವೂ ಪರಮಾರ್ಥದೃಷ್ಟಿಯಿಂದ ಪರಮಾತ್ಮನೇ–ಎಂಬ ಉತ್ತಮ ಭಾವನೆಯಿರುವವರಿಗೆ ಎಂದಿಗೂ ಕರ್ತವ್ಯಚ್ಯುತರಾಗುವ ಅಪಾಯವಿರಲಾರದು.

ಭಗವದ್ಗೀತೋಪದೇಶಕ್ಕೆ ಅವತರಣಿಕೆಯಾಗಿ ಶ್ರೀಶಂಕರಭಗವತ್ಪಾದರವರು ಬರೆದಿರುವ ವಾಕ್ಯಗಳ ಅರ್ಥವನ್ನು ಮನನಮಾಡುವವರಿಗೆ ಅಧ್ಯಾತ್ಮವಿದ್ಯೆಗೂ ಜನಜೀವನಕ್ಕೂ ಎಷ್ಟು ನಿಕಟಸಂಬಂಧವಿದೆ ಎಂಬುದು ಸುಸ್ಪಷ್ಟವಾಗುವದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಅಲ್ಲಿ ಹೇಳಿರುವದೇನೆಂದರೆ:

''ಶೋಕಮೋಹಗಳಿಂದ ವಿವೇಕಜ್ಞಾನವು ಮಸುಳಿಸಿದ್ದರಿಂದಲ್ಲವೆ, ಅರ್ಜುನನು ಸ್ವಧರ್ಮವಾದ ಯುದ್ಧದಲ್ಲಿ ತಾನೇ ತೊಡಗಿದ್ದನಾದರೂ ಆ ಯುದ್ಧವನ್ನು ಬಿಟ್ಟನು, ಮತ್ತೊಬ್ಬರ ಧರ್ಮವಾದ ಭಿಕ್ಷಾಜೀವನಾದಿಗಳನ್ನು ಮಾಡುವದಕ್ಕೂ ಮುಂದುವರಿದನು? ಆದ್ದರಿಂದ ಶೋಕಮೋಹಾದಿದೋಷಗಳಿಗೆ ಇಂಬುಗೊಟ್ಟಿರುವ ಜೀವರೆಲ್ಲರಿಗೂ ಸ್ವಭಾವದಿಂದಲೇ ಸ್ವಧರ್ಮದ ಪರಿತ್ಯಾಗವೂ ಪ್ರತಿಷಿದ್ಧ ಕರ್ಮಗಳನ್ನು ಮಾಡುವದೂ ಆಗುವದು. ಅವರು ಒಂದು ವೇಳೆ ಸ್ವಧರ್ಮದಲ್ಲಿ ತೊಡಗಿದರೂ ಅವರ ವಾಙ್ಮನಃಕಾಯಗಳ ಪ್ರವೃತ್ತಿಯು ಫಲೇಚ್ಛೆಯನ್ನು ಮುಂದುಮಾಡಿಕೊಂಡೇ, ಮತ್ತು ಅಹಂಕಾರಯುಕ್ತವಾಗಿಯೇ ಇದ್ದೀತು. ಆದರಿಂದ ಧರ್ಮಾಧರ್ಮಗಳು ಹೆಚ್ಚಿ ಒಳ್ಳೆಯ ಅಥವಾ ಕೆಟ್ಟ ಜನ್ಮವೂ ಸುಖದುಃಖಗಳ ಪ್ರಾಪ್ತಿಯೂ ಒದಗುವ ಸಂಸಾರಕ್ಕೆ ನಿಲುಗಡೆಯಿಲ್ಲದೆ ಹೋಗುವದು.''

ಈ ಗ್ರಂಥಭಾಗವನ್ನು ನೋಡಿದರೆ ತಮ್ಮತಮ್ಮ ಕರ್ತವ್ಯವನ್ನು ಬಿಟ್ಟು ಪರೋಪದೇಶದ ಪಾಂಡಿತ್ಯಕ್ಕೆ ಹೆಚ್ಚುಕಾಲವನ್ನು ವಿನಿಯೋಗಿಸುತ್ತಿರುವ ಜನರೇ ಹೆಚ್ಚುತ್ತಿರುವದರಿಂದ ಈಗ್ಗೆ ಲೋಕದಲ್ಲಿ ಬಹಳ ಅನರ್ಥಗಳು ತಲೆದೋರುತ್ತಿರುವವೆಂದೂ ಇದಕ್ಕೆ ಕಾರಣವಾಗಿರುವ ಶೋಕಮೋಹಗಳು ತೊಲಗುವದಕ್ಕೆ ಅಧ್ಯಾತ್ಮವಿದ್ಯಾಶಿಕ್ಷಣವು ಅತ್ಯವಶ್ಯವೆಂದೂ ಮನದಟ್ಟಾಗುವದರಲ್ಲಿ ಸಂದೇಹವಿಲ್ಲ. ಆದ್ದರಿಂದ ಈಶ್ವರಾಸ್ತಿತ್ವ,

ದೈವಭಕ್ತಿ ಸ್ವಧರ್ಮನಿಷ್ಠೆ–ಮುಂತಾದ ಸದ್ಗುಣಗಳು ಹೆಚ್ಚಿದರೇ ನಮ್ಮ ದೇಶದಲ್ಲಿ ಕಾಣುತ್ತಿರುವ ಹಲವು ಅನಿಷ್ಟಗಳು ಪರಿಹಾರವಾದಾವೆಂದು ನಾವು ನಿರೀಕ್ಷಿಸಬಹುದು. ಈ ಅಭಿಪ್ರಾಯವು ಸರಿಯೆಂದಾದರೆ, ಅಧ್ಯಾತ್ಮವಿದ್ಯೆಯ ಶಿಕ್ಷಣವನ್ನು ಹೆಚ್ಚು ಹೆಚ್ಚಾಗಿ ಪ್ರಚಾರ ಮಾಡುವದಕ್ಕೆ ನಾವೆಲ್ಲರೂ ಬದ್ಧಕಂಕಣರಾಗಬೇಕೆಂಬುದನ್ನು ನೀವೂ ಒಪ್ಪುವಿರೆಂದು ನನಗೆ ದೃಢವಿಶ್ವಾಸವಿದೆ.

## 233. ವೇದಾಂತದಲ್ಲಿ ಎಲ್ಲರಿಗೂ ಅಧಿಕಾರವಿಲ್ಲವೆ?

**(ಫೆಬ್ರವರಿ 1966)**

*ನಿಮ್ಮ ಪತ್ರವನ್ನು ಓದಿ ಅಭಿಪ್ರಾಯವನ್ನು ಗ್ರಹಿಸಿಕೊಂಡಿರುತ್ತೇನೆ. 'ಹಿಂದೂ ಮತದ ಚೌಕಟ್ಟಿನಲ್ಲಿ ಸೇರಿರುವ ಸ್ತ್ರೀಶೂದ್ರರಿಗೇ ವೇದಾಂತದಲ್ಲಿ ಅಧಿಕಾರವಿಲ್ಲವೆಂದು ಹೇಳುತ್ತಿರುವದರಿಂದ ಅದರ ಹೊರಗಿರುವವರಿಗೆ ವೇದಾಂತವನ್ನು ಹೇಳಿಲ್ಲವೆಂದಾಯಿತಷ್ಟೆ? ಇದು ಸಂಕುಚಿತ ದೃಷ್ಟಿಯನ್ನು ಸೂಚಿಸುವದಿಲ್ಲವೆ? ಹಾಗಾದರೆ ಉಪನಿಷತ್ತುಗಳಲ್ಲಿ ತಿಳಿಸಿಕೊಟ್ಟಿರುವ ಬ್ರಹ್ಮವಿದ್ಯೆಯು ಎಲ್ಲರನ್ನೂ ಕುರಿತು ಹೇಳಿದ್ದೆಂದು ಭಾವಿಸುವದು ತಪ್ಪೆ? ಅವೈದಿಕಧರ್ಮಗಳು ಭೂಮಂಡಲದಲ್ಲಿರುವ ಎಲ್ಲರಿಗೂ ತಮ್ಮ ಉಪದೇಶದ ಹೆಬ್ಬಾಗಿಲನ್ನು ತೆರೆದು ಯಾರಿಗಾದರೂ ತಮ್ಮತಮ್ಮ ಮತದ ದೀಕ್ಷೆಯನ್ನು ಕೊಡುತ್ತಿರುವ ಈ ನವನಾಗರಿಕತೆಯ ಕಾಲದಲ್ಲಿಯೂ ಈ ಮೂಢಗ್ರಹಿಕೆಗಳನ್ನು ಪ್ರೋತ್ಸಾಹಿಸುವದು ಸರಿಯಾದೀತೆ?'* ಎಂಬುದು ನಿಮ್ಮ ಪ್ರಶ್ನೆ.

**'ಅಧಿಕಾರ'** ವೆಂಬ ಶಬ್ದಕ್ಕೆ ನೀವು ಇಟ್ಟುಕೊಂಡಿರುವ ಅರ್ಥವೇ ನಿಮ್ಮ ಮನಸ್ಸಿನ ಈ ಉಮ್ಮಳಕ್ಕೆ ಕಾರಣವೆಂತ ನನಗೆ ತೋರಿರುವದರಿಂದ ಮೊದಲು ಆ ಶಬ್ದದ ನಿಜವಾದ ಅರ್ಥವನ್ನು ಹೇಳುವದು ಯುಕ್ತವಾಗಿದೆ. ಅಧಿಕಾರವೆಂದರೆ ಒಂದಾನೊಂದು ಸ್ಥಾನವಿಶೇಷಕ್ಕೆ ಬರಬಹುದೆಂದು ಸಮಾಜದ ಹಿರಿಯರು ಒಪ್ಪಿರುವ ಕಲ್ಪಿತಯೋಗ್ಯತೆ ಎಂದೇನೂ ಅರ್ಥವಲ್ಲ. ನ್ಯಾಯಾಧಿಪತಿಯಾಗಿರುವ ಒಬ್ಬಾತನಿಗೆ ಒಂದನೆಯ ವರ್ಗದ ಮ್ಯಾಜಿಸ್ಟ್ರೇಟ್ ಆಗಿದಾನೆಂದು ಸರಕಾರದವರು ಅನುಮತಿಕೊಟ್ಟಿದ್ದರೆ ಆ ಸ್ಥಾನದಲ್ಲಿದ್ದುಕೊಂಡು ನಿಗ್ರಹಾನುಗ್ರಹಗಳನ್ನು ಮಾಡುವ 'ಅಧಿಕಾರವು' ಅವನಿಗೆ ಬಂದಂತಾಯಿತು–ಎಂದು ವ್ಯವಹಾರ. ಹಾಗೆಯೇ ನಿಮಗೆ 'ವೇದಾಂತಕ್ಕೆ ಅಧಿಕಾರವಿದೆ' ಎಂದು ಸನಾತನಧರ್ಮದ ಸಮಾಜದವರು ಒಪ್ಪಿದರೆ ಅವನಿಗೆ ಅಧಿಕಾರ ಬರುವದೆಂದೇ ನೀವು ಭಾವಿಸಿರುವಿರೆಂತ ನನಗೆ ತೋರುತ್ತಿದೆ. ಇದು ನಿಜವಾದರೆ ನಿಮ್ಮ ಅಭಿಪ್ರಾಯವು ಸರಿಯಲ್ಲವೆಂಬುದನ್ನು ಮೊದಲು ತಿಳಿಸಿಬಿಡಬೇಕಾಗಿದೆ. ಒಬ್ಬಾನೊಬ್ಬ ಶ್ರೀಮಂತನು ವಿದ್ಯಾಶಾಲೆಯಲ್ಲಿ ಓದುತ್ತಿದ್ದ ತನ್ನ ಮಗನ ವಿದ್ಯಾಭಿವೃದ್ಧಿಯು ಎಷ್ಟರಮಟ್ಟಿಗೆ ಇದೆ ಎಂದು

ತಿಳಿಯುವದಕ್ಕೆ ಪ್ರಯತ್ನಿಸಿದಾಗ ಉಪಾಧ್ಯಾಯನು ''ಬಾಕಿಯದೆಲ್ಲ ಸರಿ; ಆದರೆ ಈ ಹುಡುಗನಿಗೆ ಗ್ರಹಣಶಕ್ತಿಸಾಕಷ್ಟು ಇಲ್ಲ'' ಎಂದಾಗ ಆ ಶ್ರೀಮಂತನು ''ಹಾಗೆಂದರೇನು? ನಮ್ಮ ಹುಡುಗನಿಗೆ ಯಾವದು ಸಾಲದೆ ಇದ್ದರೂ ಕೂಡಲೆ ಅವನಿಗೆ ಬೇಕಾದಷ್ಟನ್ನು ಕೊಂಡುಕೊಡಿರಿ; ನಾನು ಅದಕ್ಕೆ ಹಣವನ್ನು ಕೊಡುವದಕ್ಕೆ ಸಿದ್ಧನಾಗಿರುತ್ತೇನೆ'' ಎಂದನಂತೆ! ಗ್ರಹಣಶಕ್ತಿಯನ್ನು ಕೊಂಡುಕೊಡಿಸುವದು ಹೇಗೆ ಅಸಾಧ್ಯವೋ, ಹಾಗೆಯೇ ವೇದಾಂತಾಧಿಕಾರವನ್ನು ಎಲ್ಲರಿಗೂ ಕೊಡಿಸುವದೂ ಅಸಾಧ್ಯವಾದ ಕೆಲಸ; ಒಬ್ಬರಿಗೆ ಇರುವ ಅಧಿಕಾರವನ್ನು ಇನ್ನೊಬ್ಬರು ಕಸಿದುಕೊಳ್ಳುವದೆಂಬುದೂ ಆಗದ ಮಾತು.

ಇನ್ನು ವರ್ಣಾಶ್ರಮಧರ್ಮಗಳ ವಿಚಾರ. ಭಗವಂತನು ಭಗವದ್ಗೀತೆಯಲ್ಲಿ **''ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ''** ಎಂದು ಹೇಳಿರುವಂತೆ ಗುಣಗಳಿಗೆ ತಕ್ಕಂತೆ ಕರ್ಮಗಳನ್ನು ಶಾಸ್ತ್ರದಲ್ಲಿ ವಿಂಗಡಿಸಿಕೊಟ್ಟಿರುತ್ತದೆಯಾದರೂ ಆಯಾ ಜಾತಿಯಲ್ಲಿ ಹುಟ್ಟಿದವರಿಗೇ ಆಯಾ ಗುಣಗಳು ನಿಯತವಾಗಿರುವದಿಲ್ಲವೆಂಬುದನ್ನು ಎಲ್ಲರೂ ಒಪ್ಪಬೇಕು. ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದವನಲ್ಲಿ ಶೂದ್ರನ ಲಕ್ಷಣಗಳು, ಶೂದ್ರ ಜಾತಿಯಲ್ಲಿ ಹುಟ್ಟಿದವನಲ್ಲಿ ಬ್ರಾಹ್ಮಣನ ಲಕ್ಷಣಗಳೂ ತೋರಿಕೊಳ್ಳಬಹುದಾಗಿದೆ. ಇದು ನಮ್ಮ ಹಿರಿಯರಿಗೆ ತಿಳಿದಿರಲಿಲ್ಲವೆಂದು ಎಂದಿಗೂ ಹೇಳಬರುವದಿಲ್ಲ. ಮಹಾಭಾರತದಲ್ಲಿ ಈ ವಚನಗಳು ಕಂಡು ಬರುತ್ತವೆ:

**ಶೂದ್ರೇ ಚೈತದ್ಭವೇಲ್ಲಕ್ಷ್ಯಂ ದ್ವಿಜೇ ತಚ್ಚ ನ ವಿದ್ಯತೇ।**
**ನ ವೈ ಶೂದ್ರೋ ಭವೇಚ್ಛೂದ್ರೋ ಬ್ರಾಹ್ಮಣೋ ನ ಚ ಬ್ರಾಹ್ಮಣಃ ॥**

**ಯತ್ರೈತಲ್ಲಕ್ಷ್ಯತೇ ಸರ್ಪ ವೃತ್ತಂ ಸ ಬ್ರಾಹ್ಮಣಃ ಸ್ಮೃತಃ ।**
**ಯತ್ರೈ ತನ್ನ ಭವೇತ್ ಸರ್ಪ ತಂ ಶೂದ್ರಮಿತಿ ನಿರ್ದಿಶೇತ್ ॥**

ಮೋ.ಧ. 189–8, ವನ. 180–26

ಇವುಗಳ ಅಭಿಪ್ರಾಯವೇನೆಂದರೆ ಬ್ರಾಹ್ಮಣನಲ್ಲಿರಬೇಕಾದ ಲಕ್ಷಣಗಳು ಅವನಲ್ಲಿ ಕಾಣದೆ ಇದ್ದರೆ ಅವನು ಬ್ರಾಹ್ಮಣನಲ್ಲ, ಶೂದ್ರನಲ್ಲಿರುವವೆಂದು ನಿರೀಕ್ಷಿಸುವ ಗುಣಗಳು ಅವನಲ್ಲಿಲ್ಲದಿದ್ದರೆ ಅವನು ಶೂದ್ರನೂ ಅಲ್ಲ, ಬ್ರಾಹ್ಮಣಲಕ್ಷಣಗಳು ಇರುವವನೇ ಗುಣವಿಭಾಗದೃಷ್ಟಿಯಿಂದ ಬ್ರಾಹ್ಮಣನೆಂದು ತಿಳಿಯಬೇಕು. ಜಾತಿಯಿಂದ ಬ್ರಾಹ್ಮಣನೆಂಬ ಕಾರಣದಿಂದಲೇ ಅವನಿಗೆ ವೇದಾಂತವಿಚಾರಕ್ಕೆ ತಕ್ಕ ಅಧಿಕಾರವು ಎಂದಿಗೂ ಬರಲಾರದು.

ಸದ್ಯದ ಸಮಾಜಸ್ಥಿತಿಯಲ್ಲಿ ವರ್ಣಾಶ್ರಮಧರ್ಮಗಳು ಬಲುಮಟ್ಟಿಗೆ ಹೆಚ್ಚು ಕಡಿಮೆಯಾಗಿಬಿಟ್ಟಿವೆ. ಯಾವ ವರ್ಣದವರೂ ತಮ್ಮತಮ್ಮ ಧರ್ಮವನ್ನು

ಕಾಪಾಡಿಕೊಂಡು ಬರುವದಕ್ಕೆ ಪ್ರಯತ್ನವನ್ನು ಮಾಡುವದು ಕಾಣುತ್ತಿಲ್ಲ. ಆದರೆ ಇದು ಸಮಾಜದವರ ವಿಚಾರಕ್ಕೆ ವಿಷಯವಾದದ್ದು. ತತ್ತ್ವವಿಚಾರಕ್ಕೆ ಅರ್ಹನಾಗಿರುವವನು ಎಂದಿಗೂ ಈ ಜಗಳದಲ್ಲಿ ಪಾಲುಗೊಳ್ಳುವದಿಲ್ಲ. ತನ್ನ ಕೈಯಲ್ಲಾದಮಟ್ಟಿಗೆ ಸ್ವಧರ್ಮವನ್ನು ಆಚರಣೆಮಾಡುತ್ತಾ ಭಗವನ್ನಾಮಸ್ಮರಣೆಯೇ ಮುಂತಾದ ಉಪಾಯಗಳಿಂದ ಚಿತ್ತಶುದ್ಧಿಯನ್ನು ಸಂಪಾದಿಸಿಕೊಂಡು ಆತ್ಮವಿಚಾರವನ್ನು ಮಾಡುತ್ತಲೇ ಇರುತ್ತಾನೆ. ವೇದಾಧಿಕಾರವಿಲ್ಲದವರೂ ಇತಿಹಾಸಪುರಾಣಗಳಿಂದ ಜ್ಞಾನವನ್ನು ಸಂಪಾದಿಸಿಕೊಳ್ಳಬಹುದೆಂದೂ ಸಂಸ್ಕೃತಭಾಷೆಯನ್ನು ತಿಳಿಯದವರು ಭಾಷಾಂತರದ ಮೂಲಕವಾದರೂ ವಿಚಾರವನ್ನು ಮಾಡಿ ಜ್ಞಾನವನ್ನು ಸಂಪಾದಿಸಿಕೊಳ್ಳಬಹುದೆಂದೂ ಪುರಾಣಗಳಲ್ಲಿ ಸ್ಪಷ್ಟವಾಗಿ ಹೇಳಿರುತ್ತದೆ. ಈ ವಿಷಯದಲ್ಲಿ ನಿಮ್ಮ ಸಂಶಯಗಳು ಇನ್ನೇನಾದರೂ ಇದ್ದರೆ ತಿಳಿಸಿರಿ. ಮತ್ತೊಂದು ಪತ್ರದಲ್ಲಿ ಅವುಗಳಿಗೆ ಪರಿಹಾರವನ್ನು ಸೂಚಿಸುವದಕ್ಕೆ ಪ್ರಯತ್ನಿಸುವೆನು.

## 234. ವೈರಾಗ್ಯಭಾವನೆ

(ಮಾರ್ಚ್1966)

*ಮಹಾಶಯ,*

*''ಜೀವನಕ್ಕೆ ಬೇಕಾದ ಭೋಗಸಾಮಗ್ರಿಗಳನ್ನು ಉತ್ಪಾದನೆಮಾಡಿಕೊಳ್ಳುವದು, ಜನರಿಗೆಲ್ಲ ಅವುಗಳು ದೊರಕುವಂತೆ ಮಾಡಿ ಜೀವನದ ಮಟ್ಟವನ್ನು ಹೆಚ್ಚಿಸುವದು, ದೇಶಕ್ಕಾಗಿ ತನ್ನ ತನುಮನಗಳನ್ನೂ ಧನಸಂಪತ್ತನ್ನೂ ವಿನಿಯೋಗಿಸುವ ಉತ್ಸಾಹ–ಮುಂತಾದ ಅಭ್ಯುದಯ ಕಾರ್ಯಗಳಿಗೆ ವೈರಾಗ್ಯಭಾವನೆಯನ್ನೇ ಮತ್ತೆ ಮತ್ತೆ ಬೋಧಿಸುತ್ತಿರುವದೊಂದು ಅಡ್ಡಿಯಾಗಿದೆ ಎಂದು ನನಗೆ ತೋರುತ್ತದೆ. ಉತ್ತಮನಾಗರಿಕನಾಗಿ ಬಾಳಬೇಕೆನ್ನುವವನಿಗೆ ಸಂಸಾರದ ಅಸಾರತೆ, ವೈರಾಗ್ಯ–ಮುಂತಾದವುಗಳನ್ನು ಬೋಧಿಸುವದು ಸರಿಯೆ? ಆದರಿಂದ ಜನರಿಗೆ ಸೋಮಾರಿತನವೇ ಒಳ್ಳೆಯದೆಂಬ ತಪ್ಪುಭಾವನೆ ಉಂಟಾಗುವದಿಲ್ಲವೆ? ದೇಶಕ್ಕೆ ಕಲ್ಯಾಣವಾಗಬೇಕಾದರೆ ಅಧ್ಯಾತ್ಮವಿದ್ಯೆಯನ್ನು ಈಗ ಹೇಗೆ ವಿನಿಯೋಗಿಸಬೇಕು? ಇದಕ್ಕೆ ತಮ್ಮ ಅಭಿಪ್ರಾಯವನ್ನು ತಿಳಿಸೋಣಾಗಬೇಕು''–ಎಂತ ಬರೆದಿರುವ ನಿಮ್ಮ ಪತ್ರವನ್ನು ಓದಿ ನೋಡಿಕೊಂಡೆ.*

ವೈರಾಗ್ಯವೆಂಬ ಶಬ್ದಕ್ಕೆ ನೀವು ಮಾಡಿಕೊಂಡಿರುವ ಅರ್ಥವೇ ನಿಮ್ಮ ಶಂಕೆಗೆ ಮುಖ್ಯ ಕಾರಣವಾಗಿರುತ್ತದೆಯೆಂತ ನನ್ನ ಭಾವನೆ. ಶಾಸ್ತ್ರದಲ್ಲಿ ಜನರೆಲ್ಲರಿಗೂ ವೈರಾಗ್ಯವನ್ನು ಬೋಧಿಸುತ್ತಿಲ್ಲ. ಧರ್ಮ, ಅರ್ಥ, ಕಾಮ, ಮೋಕ್ಷ–ಎಂಬ ನಾಲ್ಕು ಪುರುಷಾರ್ಥಗಳಿವೆಯೆಂದು ಶಾಸ್ತ್ರವು ಹೇಳುತ್ತಿದೆ. ಭೋಗವು ಬೇಕೆನ್ನುವವರಿಗೆ ಧರ್ಮಕ್ಕೆ

ವಿರೋಧವಾಗದಂತೆ ಅರ್ಥಕಾಮಗಳನ್ನು ಒಂದು ಗುಂಪಾಗಿ ಭಾವಿಸಿ ಅದಕ್ಕೆ 'ತ್ರಿವರ್ಗ' ಎಂಬ ಹೆಸರನ್ನು ಕೊಟ್ಟಿರುವದಕ್ಕೆ ಇದೇ ಕಾರಣ. ಇಹಲೋಕದಲ್ಲಾಗಲಿ ಪರಲೋಕದಲ್ಲಾಗಲಿ ಸುಖವು ಬೇಕೆನ್ನುವವರಿಗೆ ''ಬರಿಯ ವಿಷಯಭೋಗವೇ–ಭೋಗ್ಯವಸ್ತುಗಳನ್ನು ನ್ಯಾಯವಾಗಿಯೋ ಅನ್ಯಾಯವಾಗಿಯೋ ಸಂಪಾದಿಸಿಕೊಂಡು ಇಂದ್ರಿಯಗಳನ್ನು ತೃಪ್ತಿಗೊಳಿಸುವದೇ–ಜೀವನದ ಗುರಿ ಎಂದು ಬಗೆಯಬೇಡಿರಿ. ವಿಷಯಲೋಲುಪತೆಯಿಂದ ಬಹಳ ಅನರ್ಥಗಳುಂಟಾಗುವವು. **'ಧರ್ಮಾದರ್ಥಶ್ಚ ಕಾಮಶ್ಚ ಸ ಕಿಮರ್ಥಂ ನ ಸೇವ್ಯತೇ'** ಧರ್ಮದಿಂದ ಅರ್ಥವೂ ಕಾಮವೂ ಲಭಿಸುವವು; ಹೀಗಿರುವಲ್ಲಿ ಧರ್ಮವನ್ನೇಕೆ ಬಿಡುತ್ತಿದೀರಿ?– ಎಂದೇ ವೇದವ್ಯಾಸರು ಮಹಾಭಾರತದ ಉಪಸಂಹಾರವಾಕ್ಯವನ್ನು ಬರೆದಿರುವದನ್ನು ನೋಡಿದರೆ ಶಾಸ್ತ್ರಕಾರರ ಉಪದೇಶವು ಜನತೆಯ ಕಲ್ಯಾಣಕ್ಕೆ ಅಡ್ಡಿಯಾದೀತೆ? ನೀವೇ ಯೋಚಿಸಿರಿ.

ಇನ್ನು ಯಾವ ಪುಣ್ಯಾತ್ಮರುಗಳಿಗೆ ''ಧರ್ಮದಿಂದ ಸಂಪಾದಿಸಿದ ಅರ್ಥಕಾಮಗಳೂ ಅನಿತ್ಯವೇ ಆಗಿರುತ್ತವೆ; ಕಾಮಗಳ ಉಪಭೋಗದಿಂದ ಮನುಷ್ಯನ ಆಶೆಯು ಎಂದಿಗೂ ಶಾಂತವಾಗಲಾರದು. ಆದ್ದರಿಂದ ಅತ್ಯಂತವಾಗಿ ನಿತ್ಯವಾಗಿರುವ ಪರಮ ಪುರುಷಾರ್ಥವೇ ನಮಗೆ ಬೇಕು'' ಎಂಬ ಮುಮುಕ್ಷತೆ ಉಂಟಾಗಿರುವದೋ ಅವರಿಗೆ ವಿಷಯಗಳ ಭೋಗದ ಅಸಾರತೆಯು ಮನದಟ್ಟಾಗಿರುವದರಿಂದ ಅವರಿಗೆ 'ಭೋಗಸಾಮಗ್ರಿಗಳ ಉತ್ಪಾದನೆ, ಜೀವನದ ಮಟ್ಟವನ್ನು ಹೆಚ್ಚಿಸುವದು' ಮುಂತಾದ ಧ್ಯೇಯಗಳು ಎಂದಿಗೂ ಆಕರ್ಷಕವಾಗಲಾರವು. ಅವರಿಗೆ ನಿಜವಾದ ವೈರಾಗ್ಯವು ಉಂಟಾಗಿರುತ್ತದೆ. ಅಂಥವರಿಗೆ ಶಾಸ್ತ್ರವು ವೈರಾಗ್ಯವನ್ನು ಬೋಧಿಸಬೇಕಾಗಿಲ್ಲ. ಆದ್ದರಿಂದ ಮೋಕ್ಷವೆಂಬ ಪರಮಪುರುಷಾರ್ಥಕ್ಕೆ ಸಾಧನವಾದ ಬ್ರಹ್ಮಾತ್ಮಜ್ಞಾನವನ್ನು ಬೋಧಿಸುತ್ತದೆ.

ಅಧ್ಯಾತ್ಮವಿದ್ಯೆಯಿಂದ ಜನರಲ್ಲಿ ಸತ್ಪರಿಣಾಮವಾಗಬೇಕಾದರೆ, ಸಾಮಾನ್ಯ ಜನರಿಗೆ ಕರ್ಮನಿಯಮ, ಜನ್ಮಾಂತರ, ಲೋಕಾಂತರ, ಪುಣ್ಯಪಾಪಗಳು, ಈಶ್ವರಭಕ್ತಿ– ಇವುಗಳ್ನು ಬೋಧಿಸಬೇಕು. ಸನ್ಮಾರ್ಗದಿಂದ ದುಡಿದು ಜೀವಿಸುವದಕ್ಕೆ ಬೇಕಾದ ಧರ್ಮಪ್ರಧಾನವಾದ ವಿದ್ಯೆಯನ್ನು ಅವರಿಗೆ ಅಧ್ಯಾತ್ಮವಿದ್ಯೆಯ ಆಧಾರದಿಂದ ಹೇಳಿ ಕೊಡಬೇಕು. ನಾಸ್ತಿಕ್ಯವನ್ನು ತಪ್ಪಿಸುವದಕ್ಕೆ ಪ್ರಯತ್ನಿಸಬೇಕು. ಮುಮುಕ್ಷುಗಳಾದವರು ಸ್ವಕರ್ಮದಿಂದ ಭಗವಂತನ ಅರ್ಚನೆಯನ್ನು ಮಾಡಿ ಉದ್ಧಾರವಾಗುವಂತೆ ಕರ್ಮಯೋಗವನ್ನು ಬೋಧಿಸಬೇಕು. ಅಧ್ಯಾತ್ಮವಿದ್ಯೆಯಿಂದ ಪಾರಾಗಬೇಕೆಂದು ನಿಜವಾಗಿ ಹಂಬಲಿಸುತ್ತಿರುವ ಮುಮುಕ್ಷುಗಳು ಸದ್ಗುರುವನ್ನು ಸೇರಿ ಅವರ ಉಪದೇಶದಿಂದ ಕೃತಾರ್ಥರಾಗುತ್ತಾರೆ. ವೇಷಧಾರಿಗುರುಗಳೂ ಸಾಧುಸಂನ್ಯಾಸಿಗಳೂ

ದುರ್ಭೋರ್ಧೆಯಿಂದ ಸಾಧಕಜನರ ಚಿತ್ತವನ್ನು ಕದಡದಂತೆ ನೋಡಿಕೊಳ್ಳುವದೂ ಪರಿಣಾಮಕಾರಿಯಾದ ಅಧ್ಯಾತ್ಮವಿದ್ಯೆಯ ಪ್ರಸಾರವನ್ನುಮಾಡುತ್ತಿರುವ ಮಹಾತ್ಮರ ಕಾರ್ಯಕ್ಕೆ ಪ್ರೋತ್ಸಾಹವನ್ನು ಕೊಡುವದೂ ರಾಷ್ಟ್ರದ ಆದ್ಯ ಕರ್ತವ್ಯವಾಗಿರುತ್ತದೆ. ಅಂಥ ಮಹಾತ್ಮರು ಲೋಕಸಂಗ್ರಹಕ್ಕಾಗಿ ತಮ್ಮ ಸ್ಥಾನಕ್ಕೆ ಉಚಿತವಾದ ಕರ್ಮವನ್ನು ಮಾಡುತ್ತಾ ತಮ್ಮ ನಡೆನುಡಿಗಳಿಂದ ದೇಶದ ಕಲ್ಯಾಣಕ್ಕೇ ನೆರವಾಗುತ್ತಿರುವದರಿಂದ ಅವರಾಗಲಿ ಅವರ ಶಿಷ್ಯರಾಗಲಿ ಸೋಮಾರಿಗಳಾಗುವರೆಂಬ ಭೀತಿಗೆ ಎಳ್ಳಷ್ಟೂ ಅವಕಾಶವಿರುವದಿಲ್ಲ.

ನಿಮ್ಮ ಪ್ರಶ್ನೆಗಳಿಗೆಲ್ಲ ಉತ್ತರವು ಈ ನನ್ನ ಪತ್ರದಿಂದ ಸಿಕ್ಕಿದಂತೆ ಆಯಿತೆ? ಅಧ್ಯಾತ್ಮವಿದ್ಯೆಯ ಯಾವ ಭಾಗದಲ್ಲಿನಿಮಗೆ ಅಭಿರುಚಿ? ಅದನ್ನು ತಿಳಿಸಿರಿ. ಅದನ್ನು ನೀವೂ ಸಾಧಿಸಿ ಲೋಕಕಲ್ಯಾಣಕ್ಕೂ ನೆರವಾಗುವಂತೆ ಭಗವಂತನು ನಿಮ್ಮನ್ನು ಅನುಗ್ರಹಿಸಲಿ! ಎಂದು ಪ್ರಾರ್ಥಿಸುತ್ತೇನೆ.

## 235. ಜ್ಞಾನದ ತತ್ತ್ವ

**(ಏಪ್ರಿಲ್ 1966)**

*ಮಹಾಶಯ,*

*''ಜ್ಞಾನವು ಎಲ್ಲರಿಗೂ ದಕ್ಕುವಹಾಗಿರುವದಿಲ್ಲ; ಅದು ಶಾಸ್ತ್ರಾದಿಗಳನ್ನು ಓದಿದವರಿಗೆ ಮಾತ್ರವೇ ಸಾಧ್ಯವಷ್ಟೆ? ಆದ್ದರಿಂದ ಈಗಿನ ಕಾಲಕ್ಕೆ ಅದ್ವೈತವನ್ನೇಕೆ ಬೋಧಿಸಬೇಕು? ಎಲ್ಲರಿಗೂ ಭಕ್ತಿಯನ್ನೇ ಏತಕ್ಕೆ ಉಪದೇಶಿಸಬಾರದು?'' ಎಂಬುದು ನಿಮ್ಮ ಪ್ರಶ್ನೆ. ನಿಮ್ಮ ಹಾಗೆಯೇ ಅನೇಕರು ಈ ಪ್ರಶ್ನೆಯನ್ನು ಹಾಕುತ್ತಿರುತ್ತಾರೆ. 'ಶಂಕರಾಚಾರ್ಯರಂತೆ ತರ್ಕಕುಶಲರಾದವರಿಗೆ ಜ್ಞಾನ, ರಾಮಾನುಜಾಚಾರ್ಯರಂತೆ ಹೃದಯಪ್ರಧಾನರಾದವರಿಗೆ ಭಕ್ತಿಯೇ ಸರಿ' ಎಂದುಕೂಡ ಒಬ್ಬರು ಹೇಳಿರುತ್ತಾರೆ! ಇದರಿಂದ ಶಂಕರಾಚಾರ್ಯರಿಗೆ ಹೃದಯವೇ ಇಲ್ಲವಾಯಿತೆಂಬುದನ್ನು ಕೂಡ ಅವರು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲವೆಂದಾಯಿತಲ್ಲವೆ?*

ಆತ್ಮಜ್ಞಾನವೆಂಬುದು ತರ್ಕಪ್ರಧಾನವಾಗಿ ಬುದ್ಧಿಗೆ ದೊರಕುವ ಫಲವೆಂದೇ ಅನೇಕರು ತಪ್ಪಾಗಿ ತಿಳಿದುಕೊಂಡಿರುತ್ತಾರೆ. ಜ್ಞಾನವೆಂಬ ಶಬ್ದವನ್ನು ವೇದಾಂತಿಗಳು ಎರಡರ್ಥದಲ್ಲಿ ಉಪಯೋಗಿಸಿರುವದೇ ಈ ಭ್ರಾಂತಿಗೆ ಕಾರಣವಾಗಿರುತ್ತದೆ ಎಂಬುದನ್ನು ಮರೆಯದೆ ಇರಬೇಕು.

ಇಂದ್ರಿಯಗಳಿಂದ ವಸ್ತುಗಳ ನಿಜವನ್ನು ಅರಿಯುವದನ್ನೇ ತಾರ್ಕಿಕರು ಪ್ರತ್ಯಕ್ಷ ಜ್ಞಾನವೆನ್ನುತ್ತಾರೆ. ಈ ಜ್ಞಾನವೇ ಅಲ್ಲದೆ ಇಂದ್ರಿಯಗಳನ್ನೂ ಮನಸ್ಸನ್ನೂ ಒಳಗೊಂಡಿರುವ

ಒಟ್ಟು ಅನಾತ್ಮವನ್ನೆಲ್ಲ ಬೆಳಗುವ ಆತ್ಮಚೈತನ್ಯವನ್ನೂ ಜ್ಞಾನವೆಂದೇ ಉಪನಿಷತ್ತಿನಲ್ಲಿ ಕರೆದಿರುತ್ತದೆ. ಆತ್ಮಚೈತನ್ಯವನ್ನು ಅರಿತುಕೊಳ್ಳುವದಕ್ಕೆ ನವಗೆ ಮತ್ತೊಂದು ಕರಣವಿರುವದಿಲ್ಲ, ಅದು ಸ್ವಯಂಸಿದ್ಧವಾಗಿರುವ ಅನುಭವಸ್ವರೂಪವೇ ಆಗಿರುತ್ತದೆ. ಅದನ್ನು ಅರಿಯುವದೆಂದರೆ ಮನಸ್ಸನ್ನೂ ಮೀರಿರುವ ಅನುಭವಸ್ವರೂಪರೇ ಆಗಬೇಕಾಗುತ್ತದೆ. ಅದಕ್ಕಾಗಿ ಮನಸ್ಸಿಗೆ ಸಂಸ್ಕಾರವನ್ನುಂಟುಮಾಡುವ ಅಮಾನಿತ್ವಾದಿಸಾಧನಗಳು ಬೇಕಾಗುತ್ತದೆ. ಅವುಗಳೊಳಗೆ 'ಮಯಿ ಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣಿ' ಎಂದು ಭಕ್ತಿಯನ್ನೂ ಸೇರಿಸಿರುತ್ತದೆ. 'ವಾಸುದೇವಭಗವಂತನಿಗಿಂತ ಹೆಚ್ಚಿನವನು ಯಾರೂ ಇಲ್ಲ. ಆದ್ದರಿದ ಅವನೇ ನಮಗೆ ಗತಿ!' ಎಂಬ ನಿಶ್ಚಯವೇ ಅನನ್ಯಯೋಗವು; ಅದರಿಂದ ಎಡೆಬಿಡದೆ ಭಜಿಸುವದೇ ಅನನ್ಯಭಕ್ತಿ, ಅದೂ ಜ್ಞಾನಸಾಧನವೇ–ಎಂದು ಆಚಾರ್ಯರು ಬರೆದಿರುತ್ತಾರೆ. ಇಲ್ಲಿ ಜ್ಞಾನವೆಂದರೆ ಅನುಭವರೂಪವಾದ ಫಲವು; ತರ್ಕದಿಂದ ಸಿಕ್ಕುವ ಜ್ಞಾನವಲ್ಲ. ಇದನ್ನು ನೀವು ಚೆನ್ನಾಗಿ ಮನದಟ್ಟುಮಾಡಿಕೊಳ್ಳಿರಿ. ಭಕ್ತಿಜ್ಞಾನಗಳ ವಿಷಯವನ್ನು ಇನ್ನೊಂದು ಪತ್ರದಲ್ಲಿ ವಿವರಿಸಿ ಬರೆಯಬೇಕೆಂದಿರುವೆನು.

## 236. ತರ್ಕದ ಉಪಯೋಗ

### (ಮೇ1966)

*ನಿಮ್ಮ ಪತ್ರವನ್ನು ಓದಿ ನೋಡಿಕೊಂಡೆ. ''ಶಾಸ್ತ್ರಕ್ಕೆ ವಿರುದ್ಧವಾಗಿ ತರ್ಕವನ್ನು ಮಾಡಬಾರದೆಂದು ಅನೇಕರು ಹೇಳುತ್ತಾರೆ. ಶಾಸ್ತ್ರದ ಅರ್ಥವೇನೆಂಬುದೇ ಸಂಶಯಗ್ರಸ್ತವಾಗಿದ್ದರೆ ಅದನ್ನು ನಿರ್ಣಯಿಸುವದಕ್ಕೆ ತರ್ಕವು ಬೇಕಲ್ಲವೆ? ಈಗಿನ ಕಾಲದವರು ಶಾಸ್ತ್ರದಲ್ಲಿ ಹೇಳಿರುವದನ್ನು ಬರಿಯ ಮೂಢವಿಶ್ವಾಸದಿಂದ ನಂಬುವದು ಸಾಧ್ಯವೆ? ಈ ವಿಷಯದಲ್ಲಿ ತಮ್ಮ ಸ್ವಂತ ಅಭಿಪ್ರಾಯವೇನೆಂಬುದನ್ನು ದಯವಿಟ್ಟು ತಿಳಿಸೋಣವಾಗಲಿ' ಎಂದು ಬರೆದಿರುತ್ತೀರಿ.*

ನಿಮ್ಮ ಪ್ರಶ್ನೆಗೆ ನೇರಾಗಿ ಒಂದೇ ಉತ್ತರವನ್ನು ಕೊಡುವದಕ್ಕೆ ಆಗುವದಿಲ್ಲ. ಆದ್ದರಿಂದ ಪ್ರಶ್ನೆಯನ್ನು ಭಾಗಭಾಗವಾಗಿ ವಿಂಗಡಿಸಿಕೊಂಡು ಉತ್ತರವನ್ನು ಬರೆಯುತ್ತಿದ್ದೇನೆ. ಶಾಸ್ತ್ರವೆಂದರೆ ಏನೆಂಬುದನ್ನು ಮೊದಲು ನಿರ್ಣಯಿಸಿಕೊಳ್ಳುವದು ಒಳ್ಳೆಯದು. ಜನ್ಮಾಂತರ, ಪರಲೋಕ, ಪುಣ್ಯ, ಪಾಪ–ಮುಂತಾದ ವಿಚಾರಗಳಿಗೆ ಲೋಕಸಿದ್ಧವಾದ ಪ್ರಮಾಣಗಳ ಆಧಾರವನ್ನಾಗಲಿ ತರ್ಕದ ಬೆಂಬಲವನ್ನಾಗಲಿ ತೋರಿಸುವದು ಸಾಧ್ಯವಿಲ್ಲವೆಂಬುದು ನಿಮಗೂ ಗೊತ್ತೇ ಇದೆ. ಅಂಥ ವಿಚಾರಗಳನ್ನು

ಶಾಸ್ತ್ರವಾಕ್ಯದ ಆಧಾರದಿಂದಲೇ ಮಾಡಬೇಕಾಗಿರುತ್ತದೆ. ಆದರೂ ವಿಶ್ವಾಸಕ್ಕೆ ಒತ್ತಾಸೆಯಾಗಿ ಸಂಭಾವನಾಯುಕ್ತಿಗಳನ್ನು ಅಲ್ಲಿಯೂ ಕೊಡಬೇಕಾಗುತ್ತದೆ. ಮನುಷ್ಯನು ಎಷ್ಟೋ ಕಾರ್ಯಗಳನ್ನು ಶ್ರದ್ಧೆಯನ್ನವಲಂಬಿಸಿಯೇ ಮಾಡಬೇಕಾಗಿರುತ್ತದೆ. ಇಂಥ ಸಂದರ್ಭಗಳಲ್ಲಿ ಶ್ರದ್ಧೆಯಿರುವದರಿಂದ ಲಾಭವುಂಟೆಂಬ ಬಗ್ಗೆ ಸಂಭಾವನಾಯುಕ್ತಿಗಳನ್ನು ಹಿರಿಯರು ಅಲ್ಲಲ್ಲಿ ಪ್ರಸ್ತಾಪಿಸಿರುತ್ತಾರೆ. ಅಲ್ಲಿ ಅದಕ್ಕಿಂತ ಹೆಚ್ಚಿನ ಯುಕ್ತಿಯನ್ನು ನಿರೀಕ್ಷಿಸುವವರು, ಶ್ರದ್ಧೆಯನ್ನೇ ಬಿಟ್ಟುಬಿಡಬೇಕಾಗುತ್ತದೆ.

ಆದರೆ ಅಧ್ಯಾತ್ಮವಿದ್ಯೆಯಂಥ ಅನುಭವಗಮ್ಯವಾದ ವಿಷಯಗಳನ್ನು ತಿಳಿಸುವ ಶಾಸ್ತ್ರವಚನಗಳನ್ನು ಶಾಸ್ತ್ರವಚನವೆಂಬ ಒಂದೇ ಕಾರಣದಿಂದ ನಂಬಬೇಕೆಂಬುದು ಸರಿಯಾಗಲಾರದು. ಉದಾಹರಣೆಗೆ 'ಇಚ್ಛಾದ್ವೇಷಗಳಿಗೂ ಸುಖದುಃಖಗಳಿಗೂ ವಶರಾಗಿರುವ ನಾವುಗಳು ಧರ್ಮಾಧರ್ಮಗಳನ್ನು ಮೀರಿರುವ ಪರಮಾತ್ಮನೇ ಎಂದು ಶಾಸ್ತ್ರದಲ್ಲಿ ಹೇಳಿದೆ. ಇದನ್ನು ಒಪ್ಪುವದು ಹೇಗೆ?'–ಎಂದು ಯಾರಾದರೂ ಕೇಳಿದರೆ ಅದನ್ನು ಕುತರ್ಕದ ಪ್ರಶ್ನೆ ಎಂದು ತಳ್ಳಿಹಾಕುವದಕ್ಕೆ ಆಗುವದಿಲ್ಲ. ಮನುಷ್ಯನು ವ್ಯವಹರಿಸುತ್ತಿರುವ ಲೋಕದಲ್ಲಿ ಅನೇಕ ಸ್ಥಾವರಜಂಗಮಪ್ರಾಣಿಗಳೂ ತನ್ನಂತೆ ಇನ್ನೂ ಅನೇಕ ಮನುಷ್ಯರೂ ಇರುತ್ತಾರೆ–ಎಂಬ ನಂಬಿಕೆಯು ನಮ್ಮೆಲ್ಲರಿಗೂ ಸ್ವಭಾವದಿಂದಲೇ ಇದ್ದುಕೊಂಡಿದೆ. ವ್ಯವಹಾರದಲ್ಲಿ ತೊಡಗಿದಂತೆಲ್ಲ ಆ ನಂಬಿಕೆಯು ಬಲವಾಗುತ್ತಲೇ ಇರುತ್ತದೆ. ಹೀಗಿರುವಲ್ಲಿ ನಮ್ಮೆಲ್ಲರಲ್ಲಿಯೂ ಒಬ್ಬನೇ ಆತ್ಮನು ಇರುತ್ತಾನೆ–ಎಂದು ಶಾಸ್ತ್ರದಲ್ಲಿ ಹೇಳಿರುತ್ತದೆಯಲ್ಲ! ಇದು ಹೇಗೆ ಸರಿಯಾದೀತು?–ಎಂದು ಶಂಕೆಯನ್ನು ಜಿಜ್ಞಾಸುವಾದವನು ಮಾಡಿದರೆ, 'ಇದು ಶಾಸ್ತ್ರವಿರುದ್ಧವಾದ ತರ್ಕವಾದ್ದರಿಂದ ಹೀಗೆ ಚರ್ಚಿಸಬಾರದು' ಎಂದು ಅವನನ್ನು ಬಾಯಿಕಟ್ಟುವದಕ್ಕೆ ಹೋಗುವದು ಸರಿಯಲ್ಲ. ಅಂಥ ಸಂದರ್ಭದಲ್ಲಿ ಅವನಿಗೆ ಸಮ್ಮತವಾಗುವಂತೆ ಅನುಭವಾಧಾರವಾದ ತರ್ಕವನ್ನು ಕೊಟ್ಟೇ ಸಮಾಧಾನವನ್ನು ಹೇಳಬೇಕಾದದ್ದು ಗುರುವಾದವನ ಕರ್ತವ್ಯ.

ಇನ್ನೊಂದು ಮಾತು. ತತ್ತ್ವವನ್ನು ನಿರ್ಧಾರಮಾಡುವದಕ್ಕೆಂದು ಜಿಜ್ಞಾಸುಗಳಾದವರು ತಮ್ಮತಮ್ಮಲ್ಲಿಯೇ ಚರ್ಚೆಯನ್ನು ಮಾಡುತ್ತಿರುವದು ಉಂಟು. ಅಂಥ ಸಂದರ್ಭದಲ್ಲಿ ವಿಚಾರಣೀಯವಿಷಯದಲ್ಲಿ ತಮಗೆ ಇರುವ ಶಂಕೆಯನ್ನು ಒಬ್ಬರು ತಿಳಿಸಬೇಕು, ಆಗ ಅದಕ್ಕೆ ತಮಗೆ ತೋರುವ ಅನುಭವಸಮ್ಮತವಾದ ಯುಕ್ತಿಯಿಂದಲೇ ಮತ್ತೊಬ್ಬರು ಪ್ರತ್ಯುತ್ತರವನ್ನು ಕೊಡಬೇಕು. ವಿಚಾರಕ್ಕೆ ತೆಗೆದುಕೊಂಡಿರುವ ವಿಷಯವು ಸಾಧನದ ಭಾಗಕ್ಕೆಸೇರಿದ್ದರೆ ತಾವುತಾವು ಮಾಡುತ್ತಿರುವ ಸಾಧನದಲ್ಲಿ ತಮತಮಗೆ ಬಂದಿರುವ ಅನುಭವವನ್ನಿಟ್ಟುಕೊಂಡೇ ಶಂಕಾ ಸಮಾಧಾನಗಳು ನಡೆಯಬೇಕು'

ಸಮಾಧಾನವು ಸರಿಯೊ, ಅಲ್ಲವೊ–ಎಂಬುದನ್ನು ಮುಂದೆ ಆಗುವ ತಮ್ಮತಮ್ಮ ಅನುಭವ ಓರೆಗಲ್ಲಿಗೆ ತಿಕ್ಕಿಯೇ ನೋಡಬೇಕಾಗುವದು. ಅದು ಸಿದ್ಧಾಂತದ ವಿಚಾರವಾಗಿದ್ದರೆ ಸಾರ್ವತ್ರಿಕವಾದ ಅನುಭವಕ್ಕೆ ಅನುಸಾರವಾಗಿಯೇ ಪ್ರಶ್ನೋತ್ತರಗಳಾಗಬೇಕೇ ಹೊರತು 'ನಾನೇನು ಬಲ್ಲೆ ಈ ವಿಷಯವನ್ನ? ಇಂಥ ಸ್ವಾಮಿಗಳು ಅಥವಾ ಪ್ರಖ್ಯಾತ ಮಠಸ್ಥರು ಈ ಬಗೆಗೆ ಇಂಥ ಅಭಿಪ್ರಾಯವನ್ನು ಪ್ರಕಟಿಸಿರುವದು ತಿಳಿಯದ್ದರಿಂದ ಹೀಗೆಲ್ಲ ಮಾತಾಡುತ್ತಿದ್ದೀಯೆ' ಎಂದು ದೊಡ್ಡವರ ವಾಕ್ಯವನ್ನಾಗಲಿ ದೊಡ್ಡ ದೊಡ್ಡ ಗ್ರಂಥಗಳ ವಾಕ್ಯಗಳನ್ನಾಗಲಿ ಉದಾಹರಿಸಿ ಪ್ರತಿವಾದಿಯ ಬಾಯಿಮುಚ್ಚುವದು ಸರ್ವಥಾಸರಿಯಲ್ಲ.

ಹೀಗೆ ಶ್ರದ್ಧೆ, ವಾಕ್ಯಧರ್ಮವನ್ನು ಕುರಿತ ತರ್ಕ, ಅನುಭವಾನುಸಾರಿಯಾದ ತರ್ಕ–ಇವುಗಳೊಳಗೆ ಯಾವುದು ಎಲ್ಲಿಗೆ ಹೊಂದುಗಡೆಯಾಗುವದೋ ಅದನ್ನು ಅಲ್ಲಿಗೆ ಉಪಯೋಗಿಸಬೇಕೆಂಬುದು ಸರ್ವಸಮ್ಮತವಾದ ಮಾರ್ಗ. ಶಾಸ್ತ್ರೈಕಗಮ್ಯವಾದ ವಿಷಯವನ್ನು ತರ್ಕದಿಂದಾಗಲಿ, ಅನುಭವೈಕಗಮ್ಯವಾದ ವಿಷಯವನ್ನು ಶಾಸ್ತ್ರ ವಚನದಿಂದಾಗಲಿ ತಿರಸ್ಕರಿಸುವದು ಸರಿಯಲ್ಲ–ಎಂದು ನನ್ನ ಅಭಿಪ್ರಾಯ. ಈ ವಿಷಯಕ್ಕೆ ನಿಮಗೆ ಮತ್ತೇನಾದರೂ ಸಂಶಯವಿದ್ದರೆ ತಿಳಿಸಿರಿ. ನನಗೆ ತಿಳಿದ ಮಟ್ಟಿಗೆ ಅದಕ್ಕೆ ಪರಿಹಾರವನ್ನು ಹೇಳುವದಕ್ಕೆ ಪ್ರಯತ್ನಿಸುವೆನು.

## 237. ವಿದ್ಯಾಭ್ಯಾಸ

### (ಜೂನ್1966)

*ನಿಮ್ಮ ಪತ್ರವು ಬಂದು ತಲುಪಿತು. ಅದನ್ನು ಓದಿನೋಡಿ ನನಗೆ ಸ್ವಲ್ಪ ನಗೆ ಬಂದಿತು. ವಿದ್ಯಾಭ್ಯಾಸಕ್ಕೆ ಪತ್ರಿಕೆಗಳು, ರೇಡಿಯೋ, ಸಿನೆಮ, ಟೆಲಿವಷನ್ (ದೂರಜನದರ್ಶನಯಂತ್ರ)–ಇಂಥವುಗಳ ಸಹಕಾರಗಳು ಬೇಕು. ನಮ್ಮ ಮಕ್ಕಳ ಹಳೆಯ 'ಆಚಾರಗಳೂ', 'ಮೂಢ ನಂಬಿಕೆಗಳೂ' ಹೋಗಬೇಕು. ಅವರು ಇಂಗ್ಲೆಂಡ್, ಅಮೆರಿಕ, ಜರ್ಮನಿ, ರಷಿಯ–ಮುಂತಾದ ದೇಶಗಳಲ್ಲಿ ಜನರು ಮುಂದುವರಿಯುತ್ತಿರುವ ಪ್ರಕಾರಗಳನ್ನು ಬೇಗ–ಕಲಿತುಕೊಳ್ಳಬೇಕು. ನಮ್ಮ ದೇಶದವರಿಗೆ ಭೌತಿಕವಿಜ್ಞಾನದ ಅರಿವು ಹೆಚ್ಚಿದಹೊರತು ಉತ್ತಮಭವಿಷ್ಯವಿಲ್ಲ. ನಾವು ಇನ್ನೂ ಜಾತೀಯತೆಯ, ಮಡಿಮೈಲಿಗೆಗಳ, ದೇಶದ ಗತವೈಭವದ–ಹಾಡುಗಳನ್ನು ಹಾಡುತ್ತಲೇ ಇರುವದೇ ಇದಕ್ಕೆ ಅಡ್ಡಿಯಾಗಿದೆ. ಇಂಥ ತಿಳಿವಳಿಕೆಗೆ ನಮಗೆ ಪಾಶ್ಚಾತ್ಯರ ಅನುಕರಣೆ ಅವಶ್ಯ; ಇಲ್ಲದಿದ್ದರೆ ನಾವು ಹಿಂದುಹಿಂದಕ್ಕೆ ಹೋಗುತ್ತಾ 'ಹಿಂದು'ಗಳೇ ಆಗಿಬಿಡುವದಿಲ್ಲವೆ? ಅಧ್ಯಾತ್ಮ ಪ್ರಕಾಶದಂಥ ಪತ್ರಿಕೆಗಳಲ್ಲಿ ಈಗಿನ ಜನಜೀವನವನ್ನು ಲಕ್ಷ್ಯದಲ್ಲಿಟ್ಟುಕೊಂಡೇ ತತ್ತ್ವವಿಚಾರಗಳನ್ನು ಪ್ರಕಟಿಸಬೇಕಲ್ಲವೆ? ಈ ವಿಷಯದಲ್ಲಿ ತಮ್ಮ ಅಭಿಪ್ರಾಯವೇನು?–ಎಂದು ಕೇಳಿ ಬರೆದಿರುತ್ತೀರಿ.*

ನಿಮಗೆ 'ವಿದ್ಯಾಭ್ಯಾಸವು' ಕ್ರಿಸ್ತಿಯನ್ ಕಾನ್ವೆಂಟ್ ಸ್ಕೂಲಿನಲ್ಲಿ ಆದದ್ದರ ಫಲವೇನೆಂಬುದು ನಿಮ್ಮ ವಿಚಾರಧಾರೆಯಿಂದ ಈಗ ಸ್ಪಷ್ಟವಾಯಿತು. ಕ್ರಿಸ್ತಿಯನ್ ಮಿಷನರಿಗಳೂ ಪಾಶ್ಚಾತ್ತ್ಯ ದೇಶಗಳಲ್ಲಿರುವ ಸರಕಾರಕ್ಕೂ ತಮ್ಮತಮ್ಮ ಸ್ವಾರ್ಥದ ದೃಷ್ಟಿಯಿಂದ ನಮ್ಮ ದೇಶದ ಯುವಕರ ಮನಸ್ಸನ್ನು 'ವಿದ್ಯಾಭ್ಯಾಸದ' ನೆಪದಿಂದ ಕದಡುತ್ತಿರುತ್ತಾರೆ. ಹೀಗೆಯೇ ನಮ್ಮ ದೇಶದಲ್ಲಿ ಈ ವಿದ್ಯಾಭ್ಯಾಸವು ನಡೆಯುತ್ತಾ ಹೋದರೆ ನಮಗೆ ಸ್ವತಂತ್ರವಿಚಾರಶಕ್ತಿಯು ಹೋಗಿ ಪಾಶ್ಚಾತ್ತ್ಯರ ಅನುಕರಣೆಯಿಂದ ಅವರ ಅಭಿಪ್ರಾಯಗಳಿಗೆ ದಾಸರಾಗಿ ಜೀವಿಸಬೇಕಾದೀತು. ನಮ್ಮ ಹಿಂದಿನ ಸಂಸ್ಕೃತಿಯ ಅರಿವೂ ಇಲ್ಲದೆ, ಈಗಿನ ವಿಜ್ಞಾನವನ್ನು ಹೇಗೆ ಬಳಸಿಕೊಂಡು ಮುಂದುವರಿಯಬೇಕೆಂಬ ಭಾವನೆಯೂ ಇಲ್ಲದೆ, ಎಂದೆಂದಿಗೂ 'ಹಿಂದುಮುಂದುಗಳಿಲ್ಲ'ದವರಾಗಬೇಕಾದೀತು. ನಿಮಗೆ ಅರೆಬರೆಕೆಯ ಇಂಗ್ಲೀಷು ಬಂದಿದೆ. ಸಂಸ್ಕೃತವು ತಿಳಿಯದು; ಶೌಚ, ಆಚಾರ, ಸತ್ಯ–ಮುಂತಾದ ದೈವಸಂಪತ್ತಿನ ವಿಶೇಷಗಳ ಅರಿವೇ ಇಲ್ಲ. ಹೀಗಿರುವಲ್ಲಿ 'ಜನಜೀವನ'ವೆಂದರೇನೆಂಬುದರ ಕಲ್ಪನೆ ನಿಮಗೆ ಎಲ್ಲಿಂದ ಬರಬೇಕು? ಜೀವನವೆಂದರೆ ಶರೀರವಿದ್ದು ಉಸಿರಾಡುತ್ತಾ ಉಂಡು, ತಿಂದು, ಮೆರೆಯುವದಷ್ಟೇ ಅಲ್ಲ. ಮನುಷ್ಯನಿಗೆ ಶರೀರವೇ ಅಲ್ಲದೆ ಇಂದ್ರಿಯಗಳು, ಮನಸ್ಸು, ಬುದ್ಧಿ–ಮುಂತಾದವುಗಳೂ ಇವೆ. ಬಾಹ್ಯಜಗತ್ತಿನ ಸಂಬಂಧವೇ ಅಲ್ಲದೆ, ಆಧ್ಯಾತ್ಮಿಕ ಜಗತ್ತಿನ ಸಂಬಂಧವೂ ಇದೆ. ಪೂರ್ಣ ಜೀವನಕ್ಕೆ ಎಲ್ಲವೂ ಬೇಡವೆ? ಇದನ್ನು ಆಲೋಚಿಸಿರಿ.

## 238. ಕೃಷಿಜೀವನ

### (ಜುಲೈ 1966)

ನಿಮ್ಮ ಪತ್ರವು ತಲುಪಿರುತ್ತದೆ. *'ನಮ್ಮೂರಿನಲ್ಲಿ ಕೆಲವರು ಬ್ರಾಹ್ಮಣರು ಈಗ ಸ್ವಂತವಾಗಿಯೇ ಉಳುವ ಉದ್ಯೋಗವನ್ನು ಕೈಗೊಳ್ಳುತ್ತಿದಾರೆ. ಬ್ರಾಹ್ಮಣರು ಈ ಕೆಲಸವನ್ನು ಮಾಡಬಹುದೆ? ಇದರಿಂದ ಬ್ರಾಹ್ಮಣ್ಯಕ್ಕೆ ಲೋಪ ಬರುವದಿಲ್ಲವೆ? ಕೃಷಿಯು ವೈಶ್ಯವರ್ಣದವರ ಧರ್ಮ, ಪರಧರ್ಮವನ್ನು ಮಾಡುವದು ಶ್ರೇಯಸ್ಕರವಲ್ಲ, ಸ್ವಧರ್ಮದಲ್ಲಿಯೇ ಇರಬೇಕೆಂದಲ್ಲವೆ, ಗೀತೆಯಲ್ಲಿ ಹೇಳಿದೆ? 'ಶಾಸ್ತ್ರದೃಷ್ಟಿಯಿಂದ ಇದು ನಿಷಿದ್ಧವೆಂದು ಬಿಟ್ಟರೆ ಈಗಿನ ಹೊಸ ನಿಯಮಗಳಂತೆ ನಮ್ಮ ಜಮೀನನ್ನು ಉಳುವವರು ಯಾರೂ ಇಲ್ಲದೆ, ಅದನ್ನು ರೈತರಿಗೇ ಬಿಟ್ಟು ಕಣ್ಣುಕಣ್ಣು ಬಿಡವಂತೆ ಆದೀತು!'* ಎನ್ನುತ್ತಾರೆ, ಅವರು. *ಇದಕ್ಕೆ ತಮ್ಮ ಸೂಚನೆಯೇನು?'*–ಎಂದು *ಕೇಳಿರುತ್ತೀರಿ.*

ವರ್ಣಾಶ್ರಮಧರ್ಮಗಳು ಈಗ ಎಲ್ಲಿಯೂ ಶುದ್ಧವಾಗಿ ನಡೆಯುತ್ತಿಲ್ಲ. ವರ್ಣಸಂಕರವೇ ಆಗಿರುವ ಈ ಕಾಲದಲ್ಲಿ 'ಸರ್ವನಾಶೇ ಸಮುತ್ಪನ್ನೇ ಅರ್ಧಂ ತ್ಯಜತಿ ಪಣ್ಡಿತಃ' ಎಂಬ ನಾಣ್ಣುಡಿಯಂತೆ ಆಪದ್ಧರ್ಮವನ್ನು ಅನುಸರಿಸುವದು ತಪ್ಪಲ್ಲವೆಂದು ನನಗೆ ತೋರುತ್ತಿದೆ. ಬ್ರಾಹ್ಮಣನು ತನ್ನ ಧರ್ಮವಾದ ಶಮ (ಅಂತಃಕರಣ ನಿಗ್ರಹ), ದಮ (ಬಹಿರಿಂದ್ರಿಯನಿಗ್ರಹ), ಶೌಚ, ಕ್ಷಮೆ, ಋಜುಭಾವ, ಶಾಸ್ತ್ರಾಧ್ಯಯನ, ತತ್ತ್ವವನ್ನು ಅನುಭವಕ್ಕೆ ತಂದುಕೊಳ್ಳುವದಕ್ಕೆ ಪ್ರಯತ್ನಿಸುವದು, ಶಾಸ್ತ್ರೋಪದಿಷ್ಟವಾದ ಅರ್ಥದಲ್ಲಿ ಶ್ರದ್ಧೆ ಮುಂತಾದವುಗಳನ್ನು ಬಿಡಬಾರದು– ಎಂದು ಗೀತೆಯಲ್ಲಿ ಹೇಳಿದೆ. ಈ ಧರ್ಮವನ್ನು ಕಾಪಾಡಿಕೊಳ್ಳುವದಕ್ಕೆ ಈಗ ಎಷ್ಟು ಜನ ಮುಂದುವರಿಯುತ್ತಿದ್ದಾರೆ? ಈ ಪ್ರಶ್ನೆಗೆ ಉತ್ತರವನ್ನು ಕೊಡುವದಕ್ಕೆ ಬಹಳ ಯೋಚಿಸಬೇಕಿಲ್ಲ. ಅನೇಕ ಕಾರಣಗಳಿಂದ ವರ್ಣಾಶ್ರಮಧರ್ಮವು ಲೋಪವಾಗುತ್ತಾ ಬಂದಿದೆ. ಬ್ರಾಹ್ಮಣರು ತಮ್ಮ ಧರ್ಮದಿಂದ ಚ್ಯುತರಾಗುತ್ತಾ ಬಂದಿದಾರೆ.

ಹೀಗಿರುವದರಿಂದ ದ್ವಿಜರುಗಳೆಲ್ಲರೂ ಈಗ್ಗೆ ಕೃಷಿಯ ಕೆಲಸಕ್ಕೆ ಕೈ ಹಾಕಿದರೆ ತಪ್ಪೇನೂ ಇಲ್ಲ. ಇದರ ಜೊತೆಗೆ ಅವರು ವೇದಾಭ್ಯಾಸ, ಶಮದಮಾದಿಗಳು– ಮುಂತಾದ ತಮ್ಮ ಧರ್ಮವನ್ನೂ ಕಾಪಾಡಿಕೊಳ್ಳುತ್ತಾ ಬರಲಿ; ಸಂಸ್ಕೃತಭಾಷೆಯನ್ನು ಅಭ್ಯಾಸ ಮಾಡಿಕೊಂಡು ಭಾರತಸಂಸ್ಕೃತಿಯನ್ನು ರಕ್ಷಿಸಿಕೊಳ್ಳುವ ಕೆಲಸದಲ್ಲಿ ಕೂಡಲೆ ಕೈ ಹಾಕಲಿ. ಇದರಿಂದ ಆಹಾರದ ಅಭಾವದ ತೊಡಕು ಬೇಗನೆ ಬಿಚ್ಚಿಕೊಳ್ಳುವದು. ಇನ್ನೊಂದು ಮಾತು; ವಿಧ್ಯುಕ್ತವಾದದ್ದನ್ನು ಮಾಡದೆ ಇದ್ದರೂ ಮೊದಲು ನಿಷಿದ್ಧಕರ್ಮಗಳನ್ನು ಬಿಟ್ಟು ಬಿಡಬೇಕು. ಪಾಪಭೀರುತ್ವದಿಂದ ದೇಹಾರೋಗ್ಯವು ಹೆಚ್ಚುತ್ತದೆ. ಧರ್ಮವನ್ನು ಕಾಪಾಡಿ ಕೊಳ್ಳುವದರಿಂದ ಬ್ರಾಹ್ಮಣರು ತಾವು ಬದುಕಿ ಮಿಕ್ಕವರಿಗೂ ಮೇಲುಪಙ್ಕ್ತಿಯಾಗಬೇಕು.

## 239. ಗೋರಕ್ಷಣೆ

### (ಆಗಸ್ಟ್ 1966)

*ನಿಮ್ಮ ಪತ್ರವು ತಲುಪಿದೆ. ಈಗಿನ ಕಾಲಕ್ಕೆ ಗೋರಕ್ಷಣೆಯ ಕಾರ್ಯವು ಬಹಳ ಕಷ್ಟವಾಗಿದೆಯಲ್ಲ! ನನಗೆ ಒಳ್ಳೆಯ ಹಾಲು ಸಿಕ್ಕುವದು ಕಷ್ಟವಾಗಿದೆ. ಗೋವುಗಳನ್ನು ಮನೆಯಲ್ಲಿ ಕಟ್ಟೋಣವೆಂದರೆ ಸಂಸಾರಕ್ಕೆ ತಕ್ಕಷ್ಟು ಮನೆಯನ್ನಿಟ್ಟುಕೊಳ್ಳುವದಕ್ಕೇ ಸ್ಥಳವು ಸಿಕ್ಕುವದು ಕಷ್ಟವಾಗಿರುವಾಗ, ಗೋವುಗಳಿಗೆ ಸ್ಥಳವೆಲ್ಲಿ? ಅವುಗಳಿಗೆ ಮೇವು ಎಲ್ಲಿಂದ ಬರಬೇಕು? "ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ। ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಮ್" ಎಂದು ಮುಂತಾಗಿ ನಾವು ಪುರಾಣಶ್ರವಣಕಾಲದಲ್ಲಿ*

*ಕೇಳುವ ವಾಕ್ಯವು ಪುರಾಣಕಾಲಕ್ಕೇ ಹೊಂದುತ್ತದೆ ಎಂದು ಭಾವಿಸಿದ್ದರೆ ತಪ್ಪೇನು? ಗೋರಕ್ಷಣೆಗೆ ನಿಮ್ಮ ಸೂಚನೆ ಏನಾದರೂ ಇದೆಯೆ?–ಎಂದು ಕೇಳಿರುತ್ತೀರಿ.*

ಗೋರಕ್ಷಣೆಯ ಪ್ರಶ್ನೆಯು ಎಲ್ಲಾ ದೇಶಗಳಿಗೂ ಒಂದು ತೊಡಕಿನ ಪ್ರಶ್ನೆಯಾಗಿದ್ದರೂ ನಮ್ಮ ದೇಶಕ್ಕೆ ಅದೊಂದು ಬಹುಮುಖ್ಯಪ್ರಶ್ನೆ ಎನ್ನಬಹುದು. ಸಂಸ್ಕೃತದಲ್ಲಿ ಗೋಶಬ್ದಕ್ಕೆ ಅನೇಕಾರ್ಥಗಳಿವೆ; ಅವುಗಳಲ್ಲಿ ಹಸು ಅಥವಾ ಎತ್ತು, ಸ್ವರ್ಗ, ಇಂದ್ರಿಯ, ವಾಕ್ಕು–ಎಂಬ ನಾಲ್ಕು ಅರ್ಥಗಳು ಬಹಳ ಮುಖ್ಯವಾಗಿವೆ ಎನ್ನಬಹುದಾಗಿದೆ. ಈ ನಾಲ್ಕು ಅರ್ಥಗಳಲ್ಲಿಯೂ 'ಗೋರಕ್ಷಣೆಯು' ಭಾರತದೇಶದವರಿಗೆ ಅತ್ಯಂತ ಅವಶ್ಯವಾಗಿರುವ ಕರ್ತವ್ಯವಾಗಿದೆ ಎನ್ನಬಹುದು.

ಹಸು, ಎತ್ತು, ದನಕರುಗಳು–ಇವು ನಮ್ಮ ದೇಶಕ್ಕೊಂದು ಅತ್ಯಂತ ಅವಶ್ಯವಾಗಿ ಬೇಕಾಗಿರುವ ಧನಸಂಪತ್ತು. ಗೋಶಬ್ದಕ್ಕೆ ಭೂಮಿ ಎಂಬ ಅರ್ಥವೂ ಇದೆ; ಪುರಾಣಗಳಲ್ಲಿ ಭೂದೇವಿಯು ಗೋರೂಪಧರಳಾಗಿ ಶ್ರೀಮನ್ನಾರಾಯಣನ ಬಳಿಗೆ ಹೋಗಿ ಭೂಭಾರವನ್ನು ಇಳಿಸುವದಕ್ಕೆ 'ನೀನು ಅವತರಿಸುವದು ಈಗ್ಗೆ ಬಹಳ ಅವಶ್ಯವಾಗಿದೆ' ಎಂದು ಕಣ್ಣೀರಿಟ್ಟು ಬೇಡಿಕೊಂಡಳು–ಎಂದು ಅಲ್ಲಲ್ಲಿ ಕಥೆ ಬರುತ್ತದೆ. ಪಾಪವು ಹೆಚ್ಚಿದಾಗ ಭೂದೇವಿಯು ಹೀಗೆ ಆರ್ತಳಾಗಿ ಬೇಡಿಕೊಳ್ಳುತ್ತಾಳಂತೆ. ಗೋಗಳನ್ನು ಕಟುಕರ ಅಂಗಡಿಗೆ ಮಾರುವದೊಂದು ಈಗಿನ ಮಹಾಪಾತಕವಾಗಿರುತ್ತದೆ. ಕೃಷಿಗೆ ಗೋಗಳ ಅವಶ್ಯಕತೆ ಎಷ್ಟೆಂಬುದನ್ನು ಹೇಳುವದಕ್ಕೆ ಮಾತುಗಳೇ ದೊರೆಯುವದಿಲ್ಲ. ಗೋವುಗಳ ಗೊಬ್ಬರವು ಭೂಮಿಗೆ ಒಂದು ವರಪ್ರಸಾದ; ಕೃತಕವಾದ ಗೊಬ್ಬರಗಳನ್ನು ಉಪಯೋಗಿಸುವ ದೇಶಗಳಲ್ಲಿ ಭೂಮಿಯಲ್ಲಿ ತಾತ್ಕಾಲಕ್ಕೆ ಹೆಚ್ಚು ಪೈರು ಸಿಕ್ಕಿದರೂ ಬರುಬರುತ್ತಾ ನೆಲದ ಸಾರವು ಬೇಗನೆ ಮುಗಿದು ಎಷ್ಟೋ ಭಾಗವು ಬಂಜರಾಗಿಬಿದ್ದಿದೆಯಂತೆ. ಗೋಗಳ ಸೆಗಣಿಯಿಂದ ಬಳಿದ ನೆಲ, ಮಣ್ಣುಗೋಡೆ–ಇವುಗಳಿರುವ ಕಡೆಗಳಲ್ಲಿ ಅನೇಕ ಸಾಂಕ್ರಾಮಿಕ ರೋಗಗಳಿಗೆ ಅವಕಾಶವು ತಪ್ಪಿದೆಯಂತೆ. ಮನುಷ್ಯನ ಆರೋಗ್ಯಕ್ಕೆ ಗೋಕ್ಷೀರವು ಎಂಥ ಅವಶ್ಯವಾದ ಪೌಷ್ಟಿಕಾಹಾರ–ಎಂಬುದನ್ನು ಎಲ್ಲರೂ ಬಲ್ಲೆವು. ಈ ಎಲ್ಲಾ ದೃಷ್ಟಿಗಳಿಂದಲೂ ನಾವುಗಳು ಈಗ್ಗೆ ಕುಟುಂಬರಕ್ಷಣೆಗೆ ಗೋಗಳನ್ನು ಸಾಕುವದು ಅತ್ಯವಶ್ಯ; ಗೋಗಳ ರಕ್ಷಣೆಗೆ ನೆರವಾಗುವಂತೆ ಪ್ರತಿಯೊಂದು ಗ್ರಾಮದಲ್ಲಿಯೂ ಪ್ರತಿಯೊಂದು ಪಟ್ಟಣದಲ್ಲಿಯೂ ಗೋಮಾಳದ ಭೂಮಿಯನ್ನು ಜನಸಾಮಾನ್ಯಕ್ಕಾಗಿ ಬಿಟ್ಟುಕೊಡುವಂತೆ ಮ್ಯುನಿಸಿಪಾಲಿಟಿಯವರನ್ನು ಒತ್ತಾಯಿಸುವದು ಪ್ರಜೆಗಳ ಕರ್ತವ್ಯವಾಗಬೇಕು. 'ಕುಟುಂಬಕ್ಕೆ' ಮನೆ ಸಾಲದಲ್ಲ!–ಎಂಬ ದೂರು ಯುಕ್ತವಾದದ್ದೇ ಸರಿ; ಆದರೆ ಯೋಗ್ಯ 'ಕುಟುಂಬ' ದೊಳಗೆ ದನಕರುಗಳೂ ಸೇರಿರುತ್ತವೆ.

'ಹೊಲಮನೆ' ಗಳನ್ನು ಆಸ್ತಿಯಾಗಿ ಮಾಡಿಕೊಳ್ಳುವವರು ಯಾರೇ ಆಗಲಿ 'ದನಕರು' ಗಳಿಗೆ ಸ್ಥಲವನ್ನು ಕಲ್ಪಿಸಿಕೊಳ್ಳದೆ ಇದ್ದರೆ ಹೇಗೆ?

ಇಲ್ಲಿ ಗೋರಕ್ಷಣೆ ಎಂದರೆ ಸ್ವರ್ಗದ ರಕ್ಷಣೆ ಎಂಬ ಎರಡನೆಯ ಅರ್ಥವನ್ನು ತೆಗೆದುಕೊಳ್ಳೋಣ. 'ಸ್ವರ್ಗ'ದ ರಕ್ಷಣೆ ಎಂದರೆ ಧರ್ಮದ ರಕ್ಷಣೆ. ಅಧರ್ಮವೇ ನರಕಪಾತಕ್ಕೆ ಹೇತುವಾಗಿರುವದರಿಂದ ಈ ಅರ್ಥದಲ್ಲಿ ಗೋರಕ್ಷಣೆಯನ್ನು ಮಾಡಿ ಇಹಪರದಲ್ಲಿ ಸುಖವನ್ನು ಸಂಪಾದಿಸುವದಕ್ಕೆ ಪ್ರತಿಯೊಬ್ಬನೂ ಅವಶ್ಯವಾಗಿ ಪ್ರಯತ್ನಿಸಬೇಕು. ಧರ್ಮಚ್ಯುತರಾದ ಜನಾಂಗಗಳು ಕಾಲಾನುಕಾಲಕ್ಕೆ ನಾಶವಾದವೆಂದು ಇತಿಹಾಸವು ಹೇಳುತ್ತದೆ. ಅತ್ಯಾಶೆ, ಭೋಗಲಾಲಸೆ–ಇವುಗಳಿಂದ ಅಧರ್ಮವು ಹೆಚ್ಚುತ್ತದೆ. 'ಪುನರ್ದರಿದ್ರಃ ಪುನರೇವ ಪಾಪೀ' ಎಂಬಂತೆ ಅಧರ್ಮಕ್ಕೂ ಬಡತನಕ್ಕೂ ಗಂಟು. ಈಗ್ಗೆ ನಮ್ಮ ದೇಶಕ್ಕೆ ಗೋಬ್ರಾಹ್ಮಣರುಗಳ–ಎಂದರೆ ಸಾತ್ತ್ವಿಕಪ್ರಾಣಿಗಳ, ಮತ್ತು ಸಾತ್ತ್ವಿಕಜನರ–ಅನಾದರದಿಂದಲೇ ಬಡತನವು ಹೆಚ್ಚುತ್ತಿದೆ. 'ಸಾಲವನ್ನು ಮಾಡಿ ಕೈಗಾರಿಕೆಯನ್ನು ಹೆಚ್ಚಿಸುವೆವು, ಉಪಯೋಗವಿಲ್ಲದ ಗೋಗಳನ್ನು ಕೊಲ್ಲಿಸಿ ಚರ್ಮದ ವ್ಯಾಪಾರವನ್ನು ಲಾಭದಾಯಕವಾಗುವಂತೆ ಮಾಡಿಕೊಳ್ಳುವೆವು' ಎಂದು ಪಾಪಜೀವನಕ್ಕೆ ಕೈಯೊಡ್ಡುವೆವು, ಮತ್ತೆ ಹೆಚ್ಚಿನ ದಾರಿದ್ರ್ಯಕ್ಕೆ ಅಣಿಯಾಗುವೆವು!

ಇಂದ್ರಿಯ ಎಂಬ ಅರ್ಥದಲ್ಲಿ ಗೋಶಬ್ದವನ್ನು ತೆಗೆದುಕೊಂಡರೂ ಇದೇ ಹಾಡು. ಇಂದ್ರಿಯಸಂಯಮವನ್ನು ಮಾಡಿ ಧರ್ಮವನ್ನು ಸಂಪಾದಿಸಿಕೊಂಡು ಇಹಸುಖವನ್ನು ಪಡೆಯಬಹುದು; ಚಿತ್ತಶುದ್ಧಿಯನ್ನು ಸಂಪಾದಿಸಿಕೊಂಡು ಜ್ಞಾನದ ದ್ವಾರದಿಂದ ಮೋಕ್ಷವನ್ನು ಪಡೆಯಬಹುದು–ಎಂಬುದು ನಮ್ಮ ದೇಶದ ಹಿಂದಿನವರ ದೃಷ್ಟಿ. ಈಗ ನಾವು ನವನಾಗರಿಕತೆಯ ಭೋಗಲಾಲಸೆಯ ದೃಷ್ಟಿಯನ್ನು ಬೆಳೆಯಿಸಿಕೊಳ್ಳುತ್ತಾ ಬಂದಿರುವದರಿಂದ ಇಂದ್ರಿಯಗಳು ತೊಂಡುದನಗಳಂತೆ ಆಗಿವೆ. ಅವು ಬಲುಬೇಗನೆ ಸೊರಗುತ್ತವೆ. ಆದ್ದರಿಂದ ಇಂದ್ರಿಯಸಂಯಮರೂಪವಾದ ಗೋರಕ್ಷಣೆಯೂ ಅತ್ಯವಶ್ಯವೆಂದು ತಿಳಿಯಬೇಕು. ದೂರ ದೃಷ್ಟಿಯಿರುವವರು ತತ್ಕಾಲದ ವಿಷಯಭೋಗವನ್ನು ಹಿಡಿತದಲ್ಲಿಟ್ಟುಕೊಳ್ಳುವದು ಅವಶ್ಯವೆಂಬುದನ್ನು ಮಕ್ಕಳಿಗೆ ಕಲಿಸುವದು ನಮ್ಮ ಕರ್ತವ್ಯವಾಗಿರುತ್ತದೆ.

ಈಗ ಗೋಶಬ್ದಕ್ಕೆ ವಾಕ್ಕು ಎಂಬ ನಾಲ್ಕನೆಯ ಅರ್ಥವನ್ನು ತೆಗೆದುಕೊಂಡು ವಿಚಾರಮಾಡೋಣ. ಭಾರತದೇಶದ ಸಂಸ್ಕೃತಿಯನ್ನು ಕಾಪಾಡುವದಕ್ಕೆ ಅತ್ಯಂತ ಪುರಾತನ ಸಂಸ್ಕೃತಿಯ ಇತಿಹಾಸವನ್ನು ಪ್ರತಿಬಿಂಬಿಸುವ ಸಂಸ್ಕೃತಭಾಷೆಯ ಪರಿಚಯವು ಇಲ್ಲಿಯ ಜನಕ್ಕೆ ಅತ್ಯಂತ ಅವಶ್ಯ. ಈಗಿನ ದೇಶಭಾಷೆಗಳಲ್ಲಿ ಬಹಳ ಭಾಷೆಗಳಿಗೆ

ಜನನಿಯಾಗಿಯೂ ಇನ್ನು ಕೆಲವು ಭಾಷೆಗಳಿಗೆ ಧಾತ್ರಿ (ಸಾಕು ತಾಯಿ) ಯಾಗಿಯೂ ಇರುವ ಭಾಷೆ ಸಂಸ್ಕೃತ. ಈಗಿನ ನವನಾಗರಿಕತೆಯ ಆದರಣೀಯಾಂಶಗಳನ್ನು ಸ್ವೀಕರಿಸಿ ಹಿಂದಿನಿಂದ ಬಂದಿರುವ ಸಂಸ್ಕೃತಿಗೆ ಅವನ್ನು ತಾಡಹಾಕುವದಕ್ಕೆ ತಕ್ಕ ವಿಶಾಲವಾದ ಶಬ್ದಭಾಂಡಾರವುಳ್ಳ ಭಾಷೆ ಎಂದರೆ ಸಂಸ್ಕೃತವೇ. ಹಿಮಾಚಲದಿಂದ ಕನ್ಯಾಕುಮಾರಿಯ ವರೆಗಿರುವ ಭಾರತವೆಲ್ಲ ಒಂದು ದೇಶವೇ, ಒಂದೇ ಸಂಸ್ಕೃತಿಯ ಬೀಡೇ ಎಂಬುದನ್ನು ನೆನಪಿಗೆ ಕೊಡುವ ಭಾಷೆ–ಎಂದರೆ ಸಂಸ್ಕೃತವೇ. ಹೀಗೆ ಅನೇಕ ಕಾರಣಗಳಿಂದ ನಮ್ಮ ದೇಶದ ಅಭಿವೃದ್ಧಿಗೆ ಸಾಧನವಾಗಿರುವ ಈ ವಾಗ್ರೂಪವಾದ ಗೋವನ್ನು 'ಮೃತಭಾಷೆ' ಎಂದು ಕರೆದುಕರೆದು ಅದನ್ನು ಸಾಯಲು ಅಣಿಮಾಡುವ ಗೋಹತ್ಯೆಯ ಪಾಪವು ನಮಗೆ ಅಂಟಿಕೊಳ್ಳುವದರಲ್ಲಿದೆ. ದೇಶಭಾಷೆಗಳಿಗೆ ಅನುಗುಣವಾಗಿ ದೇಶವನ್ನು ವಿಭಜನೆ ಮಾಡಿಕೊಡುವೆವೆಂಬ ಔದಾರ್ಯವನ್ನು ಪ್ರಕಟಿಸುವ ನೆಪದಿಂದ ದೇಶವನ್ನು ತುಂಡು ತುಂಡು ಮಾಡಿ ಪ್ರಾಂತಗಳಿಗೆ ಅನ್ಯೋನ್ಯವಾಗಿ ವೈರಸ್ಯವನ್ನುಂಟುಮಾಡುವ ನಮ್ಮ ದೇಶದ ನೀತಿಯು ಮುಂದೆ ಆತ್ಮಹತ್ಯೆಯಾಗಿ ಪರಿಣಮಿಸದೆ ಇರದು. ಕೂಡಿದ ಮಟ್ಟಿಗೂ ಮನೆಗೊಂದು ಗೋವು ಇರುವದು ಹೇಗೆ ಆರೋಗ್ಯ, ಕೃಷಿ–ಮುಂತಾದ ದೃಷ್ಟಿಗಳಿಂದ ಅವಶ್ಯವೋ, ಇಹಪರಸುಖಕ್ಕೆ ಅನುಕೂಲಿಸುವಂತೆ ಧರ್ಮಶಿಕ್ಷಣ, ಇಂದ್ರಿಯಸಂಯಮ ಶಿಕ್ಷಣ–ಇವುಗಳನ್ನು ನಮ್ಮ ಮಕ್ಕಳಿಗೆ ಕಲಿಸಿಕೊಡುವದು ಹೇಗೆ ಅವಶ್ಯವೋ, ಹಾಗೆಯೇ ದೇಶದ ಸಂಸ್ಕೃತಿ, ಭಾರತದೇಶದ ಐಕ್ಯಭಾವನೆ, ಪ್ರಾಂತಭಾಷೆಗಳ ಬೆಳವಣಿಗೆ– ಮುಂತಾದ ದೃಷ್ಟಿಗಳಿಂದ ಸಂಸ್ಕೃತಭಾಷೆಯ ಪರಿಚಯವನ್ನು ನಮ್ಮ ಜನರಿಗೆಲ್ಲ ಮಾಡಿಕೊಡುವದೂ ಅಷ್ಟೇ ಅವಶ್ಯವಾಗಿರುತ್ತದೆ.

ಹೀಗೆ ನಮ್ಮ ದೇಶದವರೆಲ್ಲರಿಗೂ ಪುಣ್ಯಪುರುಷಾರ್ಥಗಳು ನಿಜವಾಗಿ ದೊರಕಬೇಕೆಂದಿದ್ದರೆ, ದನಕರುಗಳನ್ನು ಕಾಪಾಡಿಕೊಳ್ಳುವ ಪಶುರೂಪಗೋರಕ್ಷಣೆ, ಇಂದ್ರಿಯ ಸಂಯಮದ ಮತ್ತು ಧರ್ಮಾವಲಂಬನೆಗಳ ರೂಪದ ಗೋರಕ್ಷಣೆ, ಸರ್ವ ಭಾಷೆಗಳನ್ನೂ ಇಡಿಯ ದೇಶದ ಸಂಸ್ಕೃತಿಯನ್ನೂ ಬೆಳೆಯಿಸುವ ಗೋರಕ್ಷಣೆ–ಎಂಬ ನಾಲ್ಕು ಬಗೆಯ ಗೋರಕ್ಷಣೆಯನ್ನು ಮಾಡುವದಕ್ಕೆ ನಾವು ಕೂಡಲೆ ಸಂಕಲ್ಪಿಸಬೇಕು. ಇವು ನಾಲ್ಕಕ್ಕೂ '**ಗೋವಿಂದನ ಕೃಪೆ**' ಬೇಕು. ಗೋಗಳನ್ನು ಕಾಪಾಡುವ ಭಗವಂತನೇ ಗೋರಕ್ಷಣೆಗೆ ಸಹಾಯಕನಾಗಬೇಕು. ಆತನೇ ನಮ್ಮ ನೀತಿ, ಧರ್ಮ, ವೈದಿಕ ಸಂಸ್ಕೃತಿ–ಈ ಎಲ್ಲವನ್ನೂ ಉದ್ಧಾರಮಾಡುವದಕ್ಕೆ ಕಂಕಣಬದ್ಧನಾಗಿರುವನು. ಗೋವುಗಳನ್ನೂ ಗೋರಕ್ಷಣೆಯೇ ತಮ್ಮ ಧರ್ಮವೆಂಬ ದೀಕ್ಷೆಯನ್ನೂ ಕಾಪಾಡಿಕೊಳ್ಳಲಿಚ್ಛಿಸುವವರೇ ಬ್ರಾಹ್ಮಣರು. ಗೋಬ್ರಾಹ್ಮಣರ ಉದ್ಧಾರಕ್ಕೆ ಗೋವಿಂದನೇ ಗತಿ ಎಂಬುದನ್ನು ನಾವು ಮರೆಯದೆ ಇರೋಣ!

# 240. ಅದ್ವೈತಿಗಳು ಶೈವರೊ, ವೈಷ್ಣವರೊ?

(ಸೆಪ್ಟೆಂಬರ್ 1966)

*ನಿಮ್ಮ ಪತ್ರಕ್ಕೆ ಉತ್ತರವನ್ನು ಬರೆಯಬೇಕೆಂದು ಅದನ್ನು ಹತ್ತಿರವೇ ಎರಡು ಮೂರು ದಿನಗಳಿಂದಲೂ ಇಟ್ಟುಕೊಂಡಿದ್ದೆ. ಆದರೆ ದುರ್ದೈವದಿಂದ ಅದು ಎಲ್ಲಿಯೋ ಅಡಗಿಕೊಂಡು ಕಾಣದಾಗಿರುತ್ತದೆ. ನೀವು ಕೇಳಿರುವ ಪ್ರಶ್ನೆಗಳು ಮುಖ್ಯವಾಗಿ ಇಷ್ಟು: ಶಂಕರಾಚಾರ್ಯರು ವೈಷ್ಣವರಾಗಿದ್ದೇ ಅದ್ವೈತಿಗಳಾಗಿರಲಿಲ್ಲವೆ? ಈಗಿನ ಅವರ ಅನುಯಾಯಿಗಳು ಅದ್ವೈತಪೀಠಗಳ ಅಧ್ಯಕ್ಷರುಗಳೂ ಶೈವರಾಗಿರುವದೇಕೆ? ವೈಷ್ಣವರಾಗಿದ್ದು ಅದ್ವೈತಿಗಳಾಗಿರುವದಕ್ಕಾಗುವದಿಲ್ಲವೆ? ಈಗ ಶೈವಾಚಾರವನ್ನು ಇಟ್ಟುಕೊಂಡಿರುವದು ತಪ್ಪಾದರೆ ಮತ್ತೆ ಏತಕ್ಕೆ ಅವರು ವೈಷ್ಣವಾಚಾರವನ್ನೇ ಇಟ್ಟುಕೊಳ್ಳಬಾರದು? ಪಾಂಚರಾತ್ರರನ್ನು ಶಂಕರಾಚಾರ್ಯರು ಖಂಡಿಸಿದ್ದರೆ, ಆ ಮತಪ್ರಭೇದವನ್ನೂ ಕೈಬಿಟ್ಟು ವೈಷ್ಣವರಾಗಿರುವದಕ್ಕಾಗದೆ?*

ಈ ಪ್ರಶ್ನೆಗಳಿಗೆಲ್ಲ ಒಂದೇ ಪತ್ರದಲ್ಲಿ ಉತ್ತರವನ್ನು ಬರೆಯುವದಕ್ಕೆ ಆಗುವದಿಲ್ಲ. ಇಲ್ಲಿ ಶಂಕರಾಚಾರ್ಯರು ವೈಷ್ಣವರೆ, ಅಲ್ಲವೆ? ಅವರ ಅನುಯಾಯಿಗಳಾದ ಅದ್ವೈತಿಗಳು ಶೈವರಾಗಿರುವದು ಸರಿಯೊ, ತಪ್ಪೋ?–ಎಂಬ ಪ್ರಶ್ನೆಗಳಿಗೆ ಸಂಕ್ಷೇಪವಾಗಿ ಉತ್ತರವನ್ನು ಬರೆಯುವೆನು. ಮಿಕ್ಕ ಪ್ರಶ್ನೆಗಳಿಗೂ ಇದರಿಂದಲೇ ಉತ್ತರವು ಸಿಕ್ಕಿದಂತೆ ಆಗಬಹುದೆಂದು ನಂಬಿರುತ್ತೇನೆ. ಆದರೂ ಇನ್ನೊಂದು ಸಂಚಿಕೆಯಲ್ಲಿ ನಿಮ್ಮ ಮಿಕ್ಕ ಪ್ರಶ್ನೆಗಳಿಗೂ ಉತ್ತರವು ದೊರಕುವಂತೆ ಏರ್ಪಡಿಸುವೆನು.

ಶಂಕರಾಚಾರ್ಯರು 'ನಾರಾಯಣಭಗವಂತನೇ ಪರಬ್ರಹ್ಮ' ಎಂಬ ಮತವನ್ನು ಗೀತಾಭಾಷ್ಯದಲ್ಲಿಯೂ ಸೂತ್ರಭಾಷ್ಯದಲ್ಲಿಯೂ ಎತ್ತಿಹಿಡಿದಿರುತ್ತಾರೆ. ಶಾಲಿಗ್ರಾಮದಲ್ಲಿ ವಿಷ್ಣೋಪಾಸನೆಯನ್ನು ಮಾಡುವ ದೃಷ್ಟಾಂತವನ್ನು ಅಲ್ಲಲ್ಲಿ ಕೊಟ್ಟಿರುತ್ತಾರೆ. ಅವರ ಪರಂಪರೆಯ ಸಂನ್ಯಾಸಿಗಳು ಇಂದಿಗೂ ಶಿಷ್ಯರಿಗೆ 'ನಾರಾಯಣ' ಸ್ಮರಣೆಯನ್ನು ತಿಳಿಸುತ್ತಾರೆ. ಅವರು ನಾರಾಯಣ, ಬ್ರಹ್ಮ ವಸಿಷ್ಠ–ಮುಂತಾಗಿ ತಮ್ಮಸಂಪ್ರದಾಯದ ಗುರುಗಳ ಪರಂಪರೆಯನ್ನು ಸ್ಮರಿಸುತ್ತಿದಾರೆ. ಆದ್ದರಿಂದ ಆಚಾರ್ಯರು ವೈಷ್ಣವರೆನ್ನುವದಕ್ಕೆ ಯಾವ ಸಂಶಯವೂ ಉಳಿಯುವದಿಲ್ಲ.

ಅದ್ವೈತಿಗಳು ಶೈವರು ಹೇಗಾದರು? ಅವರು ಶಿವೋಪಾಸನೆಯನ್ನು ಮಾಡ ಬಹುದೆ?–ಎಂಬ ಪ್ರಶ್ನೆಗೆ ಅದನ್ನು ವಿಂಗಡಿಸಿ ಉತ್ತರವನ್ನು ಹೇಳಬೇಕಾಗುವದು. ಏಕೆಂದರೆ ಅದ್ವೈತಿಗಳು ಎಂದರೆ ಅದ್ವೈತಾನುಭವವುಳ್ಳವರೊ, ಅದ್ವೈತಸಿದ್ಧಾಂತವನ್ನು

ಒಪ್ಪಿರುವವರೋ? ಅನುಭವವುಳ್ಳವರು ಅದ್ವಿತೀಯತತ್ತ್ವವನ್ನೇ ಒಪ್ಪುವರಾದ್ದರಿಂದ ಶಿವವಿಷ್ಣ್ವಾದಿಭೇದವು ಅವರ ಮತದಲ್ಲಿಲ್ಲ. ಇರುವ ತತ್ತ್ವವೊಂದೇ ಎಂಬುದೇ ಅವರ ಅನುಭವ. ಇನ್ನು ಶಂಕರಾಚಾರ್ಯರನ್ನೂ ಅವರ ಪ್ರತಿನಿಧಿಗಳಾದ ಪೀಠಾಧಿಪತಿಗಳನ್ನೂ ಆದರ್ಶಗುರುಗಳಾಗಿ ಇಟ್ಟುಕೊಂಡಿರುವವರನ್ನೇ ನೀವು ಅದ್ವೈತಿಗಳೆಂದು ಕರೆದಿದ್ದರೆ ಅಂಥ ಅದ್ವೈತಿಗಳೆಲ್ಲರೂ ಶೈವಾಚಾರವನ್ನೇ ಇಟ್ಟುಕೊಂಡಿರುವರೆಂಬ ನಿಯಮವೇನೂ ಇಲ್ಲ. ಉತ್ತರಪ್ರದೇಶದಲ್ಲಿ ಅನೇಕ ಅದ್ವೈತಿಗಳು ಊರ್ಧ್ವಪುಂಡ್ರವನ್ನು ಧರಿಸುತ್ತಾರೆ. ಧರ್ಮಶಾಸ್ತ್ರಗಳಲ್ಲಿ **'ಸ್ನಾತ್ವಾಪುಣ್ಡ್ರಂ ಮೃದಾ ಕುರ್ಯಾದ್ ಹುತ್ವಾ ಚೈವ ತು ಭಸ್ಮನಾ'** ಎಂದಿದೆ. ಆದ್ದರಿಂದ ಒಬ್ಬನೆ ಮೃತ್ತಿನಿಂದ ಊರ್ಧ್ವಪುಂಡ್ರವನ್ನೂ ಭಸ್ಮದಿಂದ ತಿರ್ಯಕ್ಪುಂಡ್ರವನ್ನೂ ಧರಿಸುವದು ತಪ್ಪೆಂದೇನೂ ಆಗುವದಿಲ್ಲ.

ಈಗ ಇನ್ನೊಂದು ಪ್ರಶ್ನೆ: ಅದ್ವೈತಸಿದ್ಧಾಂತವನ್ನು ಒಪ್ಪಿದವರು, ಅಥವಾ ಅವರ ವಂಶಜರು, ಆಚಾರದಲ್ಲಿ ಶಿವಾರಾಧಕರಾಗಿರಬಹುದೆ? ಇದಕ್ಕೆ ಶ್ರೀ ಕೃಷ್ಣ ಭಗವಂತನ ವಾಕ್ಯವನ್ನೇ ಉತ್ತರವಾಗಿ ಉದಾಹರಿಸುವೆನು:

**"ತಸ್ಮಿನ್ ಹಿ ಪೂಜ್ಯಮಾನೇ ವೈ ದೇವದೇವೇ ಮಹೇಶ್ವರೇ।**
**ಸಂಪೂಜಿತೋ ಭವೇತ್ ಪಾರ್ಥ ದೇವೋ ನಾರಾಯಣಃ ಪ್ರಭುಃ ॥**
**ಅಹಮಾತ್ಮಾ ಹಿ ಲೋಕಾನಾಂ ವಿಶ್ವೇಷಾಂ ಪಾಣ್ಡುನನ್ದನ ।**
**ತಸ್ಮಾದಾತ್ಮಾನಮೇವಾಗ್ರೇ ರುದ್ರಂ ಸಂಪೂಜಯಾಮ್ಯಹಮ್ ॥**
**ಯದ್ಯಹಂ ನಾರ್ಚಯೇಯಂ ವೈ ಈಶಾನಂ ವರದಂ ಶಿವಮ್ ।**
**ಆತ್ಮಾನಂ ನಾರ್ಚಯೇತ್ ಕಶ್ಚಿದಿತಿ ಮೇ ಭಾವಿತಾತ್ಮನಃ ॥**
**ಮಯಾ ಪ್ರಮಾಣಂ ಹಿ ಕೃತಂ ಲೋಕಃ ಸಮನುವರ್ತತೇ ।**
**ಪ್ರಮಾಣಾನಿ ಹಿ ಪೂಜ್ಯಾನಿ ತತಸ್ತಂ ಪೂಜಯಾಮ್ಯಹಮ್ ॥**
**ಯಸ್ತಂ ವೇತ್ತಿ ಸಮಾಂ ವೇತ್ತಿ ಯೋಽನು ತಂ ಸ ಹಿ ಮಾಮನು।**
**ರುದ್ರೋ ನಾರಾಯಣಶ್ಚೈವ ಸತ್ತ್ವಮೇಕಂ ದ್ವಿಧಾ ಕೃತಮ್ ।**
**ಲೋಕೇ ಚರತಿ ಕೌನ್ತೇಯ ವ್ಯಕ್ತಿಸ್ಥಂ ಸರ್ವಕರ್ಮಸು ॥"**

ಈ ಮೇಲಿನ ಶ್ಲೋಕಗಳು ಮಹಾಭಾರತ ಮೋಕ್ಷಧರ್ಮದ ನಾರಾಯಣೀಯದಲ್ಲಿ (341 ನೆಯ ಅಧ್ಯಾಯದಲ್ಲಿ)ವೆ. ರುದ್ರನು ನನ್ನ ಆತ್ಮನೇ ಆಗಿರುವದರಿಂದ ನಾನು ಅವನನ್ನು ಪೂಜಿಸುತ್ತೇನೆ. ರುದ್ರ, ನಾರಾಯಣ–ಇವೆರಡೂ ಒಂದೇ ತತ್ತ್ವವು, ಎರೆಡು ಬಗೆಯಾಗಿ

ಲೋಕದಲ್ಲಿ ಸಂಚರಿಸುತ್ತಿದೆ–ಎಂದು ಶ್ರೀಕೃಷ್ಣಭಗವಂತನು ಹೇಳಿರುತ್ತಾನೆ. ಶ್ರೀಕೃಷ್ಣಭಗವಂತನೇ ಪೂಜಿಸಿದ ನಾರಾಯಣಾತ್ಮಕನಾದ ಶಿವನನ್ನು ವೈಷ್ಣವರು ಪೂಜಿಸಿದರೆ ತಪ್ಪಲ್ಲವೆಂಬುದು ಹಾಗಿರಲಿ; ಶಿವವಿಷ್ಣುಗಳಿಬ್ಬರೂ ಒಬ್ಬನೇ ಭಗವಂತನೆಂಬ ಭಾವನೆಯನ್ನು ಅವರು ಅವಶ್ಯವಾಗಿ ಇಟ್ಟುಕೊಳ್ಳಬೇಕೆಂದೂ ಸಿದ್ಧವಾಯಿತಷ್ಟೆ?

## 241. ಪಾಂಚರಾತ್ರರನ್ನು ಶಂಕರಾಚಾರ್ಯರು ಖಂಡಿಸಿದಾರೆಯೆ?

### (ಅಕ್ಟೋಬರ್ 1966)

*ನಿಮ್ಮ ಪತ್ರವು ಈಚೆಗೆ ನನ್ನ ಕೈಗೆ ಸಿಕ್ಕಿದೆ. ಶಂಕರಾಚಾರ್ಯರು ವೈಷ್ಣವರೆ, ವೈಷ್ಣವರು ಶಿವಾರಾಧನೆಯನ್ನು ಮಾಡಬಹುದೆ? –ಎಂಬ ಎರಡು ಪ್ರಶ್ನೆಗಳಿಗೆ ಉತ್ತರವನ್ನು ಹಿಂದಿನ ಸಂಚಿಕೆಯಲ್ಲಿ ಕೊಟ್ಟಿರುತ್ತೇನೆ. ''ಅದ್ವೈತರಾದ (?) ಕೆಲವು ಭಾಗವತರನ್ನು ಶ್ರೀಶಂಕರರು ತಮ್ಮ ಭಾಷ್ಯಗಳಲ್ಲಿ ಖಂಡಿಸಿದ್ದಾರೆ ನಿಜ, ನಿಮ್ಮ ಆ ಸಾತ್ವತರನ್ನು ಬಿಟ್ಟು ಶುದ್ಧ ಅದ್ವೈತವನ್ನೇ ಒಪ್ಪಿ ವೈಷ್ಣವಾಚರಣೆಯನ್ನು ಇಟ್ಟುಕೊಂಡರೆ ಶ್ರೀಶಂಕರರ ಪ್ರಸ್ಥಾನತ್ರಯಭಾಷ್ಯಗಳಿಗೆ ವಿರೋಧವಾದೀತೆ? ವಿರೋಧವೆಂದರೆ ಏಕೆ? 'ಇಲ್ಲ' ಎಂದರೆ ಬಳಕೆಯಲ್ಲಿ ಈ ಶೈವರೂಢಿ ಏಕೆ?''–ಎಂಬುದೊಂದು ಪ್ರಶ್ನೆಯನ್ನು ಹಾಕಿ ನೀವು ಬರೆದಿರುತ್ತೀರಿ. ಇದರಲ್ಲಿ 'ಶೈವರೂಢಿ'ಯ ಪ್ರಶ್ನೆಗೆ ಆಗಲೆ ಉತ್ತರವು ಬಂದಿದೆ. ಪಾಂಚರಾತ್ರದ ವಿಷಯಕ್ಕೆ ಸಂಗ್ರಹವಾಗಿ ಇಲ್ಲಿ ಉತ್ತರವನ್ನು ಬರೆಯುತ್ತೇವೆ.*

'ಪಾಂಚರಾತ್ರಾಗಮ'ದ ವಿಷಯಕ್ಕೆ ಈಗ ಭಾರತದೇಶದಲ್ಲಿ ಬಹಳ ಭಿನ್ನಾಭಿಪ್ರಾಯಗಳು ಬಂದಿರುತ್ತವೆ. (1) ಪಾಂಚರಾತ್ರಾಗಮವನ್ನು ಒಪ್ಪಿದ್ದವರ ವಂಶಜರಾದ 'ಭಾಗವತಸಂಪ್ರದಾಯ'ವನ್ನು ಅನುಸರಿಸುವ ಸ್ಮಾರ್ತರು ಈಗಲೂ ಇರುತ್ತಾರೆ. (2) ಇದೇ ಪಾಂಚರಾತ್ರವನ್ನು ಪ್ರಮಾಣವೆಂದು ಒಪ್ಪಿರುವ 'ಶ್ರೀವೈಷ್ಣವರು' ಇರುತ್ತಾರೆ. (3) ಪಾಂಚರಾತ್ರವನ್ನು ಪ್ರಮಾಣವೆಂದು ಒಪ್ಪಿರುವ 'ಮಾಧ್ವವೈಷ್ಣವರು' ಬೇರೆ ಇರುತ್ತಾರೆ. (4) ಉತ್ತರಪ್ರದೇಶದಲ್ಲಿ ಬೇರೆಯ ವೈಷ್ಣವಪ್ರಭೇದಗಳವರು ಇರುತ್ತಾರೆ. ಇವರುಗಳು ಒಪ್ಪಿರುವ ವೇದಾಂತಸಿದ್ಧಾಂತವಿಶೇಷಗಳು ಬೇರೆ ಬೇರೆ–ಎಂಬುದನ್ನು ಹೇಳುವದೇ ಅವಶ್ಯವಲ್ಲವಷ್ಟೆ?

ಪಾಂಚರಾತ್ರ ಗ್ರಂಥರಾಶಿಯು ಹೇರಳವಾಗಿದ್ದರೂ ಕೆಲವು ಗ್ರಂಥಗಳು ಮಾತ್ರವೇ ಬೆಳಕಿಗೆ ಬಂದಿರುತ್ತವೆ; ಅವನ್ನೆಲ್ಲ ಎಲ್ಲಾ ಪಾಂಚರಾತ್ರರೂ ಒಪ್ಪುತ್ತಾರೆಯೆ?– ಎಂಬುದು

ಸಂದಿಗ್ಧವಾಗಿದೆ. ಪ್ರಕೃತಕ್ಕೆ ಇದು ನಮಗೆ ಬೇಕಿರುವದಿಲ್ಲ. ಶಂಕರಾಚಾರ್ಯರು ಪಾಂಚರಾತ್ರಸಿದ್ಧಾಂತವನ್ನೆಲ್ಲ ಖಂಡಿಸಿರುತ್ತಾರೆಯೆ? ಅವರು ಖಂಡಿಸಿರುವದು 'ವೈಷ್ಣವಾಚರಣೆ' ಯನ್ನೋ ಸಿದ್ಧಾಂತಕ್ಕೆ ಸಂಬಂಧಪಟ್ಟ ಕೆಲವು ಪ್ರಮೇಯಗಳನ್ನೋ? ಅಲ್ಲಿ ಖಂಡಿಸಿರುವ ವೈಷ್ಣವರು ದ್ವೈತಿಗಳೊ, ಅದ್ವೈತಿಗಳೊ?—ಈ ವಿಚಾರದಲ್ಲಿ ಸ್ವಲ್ಪ ವಿಮರ್ಶಿಸತಕ್ಕದ್ದು ಇರುತ್ತದೆ.

ಮೊಟ್ಟಮೊದಲನೆಯದಾಗಿ ಪಾಂಚರಾತ್ರದಲ್ಲಿ ಅನೇಕ ಪ್ರಭೇದಗಳಿದ್ದ ವೆಂಬುದಕ್ಕೆ ಯಾವ ಆಧಾರವೂ ಭಾಷ್ಯದಲ್ಲಿ ಸಿಕ್ಕುವದಿಲ್ಲ. ಆ ಭಾಷ್ಯದಲ್ಲಿ ಇರುವದೇನೆಂದರೆ: (1) 'ಭಾಗವತಮತದ ಸಿದ್ಧಾಂತದಂತೆ ವಾಸುದೇವಭಗವಂತನು ನಿರಂಜನ ಜ್ಞಾನಸ್ವರೂಪನು; ಆತನೊಬ್ಬನೇ ಪರಮಾರ್ಥತತ್ತ್ವವು.' ಇದರಿಂದ ಆ ಭಾಗವತರು ಅಥವಾ ಪಾಂಚರಾತ್ರರು ಶಂಕರಾಚಾರ್ಯರಂತೆಯೇ ಶುದ್ಧ ಅದ್ವೈತವಾದವನ್ನು ಒಪ್ಪಿದ್ದವರು; ಹೀಗೆಂದದ್ದರಿಂದ ಅವರು ಪ್ರಪಂಚವನ್ನು ಪರಮಾರ್ಥವೆಂದು ಒಪ್ಪಿರಲಿಲ್ಲವೆಂದಾಯಿತು. (2) 'ವ್ಯೂಹಗಳಲ್ಲಿ ಜ್ಞಾನೈಶ್ವರ್ಯಾದಿ ತಾರತಮ್ಯದಿಂದಾಗಿರುವ ಯಾವ ಭೇದವೂ ಇರುವದಿಲ್ಲ'. ಹೀಗೆಂದದ್ದರಿಂದ ಅವರು ತಾರತಮ್ಯವಾದಿಗಳಲ್ಲವೆಂದಾಯಿತು. ಆಚಾರ್ಯರು ಆ ಪಾಂಚರಾತ್ರರ ಈ ಸಿದ್ಧಾಂತಗಳಿಗೆ ಪೂರ್ಣಸಂಮತಿಯನ್ನು ಕೊಟ್ಟಿರುತ್ತಾರೆ. ಭಾಷ್ಯದಲ್ಲಿ ಭಾಗವತರ ಆಚರಣೆಯ ವಿಷಯವಾಗಿ ಏನನ್ನೂ ಹೇಳಿಲ್ಲ; ಏನನ್ನೂ ಖಂಡಿಸಿರುವದಿಲ್ಲ.

ಭಾಷ್ಯದಲ್ಲಿ ಖಂಡಿಸಿರುವದರ ಸಾರವಿಷ್ಟು: ಜೀವನ 'ಉತ್ಪತ್ತಿ' ಯನ್ನು ಹೇಳಿರುವದು ಸರಿಯಲ್ಲ; ಉತ್ಪತ್ತಿಯನ್ನು ಒಪ್ಪಿದರೆ 'ಅನಿರ್ಮೋಕ್ಷ'ವೂ ಬಾದರಾಯಣೀಯಸೂತ್ರಕ್ಕೆ ವಿರೋಧವೂ ಬರುತ್ತದೆ. ಹೀಗೆಯೇ ಕರ್ತೃವಾದ ಜೀವನಿಂದ ಕರಣವಾದ ಮನಸ್ಸು ಉತ್ಪನ್ನವಾಗುತ್ತದೆ ಎಂಬುದೂ ಸರಿಯಲ್ಲ; ಅದು ದೃಷ್ಟ ವಿರುದ್ಧ. ಆದ್ದರಿಂದ ಸಂಕರ್ಷಣನಿಗೂ ಅನಿರುದ್ಧನಿಗೂ ಉತ್ಪತ್ತಿಯನ್ನು ಹೇಳಿದ್ದು ಸರಿಯಲ್ಲ. ಭಗವಂತನಿಗೆ ನಾಲ್ಕೇ ವ್ಯೂಹಗಳೆಂದು ನಿಯಮಮಾಡಿರುವದು ಸರಿಯಲ್ಲ; ಇಡಿಯ ಜಗತ್ತೇ ಭಗವಂತನ ವ್ಯೂಹವಾಗಿರುತ್ತದೆ.

ಶಂಕರಾಚಾರ್ಯರು 'ಅದ್ವೈತತತ್ತ್ವದಲ್ಲಿ ಯಾವ ವಿಶೇಷವನ್ನೂ ಒಪ್ಪದೆ, ಜೀವನ ಉತ್ಪತ್ತ್ಯಾದಿಗಳನ್ನು ಹೇಳುವದು ತಪ್ಪು' ಎಂದಿರುವರೇ ಹೊರತು ಭಾಗವತಮತದ ಸಾಧನವಿಷಯಕವಾದ ಯಾವ ಉಪದೇಶಗಳನ್ನೂ ಖಂಡಿಸಿರುವದಿಲ್ಲ. ಅವರು ಖಂಡಿಸಿರುವ ಪಾಂಚರಾತ್ರರೂ ತಮಗೆ ಒಪ್ಪಾದ ಅದ್ವೈತಸಿದ್ಧಾಂತವನ್ನೇ ಅನುಸರಿಸಿದ್ದರೆಂದೇ ಅವರ ನಂಬಿಕೆ. ಭಾಗವತರಿಗೆ ಒಪ್ಪಾದ ನಾರಾಯಣೀಯದಿಂದ

ಆಚಾರ್ಯರು ಅನೇಕ ಶ್ಲೋಕಗಳನ್ನು ತಮ್ಮ ಸಿದ್ಧಾಂತಕ್ಕೆ ಪ್ರಮಾಣವಾಗಿ ಉದಾಹರಿಸಿಕೊಂಡಿರುತ್ತಾರೆ. ಉದಾಹರಣೆಗೆ ಆ ಭಗವಂತನಿಂದ ತ್ರಿಗುಣಾತ್ಮಕವಾದ ಅವ್ಯಕ್ತವು ಉತ್ಪನ್ನವಾಗುತ್ತದೆ–ಎಂಬ ನಾರಾಯಣೀಯವಾಕ್ಯವನ್ನೇ ಪ್ರಮಾಣವಾಗಿ ಅವರು ಉದಾಹರಿಸಿಕೊಂಡು ಅವ್ಯಕ್ತವೇ ಕೊನೆಯ ತತ್ತ್ವವೆಂಬ ಆಗ್ರಹವುಳ್ಳ ಸಾಂಖ್ಯರನ್ನು ಖಂಡಿಸಿರುತ್ತಾರೆ.

ಇಲ್ಲಿ ಒಂದು ವಿಶೇಷವಿದೆ; ಆಚಾರ್ಯರು ಖಂಡಿಸಿರುವ ಭಾಗವತರು ಅದ್ವೈತೈಕದೇಶಿಗಳು; ಅವರು ಖಂಡನೆಯಲ್ಲಿ ಶೈವಾಚರಣೆಯನ್ನಾಗಲಿ ವೈಷ್ಣವಾಚರಣೆಯನ್ನಾಗಲಿ ವಿಚಾರಕ್ಕೆ ತೆಗೆದುಕೊಂಡಿರುವದೇ ಇಲ್ಲ. ಅದ್ವೈತಿಗಳಲ್ಲದ ವೈಷ್ಣವರು ಆಚಾರ್ಯರ ಕಾಲಕ್ಕೆ ಇದ್ದರೆ? ಹಾಗಾದರೆ ಅವರ ಮತವನ್ನೇಕೆ ಸೂತ್ರಭಾಷ್ಯದಲ್ಲಿಪರಾಮರ್ಶಿಸಿಲ್ಲ?– ಇದನ್ನು ಐತಿಹಾಸಿಕ ದೃಷ್ಟಿಯಿಂದ ವಿಮರ್ಶಿಸುವದು ಅವಶ್ಯವಾಗಿರುತ್ತದೆ.

## 242. ಪರಮಹಂಸಪಾರಿವ್ರಾಜ್ಯ

### (ನವೆಂಬರ್ 1966)

*ನಿಮ್ಮ ಪತ್ರವು ಬಂದು ತಲುಪಿದೆ. ನಿಮಗೆ 'ಸಂನ್ಯಾಸಾಶ್ರಮ'ವನ್ನು ಸ್ವೀಕರಿಸಬೇಕೆಂಬ ಇಚ್ಛೆಯುಂಟಾಗಿರುವದನ್ನು ಕೇಳಿ ಬಹಳ ಹರ್ಷವಾಯಿತು. 'ಯಾವ ಮಹನೀಯನಿಗೆ ಈ ಸಂಸಾರಚಕ್ರದಿಂದ ಪಾರಾಗಬೇಕೆಂಬ ಉತ್ಕಟೇಚ್ಛೆಯು ಬರುವದೋ ಅವನು ವೈರಾಗ್ಯವುಂಟಾದ ದಿನವೇ ಪರಿವ್ರಾಜಕನಾಗಬೇಕು' ಎಂದು ಶ್ರುತಿ ಹೇಳುತ್ತಿದೆ. ಆದರೆ ನೀವು ತಿಳಿಸಿರುವ ಸಂಸಾರದ ತೊಡಕನ್ನು ಕೇಳಿದರೆ ನಿಮಗೆ ಈಗಲೇ ಮೋಕ್ಷಾಶ್ರಮಕ್ಕೆ ಹೋಗುವ ಅರ್ಹತೆಯು ಇಲ್ಲವೆಂದು ಹೇಳಬೇಕಾಗುತ್ತದೆ. ಸಂಸಾರದಲ್ಲಿ ಒಂದು ಕಾಲನ್ನು ಇಟ್ಟುಕೊಂಡು, ಇನ್ನೊಂದು ಕಾಲನ್ನು ಸಂನ್ಯಾಸದಲ್ಲಿ ಇಡುವ ಚಿತ್ತವು ಪರಿಪಕ್ವವಲ್ಲ. ಆದ್ದರಿಂದ ಅಂಥವರು ವಿಚಾರ ಮಾಡಿಯೇ ಗಾರ್ಹಸ್ಥ್ಯವನ್ನು ಬಿಡಬೇಕು.*

ಧರ್ಮಪತ್ನಿಗೆ ಬೇಕಾದ ಆನುಕೂಲ್ಯಗಳನ್ನು ಕಲ್ಪಿಸಿಕೊಟ್ಟೇ ಈ ಆಶ್ರಮಾಂತರ ಸಂಕಲ್ಪವನ್ನು ಮಾಡುತಿದೇನೆ–ಎಂದು ನೀವು ಬರೆದಿದೀರಿ. ಇದು ಯೋಗ್ಯವೇ ಸರಿ. ಯಾಜ್ಞವಲ್ಕ್ಯರಂಥ ಜ್ಞಾನಿಗಳು ಕೂಡ ಪರಿವ್ರಾಜಕರಾಗುವ ಮುಂಚೆ ಧರ್ಮಪತ್ನಿಯಾಗಿದ್ದ ಮೈತ್ರೇಯಿಗೂ ಅವಳ ಸಪತ್ನಿಯಾದ ಕಾತ್ಯಾಯಿನಿಗೂ ಧನವನ್ನು ಪಾಲುಮಾಡಿಕೊಟ್ಟು ಹೊರಡಬೇಕೆಂದು ಪ್ರಯತ್ನಿಸಿದರೆಂದು ಉಪನಿಷತ್ತಿನಲ್ಲಿದೆ. ಆದರೆ ಅಲ್ಲಿ ಮೈತ್ರೇಯಿಯು ವಿರಕ್ತಳಾಗಿದ್ದಳು. 'ಇಡಿಯ ಭೂಮಂಡಲವೇ ವಿತ್ತಪೂರ್ಣವಾಗಿದ್ದರೂ ನನಗೆ

ಅಮೃತತ್ವವು ದೊರಕೀತೇನು? ಇಲ್ಲದಿದ್ದರೆ, ನನಗೆ ಆ ವಿತ್ತದಿಂದ ಆಗಬೇಕಾದದ್ದೇನು?' ಎಂದು ಆಕೆ ಕೇಳಿರುತ್ತಾಳೆ. ಯಾಜ್ಞವಲ್ಕ್ಯರೂ ಆಕೆಗೆ ಜ್ಞಾನೋಪದೇಶಗಳನ್ನು ಮಾಡಿಯೇ ಮನೆಯನ್ನು ಬಿಟ್ಟು ಹೊರಟಿರುತ್ತಾರೆ. ನಿಮ್ಮ ಗೃಹಕೃತ್ಯದಲ್ಲಿ ಸ್ಥಿತಿಗತಿಗಳು ಹೇಗಿವೆಯೋ ನನಗೆ ತಿಳಿಯದು. ನಿಮ್ಮ ಪತ್ನಿಯು ಮನಃಪೂರ್ವಕವಾಗಿ ನಿಮ್ಮ ಆಶ್ರಮಾಂತರಸ್ವೀಕಾರಕ್ಕೆ ಅನುಮತಿಯನ್ನು ಕೊಟ್ಟಿರುತ್ತಾರೆಯೆ? ಒಂದು ವೇಳೆ ಆಕೆಯ ಅಡ್ಡಿಯೇನೂ ಇರದಿದ್ದರೂ ನಿಮಗೆ ಮನಸ್ಸಿನಲ್ಲಿ ಪೂರ್ಣವಿರಕ್ತಿಯೇ ಉಂಟಾಗಿದೆಯೆ? ಇದನ್ನು ಆಲೋಚಿಸಿರಿ.

ನಿಮಗೆ ಈಗ ಉಂಟಾಗಿರುವದು ಕುಟುಂಬದ ಅಥವಾ ಮತ್ತೆ ಯಾವದಾದರೂ ಈಗಿನ ಸ್ಥಿತಿಯ ತೊಡಕಿನಿಂದ ಆಗಿರುವ ಬೇಸರವೊ, ನಿಜವಾದ ವೈರಾಗ್ಯವೊ? ಇದನ್ನು ಮೊಟ್ಟಮೊದಲು ಆಲೋಚಿಸಬೇಕು. ನೀವು ಇರುವಂತೆಯೇ ಗಾರ್ಹಸ್ಥ್ಯಧರ್ಮದಲ್ಲಿಯೇ ಇದ್ದುಕೊಂಡು ಚಿತ್ತಶುದ್ಧಿಯನ್ನು ಸಂಪಾದಿಸುವದು ನಿಮಗೆ ಸುಕರವೊ, ಅಥವಾ ಚತುರ್ಥಾಶ್ರಮದ ಧರ್ಮವನ್ನು ಪರಿಪಾಲಿಸಿಕೊಂಡು ತತ್ತ್ವವಿಚಾರವನ್ನು ಮಾಡುವದು ಹೆಚ್ಚು ಸುಕರವೊ?—ಇದನ್ನು ಯೋಚಿಸಿದ್ದೀರಾ? ನಿಮಗೆ ಬಹುಕಾಲ ಏಕಾಂತದಲ್ಲಿದ್ದುಕೊಂಡು ಧ್ಯಾನಾದಿಗಳನ್ನು ಮಾಡುವಷ್ಟು ತಾಳ್ಮೆಯಿದೆಯೆ? ಶಮದಮಾದಿಗಳನ್ನೂ ಅಮಾನಿತ್ವಾದಿಗಳನ್ನೂ ಅಭ್ಯಾಸಮಾಡುವ ಸ್ಥಿರಸಂಕಲ್ಪವು ನಿಮಗೆ ಇದೆಯೆ?—ಹಾಗಿಲ್ಲದಿದ್ದರೆ ನೀವು ಇದ್ದಲ್ಲಿಯೇ ಕರ್ಮಯೋಗವನ್ನು ಆಚರಿಸುವದೇ ನಿಮಗೆ ಹೆಚ್ಚು ಶ್ರೇಯಸ್ಕರ. ಭಗವಂತನು ಹೀಗೆಂದು ಅಪ್ಪಣೆಕೊಡಿಸಿರುತ್ತಾನೆ: **''ಸಂನ್ಯಾಸ, ಕರ್ಮಯೋಗ—ಈ ಎರಡೂ ಮೋಕ್ಷಕ್ಕೆ ಸಾಧನವೇ ಸರಿ; ಆದರೆ ಸಾಮಾನ್ಯರಿಗೆ ಕರ್ಮ ಸಂನ್ಯಾಸಕ್ಕಿಂತ ಕರ್ಮಯೋಗವೇ ಹೆಚ್ಚು ಸುಕರವಾದ ಸಾಧನ.''**

ಇನ್ನೊಂದು ಮಾತು. ಈಗಿನ ಕಾಲದಲ್ಲಿ 'ಸಂನ್ಯಾಸ' ಎಂದರೆ ಕಾವಿಯ ಬಟ್ಟೆಯನ್ನು ಉಡುವದು, ಮುಂಡನ ಮಾಡಿಸಿಕೊಳ್ಳುವದು, ದಂಡಕಮಂಡಲುಗಳನ್ನು ಧರಿಸಿ—ಅಥವಾ ಅವನ್ನು ಧರಿಸದೆ—ಪರಮಹಂಸಪರಿವ್ರಾಜಕರಾದೆವೆಂದು ಭಾವಿಸಿಕೊಂಡು 'ಸ್ವಾಮಿ....., ಆನಂದ, ತೀರ್ಥ, ಗಿರಿ' ಮುಂತಾದ ಹೆಸರನ್ನಿಟ್ಟುಕೊಂಡು ದೇಶದಲ್ಲಿ ಅಡ್ಡಾಡುವದು—ಇಷ್ಟೇ ಎಂಬ ಭಾವನೆ ಬಂದು ಬಿಟ್ಟಿದೆ. ಇದರ ಜೊತೆಗೆ **'ಕಾಷಾಯದಂಡಮಾತ್ರೇಣ ಯತಿಃ ಪೂಜ್ಯೋ ನ ಸಂಶಯಃ'** ಎಂಬ ನಂಬಿಕೆಯಿಂದ ಸಂನ್ಯಾಸಿಯ ವೇಷದವರಿಗೆ ಜನರು ಮನ್ನಣೆಯನ್ನು ತೋರುವರೆಂಬುದನ್ನು ಲಕ್ಷ್ಯದಲ್ಲಿಟ್ಟು ಅಲೆಯುವ 'ಸಂನ್ಯಾಸಿಗಳು' ವಾಗ್ಮಿತಾಪೂರ್ಣವಾದ ಭಾಷಣಗಳನ್ನು ದೇಶಭಾಷೆಯಲ್ಲಿ ಅಥವಾ ಇಂಗ್ಲೀಷಿನಲ್ಲಿ ಬಿಗಿದು, ವೃತ್ತಾಂತ ಪತ್ರಿಕೆಗಳಲ್ಲಿ ತಮ್ಮ ಕೀರ್ತಿಯನ್ನು ಹರಡುವ, ಮತ್ತು

ಹೊಣೆಗಾರಿಕೆಯಿಲ್ಲದ ಸ್ವೇಚ್ಛಾವಿಹಾರಿಗಳಾದ ಕೆಲಪ್ರೌಢವಿದ್ಯಾಶಾಲೆಗಳ ವಿದ್ಯಾರ್ಥಿಗಳನ್ನು ಶಿಷ್ಯರನ್ನಾಗಿ ಮಾಡಿಕೊಂಡು ಖ್ಯಾತಿಲಾಭಪೂಜೆಗಳ ಸಾಧನವನ್ನು ಗಳಿಸುವ 'ಸಂನ್ಯಾಸಿಗಳು'—ಈಗ ಹಲವರು ಇರುತ್ತಾರೆ. ಈ ತರಗತಿಯ ಸಂನ್ಯಾಸಿಗಳಾಗ ಬೇಕೆಂಬ ಕುತೂಹಲವು ನಿಮಗೆ ಇದ್ದರೆ ಯಾರ ಹಿತವಾದವನ್ನೂ ಕೇಳಬೇಕಾದದ್ದಿಲ್ಲ. ಈ ಬಗೆಯ 'ಆಶ್ರಮ'ವನ್ನು ಕೊಡುವ ಸಂಸ್ಥೆಗಳು ನಮ್ಮ ದೇಶದಲ್ಲಿ ಬೇಕಾದಷ್ಟಿವೆ. ಆದರೆ ನಿಜವಾಗಿಯೇ ಮುಮುಕ್ಷುಗಳಾಗಿ ಶ್ರವಣಮನನಾದಿಗಳನ್ನು ಮಾಡಿ ಕೃತಾರ್ಥರಾಗಬೇಕೆಂಬ ಆಶೆ ನಿಮಗೆ ಇದ್ದರೆ, ನಿಜವಾಗಿಯೂ ವಿರಕ್ತರಾಗಿ ಬ್ರಹ್ಮನಿಷ್ಠರಾಗಿರುವ ಯಾರಾದರೊಬ್ಬ ಸದ್ಗುರುವನ್ನು ಆಶ್ರಯಿಸಿರಿ. ಅವರು ಹೇಳಿದಂಥ ಪ್ರಾರಂಭದ ಸಾಧನಗಳನ್ನು ಮೊದಲು ಮಾಡುವದಕ್ಕೆ ಸೊಂಟ ಕಟ್ಟಿರಿ. ಅವರು ಮಾಡುವ ಪ್ರಥಮ ಪರೀಕ್ಷೆಯಲ್ಲಿ ನೀವು ತೇರ್ಗಡೆಯಾದರೆ ಆಗ ಅನ್ವರ್ಥವಾಗಿಯೂ 'ಪರಮಹಂಸ'ರಾಗುವಿರಿ; ಹಂಸವು ಹಾಲೂ, ನೀರೂ, ಬೆರೆದಿರುವ ಮಿಶ್ರಣದಿಂದ ನೀರನ್ನು ಬಿಟ್ಟು ಹಾಲನ್ನೇ ಹೀರಿಕೊಳ್ಳುವಂತೆ, ಸಂಸಾರದ ಥಳುಕಿನ ಲೀಲಾವಿಲಾಸಕ್ಕೆ ಮರುಳಾಗದೆ ನಿಜವಾಗಿ ಆತ್ಮಾನಂದವನ್ನೇ ಗ್ರಹಿಸುವದಕ್ಕೆ ಸಿದ್ಧರಾಗುವಿರಿ. ಶ್ರೀಮನ್ನಾರಾಯಣನು ನಿಮಗೆ ಸರಿಯಾದ ದಿಕ್ಕಿನಲ್ಲಿ ನಡೆಯುವಂತೆ ಪ್ರೇರಣೆ ಮಾಡಲೆಂದು ಪ್ರಾರ್ಥಿಸುತ್ತೇನೆ.

## 243. ತೀರ್ಥಯಾತ್ರೆ

### (ಡಿಸೆಂಬರ್ 1966)

*ನಿಮ್ಮ ಪತ್ರವು ತಲುಪಿರುತ್ತದೆ. 'ತೀರ್ಥಯಾತ್ರೆಗೆ ಹೊರಟಿರುತ್ತೇನೆ. ಅಲ್ಲಿ ಅವಶ್ಯವಾಗಿ ಮಾಡಬೇಕಾದ ಕರ್ತವ್ಯಗಳು ಯಾವವು? ಪುರಾಣಗಳಲ್ಲಿ ನಾನಾಕ್ಷೇತ್ರಗಳ ಮಹಿಮೆಯನ್ನು ವರ್ಣಿಸಿರುತ್ತದೆಯಷ್ಟೆ? ಕ್ಷೇತ್ರಗಳೊಳಗೆಲ್ಲ ಯಾವ ಕ್ಷೇತ್ರವು ಎಲ್ಲಕ್ಕೂ ದೊಡ್ಡದು? ಕ್ಷೇತ್ರವಾಸದಿಂದ ದೊರಕುವ ಮಹಾಫಲವು ಯಾವದು? ಅದನ್ನು ಪಡೆದುಕೊಳ್ಳುವ ಉತ್ತಮವಾದ ಉಪಾಯವು ಯಾವದು?' ಎಂದು ಕೇಳಿರುತ್ತೀರಿ.*

ತೀರ್ಥಗಳು ತೀರ್ಥವಾಗಿರುವ ಬಗ್ಗೆ ಅನೇಕ ಕಾರಣಗಳನ್ನು ಪುರಾಣಗಳಲ್ಲಿ ಕೊಟ್ಟಿರುತ್ತದೆ. ಅವುಗಳೊಳಗೆ ಮುಖ್ಯವಾದವುಗಳು ಯಾವವೆಂದರೆ ತೀರ್ಥಗಳಿರುವೆಡೆಯಲ್ಲಿ ಪರಮೇಶ್ವರನ ನಾನಾರೂಪಗಳಲ್ಲಿ ಒಂದು ಅಥವಾ ಹೆಚ್ಚು ರೂಪಗಳ ವಿಗ್ರಹಗಳ ಪ್ರತಿಷ್ಠೆಯನ್ನು ಮಾಡಿ ಪೂಜೆಮಾಡುತ್ತಿರುತ್ತಾರೆ. ಆಯಾ ತೀರ್ಥದಲ್ಲಿ ಸ್ನಾನ ಮಾಡಿ, ದೇವತೆಯ ಅರ್ಚನೆಯನ್ನು ಮಾಡಿ ಅಥವಾ ಮಾಡಿಸಿ ಪಾಪವನ್ನು ಕಳೆದುಕೊಂಡು

ಹೃದಯದಲ್ಲಿ ಉತ್ತಮಭಾವನೆಯನ್ನು ಬಿತ್ತಿಕೊಳ್ಳುವದಕ್ಕೆ ಅಲ್ಲಿ ಅವಕಾಶವಿರುತ್ತದೆ. ಕೆಲವು ದೇವಾಲಯಗಳಲ್ಲಿ ವೇದಾಧ್ಯಯನ, ಶಾಸ್ತ್ರವಿಚಾರ, ರಾಮಾಯಣ, ಭಾರತ, ಭಾಗವತ, ಪುರಾಣಾದಿಗಳ ಶ್ರವಣ–ಇವುಗಳು ಸಂತತವಾಗಿ ನಡೆದಿರುತ್ತವೆ. ಅವುಗಳನ್ನು ಕೇಳುವದಕ್ಕೆ ಬರುವ ಭಕ್ತರ ದರ್ಶನವಾಗುತ್ತದೆ. ನಾವು ಮಂಗಲಕರವಾದ ವೇದಘೋಷದ ಶ್ರವಣ, ಪರಮಾತ್ಮತತ್ತ್ವ ವಿಚಾರ, ವಿದ್ವಾಂಸರ ದರ್ಶನ, ಭಜನಕೀರ್ತನಾದಿಗಳಲ್ಲಿ ಭಾಗವನ್ನು ವಹಿಸುವದು–ಮುಂತಾದ ಪ್ರಕಾರಗಳಿಂದ ಬೇಗನೆ ಚಿತ್ತಶುದ್ಧಿಯನ್ನು ಸಂಪಾದಿಸಿ ಕೊಳ್ಳಬಹುದು. ತೀರ್ಥಗಳಲ್ಲಿ ಸರ್ವಪ್ರಾಯಶ್ಚಿತ್ತವನ್ನೂ ಮಾಡಿಸಿಕೊಂಡು ತೀರ್ಥಶ್ರಾದ್ಧ ಪಿತೃತರ್ಪಣಾದಿಗಳನ್ನು ಮಾಡಿ ಕೃತಕೃತ್ಯರಾಗಬಹುದು. ಅನೇಕ ತೀರ್ಥಗಳನ್ನು ಪರ್ಯಟನ ಮಾಡುವದರಿಂದ, ಭಗವಂತನು ಬೇರೆಬೇರೆಯ ನದೀದಡಗಳ ಅಥವಾ ಸಮುದ್ರದ ತೀರದಲ್ಲಿ ತನ್ನ ಮಹಿಮೆಯನ್ನು ಪ್ರಕಟ ಮಾಡಿರುತ್ತಾನೆ; ಭಗವಂತನ ನಾಮರೂಪಗಳು ಅನೇಕವಾಗಿರುತ್ತವೆ; ಭಕ್ತರ ಇಷ್ಟಾರ್ಥಗಳನ್ನು ಕೊಟ್ಟು ಪರಗತಿಗೂ ಪರಮಪುರುಷಾರ್ಥಕ್ಕೂ ಬೇಕಾಗುವ ಸಾಧನಗಳನ್ನು ಬಲಪಡಿಸಿಕೊಳ್ಳಬಹುದು. ದಾನಧರ್ಮಗಳಿಂದ ಕಾಮಕ್ರೋಧ ಲೋಭಗಳ ಬಿಗಿತದಿಂದ ಬಿಡುಗಡೆಯನ್ನು ಹೊಂದಬಹುದು. ಇದೂ ಒಂದು, ತೀರ್ಥಗಳು ತೀರ್ಥವಾಗಿರುವದಕ್ಕೆ ಕಾರಣ.

ಆದರೆ ತೀರ್ಥಗಳ ತೀರ್ಥತ್ವಕ್ಕೆ ಅಲ್ಲಿರುವ ಅರ್ಚಕರ ತಪಸ್ಸಿನ ಬಲವೂ ನಿಃಸ್ವಾರ್ಥಪರರಾದ ಶಾಸ್ತ್ರಜ್ಞರಾದ ವಿದ್ವಾಂಸರ ಜ್ಞಾನಪ್ರಸಾರಣೆಯೂ ಮುಖ್ಯವಾದ ಕಾರಣವಾಗಿರುವದರಿಂದ ಅವುಗಳ ಅಭಾವವಿರುವ ಸ್ಥಾನಗಳು ನಾಮ ಮಾತ್ರಕ್ಕೆ ತೀರ್ಥವಾಗಿರುತ್ತವೆ. ತೀರ್ಥಯಾತ್ರಿಕರು ಹಿಂದಿನಂತೆ ನಿಯಮಬದ್ಧವಾದ ಆಚರಣೆಗಳನ್ನಿಟ್ಟುಕೊಂಡು ಪಾದಚಾರಿಗಳಾಗಿ ತೀರ್ಥಾಟನೆ ಮಾಡಿ ಶ್ರದ್ಧಾ ಭಕ್ತಿಗಳನ್ನು ಹೆಚ್ಚಿಸಿಕೊಳ್ಳುವದರ ಬದಲು ವಿನೋದಕ್ಕಾಗಿ, ವಿವಿಧ ದೃಶ್ಯಗಳನ್ನು ನೋಡಿ ಕಣ್ಣಿಗೆ ಹಬ್ಬವನ್ನು ಮಾಡುವದಕ್ಕೆಂದು ರೈಲು, ಬಸ್ಸಗಳು, ಯಾತ್ರಾರ್ಥವಾದ ರೈಲುಬಂಡಿಗಳು–ಮುಂತಾದ ಯಾವದಾದರೊಂದು ಸಾಧನವನ್ನು ಉಪಯೋಗಿಸಿಕೊಂಡು ಸುತ್ತಾಡುವದನ್ನು ಹೆಚ್ಚಿಸಿಕೊಳ್ಳುತ್ತಿರುವದರಿಂದ ತೀರ್ಥಯಾತ್ರೆಯ ಫಲವು ಅಂಥವರಿಗೆ ದಕ್ಕುವದು ಕಷ್ಟವಾಗಿರುತ್ತದೆ. ತೀರ್ಥಗಳಲ್ಲಿ ಯಾವ ಅರ್ಚಕರೂ ಪುರೋಹಿತರೂ ತೀರ್ಥದ್ವಾಂಕ್ಷರಾಗಿ ಸುಲಿಗೆಯ ಉದ್ಯೋಗವನ್ನು ಕೈಗೊಂಡಿರುತ್ತಾರೆ. ಬಂದವರನ್ನು ಬಗೆ ಬಗೆಯ ರೂಪಗಳಿಂದ ಒತ್ತಾಯ ಪಡಿಸಿ ದಕ್ಷಿಣಾದಿಗಳನ್ನು ವಸೂಲು ಮಾಡಿಕೊಳ್ಳುತ್ತಾರೆ. ಇದರ ಜೊತೆಗೆ ದೇವಸ್ಥಾನಗಳ ಅಧಿಕಾರಿಗಳು ಇಂಥ ಅಭಿಷೇಕಕ್ಕೆ ಇಷ್ಟು ಹಣ, ಇಂಥ ನೈವೇದ್ಯಕ್ಕೆ ಇಷ್ಟು ಹಣ, ಫಲಪುಷ್ಪಗಳ ಸಮರ್ಪಣೆಗೆ ಇಷ್ಟು ಹಣ–ಎಂದು ನಿಗದಿ

ಮಾಡಿ ವಸೂಲು ಮಾಡುತ್ತಾ ಬಂದವರಿಗೆ ಕಿರುಕುಳವನ್ನುಂಟುಮಾಡುತ್ತಾ ಜನರ ಶ್ರದ್ಧೆಯನ್ನು ಸಡಲಿಸುತ್ತಿರುತ್ತಾರೆ. ಇದರಿಂದ ತೀರ್ಥಕ್ಷೇತ್ರಗಳ ಮಹಿಮೆಯು ಇನ್ನಷ್ಟು ವೇಗದಿಂದ ಕುಂದುತ್ತಿರುತ್ತದೆ. ಕ್ಷೇತ್ರಗಳೆಂದು ಹೆಸರುವಾಸಿಯಾಗಿರುವ ಅನೇಕ ಸ್ಥಳಗಳಲ್ಲಿ ಅನಾಚಾರವೂ ನವನಾಗರಿಕತೆಯ ನಾಸ್ತಿಕ್ಯವೂ ತಲೆದೋರುತ್ತಿರುವದ ರಿಂದ ಕ್ಷೇತ್ರಗಳು ಮಹಾತ್ಮರಿಗೂ ಭಗವದ್ಭಕ್ತರಿಗೂ ಆವಾಸಸ್ಥಾನಗಳಾಗುವದಕ್ಕೆ ಬದಲಾಗಿ ಪಾಪಸಂಚಯಕ್ಷೇತ್ರಗಳಾಗಿ ಪರಿಣಮಿಸುತ್ತಿವೆ. ಆದ್ದರಿಂದ ಕ್ಷೇತ್ರವಾಸವನ್ನು ಮಾಡಬೇಕೆನ್ನುವವರು ಎಚ್ಚರಿಕೆಯಿಂದ ವಾಸಸ್ಥಾನವನ್ನು ಆರಿಸಿಕೊಳ್ಳಬೇಕು. ತಮ್ಮ ಸುತ್ತಮುತ್ತಲೂ ಸಾತ್ತ್ವಿಕ ಜನರೇ ಇರುವರೆ? ಅಲ್ಲಿ ನಿರಂತರವಾಗಿ ಭಗವಚ್ಚಿಂತನೆಯಿಂದ ಶ್ರದ್ಧಾಭಕ್ತಿಗಳು ಬಲಿತುಕೊಳ್ಳುವದಕ್ಕೆ ತಕ್ಕ ಅನುಷ್ಠಾನಗಳೇ ನಡೆಯುತ್ತಿರುವವೆ?–ಎಂಬುದನ್ನು ನೋಡಿಕೊಳ್ಳಬೇಕು.

ತೀರ್ಥಗಳು ತೀರ್ಥಗಳೆನಿಸಿಕೊಂಡಿರುವದಕ್ಕೆ ಅಲ್ಲಿ ಹಿಂದಕ್ಕೆ ಅನೇಕ ಋಷಿಗಳೂ ಸಾಧುಸಂನ್ಯಾಸಿಗಳೂ ಸ್ನಾನ ಮಾಡಿ ಭಗವದರ್ಚನ, ಜಪ, ತಪ, ಧ್ಯಾನ–ಮುಂತಾದವುಗಳನ್ನು ಅನುಷ್ಠಾನ ಮಾಡಿದ್ದೇ ಮುಖ್ಯ ಕಾರಣವಾಗಿರುತ್ತದೆ. ಆ ಮಹಾತ್ಮರ ತಪೋಬಲದಿಂದ ಆವಿಷ್ಕಾರವಾದ ಭಗವಂತನ ಮಹಿಮೆಯನ್ನು ಜನರು ತಮ್ಮ ಸ್ವಾರ್ಥಕ್ಕೆ ಸಾಧನವಾಗಿ ಮಾಡಿಕೊಳ್ಳುತ್ತಾ ಬಂದದ್ದರಿಂದ ತೀರ್ಥಗಳು ನರಕಕೂಪಗಳಾಗಿ ಪರಿಣಮಿಸಿರುತ್ತವೆ; ಕ್ಷೇತ್ರಗಳು ಅನಾಚಾರಕ್ಷೇತ್ರಗಳಾಗುತ್ತಿವೆ.

ನಿಮಗೆ ತೀರ್ಥಸ್ನಾನದ ಫಲವೂ ಕ್ಷೇತ್ರವಾಸದ ಫಲವೂ ನಿಜವಾಗಿ ಬೇಕೆ? ಭಗವಂತನಲ್ಲಿ ಶ್ರದ್ಧೆಯಿಟ್ಟು ಯಜ್ಞದಾನ ತಪಸ್ಸುಗಳನ್ನು ಆಚರಿಸುತ್ತಲೂ ಭಗವಚ್ಚಿಂತನ, ಭಗವಂತನ ಚರಿತ್ರೆಯ ಕಥನ–ಮುಂತಾದವುಗಳಿಂದ ನಿರಂತರವೂ ಭಗವನ್ನಿಷ್ಠರಾಗಿರುವ ಭಾಗವತಜನರ ಸಹವಾಸವನ್ನು ಸಂಪಾದಿಸಿಕೊಳ್ಳಿರಿ. ಅವರು ಸಾಮಾನ್ಯವಾಗಿರುವ ಜಲಾಶಯಗಳನ್ನೂ ತೀರ್ಥಗಳಾಗಿ ಮಾಡುತ್ತಾರೆ; ಅವರೊಡನೆ ನಿತ್ಯಸಂಭಾಷಣೆ ಮಾಡುವದೇ ಶಾಸ್ತ್ರಶ್ರವಣಪಠನದ ಫಲವನ್ನೂ ಕೊಡುತ್ತದೆ.

## 244. ವೇದಾಂತಜ್ಞಾನದ ಉಪಯೋಗ

### (ಜನವರಿ 1967)

*ನಿಮ್ಮ ಪತ್ರವು ತಲುಪಿ ಅಭಿಪ್ರಾಯವಾಯಿತು. ವೇದಾಂತವನ್ನು ಪಾಠಶಾಲೆಗಳಲ್ಲಿಯೂ ಸಕಲವಿದ್ಯಾನಿಲಯಗಳಲ್ಲಿಯೂ ಪಾಠವನ್ನು ಮಾಡಿಸುತ್ತಿದ್ದಾರಷ್ಟೆ? ಅವರಲ್ಲಿ ಶಾಸ್ತ್ರೋಕ್ತವಾದ*

*ಗುರುಶಿಷ್ಯಭಾವವು ಇಲ್ಲದೆ ಇದ್ದರೂ ಅವರಿಗೆ ವೇದಾಂತಜ್ಞಾನವಾಗುವದಿಲ್ಲವೆ? ಆಗುವದಾದರೆ ಗುರುಶಿಷ್ಯರ ಲಕ್ಷಣಗಳನ್ನು ವೇದಾಂತಗ್ರಂಥಗಳಲ್ಲಿ ಬರೆಯುವದರ ಅವಶ್ಯಕತೆಯೇನು?– ಎಂಬುದು ನಿಮ್ಮ ಪ್ರಶ್ನೆ.*

ವೇದಾಂತಜ್ಞಾನವೆಂದರೆ ಪುಸ್ತಕದಲ್ಲಿ ಹೇಳಿರುವ ವಿಷಯಗಳ ಜ್ಞಾನವೆಂದಾದರೆ ನೀವು ಕೇಳುವ ಪ್ರಶ್ನೆಯು ಸಾಭಿಪ್ರಾಯವಾಗಿಯೇ ಇದೆ. 'ಹೀಗೆಂದು ಕಪಿಲರು ಹೇಳುತ್ತಾರೆ', 'ಹೀಗೆಂದು ಕಣಾದರು ಹೇಳುತ್ತಾರೆ' ಎಂಬಂತೆ 'ಹೀಗೆಂದು ಬಾದರಾಯಣರು ಅಥವಾ ಭಾಷ್ಯಕಾರರು ಬರೆದಿರುತ್ತಾರೆ' ಎಂಬುದರ ಜ್ಞಾನಕ್ಕೆ ಶಾಸ್ತ್ರೋಕ್ತವಾದ ಗುರುಶಿಷ್ಯಲಕ್ಷಣಗಳ ಅವಶ್ಯಕತೆಯೇನೂ ಬೇಕಿರುವದಿಲ್ಲ. ಸಂಸ್ಕೃತಭಾಷಾಜ್ಞಾನ, ನಿರುಕ್ತನಿಘಂಟು ವ್ಯಾಕರಣಾದಿಶಾಸ್ತ್ರಗಳ ಪರಿಚಯವಿದ್ದಷ್ಟು ಇದ್ದರೆ ಸಾಕು. ಗ್ರಂಥದ ಸಾಧಾರಣ ಅಭಿಪ್ರಾಯವು ಅವಶ್ಯವಾಗಿ ಆಗಿಯೇ ತೀರುತ್ತದೆ. ವಿಶ್ವವಿದ್ಯಾನಿಲಯಗಳಲ್ಲಿ ಕ್ಯಾಂಟ್, ಹೆಗೆಲ್, ಬರ್ಗ್ಸನ್–ಮುಂತಾದ ಪಾಶ್ಚಾತ್ಯ ತತ್ತ್ವಜ್ಞರ ಅಭಿಪ್ರಾಯಗಳನ್ನು ಗ್ರಂಥಪರಿಚಯದಿಂದ ನೋಡಿ ಅಭಿಪ್ರಾಯವಿಶೇಷಗಳ ಪರಿಶೀಲನೆಯನ್ನು ಮಾಡುವಂತೆಯೇ ವೇದಾಂತ ಗ್ರಂಥಗಳ ಪರಿಶೀಲನೆಯನ್ನೂ ಮಾಡಿಕೊಳ್ಳುವದಕ್ಕೆ ಸಾಕಷ್ಟು ಬುದ್ಧಿಯಿದ್ದರೆ ಎಲ್ಲರಿಗೂ ಆ ಗ್ರಂಥಗಳ ಜ್ಞಾನವು ಲಭಿಸಬಹುದಾಗಿರುತ್ತದೆ.

ಆದರೆ ಆ ಗ್ರಂಥಗಳ ಪರಿಚಯವನ್ನು ಪಡೆದುಕೊಂಡಿರುವ ಪಂಡಿತರುಗಳಾಗಲಿ ಪ್ರೊಫೆಸರ್ (ಪ್ರಾಧ್ಯಾಪಕ)ರುಗಳಾಗಲಿ ತಮಗೆ 'ವೇದಾಂತವಿಜ್ಞಾನ'ವು ಆಗಿದೆಯೆಂದು, ಅಥವಾ ಅವುಗಳ ಅವಶ್ಯಕತೆ ಇದೆಯೆಂದು ಎಂದಿಗೂ ಭಾವಿಸಿರುವದಿಲ್ಲ. ವೇದಾಂತವಿಜ್ಞಾನದ ಉಪಯೋಗವು ಪಾಠಶಾಲೆಗಳಲ್ಲಿ ಅಥವಾ ಕಾಲೇಜುಗಳಲ್ಲಿ ಅಧ್ಯಾಪಕರಾಗಿ, ಅಥವಾ ಅಲ್ಲಲ್ಲಿ ವೇದಾಂತವಿಷಯಗಳ ಭಾಷಣಕಾರರಾಗಿ, ಧನವನ್ನೂ ಕೀರ್ತಿಯನ್ನೂ ಗಳಿಸುವದೆಂಬುದಿಷ್ಟೇ ಆಗಿದ್ದರೆ ಈ ವಿಜ್ಞಾನದ ಅವಶ್ಯಕತೆಯು ಇರುವದೂ ಇಲ್ಲ. ಆದ್ದರಿಂದ ಅಲ್ಲಿರುವ ವಿದ್ಯಾರ್ಥಿಗಳು ಮುಮುಕ್ಷುಗಳು ಅಲ್ಲ; ಅವರ ಗುರುಗಳು ಮುಕ್ತರೂ ಅಲ್ಲ.

ವಿಜ್ಞಾನವೆಂದರೇನು? "ಜ್ಞಾನಂ ತೇ ತುಭ್ಯಮ್ ಅಹಂ ವಿಜ್ಞಾನಸಹಿತಂ ಸ್ವಾನುಭವಯುಕ್ತಮ್ ಇದಂ ವಕ್ಷ್ಯಾಮಿ ಕಥಯಿಷ್ಯಾಮಿ ಅಶೇಷತಃ ಕಾರ್ತ್ಸ್ನ್ಯೇನ। ತಜ್ಜ್ಞಾನಂ ವಿವಕ್ಷಿತಂ ಸ್ತೌತಿ ಶ್ರೋತುರಭಿಮುಖೀಕರಣಾಯ–'ಯದ್ ಜ್ಞಾತ್ವಾ ಯಜ್ಜ್ಞಾನಂ ಜ್ಞಾತ್ವಾ ನೇಹ ಭೂಯಃ ಪುನಃ ಅನ್ಯತ್ ಜ್ಞಾತವ್ಯಂ

**ಪುರುಷಾರ್ಥಸಾಧನಮ್ ಅವಶಿಷ್ಯತೇ ನಾವಶಿಷ್ಟಂ ಭವತಿ ಇತಿ। ಮತ್ತತ್ತ್ವಜ್ಞೋ ಯಃ ಸ ಸರ್ವಜ್ಞೋ ಭವತಿ' ಇತ್ಯರ್ಥಃ ॥''** (ಗೀ.ಭಾ. 7–2) ಎಂದಿರುವಂತೆ ಆತ್ಮಜ್ಞಾನವು ಉಂಟಾದರೆ ಪುರುಷಾರ್ಥಕ್ಕಾಗಿ ಇನ್ನು ಅರಿತುಕೊಳ್ಳಬೇಕಾದದ್ದು ಏನೊಂದೂ ಉಳಿದಿರುವದಿಲ್ಲ. ಅಂಥ ಅವಗತಿಯೇ, ಅನುಭವವೇ, ವೇದಾಂತ ವಿಜ್ಞಾನವು.

ವೇದಾಂತವಿಜ್ಞಾನವನ್ನು ಸಂಪಾದಿಸಿಕೊಂಡವರಿಗೆ ನಮಗೆ ಇಂಥದ್ದೊಂದು ಬೇಕು–ಎಂಬ ಕಾಮವಿರುವದಿಲ್ಲ. ಶ್ರೀ ಶಂಕರಭಗವತ್ಪಾದರ ಈ ವಚನವನ್ನು ಓದಿ ಮನನ ಮಾಡಿಕೊಳ್ಳಿರಿ: **''ಅಥ ಕಿಮಿದಂ ಸಂಸಾರಿಣಾಮಿವ ಅಹಂ ಮಮೇದಮಿತಿ ಪಣ್ಡಿತಾನಾಮಪಿ? ಶೃಣು, ಇದಂ ತತ್ ಪಾಣ್ಡಿತ್ಯಂ ಯತ್ ಕ್ಷೇತ್ರೇ ಏವ ಆತ್ಮದರ್ಶನಮ್। ಯದಿ ಪುನಃ ಕ್ಷೇತ್ರಜ್ಞಮ್ ಅವಿಕ್ರಿಯಂ ಪಶ್ಯೇಯುಃ ತತೋ ನ ಭೋಗಂ ಕರ್ಮ ವಾ ಆಕಾಙ್ಕ್ಷೇಯುಃ ಮಮ ಸ್ಯಾತ್ ಇತಿ॥''** ನಾನು ಇಂಥವನು, ನನಗೆ ಇದು ಬೇಕು– ಎಂಬುದು ಕ್ಷೇತ್ರಜ್ಞಜ್ಞಾನವಲ್ಲ. ಅದನ್ನು ತಿಳಿದವರಿಗೆ ನನಗೆ ಇದು ಬೇಕು–ಎಂದು ಕಾಮಕರ್ಮಗಳ ಆಶೆಯು ಉಳಿದಿರುವದಿಲ್ಲ.

ಆದ್ದರಿಂದ ವೇದಾಂತವಿಜ್ಞಾನವೆಂಬುದು ಅಂಗಡಿಯಲ್ಲಿಟ್ಟು ಮಾರುವ ಸರಕು ಎಂದು ಭಾವಿಸಬಾರದು. ಅಂತಃಕರಣವು ಸಂಪೂರ್ಣವಾಗಿ ಮಾರ್ಪಡಬೇಕು. ಸರ್ವರ ಆತ್ಮನಾದ ಪರಮಾತ್ಮನೇ ನಾನು ಎಂಬ ನಿಶ್ಚಿತವಾದ ಅನುಭವವು ಬರಬೇಕು. ಆ ಅನುಭವವು ಪುಸ್ತಕಪಾಂಡಿತ್ಯದಿಂದ ಬರುವದಿಲ್ಲ; ಭಾಷಣಗಳ ಶ್ರವಣದಿಂದಲೂ ಬರಲಾರದು.

ಯಾರು ಅಮಾನಿತ್ವಾದಿ ಸಾಧನಗಳನ್ನು ಅಳವಡಿಸಿಕೊಂಡು ಶಾಸ್ತ್ರಾಚಾರ್ಯರ ಬೋಧೆಯನ್ನು ಶ್ರದ್ಧಾಭಕ್ತಿಗಳಿಂದ ಪಡೆದುಕೊಳ್ಳುವ ವಿವೇಕವೈರಾಗ್ಯಶಮಾದಿ ಸಾಧನಗಳುಳ್ಳ ಮುಮುಕ್ಷುಗಳೋ ಅವರೇ ವೇದಾಂತಶ್ರವಣಕ್ಕೆ ಮುಖ್ಯಾಧಿಕಾರಿಗಳು. **ಯಾರು ಶ್ರೋತ್ರಿಯರೂ ಬ್ರಹ್ಮನಿಷ್ಠರೂ ಆಗಿ ಪರಬ್ರಹ್ಮದಲ್ಲಿಯೇ ಉಪರತರಾಗಿರುವ ಮಹಾತ್ಮರೋ ಅವರು ಮಾತ್ರವೇ ನಿಜವಾದ ಗುರುಗಳು. ಅಂಥವರು ಅಧಿಕಾರಿಗಳಾದ ಶಿಷ್ಯರಿಗೆ ಮಾಡಿದ ಉಪದೇಶವೇ ಶೋಕಮೋಹಗಳನ್ನು ತೊಲಗಿಸುವದಕ್ಕೆ ಸಹಕಾರಿಗಳಾಗುವವು. ಮಿಕ್ಕವರು ವೇದಾಂತದ ನಾಟಕದಲ್ಲಿ ಪಾತ್ರಧಾರಿಗಳಾಗಿರುವವರು; ಅಥವಾ ವೇದಾಂತವೆಂಬ ಹೆಸರಿನಿಂದ ವಾಣಿಜ್ಯದಲ್ಲಿ ನಿರತರಾಗಿರುತ್ತಾರೆ, ಅಷ್ಟೆ.**

## 245. ಆರ್ಜವ

### (ಫೆಬ್ರವರಿ 1967)

*ನಿಮ್ಮ ಪತ್ರವು ನನಗೆ ತಲುಪಿದೆ. ಆದಕ್ಕೆ ಉತ್ತರವನ್ನು ಸ್ಪಷ್ಟೋಕ್ತಿಯಿಂದಲೇ ಬರೆಯುತ್ತಿದೇನೆ. ಇದರಿಂದ ನಿಮ್ಮ ಮನಸ್ಸಿಗೆ ಸ್ವಲ್ಪ ನೋವಾಗಬಹುದಾದರೂ ನಿಮಗೆ ಹಿತವನ್ನೇ ಬಯಸಿ ಹೀಗೆ ಬರೆಯುತ್ತಿದೇನೆಂಬುದನ್ನು ನೆನಪಿನಲ್ಲಿಟ್ಟುಕೊಂಡು ಈ ಪತ್ರವನ್ನು ಸಾವಧಾನವಾಗಿ ಓದಿಕೊಳ್ಳಿರಿ.*

ನಿಮಗೆ ನಿಶ್ಚಯವಾಗಿಯೂ ಚತುರ್ಥಾಶ್ರಮವನ್ನು ಸ್ವೀಕರಿಸಬೇಕೆಂಬ ಇಚ್ಛೆಯಿದೆಯೆ? ಇದನ್ನು ನಿಮ್ಮೊಳಗೆ ನೀವೇ ಯೋಚಿಸಿ ನೋಡಿಕೊಳ್ಳಿರಿ. ನಿಮಗೆ ಬೇಕಾಗಿರುವದು ಸಂನ್ಯಾಸವೊ, ಅಥವಾ ಕಾವಿಯ ಬಟ್ಟೆಯನ್ನು ಧರಿಸಿ 'ಸಂನ್ಯಾಸಿಗಳು', 'ಪರಮಹಂಸಪರಿವ್ರಾಜಕರು' ಎಂದು ಜನರಿಂದ ಕರೆಯಿಸಿಕೊಂಡು ಕೀರ್ತಿ, ಪೂಜೆ–ಮುಂತಾದವುಗಳನ್ನು ಸಂಪಾದಿಸಿಕೊಳ್ಳುವದೊ?

ಪಾರಿವ್ರಾಜ್ಯವೆಂಬುದು ವೇಷವಲ್ಲ, ವಿಷಯಗಳಲ್ಲಿ ಉಂಟಾಗಿರುವ ವೈರಾಗ್ಯದಿಂದ ಆಗುವ ಅಂತಃಕರಣದ ರೂಪಾಂತರವೇ ಅದು. ನೀವು ಈಗ ಗೃಹಸ್ಥಾಶ್ರಮದಲ್ಲಿದ್ದುಕೊಂಡು ಆ ಆಶ್ರಮಕ್ಕೆ ಒಪ್ಪುವ ಆಚಾರಗಳನ್ನೂ ಕರ್ಮಗಳನ್ನೂ ಶಕ್ಯವಾದಷ್ಟು ಮಟ್ಟಿಗಾದರೂ ಮನಃಪೂರ್ವಕವಾಗಿ ಮಾಡುತ್ತಿದೀರಾ? ವೇದ ಮಂತ್ರಗಳನ್ನು ಕೆಲವನ್ನಾದರೂ ಕಲಿತುಕೊಂಡು ಕಾಲಕಾಲಕ್ಕೆ ಸಂಧ್ಯಾವಂದನೆ, ಬ್ರಹ್ಮ ಯಜ್ಞ, ದೇವತಾಪೂಜೆ, ಇಷ್ಟದೇವತಾ ಮಂತ್ರದ ಜಪ–ಇವುಗಳನ್ನು ಮಾಡಿರುತ್ತೀರಾ? ನಿಮಗೆ ನಿಜವಾಗಿಯೂ ಅನಿತ್ಯವಾದ ಕರ್ಮಫಲಕ್ಕಿಂತಲೂ ಬೇರೆಯಾಗಿರುವ ಜ್ಞಾನಫಲವನ್ನು ಸಂಪಾದಿಸಿಕೊಳ್ಳಬೇಕೆಂಬ ಹಂಬಲು ಇದೆಯೆ? ಶಾಸ್ತ್ರನಿಷಿದ್ಧವಾದ ಆಚಾರಗಳು ಯಾವದನ್ನೂ ಇಟ್ಟುಕೊಂಡಿಲ್ಲವಷ್ಟೆ? ಈಗ ನಿಮ್ಮ ಅಂತಃಕರಣದಲ್ಲಿ ಯಾವ ದುಷ್ಟವಿಚಾರವೂ ಎದ್ದುಕೊಳ್ಳುತ್ತಿಲ್ಲವಷ್ಟೆ? ಮೋಸ, ಕಪಟ–ಮುಂತಾದ ದುಷ್ಟಭಾವಗಳಿಗೆ ಎಡೆಯಿಲ್ಲವಷ್ಟೆ?

ಸರ್ವಕರ್ಮಗಳನ್ನೂ ಬಿಟ್ಟು ಆಚಾರ್ಯಸೇವೆ, ವೇದಾಂತಾಭ್ಯಾಸ, ಶಮದಮಾದಿ ಗಳನ್ನು ಬಲಪಡಿಸಿಕೊಳ್ಳುವದು, ಜಪಧ್ಯಾನಾದಿಗಳನ್ನು ಮಾಡುವದರಲ್ಲಿಯೇ ಕಾಲವನ್ನು ಹಾಕುವದು–ಇವುಗಳಲ್ಲಿಯೇ ನಿರತರಾಗಿರುವದಕ್ಕೆ ಸಿದ್ಧರಾಗಿದ್ದೀರಾ? ಗುರುಗಳಿಗೆ ನಮಸ್ಕಾರ ಮಾಡುವದು, ಅವರ ಸೇವೆಯನ್ನು ಮಾಡುತ್ತಿರುವದು, ಸಮಯವರಿತು ತತ್ತ್ವವಿಚಾರವನ್ನು ಮಾಡುತ್ತಿರುವದು, ಸಾಧನಗಳ ಮರ್ಮವನ್ನು ತಿಳಿದುಕೊಂಡು ಅವು ಎಷ್ಟೇ ಕಷ್ಟವೆಂದು ತೋರಿದರೂ ಅನುಷ್ಠಾನದಲ್ಲಿಟ್ಟುಕೊಳ್ಳುವದಕ್ಕೆ ಹವಣಿಸುತ್ತಿರುವದು,

ಮನಸ್ಸಿನಲ್ಲಿರುವದನ್ನು ಇದ್ದಂತೆ ಗುರುಗಳಲ್ಲಿ ಅರಿಕೆಮಾಡಿಕೊಂಡು ಅವರು ಹೇಳಿದಂತೆಯೇ ನಡೆಯುವದಕ್ಕೆ ಸಿದ್ಧರಾಗಿರುವದು–ಇಂಥ ಆಚರಣೆಗಳೇ ಜ್ಞಾನನಿಷ್ಠೆಗೆ ಉಪೋದ್ಬಲಕವಾಗಿರುತ್ತವೆ–ಎಂಬುದು ನಿಮ್ಮ ಮನಸ್ಸಿಗೆ ಹತ್ತಿದೆಯೆ? ನಿಮ್ಮ ಒಳ ಕಾಪಟ್ಯದ ಯಾವ ಕಲ್ಮಷವೂ ಇಲ್ಲವಷ್ಟೆ? ಇದನ್ನು ಯೋಚಿಸಿ ನೋಡಿಕೊಳ್ಳಿರಿ.

ನಿಮ್ಮ ಪತ್ರದಲ್ಲಿದ್ದ ಕೆಲವು ವಾಕ್ಯಗಳಿಂದ ನಿಮ್ಮ ಮನಸ್ಸಿನಲ್ಲಿ ಯಾವದೋ ಗೃಹಕೃತ್ಯದ ಕುಂದುಕೊರತೆಗಳ ಚಿಂತೆಯು ಹತ್ತಿಕೊಂಡಿರುವಂತೆ ನನಗೆ ತೋರುತ್ತಿದೆ. ವೇದಾಂತಮನನವನ್ನೂ ಮನಸ್ಸನ್ನೂ ಪ್ರತ್ಯಙ್ಮುಖವಾಗಿ ತಿರುಗಿಸುವ ಸಾಧನಗಳನ್ನೂ ಮುಖ್ಯವಾಗಿಟ್ಟುಕೊಳ್ಳುವದಕ್ಕೆ ಬದಲಾಗಿ ಖ್ಯಾತಿ ಲಾಭಾದಿಗಳನ್ನು ಬಯಸುತ್ತಿರುವ ಈಗಿನ ಕೆಲವರು ದಾಂಭಿಕಸಂನ್ಯಾಸಿಗಳ ಅನುಸರಣೆಯ ಹಂಬಲು ನಿಮಗೆ ಉಂಟಾಗಿರಬಹುದೆಂಬ ಸಂಶಯವೂ ಉಂಟಾಗಿದೆ. ಈ ಊಹೆಯು ಸರಿಯೆ? ಹಾಗಿದ್ದರೆ ಇದನ್ನು ಮುಚ್ಚು ಮರೆಯಿಲ್ಲದೆ ನಿಮ್ಮ ಗುರುಗಳಲ್ಲಿ ತಿಳಿಸಿ ಈ ದೋಷವನ್ನು ಮೊದಲು ತಿದ್ದಿಕೊಳ್ಳಿರಿ. ಮನಸ್ಸು, ವಾಕ್ಕು, ಕರ್ಮ–ಈ ಮೂರರಲ್ಲಿಯೂ ಒಂದೇ ಆಗಿರುವ ಸಾಧನಕ್ಕೆ 'ಆರ್ಜವ'ವೆಂದು ಹೆಸರು. ನೀವು ಯಾವ ಸಂನಿವೇಶದಲ್ಲಿದ್ದರೂ ಈ ಆರ್ಜವವನ್ನೇ ಅನುಷ್ಠಾನದಲ್ಲಿಟ್ಟುಕೊಳ್ಳುವದಕ್ಕೆ ಮೊಟ್ಟ ಮೊದಲು ಪ್ರಯತ್ನಿಸಿರಿ. ಆರ್ಜವದಿಂದ ಕರ್ಮಯೋಗವನ್ನು ಮಾಡುತ್ತಿದ್ದರೂ ಸಾಕು, ಸಂನ್ಯಾಸಕ್ಕೆ ಹತ್ತಿರವಾದಂತೆ.

ನಿಮಗೆ ಹಿತೈಷಿಗಳಾಗಿ ಬುದ್ಧಿವಾದವನ್ನು ಹೇಳುವ ಯಾರಲ್ಲಿಯೂ ಎಂದಿಗೂ ನಿಮಗೆ ಅಸೂಯೆಯಾಗಲಿ ದ್ವೇಷವಾಗಲಿ ಉಂಟಾಗಬಾರದು. ಆರ್ಜವದಿಂದ ಅವರ ಹಿತೋಕ್ತಿಯನ್ನು ಕೇಳಿ ತಪ್ಪನ್ನು ಒಪ್ಪಿಕೊಂಡು ಸಾಧನವನ್ನು ಮಾಡುವದಕ್ಕೆ ಆರಂಭಿಸಿರಿ. ಇದರಿಂದ ಪರಮಾರ್ಥಸಂನ್ಯಾಸದ ಮರ್ಮವು ನಿಮ್ಮ ಮನಸ್ಸಿಗೆ ಹತ್ತುವದು. ಆರ್ಜವವಿಲ್ಲದವರು ಯಾವ ಸಾಧನವನ್ನು ಮಾಡಿದರೂ ದಂಭ, ದರ್ಪ, ಅಹಂಕಾರ, ಅನೃತ–ಮುಂತಾದ ದೋಷಗಳು ಅವರನ್ನು ಬೆಂಬಿಡದೆ ಇರುವವು. ಅವರು ಮಾಡುವ ವಿಚಾರವು ಎಂದಿಗೂ ಅವರಿಗೆ ಜ್ಞಾನವನ್ನು ತಂದುಕೊಡಲಾರದು. ಕೆಸರಿನಲ್ಲಿ ಆಗಾಗ್ಗೆ ಅದ್ದಿತೆಗೆಯುತ್ತಿರುವ ಬಟ್ಟೆಯನ್ನು ಎಂದಾದರೊಮ್ಮೆ ಸಾಬೂನು ಹಾಕಿ ಶುದ್ಧಿಮಾಡುವದು ಆದೀತೇನು?

'ಸದ್ಗುರುಗಳು ನಿಮಗೆ ಇನ್ನೂ ಸಿಕ್ಕಿಲ್ಲವಲ್ಲ!'–ಎಂಬ ಚಿಂತೆಯನ್ನು ಹತ್ತಿಸಿಕೊಂಡು ಜ್ಞಾನಿಗಳೆಂದೂ ಯೋಗಿಗಳೆಂದೂ ಹೇಳಿಕೊಳ್ಳುವವರನ್ನೆಲ್ಲ ಕಾಲುಕಟ್ಟಿಕೊಳ್ಳುವದಕ್ಕೆ ಹೋಗದಿರಿ. ಶಿಷ್ಯಗುಣಗಳನ್ನು–ಮುಖ್ಯವಾಗಿ ಆರ್ಜವದಿಂದ ಸಾಧನಗಳ ಅನುಷ್ಠಾನವನ್ನು ಮಾಡುವ ಅಭ್ಯಾಸವನ್ನು–ಮೊದಲು ಸಂಪಾದನೆ ಮಾಡಿಕೊಳ್ಳಿರಿ. ಆಗ

ನೀವು ಯಾವ ಬಣ್ಣದ ಬಟ್ಟೆಯನ್ನುಟ್ಟುಕೊಂಡಿದ್ದರೂ ಪರಮಾರ್ಥ ಸಂನ್ಯಾಸದ ಹಾದಿಯಲ್ಲಿಯೇ ಇರುವಿರಿ. ಭಗವಂತನು ನಿಮಗೆ ಈ ದಿಶೆಯಲ್ಲಿ ನಡೆಯುವಂತೆ ಅನುಗ್ರಹಿಸಲಿ!

## 246. ಆಚಾರ

### (ಮಾರ್ಚ್ 1967)

*ನಿಮ್ಮ ಪತ್ರವು ಬಂದು ತಲುಪಿತು. ''ಈಗಿನ ಕಾಲಕ್ಕೆ ಭಾರತದೇಶದಲ್ಲಿ ಹಿಂದುಗಳೇ ಅಲ್ಲದೆ, ಜೈನರು, ಬೌದ್ಧರು, ಮುಸಲ್ಮಾನರು, ಕ್ರಿಸ್ತಿಯರು, ಪಾರಸಿಗಳು–ಮುಂತಾದ ಬೇರೆ ಬೇರೆ ಮತಗಳನ್ನು ಅವಲಂಬಿಸಿರುವವರು ನಿವಾಸಿಗಳಾಗಿರುತ್ತಾರೆ. ಅವರೆಲ್ಲರಿಗೂ ಆಚಾರಗಳು ಒಂದೇ ಸಮನಾಗಿರುವದಿಲ್ಲ. ಮಡಿ ಮೈಲಿಗೆಗಳ ಹಾರಾಟದಲ್ಲಿ 'ನಾನೇ ಶುಚಿ' ಎಂಬ ಅಭಿಮಾನಕ್ಕೆ ಹೆಚ್ಚಿನ ಅವಕಾಶವಿರುವಂತೆ ತೋರುತ್ತದೆ. ಅದನ್ನು ಅವಲಂಬಿಸಿರುವದರಿಂದ ಮತಾಂತರಗಳ ಅನುಯಾಯಿಗಳ ಮನಸ್ಸು ನೊಂದುಕೊಳ್ಳುವದಕ್ಕೂ ಅವಕಾಶವಿದೆ. ಇದನ್ನೆಲ್ಲ ಆಲೋಚನೆ ಮಾಡಿದರೆ ಈ 'ಆಚಾರ'ವೆಂಬ ಪದವನ್ನೇ ನಮ್ಮ ನಿಘಂಟುಗಳಿಂದ ಕಿತ್ತುಹಾಕಿದರೆ ಒಳ್ಳೆಯದಲ್ಲವೆ?–ಎನಿಸುತ್ತದೆ. ಈ ನನ್ನ ಅಭಿಪ್ರಾಯವು ಎಷ್ಟರಮಟ್ಟಿಗೆ ಸರಿ?'' ಎಂದು ಕೇಳಿರುತ್ತೀರಿ.*

ನೀವು ಕೇಳಿರುವ ಪ್ರಶ್ನೆಯಲ್ಲಿ ಎರಡು ಬೇರೆಬೇರೆಯ ನಡೆವಳಿಕೆಗಳನ್ನು 'ಆಚಾರ' ಎಂಬ ಮಾತಿನಲ್ಲಿ ಅಡಕಮಾಡಿಕೊಂಡಿದ್ದೀರಿ ಎಂದು ನನಗೆ ತೋರುತ್ತದೆ. ಕೆಲವರು ಬಹು ದಿನದಿಂದ ನಡೆದುಕೊಂಡುಬಂದಿರುವ ಪದ್ಧತಿಯಲ್ಲಿ ಸಾರವು ಯಾವದು, ಅಸಾರವಾದದ್ದು ಯಾವದು?–ಎಂಬುದನ್ನು ವಿಂಗಡಿಸಿಕೊಳ್ಳಲಾರದೆ 'ಮಡಿ', 'ಮೈಲಿಗೆ'–ಎಂಬ ಶಬ್ದಗಳನ್ನು ಮಾತ್ರ ಉಪಯೋಗಿಸುತ್ತಿರುತ್ತಾರೆ. ಮನುಷ್ಯನು ಶರೀರ, ವಾಕ್ಕು, ಮನಸ್ಸು–ಇವುಗಳಲ್ಲಿ ಶುಚಿಯಾಗಿರಬೇಕು–ಎಂಬುದು 'ಮಡಿ' ಎಂಬ ಮಾತಿನಲ್ಲಿ ಅಡಕವಾಗಿರುವ ಅರ್ಥದ ಸಾರ.

ಶರೀರದಲ್ಲಿ ಕ್ಷಣಕ್ಷಣಕ್ಕೂ ಹಲವು ಕಾರಣಗಳಿಂದ ಕೊಳೆಯು ಸೇರಿಕೊಳ್ಳುತ್ತಿರುವದು. ಮೈಬೆವರುವದು, ಕಣ್ಣು ಕಿವಿ, ಮೂಗು, ಬಾಯಿ, ಮಲಮೂತ್ರಗಳ ದ್ವಾರ–ಇವುಗಳ ಮೂಲಕ ಕಲ್ಮಷವು ಆಗಾಗ ಒಸರುತ್ತಿರುವದು; ಇವುಗಳು ಶರೀರವನ್ನು ನಿರ್ಮಲವಾಗಿಟ್ಟುಕೊಳ್ಳುವದಕ್ಕೆ ಸಹಾಯವಾಗಿ ದೈವನಿರ್ಮಿತವಾದ ಕಾರ್ಯಗಳು. ಮಲವನ್ನು ಆಚೆಗೆ ಹಾಕುವ ಈ ಶರೀರದ ದ್ವಾರಗಳು ಆಗಿಂದಾಗ್ಗೆ ಮಲದ ಸೋಂಕಿನಿಂದ ಮೈಲಿಗೆಯಾಗುತ್ತಿರುವವು. ಆದ್ದರಿಂದ ಶರೀರವನ್ನು ಆಗಿಂದಾಗ್ಗೆ ಸ್ನಾನ, ಒಗೆದ

ಬಟ್ಟೆಯನ್ನು ಧರಿಸುವದು—ಮುಂತಾದ ಮಾರ್ಗದಿಂದ ಶುಚಿಯಾಗಿಸಿಕೊಳ್ಳುತ್ತಲೇ ಇರುವದು ಅವಶ್ಯವೆಂಬುದನ್ನು ಯಾರಾದರೂ ಒಪ್ಪುತ್ತಾರೆ. ಈ ಪದ್ಧತಿಯನ್ನು ಕ್ರಮಪಡಿಸಿ, ಸ್ನಾನ, ಆಚಮನ, ಶುದ್ಧವಾದ ಹತ್ತಿಯ, ನಾರಿನ, ರೇಶ್ಮೆಯ ಅಥವಾ ಉಣ್ಣೆಯ ಬಟ್ಟೆಗಳನ್ನು ಬಳಸಿಕೊಳ್ಳುವದು, ಅಶುಚಿಯಾದ ಪದಾರ್ಥಗಳನ್ನೂ ಪ್ರಾಣಿಗಳನ್ನೂ ಮನುಷ್ಯರನ್ನೂ ಆದಷ್ಟು ಮಟ್ಟಿಗೂ ಅನವಶ್ಯವಾಗಿ ಸೋಕದಂತೆ ನೋಡಿಕೊಳ್ಳುವದು—ಇಂಥ ಆಚಾರಗಳು ಹುಟ್ಟಿಕೊಂಡಿವೆ. ವೇದವನ್ನೂ ಸ್ಮೃತಿಗಳನ್ನೂ ಪ್ರಮಾಣವೆಂದು ನಂಬುವವರು— ಇವುಗಳಿಗೆ ದೃಷ್ಟವಾದ ಫಲವಲ್ಲದೆ ಅದೃಷ್ಟ ಫಲವೂ ಉಂಟೆಂದು ಶ್ರದ್ಧೆಯಿಂದ ನಂಬುತ್ತಾರೆ.

**ಶೌಚ**ವೆಂದರೆ ಶರೀರವನ್ನೇ ಅಲ್ಲದೆ ಮನಸ್ಸನ್ನೂ ಶುಚಿಯಾಗಿಟ್ಟುಕೊಳ್ಳುವದೂ— ಮನಸ್ಸಿನಲ್ಲಿ ಉಂಟಾಗುವ ರಾಗದ್ವೇಷಾದಿ ದುಷ್ಟಭಾವನೆಗಳನ್ನು ಪ್ರತಿಪಕ್ಷಭಾವನೆಯ ಮೂಲಕ ಕಳೆದುಹಾಕುವದೂ—ಸೇರಿಕೊಂಡಿರುತ್ತದೆ. ಆಚಾರವೆಂಬ ಮಾತಿನಲ್ಲಿ ದೊಡ್ಡವರ ನಡೆನುಡಿಗಳನ್ನು ಅನುಸರಿಸುವದನ್ನು ಮಾತ್ರ ಸೇರಿಸಿಕೊಂಡಿರುತ್ತದೆ. ಶಾಸ್ತ್ರವನ್ನೇ ಅನುಸರಿಸುತ್ತಿರುವವರು ಅನುಸರಿಸುವ ಆಚಾರವೂ ಪ್ರಮಾಣವೇ ಎಂಬುದು ಆಸ್ತಿಕರ ಭಾವನೆ.

ಹೀಗೆ ಯುಕ್ತಿಯ ಒರೆಗಲ್ಲಿಗೆ ತಿಕ್ಕಿ ನೋಡುವಾಗಲೂ, ಆಚಾರ, ಶೌಚ— ಇವೆರಡೂ ಎಲ್ಲರಿಗೂ ಬೇಕಾದವುಗಳೇ ಆಗಿರುತ್ತದೆ. ಶೌಚ, ಆಚಾರ—ಇವುಗಳು ಆರೋಗ್ಯದೃಷ್ಟಿಯಿಂದ ಅವಶ್ಯವೆಂದು ಎಲ್ಲರೂ ಒಪ್ಪುತ್ತಿರುವರಾದರೂ ವೈದಿಕ ಧರ್ಮದವರು ಇವುಗಳನ್ನು ಕ್ರಮಗೊಳಿಸಿ ಎಷ್ಟೋ ಸೂಕ್ಷ್ಮವಿಚಾರಗಳನ್ನು ಧರ್ಮಶಾಸ್ತ್ರಗಳಲ್ಲಿ ಸಂಗ್ರಹಿಸಿರುತ್ತಾರೆ. ಈಗಿನ ನಾಗರಿಕತೆಯ ಮತ್ತು ವಿದ್ಯಾಭ್ಯಾಸಕ್ರಮದ (?) ಬಿರುಗಾಳಿಗೆ ಸಿಕ್ಕಿ ನಮ್ಮ ದೇಶದಲ್ಲಿಯೂ ಹಲವರು 'ಇವುಗಳು ಯಾರೋ ಕೆಲವರು ಕಲ್ಪಿಸಿರುವ ಪದ್ಧತಿಗಳು'—ಎಂದು ಭಾವಿಸಿರುತ್ತಾರೆ. ಕೆಲವರು ಅಜ್ಞರು ಶೌಚಾಚಾರಗಳ ಮರ್ಮವನ್ನು ಅರಿಯದೆ 'ನಾನು ಮಡಿ', 'ನೀನು ಮೈಲಿಗೆ' ಎಂದು ವ್ಯವಹಾರದಲ್ಲಿ ಇತರರ ಮನಸ್ಸನ್ನು ನೋಯಿಸುವ ಹೆಮ್ಮೆ, ದಂಭ—ಇವುಗಳಿಗೆ ವಶರಾಗಿರುತ್ತಾರೆಂಬುದು ನಿಜ. ಅಂಥ ಮೂಢವಿಶ್ವಾಸಗಳನ್ನು ಎಷ್ಟು ಬೇಗನೆ ಕಿತ್ತೊಗೆದರೆ ಅಷ್ಟು ಒಳ್ಳೆಯದು—ಎಂದು ನಿಮ್ಮಂತೆ ನಾನೂ ಭಾವಿಸಿರುತ್ತೇನೆ. ಆದರೆ ಐಹಿಕಪಾರತ್ರಿಕಧ್ಯೇಯಗಳನ್ನು ಸಾಧಿಸಿಕೊಳ್ಳುವವರ ಜೀವನಸೂತ್ರವಾಗಿರುವ ಇವುಗಳನ್ನು ಬುಡಮುಟ್ಟ ಕಿತ್ತುಹಾಕಿದರೆ ನಮ್ಮ ಪುರುಷಾರ್ಥಕ್ಕೆ ನಾವೇ ಕೊಡಲಿಯಪೆಟ್ಟು ಹಾಕಿದವರಾಗುತ್ತೇವೆಂಬುದು ನಿಶ್ಚಿತ. ಮುಮುಕ್ಷುಗಳ ದೃಷ್ಟಿಯಿಂದ ನೋಡಿದರಂತೂ ಇವುಗಳನ್ನು ಕಡೆಗಣಿಸುವವರು

ಆಸುರಸಂಪತ್ತಿನವರಾಗಿ ಅಧ್ಯಾತ್ಮವಿದ್ಯೆಗೇ ಅನರ್ಹರಗುವರೆಂಬುದಕ್ಕೆ ಸಂಶಯವಿಲ್ಲ. ಭಗವಂತನು ಅರ್ಜುನನಿಗೆ ಹೇಳಿರುವದನ್ನು ಕೇಳಿರಿ:

> ಪ್ರವೃತ್ತಿಂ ಚ ನಿವೃತ್ತಿಂ ಚ ಜನಾ ನ ವಿದುರಾಸುರಾಃ ।
> ನ ಶೌಚಂ ನಾಪಿ ಚಾಚಾರೋ ನ ಸತ್ಯಂ ತೇಷು ವಿದ್ಯತೇ ॥(ಭಗ. 16.7)

''ಆಸುರಸಂಪತ್ತಿನ ಜನರಿಗೆ ಪುರುಷಾರ್ಥಸಾಧನದಲ್ಲಿ ತೊಡಗುವದೆಂಬ ಪ್ರವೃತ್ತಿಯಾಗಲಿ, ಅನರ್ಥಕ್ಕೆ ಕಾರಣವಾದದ್ದನ್ನು ಬಿಡಬೇಕೆಂಬ ನಿವೃತ್ತಿಯಾಗಲಿ ತಿಳಿಯದು. ಅವರಲ್ಲಿ ಶೌಚ, ಆಚಾರ, ಸತ್ಯ–ಯಾವದೊಂದೂ ಇರುವದಿಲ್ಲ.'' ಈ ವಚನದ ಅಭಿಪ್ರಾಯವನ್ನು ಮತ್ತೊಮ್ಮೆ ವಿವರಿಸುವೆನು.

## 247. ವೇದಾಂತಕ್ಕೆ ಅಧಿಕಾರ

### (ಏಪ್ರಿಲ್ 1967)

*ನಿಮ್ಮ ಪತ್ರವು ತಲುಪಿರುತ್ತದೆ. ''ವೇದಾಂತದ ರಹಸ್ಯವು ನನಗೆ ಏತಕ್ಕೆ ಹಿಡಿಯುವದಿಲ್ಲ? ಎಷ್ಟೋ ಗ್ರಂಥಗಳನ್ನು ಓದಿರುತ್ತೇನೆ; ಬಲ್ಲವರಿಂದ ಹೇಳಿಸಿಕೊಂಡೂ ಇರುತ್ತೇನೆ. ನನಗೆ ಸಂಶಯಗಳು ಮಾತ್ರ ತಪ್ಪಲಿಲ್ಲ. ಏಕಾಂತವಾಸವನ್ನು ಮಾಡಿಕೊಂಡು ಸಾಧನೆಮಾಡುವದು ಅವಶ್ಯವೆಂದು ತೋರುತ್ತಿದೆ. ನಾನು ಯಾವ ಸಾಧನವನ್ನು ಮಾಡಿದರೆ, ಮುಖ್ಯವಾದ ಯಾವ ಗ್ರಂಥವನ್ನು ಓದಿದರೆ, ನನಗೆ ಬೇಗನೆ ತತ್ತ್ವದ ಗ್ರಹಣೆಯಾದೀತು? ದಯವಿಟ್ಟು ತಿಳಿಸಿರಿ'' ಎಂತ ಬರೆದಿರುತ್ತೀರಿ.*

ತಮ್ಮ ಮನಸ್ಸನ್ನು ಪರೀಕ್ಷಿಸಿಕೊಳ್ಳುತ್ತಾ 'ನನಗೆ ತತ್ತ್ವವು ತಿಳಿಯುತ್ತಿದೆ, ಅಥವಾ ತಿಳಿಯಲಿಲ್ಲ' ಎಂಬುದನ್ನು ಗೊತ್ತುಪಡಿಸಿಕೊಳ್ಳುತ್ತಿರುವವರು ಧನ್ಯರು. ನಿಮಗೆ ವೇದಾಂತದ ತತ್ತ್ವವನ್ನೇ ನೇರಾಗಿ ಗ್ರಹಿಸಬೇಕೆಂಬ ತಹತಹವುಂಟಾಗಿದ್ದರೆ ಅವಶ್ಯವಾಗಿ ನಿಮಗೆ ಭಗವಂತನು ಬೇಗನೆ ಅನುಗ್ರಹವನ್ನು ಮಾಡುವನು. ಹೊರಗೆ ಕಾಣಿಸುವ ಪ್ರಪಂಚದಲ್ಲಿ 'ಕೆಲವರು, ನಮಗೆ ಮಿತ್ರರು, ಕೆಲವರು ಶತ್ರುಗಳು, ಕೆಲವರು ಬಂಧುಗಳು, ಇನ್ನು ಕೆಲವರು ಯಾವ ಲೆಕ್ಕಕ್ಕೂ ಸೇರಿದವರಲ್ಲ' ಎಂಬ ಅಭಿಮಾನವು ನಮಗೆಲ್ಲ ಸ್ವಾಭಾವಿಕವಾಗಿರುತ್ತದೆ. ಈ ಅಭಿಮಾನವೇ ವೇದಾಂತವು ನಮಗೆ ಹಿಡಿಸದೆ ಇರುವದಕ್ಕೆ ಮುಖ್ಯವಾದ ಅಡ್ಡಿ. 'ತಂದೆ, ತಾಯಿ ; ಅಣ್ಣ, ತಮ್ಮ ; ಅಕ್ಕ, ತಂಗಿ ; ಮಗ, ಮಗಳು ; ಮನೆ, ಮಠ; ಎಂದು ಮುಂತಾಗಿ ಹೊರಗಿನ ವಸ್ತುಗಳಲ್ಲಿ ನಮಗೆ ಹೆಚ್ಚಿನ ಅಭಿಮಾನವಿರಬೇಕಾದದ್ದು ಯುಕ್ತವೇ ಆಗಿದ್ದರೂ ನಮ್ಮ ಅಂತಃಕರಣವು ಅವರಲ್ಲಿ ನೆಟ್ಟಿರುವದೇ–ಹೆಚ್ಚೇಕೆ? ಯಾವ ಪ್ರಾಣಿ,

ವಸ್ತು ಅಥವಾ ಕೀರ್ತ್ಯಾದಿಗಳ ಭಾವನೆ ನಮ್ಮ ಮನಸ್ಸನ್ನು ಬಿಗಿಹಿಡಿದಿರುವದೋ ಅದೇ-ನಮಗೆ ತತ್ತ್ವಜ್ಞಾನಕ್ಕೆ ಅಡ್ಡಿಯಾಗಿರುತ್ತದೆ. ಇದನ್ನು ಕೇಳಿ ನಿಮಗೆ ಆಶ್ಚರ್ಯವಾಗಬಹುದು. ಆದರೆ ಪರಮಾರ್ಥತತ್ತ್ವವೆಂಬುದು ನಮ್ಮ ನಿಮ್ಮ ಮತ್ತು ಈ ಜಗತ್ತಿನ ನಿಜವಾದ ಆತ್ಮನು. ನಿಜವಾದ ಆತ್ಮನನ್ನು 'ಪ್ರತ್ಯಗಾತ್ಮನು' ಎಂದೂ ಕರೆದಿರುತ್ತಾರೆ. ಪ್ರತ್ಯಗಾತ್ಮನೆಂದರೆ ನಮ್ಮ ಶೀರ ಒಳಗೆ ನಮ್ಮೆಲ್ಲರ ಸ್ವರೂಪನಾಗಿರುವ ಭಗವಂತನು. ಹೊರಗಿನ ವಸ್ತುವಿನಲ್ಲಿರುವ ಅಭಿಮಾನವು ಒಳಕ್ಕೆ ಹೋಗಿ ನಮ್ಮ ಆತ್ಮಸ್ವರೂಪವನ್ನು ಕಾಣುವದಕ್ಕೆ ಅಡ್ಡಿಯಾಗಿರುವದೆಂದರೆ ಆಶ್ಚರ್ಯವಾದರೂ ಏನು?

ತತ್ತ್ವವನ್ನು ಅರಿತುಕೊಳ್ಳುವವನು ತತ್ತ್ವವೇ ಆಗಿಬಿಡಬೇಕಾಗುವದು. ಅವನು ತನ್ನೊಳಕ್ಕೇ ತಾನು ಸೇರಿಸಿಕೊಂಡು ತನ್ನ ಪರಮಾರ್ಥವನ್ನೇ ಕಂಡುಕೊಳ್ಳಬೇಕು. ಶಮದಮಾದಿಗಳಿಂದೊಡಗೂಡಿ **'ಆತ್ಮನ್ಯೇವಾತ್ಮನಂ ಪಶ್ಯೇತ್'** (ಆತ್ಮನಲ್ಲಿಯೇ, ತನ್ನಲ್ಲಿಯೇ, ಪರಮಾತ್ಮನನ್ನು ಕಂಡುಕೊಳ್ಳಬೇಕು) ಎಂದು ಶ್ರುತಿಯು ಸಾರುತ್ತಿದೆ. ಪೂರ್ವದಿಕ್ಕಿನಲ್ಲಿ ಉದಯಿಸುತ್ತಿರುವ ಸೂರ್ಯನನ್ನು ಪಶ್ಚಿಮಕ್ಕೆ ತಿರುಗಿರುವ ಕಂಗಳುಳ್ಳವನು ಎಂದಿಗೂ ಕಾಣಲಾರನಷ್ಟೆ? ಈ ಮಾತಿನ ಅಭಿಪ್ರಾಯವನ್ನು ನೀವು ಚೆನ್ನಾಗಿ ಮನದಟ್ಟು ಮಾಡಿಕೊಳ್ಳಿರಿ; ಆಗ ನಿಮ್ಮ ಪ್ರಶ್ನೆಗೆ ತೃಪ್ತಿಕರವಾದ ಉತ್ತರವು ದೊರಕುವದು.

## 248. ಕಾಮ್ಯನಿಷಿದ್ಧಗಳ ತ್ಯಾಗ

### (ಮೇ 1967)

*ಆಗಿಂದಾಗ್ಗೆ ನಿಮ್ಮ ಪತ್ರಗಳು ಬರುತ್ತಿರುತ್ತವೆ. ಅವುಗಳೊಳಗೆ ಒಂದೆರಡಕ್ಕೆ ಉತ್ತರವನ್ನು ಬರೆದಿರುತ್ತೇನೆ. 'ಸರ್ವಕರ್ಮತ್ಯಾಗವನ್ನು ಮಾಡಿ ಯಾವಾಗಲೂ ವೇದಾಂತದ ಸತ್ಕಾಲಕ್ಷೇಪದಲ್ಲಿಯೇ ಕಾಲವನ್ನು ಹಾಕಬೇಕೆಂಬ ಆಶೆಯುಂಟಾಗಿದೆ. ಆದರೆ ಈಗ ನಾನು ಇರುವ ಆಶ್ರಮದಲ್ಲಿ ಕರ್ಮಗಳನ್ನು ಮಾಡುತ್ತಲೇ ಇರಬೇಕಾಗಿರುವದರಿಂದ ನಿತ್ಯವೂ ಶ್ರವಣಾದಿಗಳಲ್ಲಿಯೇ ನಿರತನಾಗಿರುವದಕ್ಕೆ ಅಡ್ಡಿಯಾಗುತ್ತಿದೆ. ಆದ್ದರಿಂದ ನನಗೆ ಚತುರ್ಥಾಶ್ರಮದ ಪ್ರಯೋಜನವನ್ನು ಮಾಡಿಸಿಕೊಟ್ಟು ಸತ್ಕಾಲಕ್ಷೇಪಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಬೇಡಿಕೊಳ್ಳುತ್ತೇನೆ'- ಎಂತ ಬರೆದಿರುತ್ತೀರಿ.*

ಕರ್ಮತ್ಯಾಗವೆಂದರೆ ಹೇಗಾದರೂ ಮಾಡಿ ಸಂನ್ಯಾಸಿಯೆಂಬ ನಾಮರೂಪಗಳಿಗೆ ಅಂಟಿಕೊಳ್ಳುವದು-ಎಂಬ ಭ್ರಮೆ ನಿಮಗೆ ಉಂಟಾಗಿರುವಂತೆ ಕಾಣಿಸುತ್ತಿದೆ. ಹಾಗಿದ್ದರೆ ಸ್ವೇಚ್ಛಾಚಾರಿಗಳೆಲ್ಲ ಸರ್ವಕರ್ಮಸಂನ್ಯಾಸವನ್ನು ಮಾಡಿದವರೆನ್ನಿಸಿಕೊಳ್ಳ

ಬಹುದಾಗುವದಲ್ಲವೆ? 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' ಎಂಬ ಗೀತಾಶ್ಲೋಕಕ್ಕೆ ಭಾಷ್ಯದಲ್ಲಿ ಬರೆದಿರುವ ವಿಸ್ತಾರವಾದ ವ್ಯಾಖ್ಯಾನವನ್ನು ನೀವು ಮನಮುಟ್ಟಿ ಓದಬೇಕು. ಧರ್ಮಶಬ್ಧವಾಚ್ಯವಾದ ಶಾಸ್ತ್ರೀಯ ಕರ್ಮಗಳನ್ನು ಬಿಡುವದಕ್ಕೆ ಮುಂಚೆಯೇ ಅಧರ್ಮಶಬ್ದಕ್ಕೆ ಅರ್ಥವಾಗಿರುವ ನಿಷಿದ್ಧಕರ್ಮಗಳನ್ನೆಲ್ಲ ಬಿಟ್ಟಿರಬೇಕೆಂದು ಅಲ್ಲಿ ಸ್ಪಷ್ಟವಾಗಿ ಹೇಳಿರುತ್ತದೆ. ಕರ್ಮವೆಂಬುದು ಹಿಂದಿನ ಕಾಲಕ್ಕೆ ಬೇಕಾಗಿದ್ದ ಕೆಲವು ಮೂಢಭಕ್ತಿಯ ಆಚಾರ–ಎಂಬ ತಪ್ಪುಗ್ರಹಿಕೆಯು ನಿಮ್ಮ ಮನಸ್ಸಿನಲ್ಲಿರುವದೆಂದು ನನಗೆ ಅನ್ನಿಸಿದೆ. ಅದಂತೂ ಸರ್ವಥಾ ಸರಿಯಲ್ಲ. ಶಾಸ್ತ್ರೋಕ್ತವಾದ ಕರ್ಮಗಳನ್ನುಕೂಡ ಬಿಡುವದಕ್ಕೆ ಮುಂಚೆ ಕೆಲವು ಅಂತಃಕರಣದ ಸಿದ್ಧತೆಗಳು ಬೇಕಾಗುವವು–ಎಂಬುದನ್ನು ನೀವು ಮೊದಲು ತಿಳಿದುಕೊಳ್ಳಬೇಕು. ಇನ್ನು ನಿಷಿದ್ಧಕರ್ಮಗಳನ್ನು ಬೇಕೆಂತಲೇ ಅನುಸರಿಸುತ್ತಾ ನಾವು ಸಮಾಜಸುಧಾರಕರು ಎಂಬ ಕೀರ್ತಿಯನ್ನು ಗಳಿಸುವದಕ್ಕೆ ಪ್ರಯತ್ನಿಸುತ್ತಿರುವವರ ನಡತೆಯನ್ನು ಅನುಸರಿಸುವವರು ಶಾಸ್ತ್ರದಲ್ಲಿ ಹೇಳಿರುವ ಜ್ಞಾನವಿಜ್ಞಾನಗಳನ್ನು ಹೇಗೆ ಸಂಪಾದಿಸಿಯಾರು?

ನೀವು ಶರೀರಪ್ರಧಾನವಾದ 'ನಿಯಮ'ಗಳನ್ನೂ ಮನಃ ಪ್ರಧಾನವಾದ 'ಯಮ'ಗಳನ್ನೂ ಮೊದಲು ಅಭ್ಯಾಸ ಮಾಡಿಕೊಳ್ಳಿರಿ. ವೇದಾಂತತತ್ತ್ವವನ್ನು ಅನುಭವಕ್ಕೆ ತಂದುಕೊಂಡಿರುವ ಸತ್ಪುರುಷರ ಸೇವೆಗೆ ಅಣಿಯಾಗಿರಿ. ಆಗ ನಿಮಗೆ 'ಕಾಮ್ಯನಿಷಿದ್ಧಗಳ ವರ್ಜನೆ' ಎಂದರೇನೆಂಬುದರ ನಿಜವಾದ ಅರಿವು ಮನಸ್ಸಿನಲ್ಲಿ ಮಿಂಚುವದು. ಭಗವಂತನು ನಿಮಗೆ ಈ ದಿಕ್ಕಿನಲ್ಲಿ ಬುದ್ಧಿಪ್ರವೃತ್ತಿಯುಂಟಾಗುವಂತೆ ಅನುಗ್ರಹಿಸಲಿ!

## 249. ಸ್ತೋತ್ರಪಾಠ, ಭಜನೆ

### (ಜೂನ್1967)

*ನಿಮ್ಮ ಪತ್ರವು ತಲುಪಿರುತ್ತದೆ. ಪಾಠಶಾಲೆಗಳಲ್ಲಿ ನಿಯತವಾಗಿ ವಿದ್ಯಾರ್ಥಿಗಳಿಂದ ಸ್ತೋತ್ರಪಾಠವನ್ನು ಮಾಡಿಸುವದೂ ಆಗಾಗ್ಗೆ 'ಭಜನೆ'ಗೆ ಏರ್ಪಡಿಸುವದೂ ಈಗಿನ ಕಾಲಕ್ಕೆ ಎಷ್ಟು ಮಟ್ಟಿಗೆ ಸಾಧ್ಯ? ಬೇರೆಬೇರೆಯ ಮತಗಳ ಅನುಯಾಯಿಗಳು ವಿದ್ಯಾಭ್ಯಾಸಕ್ಕೆಂದು ತಮ್ಮ ಮಕ್ಕಳನ್ನು ಒಂದೇ ಪಾಠಶಾಲೆಗೆ ಕಳುಹಿಸುತ್ತಿರುವಾಗ ಯಾವ ಮತದವರ ಧರ್ಮಗ್ರಂಥಗಳಿಂದ ಸ್ತೋತ್ರಗಳನ್ನು ಆರಿಸಿಕೊಳ್ಳಬೇಕೆಂಬ ವಿಷಯಕ್ಕೆ ಮತಭೇದವುಂಟಾಗುವದು ಸ್ವಾಭಾವಿಕವಲ್ಲವೆ? ಈಗ ಸರಕಾರದ ವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಿಗೆ ಯಾವ ಮತನೀತಿಬೋಧೆಗೂ ಅವಕಾಶವಿಲ್ಲವಾಗಿದೆಯಷ್ಟೆ? ಈ ಕೊರತೆಯನ್ನು ಎಷ್ಟರಮಟ್ಟಿಗೆ ಸರಿಪಡಿಸಬಹುದು?– ಎಂಬುದು ನಿಮ್ಮ ಪ್ರಶ್ನೆ.*

ಬಗೆಬಗೆಯ ಮತದವರು ಒಟ್ಟು ಸೇರಿದರೆ ಮತಬೋಧೆಗೆ ಅವಕಾಶವಿಲ್ಲವೆಂದು ಹೇಳುವದು ಸರಿಯೆಂತ ನನಗೆ ತೋರುವದಿಲ್ಲ. ನೀತಿಬೋಧೆಗಂತೂ ಎಲ್ಲಾ ವಿದ್ಯಾರ್ಥಿಗಳಿಗೂ ಅವಕಾಶವನ್ನು ಕಲ್ಪಿಸುವದೇನೂ ಕಷ್ಟವಲ್ಲ, ಅಲ್ಲದೆ ಅತ್ಯಗತ್ಯವೂ ಆಗಿದೆ–ಎಂದು ವಿಚಾರಶೀಲರೆಲ್ಲರೂ ಒಪ್ಪಿರುತ್ತಾರೆ. ಹಿಂದುಗಳ (ಶೈವ, ವೈಷ್ಣವ ಮುಂತಾದ ಒಳಪಂಗಡಗಳ), ಮುಸಲ್ಮಾನರ (ಮತ್ತು ಅವರ ಒಳಪಂಗಡಗಳು), ಕ್ರಿಸ್ತಿಯನ್ನರ (ಮತ್ತು ಅವರ ಪಂಗಡಗಳ) ಜೈನರ, ಬೌದ್ಧರ–ಧರ್ಮಗಳಿಂದ ಆರಿಸಿದ ಸ್ತೋತ್ರಗಳ ಸಂಗ್ರಹವೊಂದನ್ನು ಆಯಾ ಮತದಲ್ಲಿ ಅಭಿಮಾನಿಗಳಾಗಿ ಜನಾನುರಾಗಕ್ಕೆ ಪಾತ್ರರಾಗಿರುವ ಮಹನೀಯರ ಒಮ್ಮತದಿಂದ ಆರಿಸಿದ ಒಂದು ಸ್ತೋತ್ರಪುಸ್ತಕವನ್ನು ಸಿದ್ಧಪಡಿಸಿ, ಸ್ಕೂಲುಗಳ ಮತ್ತು ಕಾಲೇಜುಗಳ ಪಾಠಕ್ರಮದ ಮೊದಲನೆಯ ಭಾಗದಲ್ಲಿ ಅಥವಾ ಅಂತ್ಯಭಾಗದಲ್ಲಿ ನಿಯಮದಿಂದ ಹೇಳಿಸುವ ಪದ್ಧತಿಗೆ ಅವಕಾಶವನ್ನು ಕಲ್ಪಿಸಬೇಕೆಂದು ಸರಕಾರದವರನ್ನು ಕೇಳಿಕೊಂಡರೆ ಮತಬೋಧೆಯನ್ನು ಆಚರಣೆಗೆ ತರುವದು ಕಷ್ಟವಾದೀತೆ? ಮೊಟ್ಟಮೊದಲು ಸರಕಾರದ ಧನಸಹಾಯದಿಂದ–ಅಥವಾ ಸ್ವತಂತ್ರವಾಗಿ–ಆಯಾ ಮತದವರು ಏರ್ಪಡಿಸಿಕೊಂಡಿರುವ ಪಾಠಶಾಲೆಗಳಲ್ಲಿ ನಿಯಮದಿಂದ ಸ್ತೋತ್ರಪಾಠಕ್ಕೆ ಏರ್ಪಡಿಸಿದರೆ ಅವರ ಮೇಲುಪಙ್ಕ್ತಿಯನ್ನು ಅನುಸರಿಸಿ ಸಾರ್ವಜನಿಕಪಾಠಶಾಲೆಗಳಲ್ಲಿಯೂ ಆಚರಣೆಗೆ ತರುವದಕ್ಕೆ ದಾರಿಯನ್ನು ಮಾಡಿಕೊಟ್ಟಂತೆ ಆಗುವದಿಲ್ಲವೆ?

ಭೂಮಂಡಲದ ಬೇರೆಬೇರೆಯ ಮತಗಳ ಸ್ಥಾಪಕರುಗಳ ಸಂಕ್ಷೇಪ ಚರಿತ್ರೆಯನ್ನೂ ಅವರ ಸರ್ವಸಮ್ಮತವಾದ ಉಪದೇಶಗಳನ್ನೂ ಒಳಗೊಂಡ ಒಂದು ಗ್ರಂಥವನ್ನು ಆಯಾ ಮತದ ನಾಯಕರುಗಳಿಂದಲೇ ಬರೆಯಿಸಿ ಎಲ್ಲರ ಸಮ್ಮತಿಯನ್ನೂ ಪಡೆದು ಸರಕಾರದ ವಿದ್ಯಾಭ್ಯಾಸದ ಇಲಾಖೆಯವರೂ ಅದನ್ನು ಮತಬೋಧೆಗೆ ಉಪಯೋಗಿಸಿ ಕೊಳ್ಳುವಂತೆ ಏರ್ಪಾಡು ಮಾಡಿಸುವದೇನೂ ಕಷ್ಟವಾಗಲಾರದು.

ಇನ್ನು ಭಜನೆ, ನಾಮಕೀರ್ತನೆ–ಮುಂತಾದವುಗಳನ್ನು ಆಯಾ ಮತಗಳವರು–ಅಥವಾ ಪರಸ್ಪರ ಸಹಾನುಭೂತಿಯುಳ್ಳ ಅನೇಕ ಮತಗಳವರು ಬಹಿರಂಗವಾದ ಸ್ಥಾನಗಳಲ್ಲಿ ಎಂದರೆ ದೇವಾಲಯ, ಭಜನಾಮಂದಿರ, ವಿದ್ಯಾರ್ಥಿಗಳ ಕೂಟ–ಇವೇ ಮುಂತಾದ ಕೇಂದ್ರಗಳಲ್ಲಿ ಏರ್ಪಡಿಸಿದರೆ–ಅವು ಎಲ್ಲಾ ವಯಸ್ಸಿನವರಿಗೂ ಹೃದಯದ ಪರಿವರ್ತನೆಗೆ ಅವಕಾಶವನ್ನು ಕಲ್ಪಿಸಿಯಾವು.

ಈಶಭಕ್ತಿ, ದೇಶಭಕ್ತಿ, ಸಾರ್ವತ್ರಿಕಜನಾನುರಾಗ, ಸ್ವಾರ್ಥತ್ಯಾಗ–ಇವುಗಳಿಗೆ ತಮ್ಮ ಜೀವನವನ್ನು ಮೀಸಲಾಗಿಟ್ಟು ಬಹುಜನರ ಮನ್ನಣೆಗೆ ಪಾತ್ರರಾಗಿರುವವರು ಯಾವ

ಮತಕ್ಕೇ ಸೇರಿರಲಿ, ಯಾವ ಕಾಲದವರೇ ಆಗಿರಲಿ, ಅಂಥ ಮಹಾಪುರುಷರ ಜೀವನ ಚರಿತ್ರೆ, ಅವರು ಮಹಾಜನರಿಗೆ ಮೆಚ್ಚಾಗುವಂತೆ ತಮ್ಮ ನಡೆನುಡಿಗಳಲ್ಲಿ ಪ್ರದರ್ಶಿಸಿರುವ ಉಚ್ಚಧ್ಯೇಯಗಳು–ಇವನ್ನು ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳ ಅವಧಾನಕ್ಕೆ ತರುವದು, ಬೇರೆಬೇರೆಯ ಕಾಲದಲ್ಲಿ ಆಯಾ ವಿಭೂತಿಪುರುಷರ ಸ್ಮರಣೆಗೆಂದು ಪವಿತ್ರ ದಿನಗಳನ್ನು ಏರ್ಪಡಿಸಿ ಉತ್ಸವಗಳನ್ನು ಮಾಡುತ್ತಾ ಮಹಾಜನರನ್ನು ಒಂದುಕಡೆ ಕೂಡಿಸಿ ಸತ್ಕಾಲಕ್ಷೇಪಕ್ಕೆ ಅವಕಾಶವನ್ನು ಕಲ್ಪಿಸುವದು–ಇಂಥ ಅನುಷ್ಠಾನಗಳಿಂದ ನಮ್ಮ ದೇಶದ ತರುಣರಿಗೆ ಹೃದಯ ವೈಶಾಲ್ಯಕ್ಕೆ ಸಹಾಯವಾಗುವದು. ಸ್ವಾರ್ಥತ್ಯಾಗದಿಂದ ಜನತಾಸೇವೆಗೆ ತಮ್ಮ ಬಿಡುವಿನ ಕಾಲವನ್ನು ಸದ್ವಿನಿಯೋಗಮಾಡಿದ ವಿದ್ಯಾರ್ಥಿಗಳಿಗೆ ಮೆಚ್ಚುಗೆಯನ್ನು ತೋರಿಸುವ ಪಾರಿತೋಷಿಕಗಳೇ ಮುಂತಾದವುಗಳನ್ನು ಕೊಡುವ ಅಭಿನಂದನಾ ಸಮಾರಂಭಗಳನ್ನು ಮಾಡುವದು–ಹೀಗೆ ಮಾಡಿದರೆ ನಿಜವಾದ ಧರ್ಮನೀತಿಗಳ ಮೇಲ್ಮೆಯು ಅವರಿಗೆ ಮನದಟ್ಟಾಗುವದು.

ಇದೆಲ್ಲ ಆಗುವವರೆಗೆ ನಾವು ಕೈಕಟ್ಟಿಕೊಂಡು ಸುಮ್ಮನೆ ಇರಬೇಕಾದದ್ದಿಲ್ಲ. ಬೇರೆ ಬೇರೆಯ ಕುಟುಂಬದವರು ತಮ್ಮತಮ್ಮ ಮನೆಗಳಲ್ಲಿ ಆಗಿಂದಾಗ್ಗೆ ಭಜನೆಯ ಕೂಟಗಳನ್ನು ಏರ್ಪಡಿಸುವದು, ತಮ್ಮ ಮಕ್ಕಳಿಂದ ಸ್ತೋತ್ರಗಳನ್ನು ಕಂಠಪಾಠ ಮಾಡಿಸಿ ಹೇಳಿಸುವದು– ಈ ಪದ್ಧತಿಯನ್ನು ಇಟ್ಟುಕೊಳ್ಳಬೇಕು; ನೆರೆಹೊರೆಯ ಕುಟುಂಬದವರನ್ನು ಆ ಸಮಾರಂಭಕ್ಕೆ ಕರೆಯಿಸಬೇಕು. ಇಂಥ ಕೂಟಗಳು ಸರದಿಯಪ್ರಕಾರ ಒಬ್ಬೊಬ್ಬರ ಮನೆಯಲ್ಲಿ ಆಗುತ್ತಾ ಹೋದರೆ, ಸಮಾಜದವರಲ್ಲಿ ಪರಸ್ಪರ ಸಹಾನುಭೂತಿಯೂ, ಉಂಟಾಗುವದಲ್ಲದೆ ಊರಿನಲ್ಲಿ ಅಧ್ಯಾತ್ಮವಿಚಾರದ ಪವಿತ್ರವಾತಾವರಣವೂ ಏರ್ಪಡುವದು. ಸ್ತೋತ್ರಗಳನ್ನು ಆರಿಸುವಾಗ ಅವು ಎಲ್ಲಾ ಮತಗಳೂ ಒಬ್ಬನೇ ದೇವರನ್ನು ಬೇರೆಬೇರೆಯ ಪ್ರಕಾರಗಳಿಂದ ಆರಾಧಿಸುತ್ತಿರುವವು–ಎಂಬ ನಂಬಿಕೆಯನ್ನು ಹರಡುವವಾಗಿದ್ದರೆ ಈ ಕಾರ್ಯಕ್ಕೆ ಮತ್ತಷ್ಟು ಕಳೆ ಬರುವದು.

## 250. ಸದ್ಗುರುವಿನಲ್ಲಿ ಆರ್ಜವ

(ಆಗಸ್ಟ್ 1967)

*ನಿಮ್ಮ ಪತ್ರವು ತಲುಪಿತು. ವೇದಾಂತವನ್ನು ತಿಳಿಸಿಕೊಡಬಲ್ಲ ಸದ್ಗುರುವಿಗೂ ಮಿಕ್ಕ ಶಾಸ್ತ್ರಗಳನ್ನು ಹೇಳಿಕೊಡುವ ಗುರುಗಳಿಗೂ ಒಂದು ಮುಖ್ಯಭೇದವಿದೆ. ನೀವು ಬರೆದಿರುವಂತೆ ಇಬ್ಬರೂ ಗುರುಗಳೇ ಸರಿ; ಇಬ್ಬರೂ ತಮ್ಮ ತಮ್ಮ ಶಾಸ್ತ್ರದ ತಿಳಿವಳಿಕೆಯುಳ್ಳವರೂ ಆಗಿರಬಹುದು. ಆದರೆ ಸದ್ಗುರುವು ಬರಿಯ ಶಾಸ್ತ್ರಜ್ಞಾನವನ್ನು ಬಲ್ಲವನು ಮಾತ್ರವೇ ಅಲ್ಲದೆ ತತ್ತ್ವದರ್ಶಿಯೂ*

*ಆಗಿರುತ್ತಾನೆ. ಶ್ರುತಿಯಲ್ಲಿ ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುವಿನ ಬಳಿಗೆ ಜ್ಞಾನಕ್ಕಾಗಿ ಹೋಗಬೇಕೆಂದು ಹೇಳಿರುವದು ಇದೇ ಅಭಿಪ್ರಾಯದಿಂದ.*

ಶ್ರೀಶಂಕರಭಗವತ್ಪಾದರವರು **"ಯೇ ಸಮ್ಯಗ್ದರ್ಶಿನಸ್ತೈರುಪದಿಷ್ಟಂ ಜ್ಞಾನಂ ಕಾರ್ಯಕ್ಷಮಂ ಭವತಿ ನೇತರದಿತಿ ಭಗವತೋ ಮತಮ್"** (ತತ್ತ್ವದರ್ಶಿಗಳಾದವರು ಉಪದೇಶ ಮಾಡಿದ್ದೇ ಕಾರ್ಯಕಾರಿಯಾಗುವದು. ಮಿಕ್ಕದ್ದಲ್ಲ ಎಂಬುದು ಭಗವಂತನ ಮತ) ಎಂದು ಬರೆದಿರುತ್ತಾರೆ. ಭಗವಂತನೂ **"ಯಜ್ಜ್ಞಾತ್ವಾ ನ ಪುನರ್ಮೋಹಮೇವಂ ಯಾಸ್ಯಸಿ ಪಾಂಡವ"** (ಆ ತತ್ತ್ವಜ್ಞಾನಿಗಳು ಹೇಳಿದ್ದನ್ನು ಅರಿತುಕೊಂಡರೇ ಈಗಿನಂತೆ ಮೋಹವುಂಟಾಗುವದಿಲ್ಲ) ಎಂದಿರುತ್ತಾನೆ. ಆದ್ದರಿಂದ ಶಿಷ್ಯಗುಣಯುಕ್ತನಾದವನು ಸದ್ಗುರುವಿನ ಅನುಗ್ರಹದಿಂದ ತತ್ತ್ವವನ್ನು ಅನುಭವಕ್ಕೆ ತಂದುಕೊಂಡು ಕೃತಕೃತ್ಯನಾಗಬಹುದು. ಬರಿಯ ಆಚಾರ್ಯಾಭಾಸರ ಉಪದೇಶದಿಂದಾಗಲಿ ಗ್ರಂಥರಾಶಿಗಳ ಹೆಚ್ಚಿನ ಪರಿಚಯದಿಂದಾಗಲಿ ಎಂದಿಗೂ ಕೃತಕೃತ್ಯತೆ ಉಂಟಾಗದು. ಸದ್ಗುರುವಾದವನು ಸದ್ಬ್ರಹ್ಮವೇ ಆಗಿರುತ್ತಾನೆ. ಆದ್ದರಿಂದ ಶಿಷ್ಯನಾದವನು ಅವನಲ್ಲಿ ಯಾವ ಮಾಯೆಯೂ ಇಲ್ಲದೆ ಶ್ರದ್ಧೆ, ತತ್ಪರತೆ, ಇಂದ್ರಿಯನಿಗ್ರಹ–ಇವುಗಳಿಂದೊಡಗೂಡಿ ಶ್ರವಣ ಮಾಡಿ ಕೃತಕೃತ್ಯನಾಗಬೇಕು.

## ಆರ್ಜವದ ಸ್ತುತಿ

**ಸರ್ವತೀರ್ಥೇಷು ವಾ ಸ್ನಾನಂ ಸರ್ವಭೂತೇಷು ಚಾರ್ಜವಮ್।**
**ಉಭೇ ತ್ವೇತೇ ಸಮೇ ಸ್ಯಾತಾಮ್ ಆರ್ಜವಂ ವಾ ವಿಶಿಷ್ಯತೇ ॥**

ಎಲ್ಲಾ ತೀರ್ಥಗಳಲ್ಲಿಯೂ ಸ್ನಾನಮಾಡುವದರಿಂದ ದೊರಕುವ ಫಲ, ಎಲ್ಲಾ ಪ್ರಾಣಿಗಳಲ್ಲೂ ಸರಳತನದಿಂದ ನಡೆದುಕೊಳ್ಳುವದರ ಫಲ–ಇವೆರಡೂ ಸಮವಾಗಿರುತ್ತವೆ, ಅಥವಾ ಆರ್ಜವವೇ ಹೆಚ್ಚಿನದಾಗಿದೆ. –ಮಹಾಭಾರತ.

**4. ವೇದಾಂತ ಸಂದೇಶಗಳು : ಸಂಪುಟ 3 (ಅಧ್ಯಾತ್ಮ ಬೆಳಕು)**

ಅ.ಪ್ರ. ಪತ್ರಿಕೆಯಲ್ಲಿ 1923ರಲ್ಲಿ ಪ್ರಾರಂಭವಾಗಿ 1974ರವರೆಗೂ ಕೆಲವೊಮ್ಮೆ ಪ್ರತಿ ತಿಂಗಳೂ ಮತ್ತು ಕೆಲವು ಒಂದೆರಡು ವರ್ಷಗಳ ಅಂತರದಲ್ಲೂ ಶ್ರೀ ಶ್ರೀಗಳವರು ಬರೆದು ಪ್ರಕಟಿಸಿದ್ದ ಸುಮಾರು 210 ಲೇಖನಗಳ ಸಂಗ್ರಹ. ಅರ್ಧ ಪುಟದಿಂದ ಹಿಡಿದು ಮೂರು ನಾಲ್ಕು ಪುಟಗಳ ಲೇಖನಗಳನ್ನೊಳಗೊಂಡಿವೆ. ಸ್ಥೂಲವಾಗಿ (1) ಅಧ್ಯಾತ್ಮ ವಿದ್ಯೆ (2) ಅಧ್ಯಾತ್ಮದ ಮೊದಲ ಸೋಪಾನ (3) ಅಧ್ಯಾತ್ಮ ಸಾಧನಗಳು (4) ಅಧ್ಯಾತ್ಮ ಪ್ರಕಾಶ (5) ಅಧ್ಯಾತ್ಮ ಚಿಂತನೆ (6) ಅಧ್ಯಾತ್ಮಜ್ಞಾನ ಎಂಬ ಆರು ಅಧ್ಯಾಯಗಳಾಗಿ ವರ್ಗೀಕರಿಸಿ ಎಲ್ಲಾ ಲೇಖನಗಳನ್ನೂ ಅಳವಡಿಸಿದೆ.

ಸಭ್ಯಗೃಹಸ್ಥನ ಲೌಕಿಕ, ಧಾರ್ಮಿಕ ಕರ್ತವ್ಯಗಳೇನು, ದೇವಸ್ಥಾನಗಳಲ್ಲಿ ಹೇಗೆ ನಡೆದುಕೊಳ್ಳಬೇಕು, ಮನಃಶಾಂತಿಗೆ ಸುಲಭೋಪಾಯ, ನಮ್ಮ ಜೀವನದ ಸ್ವರೂಪ ಮತ್ತು ಹೆಗ್ಗುರಿ ಇತ್ಯಾದಿ ಸಾಮಾನ್ಯ ಜನರ ಪ್ರಶ್ನೆಗಳಿಗೆಲ್ಲಾ ಸರಳವಾಗಿಯೂ, ಶಾಸ್ತ್ರಯುಕ್ತಿಗಳಿಗೆ ಒಪ್ಪಾಗಿಯೂ ಇರುವ ಉತ್ತರಗಳಿವೆ. ದಿನಕ್ಕೊಂದು ಲೇಖನದಂತೆ ಪಠಿಸಿದರೂ ವರ್ಷವಿಡೀ ಓದಬಹುದಾದ ಉತ್ತಮ ಗ್ರಂಥ. ವೇದಾಂತದ ಆರಂಭದಲ್ಲಿರುವ ಮನುಷ್ಯರಿಂದ ಹಿಡಿದು ಜಿಜ್ಞಾಸುಗಳಿಗೂ ಅನ್ವಯಿಸುವ ಅತ್ಯುಪಯುಕ್ತವಾದ ವಿಷಯಗಳಿವೆ.

**(ಮೊದಲನೆಯ ಮುದ್ರಣ, 2010, ಪು. 356, ಬೆಲೆ. 50 ರೂ.)**

**5. ವೇದಾಂತ ಸಂದೇಶಗಳು : ಸಂಪುಟ 5 (ಶ್ರೀ ಶ್ರೀಗಳವರ ಹಿತವಚನಗಳು)**

ಅ.ಪ್ರ. ಪತ್ರಿಕೆಯಲ್ಲಿ ಸಂಪುಟ 14ರಿಂದ ಸಂ. 44ರವರೆಗೆ (ಜನವರಿ 1943–ಫೆಬ್ರವರಿ 1975) **ಶಂಕರರ ಪತ್ರಗಳು** ಎಂಬ ಶೀರ್ಷಿಕೆಯಲ್ಲಿ ಕೆಲವೊಮ್ಮೆ ಒಂದು ಮತ್ತು 2–3 ಪುಟಗಳಂತೆ ಪ್ರಶ್ನೋತ್ತರ ರೂಪದಲ್ಲಿ ಶ್ರೀಶ್ರೀಗಳವರೇ ಬರೆದು ಪ್ರಕಟಿಸಿದ್ದ 337 ಲೇಖನಗಳ (583 ಪು.) ಸಂಗ್ರಹ. ಓದುಗರ ಅನುಕೂಲಕ್ಕಾಗಿ ನಾಲ್ಕು ಭಾಗಗಳಲ್ಲಿ ಮುದ್ರಿಸಲಾಗಿದೆ. ಲೇಖನಗಳನ್ನು ಎರಡು ಗುಪುಗಳಾಗಿ ವಿಂಗಡಿಸಬಹುದು: 1) ಕುಟುಂಬ ಭಾವನೆ, ಹರಿಜನ ಪ್ರೇಮ, ಧನದ ಉಪಯೋಗ ಇತ್ಯಾದಿ ಸಾಮಾನ್ಯ ವಿಷಯಗಳನ್ನೊಳಗೊಂಡ ಮೊದಲನೆಯ ಭಾಗ. 2) ಪಾರಿವ್ರಾಜ್ಯ, ವೇದಾಂತದ ವಿಚಾರವನ್ನು ಚರ್ಚಿಸುವ ಕ್ರಮ, ಸಂನ್ಯಾಸಧರ್ಮ, ಆಧ್ಯಾತ್ಮಿಕ ಸಾಧನಗಳು, ನಿಜವಾದ ವಿದ್ಯೆ ಇತ್ಯಾದಿ ಶಾಸ್ತ್ರೀಯವಾದ ಲೇಖನಗಳನ್ನೊಳಗೊಂಡ ಎರಡನೆಯ ಭಾಗ. ಪರಮಪುರುಷಾರ್ಥಕ್ಕೆ ಸಾಧನವಾದ ವಿಚಾರವನ್ನು ತಿಳಿಸುವ ಲೇಖನಗಳಾದ್ದರಿಂದ ಎಲ್ಲರಿಗೂ ಉಪಯುಕ್ತವಾದ ಗ್ರಂಥ. **ಈಗ ಇದು ನಿಮ್ಮ ಕೈಯಲ್ಲಿದೆ. (ಮೊದಲನೆಯ ಮುದ್ರಣ, 2011, ಪು. 583, ಬೆಲೆ. 120 ರೂ.)** ಇತರ ಇನ್ನೂ ಕೆಲವು ಸಂಪುಟಗಳು ಹೊರಬರಲಿವೆ.

ಇತರ ಪುಸ್ತಕಗಳು, ಮತ್ತು DVD-MPS Format ನಲ್ಲಿ ಮುದ್ರಿತವಾಗಿರುವ ಧ್ವನಿಸುರುಳಿಗಳು (C.D) ರಿಯಾಯಿತಿ ದರದಲ್ಲಿ ದೊರಕುತ್ತವೆ. ಸಂಪರ್ಕಿಸಿ.

---

**ಅಧ್ಯಾತ್ಮಪ್ರಕಾಶ ಕಾರ್ಯಾಲಯ**
ನಂ.68, 2ನೇ ಬ್ಲಾಕ್, ತ್ಯಾಗರಾಜನಗರ
ಬೆಂಗಳೂರು – 28 ; ದೂ.–26765548

**ಅಧ್ಯಾತ್ಮಪ್ರಕಾಶ ಕಾರ್ಯಾಲಯ**
ಹೊಳೆನರಸೀಪುರ : 573211
ದೂ. : 08175–273820

# ಸಂಸ್ಥಾಪಕರ ಸ್ಮರಣೆ

ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರಜೀವನ ಮತ್ತು ಅವರ ಅಸಾಧಾರಣ ಶ್ರೇಷ್ಠ ಸಾಧನೆಯನ್ನು ಅವಲೋಕಿಸಿದಾಗ, ಅವರ ಜನ್ಮ ಮತ್ತು ಬಾಳು ಎಲ್ಲವೂ ವೇದಾಂತಾಧ್ಯಯನ ಮತ್ತು ವೇದಾಂತ ಪ್ರಸಾರಕ್ಕೇ ಮೀಸಲಾಗಿರಬೇಕೆಂದು ಭಗವಂತನ ಇಚ್ಛೆ ಮತ್ತು ನಿಯಾಮಕವಾಗಿತ್ತೆಂದು ತೋರುತ್ತದೆ. ಇದೇನೂ ಉತ್ಪ್ರೇಕ್ಷೆಯಲ್ಲ. ಏಕೆಂದರೆ ಇನ್ನೂ ಅವರ ವಿದ್ಯಾರ್ಥಿದೆಶೆಯಲ್ಲಿಯೇ ತರಗತಿಯ ಸಂಸ್ಕೃತ ಪಾಠ ಪುಸ್ತಕವನ್ನು ಕೇಳಿದಾಗ ಅಂಗಡಿಯವರು ಕೊಟ್ಟದ್ದು "ಭಗವದ್ಗೀತಾ ಭಾಷ್ಯ" (ಅತ್ಯಂತ ಅನಿರೀಕ್ಷಿತವಾದ ಘಟನೆಯಿಂದ ನನಗೆ ಅರಿವಿಲ್ಲದೆಯೇ ಭಗವದ್ಗೀತಾ ಭಾಷ್ಯದಲ್ಲಿ ಪ್ರವೇಶವಾಯಿತು – ಶ್ರೀಗಳು), ಮತ್ತೊಮ್ಮೆ ಅಗ್ಗದ ಸಣ್ಣ ಪುಸ್ತಕ ಕೋರಿದಾಗ ಕೈಗೆ ಬಂದದ್ದು 'ವಿವೇಕ ಚೂಡಾಮಣಿ', ಸೆಂಟ್ರಲ್ ಕಾಲೇಜಿನ ಎಫ್.ಎ. ತರಗತಿಯಲ್ಲಿದ್ದಾಗ ಶ್ರೀಕೃಷ್ಣಸ್ವಾಮಿ ಅಯ್ಯರ್‌ರವರ ಮನೆಯಲ್ಲಿ ಅವರಿಂದ ಕೆಲವು ವೇದಾಂತ ಪಾಠಗಳು ಹಾಗೂ ಸೂತ ಸಂಹಿತೆಯನ್ನು ಓದಲು ಅವರ ಪ್ರೋತ್ಸಾಹ...... ಹೀಗೆ ಪ್ರವೃತ್ತಿ, ಉತ್ಸುಕತೆ, ಕ್ರಿಯಾಪ್ರಯತ್ನ ಹರಿದದ್ದೇ ವೇದಾಂತ ಮಾರ್ಗದಲ್ಲಿ.

"ಸಾಮಾನ್ಯವಾಗಿ ಒಬ್ಬ ಮನುಷ್ಯನ ಜೀವಿತದಲ್ಲಿ ಸಂಭವಿಸಬಹುದಾದ ಸಾಧಾರಣ............ ಘಟನೆಗಳ ನಡುವೆ ಶ್ರೀ ಸುಬ್ಬರಾಯರು (ಶ್ರೀಗಳವರ ಪೂರ್ವಾಶ್ರಮದ ಹೆಸರು) ಸಾಧಿಸಿದ ಅಪೂರ್ವ ಸಿದ್ಧಿಗಳು ತೆರೆದು ನಿಲ್ಲುತ್ತವೆ. ಶ್ರೀ ಶ್ರೀಶಿವಾಭಿನವನೃಸಿಂಹ ಭಾರತೀ ಸ್ವಾಮಿಗಳಿಂದ ಶ್ರೀ ಶಾಂಕರಭಾಷ್ಯ ಶಾಂತಿಪಾಠ, ವಿದ್ವದಗ್ರೇಸರರಾದ ಹಾನಗಲ್ಲು ವಿರೂಪಾಕ್ಷಶಾಸ್ತ್ರಿಗಳ (ಮಾರ್ಗದರ್ಶನ), ಕೃಷ್ಣಸ್ವಾಮಿಅಯ್ಯರ್, ಕುರ್ತುಕೋಟಿ ಮಹಾಭಾಗವತರು, ಹೊಸಕೆರೆ ಚಿದಂಬರಯ್ಯನವರು ಮುಂತಾದವರ ಸಹವಾಸ ಸುಬ್ಬರಾಯರಿಗೆ ದೇವದತ್ತವರಗಳಾಗಿ ಪರಿಣಮಿಸಿದವು......... ಮನುಷ್ಯನಲ್ಲಿ ಪ್ರಬಲವಾದ ಉತ್ಸಾಹವೂ, ಕರ್ತೃತ್ವಶಕ್ತಿಯೂ ಇದ್ದಲ್ಲಿ ಆತನು ಯಾವ ಮಟ್ಟಕ್ಕೆ ಏರುತ್ತಾನೆ ಎಂಬುದಕ್ಕೆ ಶ್ರೀಗಳೇ ನಿದರ್ಶನ. ಕನ್ನಡ, ಇಂಗ್ಲೀಷ್, ಸಂಸ್ಕೃತ ಭಾಷೆಗಳಲ್ಲಿ ಅವರು ಗಳಿಸಿದ, ಬಳಸಿದ ಪ್ರೌಢಪಾಂಡಿತ್ಯ, ಶೈಲಿ ವಿಸ್ಮಯಕಾರಿಯಾದದ್ದು. ಶ್ರೀಗಳವರ ಅಧ್ಯಯನ ಆಳ, ಜನೋಪಯೋಗವಾಗಲೆಂಬ ಹೃದಯದ ಕಳಕಳಿ ಗಮನೀಯ. ಅಧ್ಯಾತ್ಮಪ್ರಕಾಶ ಪತ್ರಿಕೆಯಲ್ಲಿ ಅವರು ಬರೆಯುತ್ತಿದ್ದ ಲೇಖನಗಳೂ ಗಂಭೀರವಾದವು. ಮತ್ತೆ ಮತ್ತೆ ಓದಬೇಕಾದವು.– ಈ ಲೇಖನಗಳನ್ನು ಸಂಗ್ರಹಿಸಿ, ಪ್ರಕಟಿಸಿದರೆ ಜಿಜ್ಞಾಸುಗಳಿಗೆ ಮಹೋಪಕಾರವಾಗುತ್ತದೆ"– ಶ್ರೀ ಎಸ್.ರಂಗನಾಥ ಶರ್ಮ (ಶ್ರೀಗಳವರ ಆತ್ಮಚರಿತ್ರೆಯ 2006 ಮುನ್ನುಡಿಯಲ್ಲಿ). ಪಂಡಿತರಾಗಿದ್ದ ಶ್ರೀ ಲಕ್ಷ್ಮೀನರಸಿಂಹಮೂರ್ತಿಯವರು ಸಂಗ್ರಹಿಸಿ ಪ್ರಕಟಿಸಿದ 15–18 ಗ್ರಂಥಗಳು ಈ ಮೊದಲೇ ಪ್ರಕಟವಾಗಿವೆ. ಅನಂತರದಲ್ಲೂ ಕೆಲವು ಸಂಪುಟಗಳು ಬಂದಿವೆ. "ವೇದಾಂತ ಸಂದೇಶಗಳು" ಎಂಬ ಈ ಕೃತಿ ಶ್ರೇಣಿಯಲ್ಲಿ ಇದುವರೆಗೆ ನಾಲ್ಕು ಸಂಪುಟಗಳು ಪ್ರಕಟವಾಗಿ ಶ್ರೀಶ್ರೀಗಳವರ ಹಿತವಚನಗಳು ಎಂಬ ಶೀರ್ಷಿಕೆಯಲ್ಲಿ ಐದನೆಯ ಸಂಪುಟ ಪ್ರಕಾಶನಗೊಂಡಿದೆ. ಇನ್ನೂ ಕೆಲವು ಸಂಪುಟಗಳು ಹೊರಬರಲಿವೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ।
ತನ್ನ: ಸಚ್ಚಿದಾನಂದ: ಪ್ರಚೋದಯಾತ್॥